ಮಾನವಿಕ ಕರ್ಣಾಟಕ

ಸಂಪುಟ ೩ ಸಂಚಿಕೆ ೩

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೩

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.



ಎಸ್. ನಂಜುಂಡಸ್ವಾಮಿ

ಮಾನವಿಕ ಕರ್ಣಾಟಕ

ಸಂಪುಟ ೩, ಸಂಚಿಕೆ ೩

೧೧

ನೇ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೩

MANAVIKA KARNATAKA, Kannada quarterly of the University of Mysore. Volume 3, Number 3, May 1973. Edited by H. S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

		ಶ್ರೀಯುತರಾದ	ಪುಟ
1	ಕಲಾವಿದ ಎಸ್. ನಂಜುಂಡಸ್ವಾಮಿ	ಪಿ. ಆರ್. ತಿಪ್ಪೇಸ್ವಾಮಿ	1
2	ಬೀದರ್ ಜಿಲ್ಲೆಯ ಶಾಸನಗಳು—೧	ಬಾ. ರಾ. ಗೋಪಾಲ್	5
3	ಆಹಾರಧಾನ್ಯಗಳ ಸಗಟು ವ್ಯಾಪಾರ ರಾಷ್ಟ್ರೀಕರಣ	ಅ. ಪು. ಶ್ರೀನಿವಾಸಮೂರ್ತಿ	11
4	ಸಮುದಾಯ ಸಂಪರ್ಕಮಾಧ್ಯಮಗಳಲ್ಲಿ ಕ್ರೌರ್ಯ, ಅಪರಾಧ	ಬಿ. ಎಸ್. ಚಂದ್ರಶೇಖರ	21
5	ಹೆಗ್ಗೆರೆಯ ಶಾಸನ ಮತ್ತು ಜಯಕೀರ್ತಿಯ ಕಾಲದ ವಿಚಾರ	ಸೀತಾರಾಮ ಜಾಗೀರ್‌ದಾರ್	29
6	ಸಾಮಾಜಿಕ ಬದಲಾವಣೆ: ಗಾಂಧೀಜಿಯವರ ದೃಷ್ಟಿ	ಎಚ್. ಎಂ. ಸದಾಶಿವಯ್ಯ	35
7	ಹೊಯ್ಸಳ ವಾಸ್ತುಶೈಲಿಯಲ್ಲಿ ನಕ್ಷತ್ರಾಕಾರದ ತಲವಿನ್ಯಾಸ	ಎಚ್. ಆರ್. ರಘುನಾಥ ಭಟ್	43
8	ರಾಷ್ಟ್ರೀಕೃತ ಬ್ಯಾಂಕುಗಳ ಸಾಧನೆ	ಎನ್. ಪ್ರಭುಸ್ವಾಮಿ	51
9	ಕೆಳದಿ ಅರಸರ ಕುಲದೇವರುಗಳು	ಕೆಳದಿ ಗುಂಡಾಜೋಯಿಸ್	55
10	ಪ್ರಾಚೀನ ಕರ್ನಾಟಕದಲ್ಲಿ ಉನ್ನತ ಶಿಕ್ಷಣ	ಎನ್. ಎಸ್. ವೀರಪ್ಪ	65
11	ಭಾಷಾ ಪ್ರಯೋಗಶಾಲೆ	ವಿಲ್ಯಂ ಮಾಡ್ತ	85
12	ನಮ್ಮ ವ್ಯವಸಾಯದ ಆಡಳಿತ ಮತ್ತು ಸಂಘಟನೆ	ಟಿ. ಕೆ. ವಾಸುದೇವ ಭಟ್	91
13	ಅರವಿಂದರ ಶಿಕ್ಷಣತತ್ತ್ವದರ್ಶನ	ಎ. ಎಸ್. ಸೀತಾರಾಂ	97
14	ಪುಸ್ತಕ ಲೋಕ		103

ನಗರ ಮತ್ತು ಪ್ರಾದೇಶಿಕ ಯೋಜನೆ (Urban and Regional Planning) (ಕೆ. ಎಸ್. ರಾಮೇಗೌಡ)–ಎಂ. ರಾಮಕೃಷ್ಣ; ನಗರ ಯೋಜನೆ (ಕೆ. ಎಸ್. ರಾಮೇಗೌಡ)–ಎಂ. ರಾಮಕೃಷ್ಣ; ಅರವಿಂದರ ಸುಪ್ರಮಾನಸ ದರ್ಶನ (ಉಪನ್ಯಾಸಗಳು)–ಕೆ. ಬಿ. ಪ್ರಭುಪ್ರಸಾದ್; ಸಾಕ್ಷರತಾ ಸಾಹಿತ್ಯ ಸೂತ್ರಗಳು (ಟಿ. ಆರ್. ನಾಗಪ್ಪ), ಅರಬ್ ಭೂಗೋಳಶಾಸ್ತ್ರಜ್ಞರು (ಕೆ. ಆರ್. ರಂಗಾಚಾರ್) —ಐ. ಶ್ರೀ. ಪ್ರಸಾದ

15 ಪತ್ರವ್ಯವಹಾರ 113

ಹಂಪ. ನಾಗರಾಜಯ್ಯ; ಸೇಡಿಯಾಪು ಕೃಷ್ಣಭಟ್ಟ

ಈ ಸಂಚಿಕೆಯ ಲೇಖನದಾರರು

1	ಪಿ. ಆರ್. ತಿಪ್ಪೇಸ್ವಾಮಿ	ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯದ ಕ್ಯೂರೇಟರ್
2	ಡಾ. ಬಾ. ರಾ. ಗೋಪಾಲ್	ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಪಿಗ್ರಾಫಿಯ ಕರ್ನಾಟಿಕದ ಶಾಸನತಜ್ಞರು
3	ಅ. ಪು. ಶ್ರೀನಿವಾಸಮೂರ್ತಿ	ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್
4	ಬಿ. ಎಸ್. ಚಂದ್ರಶೇಖರ	ಆಡಿಯೆನ್ಸ್ ರಿಸರ್ಚ್ ಆಫೀಸರ್, ಆಕಾಶವಾಣಿ, ಬೆಂಗಳೂರು
5	ಸೀತಾರಾಮ ಜಾಗೀರ್‌ದಾರ್	ಶಾಸನಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
6	ಡಾ. ಎಚ್. ಎಂ. ಸದಾಶಿವಯ್ಯ	ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ರೀಡರ್
7	ಎಚ್. ಆರ್. ರಘುನಾಥ ಭಟ್	ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಾಪಕರು
8	ಎನ್. ಪ್ರಭುಸ್ವಾಮಿ	ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು
9	ಕೆಳದಿ ಗುಂಡಾಜೋಯಿಸ್	ಕೆಳದಿ ಅಂಚೆ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
10	ಡಾ. ಎನ್. ಎಸ್. ವೀರಪ್ಪ	ಮೈಸೂರಿನ ಶಿಕ್ಷಣ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವಕೋಶದ ಶಿಕ್ಷಣ ಸಂಪಾದಕರು
11	ಎಂ. ಜಯಂತಿಬಾಯಿ	ಕನ್ನಡ ಅಧ್ಯಯನ ಸಂಸ್ಥೆಯ ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗದಲ್ಲಿ ಸಹಾಯಕ ಭಾಷಾಂತರಕಾರರು
12	ವಿಲ್ಯಂ ಮಾಡ್ತ	ಭಾಷಾ ವಿಜ್ಞಾನ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
13	ಟಿ. ಕೆ. ವಾಸುದೇವ ಭಟ್	ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ವಿಜಯಾ ಕಾಲೇಜ್, ಮೂಲ್ಕಿ, ದಕ್ಷಿಣ ಕನ್ನಡ ಜಿಲ್ಲೆ
14	ಡಾ. ಎ. ಎಸ್. ಸೀತಾರಾಂ	ಮಾನಸಗಂಗೋತ್ರಿಯ ಶಿಕ್ಷಣ ವಿಭಾಗದಲ್ಲಿ ಅಧ್ಯಾಪಕರು
15	ಎಂ. ರಾಮಕೃಷ್ಣ	ಕನ್ನಡ ಅಧ್ಯಾಪಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
16	ಕೆ. ಬಿ. ಪ್ರಭುಪ್ರಸಾದ	ಇಂಗ್ಲಿಷ್ ಪ್ರಾಧ್ಯಾಪಕರು, ಮಹಿಳೆಯರ ಸರ್ಕಾರಿ ಕಾಲೇಜ್, ಮಂಡ್ಯ
17	ಐ. ಶ್ರೀ. ಪ್ರಸಾದ	12ಎ, 2ನೆಯ ಮುಖ್ಯರಸ್ತೆ, ಜಯನಗರ, ಮೈಸೂರು
18	ಹಂಪ. ನಾಗರಾಜಯ್ಯ	ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರು
19	ಸೇಡಿಯಾಪು ಕೃಷ್ಣಭಟ್ಟ	ಮಣಿಪಾಲದಲ್ಲಿರುವ ಕನ್ನಡ–ಸಂಸ್ಕೃತ ವಿದ್ವಾಂಸರು, ಕವಿಗಳು
20	ಎಸ್. ತಿಪ್ಪೇಸ್ವಾಮಿ	ಛಾಯಾಚಿತ್ರಕಾರರು (ಕಲಾವಿದ ಎಸ್. ನಂಜುಂಡಸ್ವಾಮಿ ಎಂಬ ಲೇಖನದ ಚಿತ್ರಗಳು), ಮೈಸೂರು

ಪಿ. ಆರ್. ತಿಪ್ಪೇಸ್ವಾಮಿ

ಕಲಾವಿದ ಎಸ್. ನಂಜುಂಡಸ್ವಾಮಿ*

ಕನ್ನಡನಾಡಿನ ವಿಖ್ಯಾತ ವರ್ಣಚಿತ್ರಕಾರರು ಹಾಗೂ ಶಿಲ್ಪಿಗಳಲ್ಲಿ ಮೈಸೂರಿನ ಸ್ಥಪತಿ ನಂಜುಂಡ ಸ್ವಾಮಿಯವರು ಅಗ್ರಗಣ್ಯರಾಗಿದ್ದರು.

ತೆರೆಮರೆಯ ಈ ಅಪ್ರತಿಮ ಕಲಾವಿದರ ಕಲೆಯ ಬೆಲೆಯನ್ನು ಅರಿತ ಜನ ಕಡಿಮೆ. ಅವರ ಕಲಾ ಪ್ರೌಢಿಮೆಯನ್ನು ಸೋದರ ಕಲಾವಿದರು ಮಾತ್ರ ಅರಿತಿದ್ದರು. ಸದವಕಾಶ ದೊರೆತಿದ್ದರೆ ಅವರು ನಾಡಿಗೆ, ಕಲೆಗೆ ವಿಶ್ವಖ್ಯಾತಿ ಗಳಿಸಿಕೊಡಬಲ್ಲಷ್ಟು ಸಮರ್ಥಶಾಲಿಗಳಾಗಿದ್ದರು. ಕನ್ನಡ ನಾಡಿನಲ್ಲಿ ಮಾತ್ರ ವಲ್ಲ, ಭಾರತದಲ್ಲೇ ಆ ಮಟ್ಟದ ಕಲಾವಿದರು ವಿರಳ.

ಶ್ರೀ ನಂಜುಂಡಸ್ವಾಮಿಗಳು ಶ್ರೀ ಚಾಮರಾಜೇಂದ್ರ ವೃತ್ತಿಶಿಕ್ಷಣಶಾಲೆಯಲ್ಲಿ ಚಿತ್ರಕಲೆಯ ಅಧ್ಯಾಪಕರಾಗಿದ್ದರು. ಸ್ವಲ್ಪ ಗುಂಡಾದ ತಲೆ, ಬಿಳಿಮಿಶ್ರ ಕಪ್ಪು ಗುಂಗುರು ಕೂದಲು, ಅಚ್ಚಗಪ್ಪಿನ ಗಂಭೀರ ಮುಖದಲ್ಲಿ ಹೊಳೆಯುವ ಸುಲೋಚನ, ಕಂದು ಬಣ್ಣದ ಗೀರು ಗೀರು ಅಂಗಿ, ಕೊರಳಿನಲ್ಲಿ ಕಂದುವರ್ಣದ ಟೈ, ನಡುವಿನಲ್ಲಿ ಅಂಗಿಯನು ನುಂಗಿಕೊಂಡಿರುವ ಶರಾಯಿಯನ್ನು ಅಪ್ಪಿಕೊಂಡ ಮಂದ ವಾದ ಕಂದು ಬಣ್ಣದ ಬೆಲ್ಟು, ಕಾಲಿನಲ್ಲಿ ಸಾದಾರೀತಿಯ ಪಾದರಕ್ಷೆ. ಮೇಜಿನ ಮೇಲೆ ಒಂದು ಮೂಲೆ ಯಲ್ಲಿ ಅವರ ಕುಲಾವಿ. ಕುರ್ಚಿಯ ಬೆನ್ನಿನ ಒಂದು ಅಂಚಿನಲ್ಲಿ ತೂಗುತ್ತಿರುವ, ಅವರ ಸಾಮಗ್ರಿಯನ್ನೊಳ ಗೊಂಡ ಕೈಚೀಲ. ಮೇಜಿನ ಅಂಚಿನಲ್ಲಿಯೇ ಇಣಿಕಿ ನೋಡುವ ನಶ್ಯದ ಡಬ್ಬಿ. ಅರೆ ತೆರೆದ ಕಪಾಟ ದಲ್ಲಿ ಅವರು ಚಿತ್ರಿಸಿ ಎಸೆದ, ಅಸ್ತವ್ಯಸ್ತವಾಗಿ ಬಿದ್ದ ಅನೇಕ ಸಣ್ಣ ಸಣ್ಣ ಜಲವರ್ಣ ಚಿತ್ರಗಳು. ಬಿಡು ವಿದ್ದಾಗಲೂ ಇವರು ಕಾಲವನ್ನು ವ್ಯರ್ಥವಾಗಿ ಕಳೆಯರೆಂಬುದಕ್ಕೆ ಈ ಚಿತ್ರಗಳೇ ಸಾಕ್ಷಿ ಎಂಬಂತಿರುತ್ತಿತ್ತು. ವಿದ್ಯಾರ್ಥಿಗಳ ವಿಚಾರಶಕ್ತಿ ಬೆಳೆಯಲು ಅವರಿಗೆ ಸ್ವಾತಂತ್ರ್ಯವಿತ್ತಿದ್ದರೂ ಅವರನ್ನು ಬಿಗಿಯಲ್ಲಿ ನಿರ್ವಹಿ ಸುತ್ತಿದ್ದರು.

ಶ್ರೀ ಎಸ್. ನಂಜುಂಡಸ್ವಾಮಿಯವರ ಕಲಾಕೃತಿಗಳನ್ನು ನೋಡಿದವರು, ಅಂಥ ಉನ್ನತ ಕೃತಿ ಗಳನ್ನು ಸೃಜಿಸಿದ ವ್ಯಕ್ತಿ ಇವರೇ? ಎಂದು ಸಂದೇಹಪಡುವಂಥದು ಅವರ ರೂಪ, ವರ್ತನೆ.

1953ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಬಂದಿದ್ದವರು ಮೈಸೂರಿನ ವೃತ್ತಿಶಿಕ್ಷಣ ಶಾಲೆಯ ಪ್ರದರ್ಶನಾಲಯದ ವಿಭಾಗಕ್ಕೆ ಕಾಲಿಟ್ಟೊಡನೆಯೇ ಅಲ್ಲಿಯ ಕಲಾವೈಭವವನ್ನು ಕಂಡು ಮಂತ್ರಮುಗ್ಧರಾಗದೆ ಇರಲಿಲ್ಲ. ರಾಜನೊಬ್ಬ ಪೀಠದಿಂದ ಕುಳಿತು ತನ್ನ ಪರಿವಾರದೊಡನೆ ಒಬ್ಬ ಸುಂದರಿಯ ನಟನ ಕೌಶಲವನ್ನು ಈಕ್ಷಿಸುತ್ತಿರುವ ದೃಶ್ಯದ್ದೊಂದು ವಿಶಿಷ್ಟ ಕೃತಿ ಅಲ್ಲಿತ್ತು. ನೃತ್ಯಾವಲೋಕಿಗಳ ವಿವಿಧ ಭಾವಭಂಗಿಗಳು, ಅವರವರ ವೇಷಭೂಷಣಗಳು, ಸನ್ನಿವೇಶ ಕಲ್ಪನೆ, ಹಿನ್ನೆಲೆ ನಟಿಯ ನಟನ ಚಾತುರ್ಯ, ಅವಳ ಮುಖದ ಮಂದಹಾಸ ಮುಂತಾದುವನ್ನು ಚಿತ್ರಿಸುವಲ್ಲಿ ಸ್ವಾಮಿ ಯವರು ತುಂಬ ನಿಪುಣತೆ ತೋರಿದ್ದಾರೆ. ಈಗ ಇದು ಮೈಸೂರಿನ ಕಲಾಭಿಮಾನಿಗಳೊಬ್ಬರ ಭವನದಲ್ಲಿದೆ.

---

* ಎಸ್. ಎನ್. ಸ್ವಾಮಿ ಎಂದು ಇವರು ತಮ್ಮ ಚಿತ್ರಗಳಿಗೆ ಅಂಕಿತ ಹಾಕುತ್ತಾರೆ. ಇದೇ ಅಂಕಿತದ ಇನ್ನೊಬ್ಬ ಪ್ರಸಿದ್ಧ ಕಲಾವಿದರು ಎಸ್. ನರಸಿಂಹಸ್ವಾಮಿ.

ಶ್ರೀ ಸ್ವಾಮಿಯವರು ಕುಶಲ ಕಲೆಯ ಎಲ್ಲ ಪ್ರಕಾರಗಳಲ್ಲೂ ಅದ್ವಿತೀಯ ಪ್ರೌಢಿಮೆ ಗಳಿಸಿ ಕೊಂಡಿದ್ದರು. ರೇಖಾಚಿತ್ರಗಳಲ್ಲಿಯೇ ಆಗಲಿ, ತೈಲಚಿತ್ರ, ಜಲವರ್ಣಚಿತ್ರಗಳಲ್ಲಿಯೇ ಆಗಲಿ ಅವರು ತೋರುತ್ತಿದ್ದ ಚಾಕಚಕ್ಯ ಅಸಾಧಾರಣವಾದದ್ದು. ಪ್ರಕೃತಿಯ ಯಾವುದೇ ವರ್ಣಗಳನ್ನು ಕಣ್ಣಿಗೆ ಕಟ್ಟು ವಂತೆ ಸಹಜ ಸುಂದರವಾಗಿ ಕೃತಿಯಲ್ಲಿ ಮೂಡಿಸುವ ಶಕ್ತಿಯನ್ನು ಅವರು ಪಡೆದಿದ್ದರು. ಮೈಸೂರಿನ ವಾಣೀ ವಿಲಾಸ ಮೊಹಲ್ಲದಲ್ಲಿರುವ ಮಹಾಜನ ಹೈಸ್ಕೂಲಿನ ಭಿತ್ತಿಯೊಂದರ ಮೇಲೆ ಅವರಿಂದ ರಚಿತ ವಾದ ಶಾರದಾ ದೇವಿಯ ಚಿತ್ರವಿದೆ. ಸ್ವಾಮಿಯವರ 'ಕಬೀರ್' ತೈಲಚಿತ್ರದಲ್ಲಿ ಮುಂಜಾವಿನ ನಸುಗತ್ತಲ ಪ್ರಶಾಂತ ವಾತಾವರಣದ ಕಲ್ಪನೆ ವಿಶಿಷ್ಟವಾದ್ದು. ಕಬೀರ್ ತನ್ನ ಹೆಗಲಮೇಲೆ ತನ್ನ ಪತ್ನಿಯನ್ನು ಕೂಡಿಸಿಕೊಂಡು ಹೋಗುತ್ತಿದ್ದಾನೆ. ಆಕೆ ಕೈಜೋಡಿಸಿ ದೈವವನ್ನು ಪ್ರಾರ್ಥಿಸುತ್ತಿರುವಂತೆ, ಕಬೀರ ತನ್ನ ಪತ್ನಿಯ ಎರಡು ಮೊಣಕಾಲುಗಳನ್ನು ಬಿಗಿದಪ್ಪಿ ಗಂಭೀರಭಾವದಿಂದ ಸಾಗುವಂತೆ ಚಿತ್ರವಿದೆ. ಆಕೆಯ ಸೀರೆ, ಕುಪ್ಪುಸದ ಪೀತಾಂಬರ, ಕೈತೋಳು, ಬಳೆ, ಮೂಗಿನ ಬುಲಾಕು ಇವುಗಳ ಮೆರುಗು ಸಹಜವರ್ಣ ಗಳಲ್ಲಿ ಮೂಡಿಬಂದಿದೆ. ಇಲ್ಲಿ ಕಲಾವಿದರು ಸಾರ್ಥಕತೆ ಪಡೆದಿದ್ದಾರೆ ಎನಿಸುತ್ತದೆ1.

ಮೈಸೂರಿನ ವಸ್ತುಪ್ರದರ್ಶನಕ್ಕೆ ಕಾಲಿಟ್ಟೊಡನೆಯೇ ಅಲ್ಲಿಯ ಕಟ್ಟಡವೊಂದರ ಮೇಲೆ, ಎದುರಿಗೆ ನಂಜುಂಡಸ್ವಾಮಿಗಳಿಂದ ರೂಪಿಸಲ್ಪಟ್ಟ ಶ್ರೀ ಜಯಚಾಮರಾಜ ಒಡೆಯರ ಭಾವಚಿತ್ರವಿದೆ. ಆಗಾಗ ವಸ್ತುಪ್ರದರ್ಶನದಲ್ಲಿಯೂ ಅವರ ಕೃತಿಗಳು ಶೋಭಿಸುತ್ತಿದ್ದುವು.

ಚದುರಂಗರ 'ಸ್ವಪ್ನಸುಂದರಿ', ಕಣವಿಯವರ 'ಮಧುಚಂದಿರ', ದೇವೀರಪ್ಪನವರ 'ಬೆಳುವಲದ ಮಡಿಲಲ್ಲಿ', ಎಚ್ಚೆಸ್ಕೆ ಅವರ 'ಶ್ರೀರಾಮಾನುಜ' ಮುಂತಾದ ಪುಸ್ತಕಗಳಿಗೆ ಅವರು ರಚಿಸಿಕೊಟ್ಟಿರುವ ಕೃತಿಗಳು ಅವರ ಕಲಾಪ್ರೌಢಿಮೆಯ ನಿದರ್ಶನಗಳು.

ನಂಜುಂಡಸ್ವಾಮಿಯವರು ಆಡಂಬರವಿಲ್ಲದ ಸಾಮಾನ್ಯ ಜೀವನ ನಡೆಸಿ ಚಿತ್ರಕಲೆಯಲ್ಲಿ ಅಲೌಕಿಕ ಸಿದ್ಧಿ ಪಡೆದರು. ಪ್ರಶಾಂತ ವಾತಾವರಣದ ಒಂಟಿಕೊಪ್ಪಲಿನಲ್ಲಿ ಅಚ್ಚುಕಟ್ಟಾದ ಪುಟ್ಟ ಮನೆಯೊಂದರಲ್ಲಿ ವಾಸಿಸುತ್ತ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕಲಾಧ್ಯಾಪಕ ವೃತ್ತಿಯಲ್ಲಿದ್ದರು. ನಿವೃತ್ತರಾದ ಕೆಲವು ವರ್ಷಗಳ ಮೇಲೆ ತಮ್ಮ ಮನೆಯನ್ನು ಇದ್ದಕ್ಕಿದ್ದಂತೆಯೇ ಮಾರಿಬಿಟ್ಟರು. ಪೇಟೆಯ ಜೀವನ ಬೇಡ ವಾಯಿತು. ಒಂದು ಬೆಳಗಿನ ಜಾವ ಸಾಮಾನು ತುಂಬಿದ ಲಾರಿಯೊಂದರಲ್ಲಿ ಪತ್ನಿಯೊಂದಿಗೂ ಮಕ್ಕ ಳೊಂದಿಗೂ ತಮ್ಮ ತಾಯಿಯ ಊರಾದ ಯರಗಂಬಳ್ಳಿಗೆ ಹೊರಟು ಬಿಟ್ಟರು. ಅಲ್ಲಿ ಇವರ ತಾಯಿಯ ಮನೆಯಲ್ಲಿ ಶಾಂತಿ ದೊರೆತೀತು ಅನ್ನಿಸಿತು ಅವರಿಗೆ. ಆದರೆ ಅಲ್ಲಿಯೂ ಬಹಳ ಕಾಲ ಇರಲಾಗಲಿಲ್ಲ. ಇವರು ಮನೆಯನ್ನು ಮಾರಿ ಬಂದ ಹಣವನ್ನು ಬ್ಯಾಂಕೊಂದರಲ್ಲಿ ಇರಿಸಿದ್ದರು. ಆ ಹಳ್ಳಿಯ ಕೆಲವರು ಇವರನ್ನು ಬಹಳ ಪ್ರೀತಿಯಿಂದ ಕಾಣತೊಡಗಿದರು. ಹಣವನ್ನು ಸಾಲವಾಗಿ ಪಡೆದರು. ಹಣ ಕರಗುತ್ತ ಬಂತು. ಶ್ರೀಸ್ವಾಮಿಗಳಿಗೆ ಚಿಂತೆ ಹತ್ತಿ ಮತ್ತೆ ಪತ್ನೀಪುತ್ರರೊಂದಿಗೆ ಮೈಸೂರಿಗೆ ಬಂದರು. ಮತ್ತೆ ಒಂಟಿಕೊಪ್ಪಲಿನಲ್ಲಿ, ಪುಟ್ಟ ಬಾಡಿಗೆಯ ಮನೆಯೊಂದರಲ್ಲಿ ವಾಸಮಾಡತೊಡಗಿದರು. ತಾವು ಬಹಳ ಕಷ್ಟ ದಿಂದ ಉಳಿಸಿದ್ದ ಹಣದಲ್ಲೇ ಒಂದು ನಿವೇಶನ ಪಡೆದು ಅಲ್ಲಿ ಚಿಕ್ಕ ಮನೆಯೊಂದನ್ನು ಕಟ್ಟಿ, ಕಳೆದು ಹೋದ ಮನೆಯನ್ನು ಮತ್ತೆ ಪಡೆದರು. ಆದರೆ ಜೀವನಕ್ಕೆ ಬಹಳ ಕಷ್ಟಪಡುತ್ತಿದ್ದರೂ ಯಾವುದನ್ನೂ ಇತರರಿಗೆ ತೋರಿಸುತ್ತಿರಲಿಲ್ಲ. ಜೀವನದಲ್ಲಿ ಎಂದೂ ಇವರು ಪರರನ್ನು ಆಶ್ರಯಿಸಿದವರಲ್ಲ; ಬೇಡಿ ಜೀವಿಸಿದವರಲ್ಲ. ಕೈಲಿ ಇದ್ದಷ್ಟೇ ಹಣದಲ್ಲಿ ಬಹಳ ಮಿತವ್ಯಯದಿಂದ ಜೀವನ ಸಾಗಿಸುತ್ತಿದ್ದರು. ಇವರ ಆದರ್ಶದಿಂದಾಗಿ ಇವರನ್ನು ಕಲಾವಿದರು ಬಹಳ ಗೌರವದಿಂದ ಕಾಣುತ್ತಿದ್ದರು. ಇವರ ಮನೆಗೆ ಯಾರೇ ಬರಲಿ, ಬಹಳ ಪ್ರೀತಿ ಆದರದಿಂದ ಉಪಚರಮಾಡಿಕೊಳ್ಳುತ್ತಿದ್ದರು. ಗುಣಕ್ಕೆ ಬೆಲೆ ಕೊಡುತ್ತಿದ್ದರು. ಸುಳ್ಳು, ಠಕ್ಕು ಇವರಿಗೆ ಬಹು ದೂರ.

ನಂಜುಂಡಸ್ವಾಮಿಗಳು ದಿ. ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳ ಅಣ್ಣಂದಿರ ಮಕ್ಕಳು. ವಂಶ ಪಾರಂಪರ್ಯವಾಗಿ ಬಂದ ಶಿಲ್ಪಕಲೆಯ ಸಂಪ್ರದಾಯ ಇವರಲ್ಲೂ ನೆಲೆಸಿ, ಚಿತ್ರಕಲೆಗೆ ಶಾಸ್ತ್ರೀಯ ಅಡಿ

---

1 ಈ ಕೃತಿಯನ್ನು ಕಲಾವಿದರು ಈ ಲೇಖಕರಿಗೆ ಕೊಟ್ಟಿದ್ದಾರೆ.



ಕೌಸಲ್ಯಾ, ರಾಮ : ಜಲವರ್ಣಚಿತ್ರ



ಮದುವೆಯ ಒಂದು ದೃಶ್ಯ : ಜಲವರ್ಣಚಿತ್ರ



ಕಲ್ಪನೆಯ ವ್ಯಕ್ತಿಚಿತ್ರ : ಜಲವರ್ಣಚಿತ್ರ



ಹಳ್ಳಿಯ ಒಂದು ದೃಶ್ಯ : ಜಲವರ್ಣಚಿತ್ರ



ಮಹದೇಶ್ವರನನ್ನು ಕಾರಯ್ಯ ಬಿಲ್ಲಯ್ಯ ಗುರುತಿಸಿದ್ದು : ಜಲವರ್ಣಚಿತ್ರ



ಕಬೀರ ಮತ್ತು ಪತ್ನಿ : ತೀರ್ಥಯಾತ್ರೆ

ಪಾಯವನ್ನು ಕೊಟ್ಟಿತ್ತು. ಇವರು ತಮ್ಮ ಚಿಕ್ಕಂದಿನಿಂದ ಬಡತನದಲ್ಲಿ ಅಪಾರ ಕಷ್ಟಗಳನ್ನೆದುರಿಸಿ, ಅಲ್ಪ ಸಂಬಳದ ಉಪಾಧ್ಯಾಯ ವೃತ್ತಿಯನ್ನಂಗೀಕರಿಸಿ ಜೀವನದ ಸಾಹಸದಲ್ಲಿ ಗಟ್ಟಿಗರೆನಿಸಿಕೊಂಡವರು. ಕಲಾಭ್ಯಾಸದಲ್ಲಿ ಆಳವಾಗಿ ಪರಿಶ್ರಮಿಸಿ, ಸ್ವತಃ ಸಂಶೋಧನೆಗಳನ್ನೂ ನಡೆಸಿ, ಕಲೆಯ ಗುಟ್ಟನ್ನು ಅರಿತಿದ್ದರು. ಇವರ ಪ್ರತಿಭೆಗೆ ತಕ್ಕ ಸನ್ಮಾನ ಕೊನೆಯ ತನಕ ದೊರಕಲಿಲ್ಲ. ಇವರಿಗಿಂತ ಕಿರಿಯರಿಗೆಲ್ಲ ಪುರಸ್ಕಾರ, ಸನ್ಮಾನ ಲಭಿಸಿದಾಗ ಇವರು ಅಸೂಯೆ ಪಟ್ಟವರಲ್ಲ. "ಬೇರೆಯವರ ಪ್ರಗತಿಯನ್ನು ಕಂಡು ಮೆಚ್ಚೋಣ. ಹರಸೋಣ. ಯಾವುದೂ ಸ್ಥಿರವಲ್ಲ" ಎನ್ನುವುದು ಇವರ ಜೀವನದ ಆದರ್ಶ. ಇವರು ಸದಾ ಹಸನ್ಮುಖಿಗಳಾಗಿರುತ್ತಿದ್ದರು. ಮಾತುಮಾತಿಗೂ ಪ್ರತಿಘಳಿಗೆಯೂ ಕಲೆಯ ವಿಚಾರ, ಕಲೆಯ ಚರ್ಚೆ, ಕಲೆಯ ಅನುಭವದ ಮಾತುಕತೆ, ಕಲೆಯ ಆರಾಧನೆಯ ಆನಂದ ಇವರಲ್ಲಿ ಕಾಣ ಬರುತ್ತಿತ್ತು. ಡಂಭಾಚಾರದ, ಸತ್ತ್ವಹೀನವಾದ ಮಾತುಗಳಿಗೆ ಇವರು ಮರುಳಾಗುವವರಲ್ಲ. ಪಾಶ್ಚಾತ್ಯ ಉನ್ನತ ಕಲಾವಿದರ ಕೃತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಆ ಕಲೆಯ ದೃಷ್ಟಿಕೋನವನ್ನು, ಮಟ್ಟವನ್ನು ಸಂಪೂರ್ಣ ಅರಿತು ಅದರಂತೆ ನಡೆಯುತ್ತಿದ್ದರು; ಕೃತಕೃತ್ಯರಾಗಿದ್ದರು. ಕಲೆಯ ಬಗ್ಗೆ ಯಾರೇ ಕೇಳಲಿ ಕೇಳಿದವರಿಗೆ ನಿರ್ವಂಚನೆಯಿಂದ ತಮಗೆ ತಿಳಿದಿದ್ದುದನ್ನು ಹೇಳುತ್ತಿದ್ದರು.

ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳ ಪುಣ್ಯಕಥೆಗಳನ್ನು ಓದುವುದು, ಕೇಳುವುದು ಅವರಿಗೆ ಬಹಳ ಇಷ್ಟ. ಅಲ್ಲಿಯ ರಸಸನ್ನಿವೇಶಗಳ ಚಿತ್ರಗಳನ್ನು ಮನಸ್ಸಿನಲ್ಲಿ ಮೂಡಿಸಿಕೊಂಡು ಕಲೆಯಲ್ಲಿ ರೂಪಿಸುತ್ತಿದ್ದರು. ಸ್ವಾಮಿಗಳ ಗೆಳೆಯರಲ್ಲಿ ಸಾಹಿತಿಗಳು ಮತ್ತು ಕಲೆಗಾರರೇ ಹೆಚ್ಚು. ಮಮತೆಯ ಗೆಳೆಯರಾದವರೆಂದರೆ ಟಿ. ಕೈಲಾಸಂ. ಸ್ವಾಮಿಯವರು ಕೈಲಾಸಂರೊಡನೆ ಪುರಾಣ ಕಥೆಗಳ ವಿಚಾರವಾಗಿ ದೀರ್ಘವಾಗಿ ಚರ್ಚೆ ನಡೆಸುತ್ತಿದ್ದರು. ಇವರಿಬ್ಬರ ವಾಗ್ಯುದ್ಧ, ಒಡಂಬಡಿಕೆ, ಪರಸ್ಪರ ಪ್ರೀತಿ ಅಸದೃಶವಾದ್ದು. ಆ ವೇಳೆಯಲ್ಲಿ ಶ್ರೀ ಸ್ವಾಮಿಗಳು ಕೈಲಾಸಂ ಅವರ ಒಂದು ತೈಲರೂಪಚಿತ್ರವನ್ನು ರಚಿಸಿದ್ದರು. ಅದು ಈಗ ಮೈಸೂರಿನ ಸಾಹಿತಿ 'ಬುಳ್ಳ' (ವಿ.ಕೆ. ಶ್ರೀನಿವಾಸನ್) ಅವರ ಬಳಿ ಇದೆ[2]

ಸ್ವಾಮಿಯವರಿಗೆ ಅರಮನೆಯ ಕಲಾವಿದರಾಗಿದ್ದ ಟಿ. ಕೇಶವಯ್ಯನವರ ನೆರವು ಸಿಕ್ಕಿ, ಕಲಾಸಾಧನೆ ಪಕ್ವವಾಗಿತ್ತು. ಅನಂತರ ಅವರು ಮುಂಬಯಿಯ ಜೆ. ಜೆ. ಕಲಾಶಾಲೆಯಲ್ಲಿ ಅಭ್ಯಾಸಮಾಡಿ ಹೆಚ್ಚಿನ ಅನುಭವ ಪಡೆದುಕೊಂಡಿದ್ದರು. ದಿವಂಗತ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹ ಸ್ವಾಮಿಗಳಿಗೆ ಸಿಕ್ಕಿದ ಪರಿಣಾಮವಾಗಿ ಇವರ ಕಲಾಪ್ರೌಢಿಮೆ ಪ್ರಕಾಶಕ್ಕೆ ಬರಲು ಅವಕಾಶವಾಯಿತು. ಆಗ ಇವರು ಚಿತ್ರಿಸಿದ ಕೆಲವು ತೈಲವರ್ಣ ಚಿತ್ರಗಳು ಅಂದಿನ ಮಹಾರಾಜರಿಂದ ಮೆಚ್ಚುಗೆಗೆ ಪಾತ್ರವಾಗಿ ಅರಮನೆಯ ಕಲ್ಯಾಣಮಂಟಪವನ್ನು ಅಲಂಕರಿಸಿದುವು. ಅವು ಈಗಲೂ ಅಲ್ಲಿವೆ. ಪಾಶ್ಚಾತ್ಯ ಶೈಲಿಯಲ್ಲಿ ರಚಿಸಲಾದ ಈ ಕೃತಿಗಳಲ್ಲಿ ಜನರ ಭಾವಭಂಗಿ, ಚಲನವಲನ ಬಹಳ ಸ್ವಾಭಾವಿಕವಾಗಿ ಮೂಡಿಬಂದಿವೆ.

ಚಿತ್ರಕಲೆಯಲ್ಲಿ ಬೇಸರವಾದಾಗ ಅವರು ದಂತ ಮತ್ತು ಗಂಧದಲ್ಲಿ ಸುಂದರ ಮೂರ್ತಿಗಳನ್ನು ನಿರ್ಮಿಸುತ್ತಿದ್ದುದೂ ಉಂಟು. ಬೇಲೂರಿನ ಶಿಲಾಬಾಲಿಕೆಯರಿಂದ ಸ್ಫೂರ್ತಿಗೊಂಡು ಇವರು ರಚಿಸಿದ ಒಂದು ಆಕೃತಿ ಮತ್ತು ಗಣಪತಿ—ಇವು ತುಂಬಾ ಮೋಹಕವಾಗಿವೆ. 'ದಂತಶಿಲ್ಪ'ದ ನೆನಪಾದಾಗಲೆಲ್ಲಾ ಒಂದು ಘಟನೆ ನೆನಪಿಗೆ ಬರುತ್ತದೆ. ಒಮ್ಮೆ ಕಲಾಶಾಲೆಯಲ್ಲಿ ಶ್ರೀ ಸ್ವಾಮಿಗಳು ವಿದ್ಯಾರ್ಥಿಗಳಿಗೆ ಚಿತ್ರಿಸಲು ತಿಳಿಸಿ ತಮ್ಮ ಪಾಡಿಗೆ ಏನನ್ನೋ ಮಾಡುತ್ತ ಕುಳಿತಿದ್ದರು. ಕಲಾವಿಭಾಗದ ಮೇಲಧಿಕಾರಿಗಳಾಗಿದ್ದ ಟಿ. ಎಸ್. ಜಿ. ಪಾವಂಜಿಯವರು ಇದ್ದಕ್ಕಿದ್ದಂತೆ ಕೊಠಡಿಗೆ ಬಂದರು. ಇವರು ಬಂದುದು ಸ್ವಾಮಿಗಳಿಗೆ ಗೊತ್ತಾಗಲೇ ಇಲ್ಲ. ತಲೆಬಗ್ಗಿಸಿಕೊಂಡು ಯಾವುದೋ ಕೃತಿರಚನೆಯಲ್ಲಿ ಮಗ್ನರಾಗಿದ್ದರು. ಪಾವಂಜಿಯವರು ನಿಧಾನವಾಗಿ ಬಂದು ಸ್ವಾಮಿಗಳ ಹಿಂಬದಿಯಲ್ಲಿ ನಿಂತರು. ಸ್ವಾಮಿಗಳಿಗೆ ಯಾರೋ ವಿದ್ಯಾರ್ಥಿ ಬಂದು ನಿಂತಂತೆ ಅನಿಸಿತು. "ಹೋಗಯ್ಯ, ಕತ್ತೆ" ಎಂದರು. ಪಾವಂಜಿಯವರು "ಎಲ್ಲಿ,

---

2 ಕೈಲಾಸಂ ಅವರೊಡನೆ ಮಾತಾಡುತ್ತಿದ್ದಾಗ ಅವರ ಅರಿವಿಲ್ಲದಂತೆ ಕೆಲವೇ ರೇಖೆಗಳಲ್ಲಿ ರಚಿಸಿದ ಎರಡು ರೂಪ ಚಿತ್ರಗಳು ಈ ಲೇಖಕರ ಬಳಿ ಇವೆ.

ಕೊಡಿ ನಿಮ್ಮ ವಿಗ್ರಹ" ಎಂದು ಅದನ್ನು ಅವರ ಕೈಗಳಿಂದ ಕಿತ್ತುಕೊಂಡರು. ಸ್ವಾಮಿಗಳು ಕತ್ತೆತ್ತಿ ಪಾವಂಜಿಯವರನ್ನು ನೋಡಿ ಧಿಗ್ಗನೆ ಎದ್ದು ನಿಂತು ತಮ್ಮ ತಪ್ಪು ಒಪ್ಪಿಕೊಂಡವರಂತೆ ನಮ್ರತೆಯಿಂದ ವಂದಿಸಿ, "ಕ್ಷಮಿಸಿ, ಸಾರ್" ಎಂದರು. ಆ ಮೂರ್ತಿಯ ಸೌಂದರ್ಯವನ್ನು ನೋಡಿದಾಗ ಕಲಾವಿದರೂ ಅಧಿಕಾರಿಗಳೂ ಆದ ಪಾವಂಜೆಯವರ ಸಿಟ್ಟು ಶಮನವಾಯಿತು.

ಸ್ವಾಮಿಗಳ ಅನೇಕ ಚಿತ್ರಗಳು, ಮೂರ್ತಿಗಳು ಪ್ರದರ್ಶನಗಳಲ್ಲಿ ಪ್ರಶಸ್ತಿ ಗಳಿಸಿವೆ. ಪ್ರದರ್ಶನ ಕೈಪಿಡಿಗಳಲ್ಲಿ ಇವರ ಅನೇಕ ಚಿತ್ರಗಳು ಮುದ್ರಿತವಾಗಿವೆ. ಜಯಾಪಜಯ, ಹೊಗಳಿಕೆ-ತೆಗಳಿಕೆಗಳಿಗೆ ಗಮನಕೊಡದೆ ಕಲೆಯ ಸಂಶೋಧನೆಯಲ್ಲಿ, ಅದರ ರಹಸ್ಯಭೇದನದಲ್ಲಿ, ಗುರಿಯ ಸಾಧನೆಯಲ್ಲಿ ಇವರು ಸಾಗುತ್ತಿದ್ದರು. ಇವರು ವರ್ಣಸಂಯೋಜನೆಯಲ್ಲಿ ನಡೆಸಿದ ಸಂಶೋಧನೆಯ ಫಲವಾಗಿ ಇವರ ಶಿಷ್ಯ ವರ್ಗಕೆ ಅತ್ಯಂತ ಸಹಾಯವಾಯಿತು. ಪ್ರಾಚೀನ ಕಲಾವಿದರ ಕಲಾಸಾಧನೆಯ ವೈವಿಧ್ಯವನ್ನು, ಅವರು ಕಲೆಯನ್ನು ನೋಡುತ್ತಿದ್ದ ಉನ್ನತ ದೃಷ್ಟಿಯನ್ನು ತಿಳಿಯುವ ಮನಃಪ್ರವೃತ್ತಿ ಇವರಲ್ಲಿತ್ತು. ಇವರು ಸತ್ಯಕ್ಕೆ ಸದಾ ತೀವ್ರ ಗಮನ ಕೊಟ್ಟವರು.

ಶ್ರೀ ಸ್ವಾಮಿಗಳಿಗೆ ವನಸ್ಪತಿ ಔಷಧಿಯ ತಯಾರಿಕೆಯ ಬಗ್ಗೆ ಅರಿವಿತ್ತು. ತಾವೇ ಮನೆಯಲ್ಲಿ ಅದನ್ನು ತಯಾರಿಸಿಕೊಳ್ಳುತ್ತಿದ್ದರು. ಒಮ್ಮೆ ಯಾವುದೋ ವ್ಯತ್ಯಾಸದಿಂದಾಗಿ ಇವರು ಸಿದ್ಧಪಡಿಸಿ ಸೇವಿಸಿದ ಔಷಧಿ ಇವರ ಮೈ ಚರ್ಮವನ್ನೇ ಕಿತ್ತು ತಿಂದಿತ್ತು. ಮತ್ತೆ ಅಂಥ ಔಷಧಿಗಳ ಗೋಜಿಗೇ ಕೈಹಾಕದಂತಾಯಿತು.

ಚಿನ್ನ ತಯಾರಿಸಬೇಕೆಂಬುದು ಅವರ ಇನ್ನೊಂದು ಹುಚ್ಚು. ಅನೇಕ ವೇಳೆ ಇದು ಅವರ ತಲೆ ಕೆಡಿಸಿದ್ದೂ ಉಂಟು. ತಮ್ಮ ಮನೆಯ ಕೋಣೆಯೊಂದರಲ್ಲಿ ಗಿಡಮೂಲಿಕೆಗಳಿಂದ ರಸತೆಗೆದು ಪುಟ ಕೊಡುತ್ತಿದ್ದರು. ಇವರ ಈ ಅಭ್ಯಾಸ ಬರೀ ಶ್ರಮವಾಯಿತಲ್ಲದೆ ಕೊನೆಗೆ ಅವರಿಗೆ ಭ್ರಮನಿರಸನವಾಯಿತು. ಅವರು ಉಪಯೋಗಿಸುತ್ತಿದ್ದ ತಿದಿ, ಅಗ್ಗಿಷ್ಟಿಕೆ, ಕೊಳವೆ, ತಂದಸ, ಸುತ್ತಿಗೆ ಮುಂತಾದ ಸಾಮಗ್ರಿಗಳೆಲ್ಲ ಮೂಲೆ ಸೇರಿದುವು.

ಶ್ರೀ ಸ್ವಾಮಿಗಳು ಬಹು ಬೇಗ ಯಾರಮೇಲಾದರೂ ಸಿಟ್ಟಾಗಿಬಿಡುತ್ತಿದ್ದರು. ಆ ಸಿಟ್ಟಿನಲ್ಲಿ ಅರ್ಥವೂ ಇರುತ್ತಿತ್ತು. ಆದರೆ ಸಿಟ್ಟಾದ ಮರುಗಳಿಗೆಯಲ್ಲೇ ಶಾಂತಚಿತ್ತರಾಗುತ್ತಿದ್ದರು. ಸಿಟ್ಟುಗೊಂಡವರನ್ನು ಮತ್ತೆ ಕರೆದು ವಿನಯದಿಂದ ಮಾತಾಡಿಸುತ್ತಿದ್ದರು. ಹೃದಯದಲ್ಲಿ ಯಾವುದನ್ನೂ ಇಟ್ಟುಕೊಳ್ಳುವುದು ಇವರ ಸ್ವಭಾವವಾಗಿರಲಿಲ್ಲ.

ರಾಜ್ಯ ಲಲಿತ ಕಲಾ ಅಕಾಡಮಿ [illegible] ಸ್ವಾಮಿಗಳನ್ನು ಗುರುತಿಸಿ ಗೌರವಿಸಿದ್ದು ಕಟ್ಟ ಕಡೆಯಲ್ಲಿ. ಆದರೆ ಆ ಸಮಾರಂಭಕ್ಕೆ ಹೋಗುವುದು ಅವರಿಗೆ ಬೇಡವಾಯಿತು. ಇಂಥ ಅಪ್ರತಿಮ ಕಲಾವಿದರನ್ನು ನಾವು, ಜನತೆ ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲಾಗಲಿಲ್ಲ. ಅವರಿಗೆ ಸಲ್ಲಬೇಕಾದಷ್ಟು ಸನ್ಮಾನ ಬದುಕಿದ್ದಾಗ ಸಿಗಲಿಲ್ಲ. ಅವರ ಕುಟುಂಬಕ್ಕೆ ಬವಣೆ ತಪ್ಪಲಿಲ್ಲ. ಕೊನೆಯ ದಿನಗಳಲ್ಲಿ ದೊಡ್ಡ ಶಿಲೆಯಲ್ಲಿ ಶ್ರೀ ಚಾಮುಂಡೇಶ್ವರಿ ವಿಗ್ರಹವನ್ನು ಅವರು ಕಡೆಯುತ್ತಿದ್ದರು. ಅದು ಪೂರ್ಣಗೊಳ್ಳುವಷ್ಟರಲ್ಲಿ ಅವರು ನಮ್ಮಿಂದ ದೂರವಾದರು. ಅವರಂಥ ಸುಸಂಸ್ಕೃತ ಮೇಧಾವಿ ಕಲಾವಿದರಿಂದ ನಮ್ಮ ಚಿತ್ರಕಲೆಯ ಭವ್ಯಪರಂಪರೆ ಬೆಳೆದುಕೊಂಡು ಬಂದಿದೆ.

ಡಾ. ಬಾ. ರಾ. ಗೋಪಾಲ್

ಬೀದರ್ ಜಿಲ್ಲೆಯ ಶಾಸನಗಳು—೧

ಕರ್ನಾಟಕದಲ್ಲಿ ಆಳಿದ ಕೆಲವು ಮಾಂಡಲಿಕ ಮನೆತನಗಳನ್ನು ಕುರಿತು ವಿಶೇಷ ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದವರು ನನಗೆ ನೀಡಿದ ಧನಸಹಾಯವನ್ನು ಉಪಯೋಗಿಸಿ ನಾನು ಬೀದರ್ ಹಾಗೂ ಕಾರವಾರ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಶಾಸನಾನ್ವೇಷಣೆಯಲ್ಲಿ ತೊಡಗಿ ಹಲವಾರು ಹೊಸ ಶಾಸನಗಳನ್ನು ಪ್ರತಿಮಾಡಿಕೊಂಡೆ. ಒಂದು ದಶಕಕ್ಕೂ ಹಿಂದೆ, ನಾನು ಕೇಂದ್ರ ಶಾಸನ ಇಲಾಖೆಯಲ್ಲಿ ಇದ್ದಾಗ, ಒಮ್ಮೆ ಬೀದರ್ ಜಿಲ್ಲೆಯ ಒಂದೆರಡು ಗ್ರಾಮಗಳಿಗೆ ಹೋಗಿ ಅಲ್ಲಿಯ ಶಾಸನಗಳನ್ನು ಪ್ರತಿಮಾಡಿದ್ದೆ. ಆ ಶಾಸನಗಳನ್ನು ನನ್ನ ಗಮನಕ್ಕೆ ಮೊದಲು ತಂದವರು ದಿವಂಗತ ತಿ. ತಾ. ಶರ್ಮರವರು. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದ ಬಳಿಕ ಈ ಕೆಲಸ ಮುಂದು ವರಿಸಬೇಕೆಂಬ ಇಚ್ಛೆ ಹೆಚ್ಚಾಗಿ, ಧನಸಹಾಯ ಕೋರಿದೆ. ಆ ನೆರವನ್ನು ನನಗಿತ್ತ ಆಯೋಗಕ್ಕೂ, ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ ಶ್ರೀ ಸದಾಶಿವ ಒಡೆಯರ್ ಹಾಗೂ ಇತರ ಅಧಿಕಾರಿ ವರ್ಗಕ್ಕೂ ನನ್ನ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ.

ನನ್ನ ಸಂಗ್ರಹದಲ್ಲಿರುವ ಶಾಸನಗಳ ಪಾಠಗಳನ್ನೆಲ್ಲ, ಅವುಗಳ ಐತಿಹಾಸಿಕ ಮಹತ್ವ ಮುಂತಾದವುಗಳನ್ನು ಕುರಿತ ಟಿಪ್ಪಣಿಗಳೊಡನೆ ಮೊದಲು ಪ್ರಕಟಿಸಿ, ಅನಂತರ ಸಂಗ್ರಹವಾಗಿ ಅವು ಆಯಾ ಕಾಲದ ಜನಜೀವನ ಇತ್ಯಾದಿಗಳ ಮೇಲೆ ಚೆಲ್ಲುವ ವಿಶಿಷ್ಟವಾದ ಬೆಳಕನ್ನೂ ಸೂಕ್ಷ್ಮವಾಗಿ ಪರಿಶೀಲಿಸುವುದು ನನ್ನ ಉದ್ದಿಶ್ಯ. ಇದೆಲ್ಲಾ ಒಂದು ಲೇಖನದಲ್ಲಿ ಅಡಕವಾಗಬಹುದಾದ್ದಲ್ಲವಾದುದರಿಂದ ಇದನ್ನು ಹಲವಾರು ಲೇಖನಗಳ ಮಾಲೆಯಲ್ಲಿ ಪ್ರಕಟಿಸಬೇಕಾಗುತ್ತದೆ. ಪ್ರಸ್ತುತ ಬೀದರ್ ಜಿಲ್ಲೆಯ ಶಾಸನಗಳನ್ನು ಮಾತ್ರ ಪ್ರಕಟಿಸಬಯಸಿದ್ದೇನೆ.

ಅಣದೂರು

ಬೀದರ್ ತಾಲೂಕಿಗೆ ಸೇರಿದ ಬೀದರ್‌ಗೆ ಸುಮಾರು 8 ಮೈಲಿಗಳಷ್ಟು ದೂರದಲ್ಲಿರುವ ಗ್ರಾಮ ಅಣದೂರು. ಇಲ್ಲಿ ಹಿರೇಮಠವೆಂಬ ಒಂದು ವೀರಶೈವ ಮಠವಿದೆ. ವಿಸ್ತಾರದಲ್ಲಿಯೂ ಇದು ಹಿರಿಯ ಮಠವೇ. ಮಠದ ಹಿಂದೆ, ಲಿಂಗೈಕ್ಯರಾದ ಸ್ವಾಮಿಗಳ ಗದ್ದುಗೆಗಳಿರುವ ಹಿತ್ತಲಿನಲ್ಲಿ ಒಂದು ಗದ್ದುಗೆಗೆ ಒರಗಿಕೊಂಡಂತೆ ಶಾಸನ ಕಲ್ಲೊಂದಿದೆ. ಈ ಕರಿಯ ಕಲ್ಲಿನ ಎರಡೂ ಮುಖಗಳಲ್ಲಿ ಶಾಸನವೊಂದನ್ನು ಕೆತ್ತಲಾಗಿದೆ.

ಇದು ಕಲ್ಯಾಣದಲ್ಲಿ ಆಳಿದ ಚಾಲುಕ್ಯವಂಶದ ಪ್ರತಾಪಚಕ್ರವರ್ತಿ ಇಮ್ಮಡಿ ಜಗದೇಕಮಲ್ಲನ ಶಾಸನ. ಈ ಶಾಸನದ ಕಾಲ ಶಕ ವರುಷ 1059ನೆಯ ಕಾಳಯುಕ್ತಿ ಸಂವತ್ಸರದ ಪುಷ್ಯಮಾಸದ ಪೌರ್ಣಮಿ ಉತ್ತರಾಯಣ ಸಂಕ್ರಾಂತಿ. ಆದರೆ ಕಾಳಯುಕ್ತಿ ಸಂವತ್ಸರಕ್ಕೆ ಸಮನಾದ ಶಕವರ್ಷ 1060; 1059 ಅಲ್ಲ. ಶಾಸನದಲ್ಲಿ ಕೊಟ್ಟಿರುವ ಇತರ ವಿಚಾರಗಳೂ ಸರಿಯಾಗಿಲ್ಲ.

ಕಾಳಯುಕ್ತಿ ಸಂವತ್ಸರದ ಪೌರ್ಣಮಿ ಕ್ರಿ.ಶ. 1138, ಡಿಸೆಂಬರ್ 8ರ ಭಾನುವಾರಕ್ಕೆ ಸಮನಾಗುತ್ತದೆ. ಆದರೆ ಉತ್ತರಾಯಣ ಸಂಕ್ರಾಂತಿ ಡಿಸೆಂಬರ್ 24, ಶನಿವಾರದಂದಾಯಿತು. ಶಾಸನದಲ್ಲಿ ಅರಸ 'ಪಟ್ಟ

ಬಂಧೋತ್ಸವ ಮಾಡಿಸಿಕೊಂಡು ಪ್ರಥಮ ರಾಜ್ಯದಲ್ಲು' ಎಂದಿರುವುದನ್ನು ಗಮನಿಸಿದರೆ, ಇದು ಅವನ ಆಳ್ವಿಕೆಯ ಮೊದಲ ವರ್ಷವೆನಿಸುತ್ತದೆ. ಆದರೆ ಇದು ಪ್ರಥಮ ವರ್ಷದ ಆರಂಭವೇ? ಅಂತ್ಯವೇ? ಕಾಳಯುಕ್ತಿ ಸಂವತ್ಸರ (1138–39) ಅವನ ಆಳ್ವಿಕೆಯ ಮೊದಲ ವರ್ಷವೆಂದು ಗಣಿಸಲಾಗಿದೆ ಎಂದು ಡಾ. ಫ್ಲೀಟ್‌ರವರು ಊಹಿಸಿದ್ದಾರೆ.[1] ಆದ್ದರಿಂದ ಇದು ಆತನ ಆಳ್ವಿಕೆಯ ಮೊದಲ ವರ್ಷದ ಆರಂಭದ ದಿನವೆಂದು ಹೇಳಬಹುದು. ಅಂದು ಆತ ಮಹಾಘೈರವ ವೈಳಾರದೇವರ ಶ್ರೀಪಾದಂಗಳ ಕಂಡನೆಂದು ಹೇಳಿದೆ. ಬಹುಶಃ ಇದು ದೇವಾಲಯದ ಆಚಾರ್ಯರ ಹೆಸರಾಗಿರಬಹುದು.

ಅರಸ ಪಟ್ಟಬಂಧೋತ್ಸವ ಮಾಡಿಸಿಕೊಂಡ ಸಮಯದಲ್ಲಿ ಅಣಂದೂರಿನ ನಾರಣೇಶ್ವರ ದೇವರ ದೇವಾಲಯಕ್ಕೆ ಕಳಶಾರೋಹಣವನ್ನು ಮಾಡಿ ಆ ದೇವರ ಪೂಜೆಗೆ ಮತ್ತು ಬ್ರಾಹ್ಮಣರು ಹಾಗೂ ತಪೋಧನರಿಗೆ ಅನ್ನದಾನಕ್ಕೆ ಭೂಮಿದಾನಗಳನ್ನು ಮಾಡಿದನೆಂದು ಶಾಸನ ತಿಳಿಸುತ್ತದೆ. ಆ ದಾನಗಳನ್ನು ತಾನೇ ಮಾಡದೆ ತನ್ನ ಮಹಾಪ್ರಧಾನನಾದ ಬಮ್ಮಣಯ್ಯ ದಂಡನಾಯಕನಿಗೂ, ಮಂಡಳೇಶ್ವರ ಬದ್ದರಸನಿಗೂ ಆದೇಶ ನೀಡಿದ. ಅದರನ್ವಯ ಅವರು ಆ ದಾನಗಳನ್ನು ಮಾಡಿದರು.

ಬಮ್ಮಣಯ್ಯ ದಂಡನಾಯಕ ಅಟ್ಟಳಿ ನಾಡಿನ ಸಾಮಂತಿಕೆಯ ಅಧಿಕಾರಿ: ಮನೆವೆರ್ಗ್ಗಡೆ. ಅಟ್ಟಳಿ ನಾಡು ಎಂಬುದು ಅಣಂದೂರು ಮತ್ತು ಸುತ್ತಲಿನ ಗ್ರಾಮಗಳನ್ನೊಳಗೊಂಡ ಒಂದು ಪ್ರಾಂತ. ಈ ಸುತ್ತಲಿನ ಇತರ ಶಾಸನಗಳಲ್ಲಿಯೂ ಈ ಪ್ರಾಂತದ ಉಲ್ಲೇಖಗಳಿವೆ. ಬದ್ದರಸ ಆ ನಾಡ ಮಂಣೆಯ. ಮಂಣೆಯ, ಮಣ್ಣೆಯ ಎಂದರೆ ನಾಯಕ, ದಳಪತಿ ಎಂಬ ಅರ್ಥವಾಗುತ್ತದೆ. ಆದರೆ ಈ ಕಾಲದ ಶಾಸನಗಳಲ್ಲಿ ಈ ಪದ ಬಹಳ ಸಾಮಾನ್ಯವಾಗಿ ಕಾಣಬರುತ್ತದೆ. ಒಂದು ಪ್ರಾಂತದ, ಭಾಗದ ನಾಯಕನಾಗಿ, ಸಮ್ರಾಟನಿಗೆ ಸಾಮಂತನಾಗಿದ್ದರೂ, ಆ ಭಾಗದ ಉತ್ಪನ್ನಗಳಲ್ಲಿ ರಾಜಾಂಶವನ್ನು ಬಿಟ್ಟು ಉಳಿದವನ್ನು ಅನುಭೋಗಿಸುವ ಹಕ್ಕುದಾರಿಕೆ ಈತನದಾಗಿದ್ದಂತೆ ತೋರುತ್ತದೆ. ಆ ಪ್ರಾಂತದ ಮಂಡಲಿಕ–ತುಂಡರಸ ಎಂದು ಪರಿಗಣಿಸಬಹುದು.

ಶಾಸನದಲ್ಲಿ ಮಹಾಮಂಡಳೇಶ್ವರ ಬದ್ದರಸನ ಮತ್ತು ಮಹಾಪ್ರಧಾನ ಗೋಪದೇವ ದಂಡನಾಯಕನ ವಂಶಾವತಾರಗಳನ್ನು ಕೊಟ್ಟಿದೆ. ಆದರೆ ಶಾಸನದ ಈ ಭಾಗ ಅಸ್ಪಷ್ಟವಾಗಿದ್ದು ಕೆಲವು ಅಸಂಬದ್ಧತೆಗಳಿಂದ ಕೂಡಿದಂತೆ ತೋರುತ್ತದೆ. ಗೋಪದೇವ ದಂಡನಾಯಕ ಇಲ್ಲಿ ಒಮ್ಮೆಲೇ ಕಾಣಿಸಿಕೊಂಡಿದ್ದಾನೆ. ಇದಕ್ಕೆ ಮೊದಲು ಉಲ್ಲೇಖವಾಗಿರುವುದು ಬಮ್ಮಣಯ್ಯ ದಂಡನಾಯಕನ ಹೆಸರು. ಅಲ್ಲದೆ ಗೋವಿಂದ ದಂಡನಾಯಕನೆಂಬೊಬ್ಬ ಸಹ ಇಲ್ಲಿ ನುಸುಳಿದ್ದಾನೆ. ಗೋವಿಂದ, ಗೋಪದೇವ ಎಂಬ ಎರಡು ಹೆಸರುಗಳೂ ಒಬ್ಬನಿಗೇ ಅನ್ವಯವಾದಂತೆ ತೋರುತ್ತದೆ. ಆದರೆ ನಿರೂಪಿತ ವಂಶಾವಳಿಯನ್ನು ಗಮನಿಸಿದರೆ ಹೆಚ್ಚಿನ ಸಂದೇಹಗಳು ಎದ್ದು ಕಾಣುತ್ತವೆ. ಜೊತೆಗೆ ಬದ್ದರಸನ ವಂಶಾವತಾರವನ್ನು ನಿರೂಪಿಸುವುದಾಗಿ ಶಾಸನ (ಸಾಲು 14) ದಲ್ಲಿ ಹೇಳಿದ್ದರೂ, ಅದರ ವಿವರಗಳನ್ನು ಅನಂತರ ಕಾಣೆವು.

ಕಲಿ ಗೊಂಕ ಭೂಪನೆಂಬುವನೊಬ್ಬ. ಆತನ ಸುತ ಬದ್ದೆಗೋವಿಣೇಶ್ವರ. ಈತನನ್ನು ರಾಜ್ಯದಲ್ಲಿ ನಿಲಿಸಿದ ಖ್ಯಾತಿ ನಾರಾಯಣನೆಂಬಾತನದು. ಬದ್ದೆಗನ ಮಗ ಮಲ್ಲದೇವ. ಈತ ಸಹ ಸ್ವರಾಜ್ಯವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದು "ಮಲ್ಲದೇವಂಗೆ ರಾಜ್ಯಮನತ್ಯೂರ್ಜಿತಮಾಗೆ ಮಾಡಿ ನೆಗಳ್ದ"ವನು. ನಾರಾಯಣನ ಸುತನೆನಿಸಿದ ಗೋವಿಂದ ದಂಡಾಧಿಪ. ಹೀಗೆಂದು ಹೇಳಿದ ಕೂಡಲೇ ಚಲದತ್ರಿಣೇಗಂಡ, ಕಲಿಕಾಲಕರ್ಣ ಎಂದು ಭೂವಳಯ ಗೋಪದಂಡಾಧಿಪನನ್ನು ಬಣ್ಣಿಸುತ್ತದೆ ಶಾಸನ. ಇದರಿಂದ ಗೋವಿಂದನೇ ಗೋಪನಾಗಿರಬಹುದು ಎಂದು ತೋರುವ ಸಾಧ್ಯತೆ ಇದೆ. ಇಲ್ಲಿ ಗೋಪದೇವ ದಂಡನಾಯಕನ ವಂಶಾವತಾರವನ್ನು ಕೊಟ್ಟಿದೆ (21ನೆಯ ಸಾಲಿನಿಂದ 39ರ ವರೆಗೆ).

---

1 *Bombay Gazetteer*, Vol. I, pt II, p. 457

ಈತನದು ವಸಿಷ್ಠಗೋತ್ರ. ಆ ಗೋತ್ರದಲ್ಲಿ ಬೊಪ್ಪಣನೆಂಬಾತ ಜನಿಯಿಸಿದ. ಇವನ ಅನಂತರ ಬಂದವರನ್ನು ಕುರಿತ ವಂಶಾವಳಿ ಶಾಸನದಲ್ಲಿ ಹೀಗಿದೆ:

ಬೊಪ್ಪಣ ಭಟ್ಟ
↓
ಉಪೇಂದ್ರ
↓
ತ್ರಿಲೋಚನ
↓

↓	↓
ಉಪೇಂದ್ರ (ಬಮ್ಮದೇವನಗ್ರಜ)	ಬಮ್ಮದೇವ
↓	
ಮಹೇಶ್ವರ: ಪತ್ನಿ ಚಂಗಣಬ್ಬೆ	
↓	
ಗೋವಿದಂಡಾಧಿಪ	

ಅನಂತರ ಸೋವಣ ದಂಡನಾಥನೆಂಬೊಬ್ಬನ ವಂಶಾವಳಿಯನ್ನು ಕೊಟ್ಟಿದೆ. ಈತನ ಪತ್ನಿ ಚಾಕಣಬ್ಬೆ. ಇವರಿಗೆ ಜನಿಸಿದವ ನಾರಣದೇವ. ಈತನನ್ನು "ಉಪೇಂದ್ರವಂಶಜೋದ್ದಾಮ ಗುಣಾಧಿಕ"ನೆಂದು ವರ್ಣಿಸಿದೆ. ಅನಂತರದ ಭಾಗ ಸ್ಪಷ್ಟವಾಗಿಲ್ಲ. 41–42ನೆಯ ಸಾಲುಗಳು ಒಡೆದಿವೆ. ಈ ನಾರಣದೇವ ನಿಗೂ ಉಪೇಂದ್ರನ ವಂಶಕ್ಕೂ ಇದ್ದ ಸಂಬಂಧವೆಂತಹುದೋ ತಿಳಿಯದು. ಶಾಸನವನ್ನು ಇನ್ನೊಂದು ರೀತಿಯಲ್ಲಿಯೂ ಅರ್ಥೈಸಬಹುದು. "ಉಪೇಂದ್ರವಂಶಜೋದ್ದಾಮ ಗುಣಾಧಿಕ"ನೆನಿಸಿದವನು ನಾರಣ ದೇವನಾಗಿರದೆ, ಅವನ ಸಹೋದರನೋ, ಮತ್ತೊಬ್ಬನೋ ಆಗಿದ್ದಿರಬಹುದು. 42ನೆಯ ಸಾಲಿನಲ್ಲಿ ದಂಡನಾಥನೊಬ್ಬನ ಉಲ್ಲೇಖವಿದ್ದು, 'ಅವರೊಳಗೆ' ನಾರಣಯ್ಯನೊಬ್ಬನೆಂದು ಹೇಳಿದೆ. ಈ ನಾರಣಯ್ಯ ಹಾಗೂ ನಾರಣದೇವ ಒಬ್ಬನೇ ಆಗಿರಬಹುದು.

ಕಲ್ಲಿನ ಹಿಂಭಾಗದಲ್ಲಿರುವ ಶಾಸನಭಾಗದಲ್ಲಿ ನಾರಣಯ್ಯನ ಸ್ತುತಿಯನ್ನು ಮುಂದುವರಿಸಿ, ಆತನ ಪತ್ನಿ ಸಿರಿಯಾದೇವಿಯೆಂದೂ. ಗೋಪದಂಡಾಧಿಪ ಅವರಿಗೆ ಮಗನೆಂದೂ ಹೇಳಿದೆ. ಇವನನ್ನೇ ಗೋವಿಂದ ದಂಡಾಧಿಪನೆಂದೂ ಕರೆದಿದೆ. ಈತನೂ ಮೇಲೆ ಸೂಚಿಸಿದ ಬೊಪ್ಪಣ ಭಟ್ಟನ ವಂಶಜನಾದ ಗೋವಿ ದಂಡಾಧಿಪನೂ ಭಿನ್ನರೆನ್ನುವುದು ಸ್ಪಷ್ಟ. ಆದರೆ ಇವರೊಳಗಿನ ಸಂಬಂಧಗಳೆಂತಹುವು ಎಂಬುದೂ ಈ ಶಾಸನದಲ್ಲಿ ಸೂಚಿತವಾಗಿಲ್ಲ. ಗೊಂಕನ ಮಗನಾದ ಬದ್ದೆಗನನ್ನೂ ಅವನ ಮಗನಾದ ಮಲ್ಲದೇವ ನನ್ನೂ ರಾಜ್ಯದಲ್ಲಿ ನಿಲಿಸಿದವರು ಕ್ರಮವಾಗಿ ನಾರಣದೇವ ಮತ್ತು ಗೋವಿಂದ ದಂಡಾಧಿಪರು ಎಂದು ಹೇಳಿರುವುದರಿಂದ, ಇಲ್ಲಿ ಹೇಳಲಾದ ನಾರಣಯ್ಯ ಮತ್ತು ಗೋಪ (ಗೋವಿಂದ) ದಂಡಾಧಿಪರೇ ಇವರು ಎಂದು ಊಹಿಸಬಹುದು.

ಅನಂತರ ನಾರಣೇಶ್ವರ ದೇವಾಲಯಕ್ಕೆ ದೇವರ ಪೂಜಾನೈವೇದ್ಯ ಜೀರ್ಣೋದ್ಧಾರ ನಿಮಿತ್ತವಾಗಿ ಬಿಟ್ಟ ದಾನದ ವಿವರಗಳಿವೆ. ಶಾಸನ ಹೀಗೆ ಹಲವಾರು ಸಂದಿಗ್ಧತೆಗಳಿಂದ ಕೂಡಿರುವುದನ್ನು ನಾವು ಕಾಣುತ್ತೇವೆ. ಈ ಭಾಗದ ಇತರ ಶಾಸನಗಳು ಇಲ್ಲಿ ಕಂಡುಬಂದಿರುವ ಸಂದೇಹಗಳನ್ನು ನಿವಾರಿಸಲು ಸಹಾಯಕವಾಗಬಹುದು.

ಶಾಸನ ಪಾಠ

ಕಲ್ಲಿನ ಮುಂಭಾಗ

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಳೋಕ್ಯನ-
2 ಗರಾರಂಭ ಮೂಲಸ್ತಂಭಾಯ ಶಂಭವೇ॥ *ಸ್ವಸ್ತಿ ಸಮಸ್ತಭುವ-
3 ನಾಶ್ರಯ ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾ
ರಕ ಸ-
4 ತ್ಯಾಶ್ರಯಕುಳತಿಳಕ ಚಾಳುಕ್ಯಾಭರಣಂ ಶ್ರೀಮತು ಪ್ರತಾಪಚಕ್ರವರ್ತ್ತಿ ಜಗ-
5 ದೇಕಮಲ್ಲದೇವರು ಪಟ್ಟಬಂಧೋತ್ಸವಂ ಮಾಡಿಸಿಕೊಂಡು ಪ್ರಥಮ ರಾಜ್ಯದಲ್ಲು
ಶ್ರೀ-
6 ಮನುಮಹಾಭೈರವ ಮೈಳಾರದೇವರ ಶ್ರೀಪಾದಂಗಳಂ ಕಂ[ಡು] * ದೇವರ
7 ದೇವಾಲ್ಯಕ್ಕೆ ಕಳಸಾರೋಪಣಂ ಮಾಡಿ ಆ ಲಗ್ನದಲ್ಲಿ ಆಣಂದೂರ ಶ್ರೀ ನಾರಣೇಶ್ವರ
ದೇವ-
8 ರ ಅಂಗಭೋಗ ರಂಗಭೋಗ ನೈವೇದ್ಯಕ್ಕಂ ಬ್ರಾಹ್ಮಣರ್ಗ್ಗಂ ತಪೋಧನರ್ಗ್ಗಂ
ಅಂನ್ನದಾ-
9 ನವಾದಿಯಾಗಿಂತೀ ನವಕಟ್ಟಂ ಮಾಡಿ ಮಹಾಪ್ರಧಾನಂ ಮನೆವೆರ್ಗ್ಗಡೆ ಅಟ್ಟಳೆ
ನಾಡ
10 ಸಾಮಂತಿಕೆಯಧಿಕಾರಿ ಬಮ್ಮಣ್ಣಯ್ಯ ದಂಡನಾಯಕರ್ಗ್ಗವಾನಾಡ ಮಂನೆಯ ಮಂ-
11 ಡಳೇಶ್ವರಂ ಬಮ್ಮರಸಂಗಂ ಸಮ್ಮುಖವಾದೇಶಮಂ ಬೆಸಸಲಂತವರು ಸಹಿತಂ ಧಾ
12 ರಾಪೂರ್ವಕಂ ಮಾ[2]ಡಿದ ಪ್ರಾಗ್ಗ್ವೃತ್ತಿಯೆಂತೆನೆ ಸಕವರ್ಷಂ ಸಾಸಿರದಯ್ವತೊಂಭತ್ತೆ
ನೆಯ 1059
13 ತ್ತನೆಯ ಕಾಳಯುಕ್ತ ಸಂವತ್ಸರದ ಪುಷ್ಯ ಪೌರ್ಣ್ನಮಾಸ್ಯೆ ವ್ಯತೀಪಾತ ಉತ್ತರಾಯಣ
ಸಂಕ್ರಾಂತಿ
14 ಯುಂದು ಬಿಟ್ಟ ವೃತ್ತಿ ಮಾತ್ರಂ ಮಹಾಮಂಡಳೇಶ್ವರಂ ಬಮ್ಮರಸನ ವಂಶಾವತಾರಮುಂ
15 ಮಹಾಪ್ರಧಾನಂ ಗೋಪದೇವ ದಂಡನಾಯಕನ ವಂಶಾವತಾರಮೆಂತೆಂದಡೆ *
ಕಮನೀ-
16 ಯಂ ಕಲಿಗೋಂಕಭೂಪಸುತನಪ್ಪ ಬಪ್ಪೆಗೋವ್ಪಿನೇಶ್ವರಂಗೆ ಮನೋರಾಗದೆ
ರಾಜ್ಯಮಂ ನಿಲಿಸಿ-
17 ದಂ ನಾರಾಯಣಂ ತತ್ಸುತಂ ಕ್ರಮದಿಂತೆಂಮವರ್ಗೆಂದು ಬಪ್ಪೆಗಸುತಂ ಶ್ರೀ ಮ-
18 ಲ್ಲಿದೇವಂಗೆ ರಾಜ್ಯಮನತ್ಯೂರ್ಜಿತವಾಗೆ ಮಾಡಿ ನೆಗಳ್ದಂ ಗೋವಿಂದ ದಂಡಾಧಿಪಂ
॥ಕಂ॥ ಚಲದ-
19 ತ್ತಿಗಂಡನಂ ನಿಮ್ಮಳನೀತಿ(ಯನಾ)ಚಿತ ದಾನ ಚಿಂತಾಮಣಿಯಂ ಕಲಿಕಾಲಕರ್ಣನಂ
ಭೂವಳಿ-
20 ಯಂ ಬಣ್ಣಿಪುದು ಗೋಪದಂಡಾಧಿಪನ ॥೧॥ ಇಂತು ಪ್ರಾಗತ್ತಿವಡೆದ ಗೋಪದೇವ
ದಂಡನಾಯ-
21 ಕನ ವಂಶಾವತಾರಮೆಂತೆಂದೊಡೆ ॥ವೃ॥ ಶ್ರೀ ಲತಿಕಾ[ಧಿ]ಕಾರಣ ಸುರೇಂದ್ರ
ಮಹೀರು-
22 ಹಮೂರ್ತ್ತಿ ವಿಶ್ವವಿದ್ಯಾಲಂಬುಜದ್ಯುಮಣಿ ಮದ್ದ್ಗದ ದೈತ್ಯ ಮಹಾಹವಂ ಜಗ-

---

2 'ಮಾ'ವನ್ನು ಸಾಲಿನ ಕೆಳಗಡೆ ಸಣ್ಣದಾಗಿ ಬರೆಯಲಾಗಿದೆ.

23 ತ್ಪಾಳನರಕ್ಷಸನತ್ಯಮಳಕೀರ್ತ್ತಿಸುಧಾರ್ಣ್ಣ[ವ*]ದಲ್ಲಿ ಯೋಗ ನಿದ್ರಾಲಸಪಕ್ಷ್ಮ ಲೋ-
24 ಚನಸರೋರುಹನಾಗಿ ಮುಕುಂದನಿರ್ಪ್ಪಂದು ॥ಕ॥ ತದಮಳನಾಭಿಸರೋಜ ದೊಳು-
25 ದಯಿಸಿದಂ ವೇದಘೋಷವಿಭ್ರಾಜಿ ಚತು[ರ್ವ್ವದನಂ] ಸಮಸ್ತವಿದ್ಯಾಸರನಂ ಮುದದಿಂ
26 ಹಿರಣ್ಯಗರ್ಬ್ಭಂ ಬ್ರಹ್ಮ॥ ಎನಿಸಿದ ಹಿರಣ್ಯಗರ್ಬ್ಭನ ಮನಃಸ್ಸರೋಜಾತನಾಳದಿಂ
27 [ದೊರೆ] ಘನಿತಾಯುಮೆಱಿಪಿರುದ್ಧ ಜನಿಯಿಸಿತೆನಲವರೊಳಗಧಿಕವಾಗಿ
28 ರ್ವಶಿಷ್ಟ॥ ಮುನಿವಶಿಷ್ಟನಿನಾ ಯನವದ್ಯ ವಶಿಷ್ಟಗೋತ್ರ ಮಾ ಗೋತ್ರದೊಳಂ-
29 ತನುಪಮಮಾಗಿರೆ ಬಳಿಕಂ ಜನಿಯಿಸಿದಂ ಧಾತ್ರಿ ಪೊಗಳೆ ಬೊಪ್ಪ-
30 ಣಭಟ್ಟ॥ ಆ ಬೊಪ್ಪಣಭಟ್ಟಂಗೆ ವ...ಳಾ ಲಳಿತಲೇಪನಚಂದನತಿಳಕಂ [ಶ್ರೀ] ಬ-
31 ಯಸಿ ನೆರೆಯೆ ಕೀರ್ತ್ತಿಶ್ರೀ ಬಳಯೆ ಕುಳಾಬ್ಧಿಚಂದ್ರನೊಗೆದನುಪೇಂದ್ರ ॥ವೃ॥
32 ತತ್ತನುಜಂ ತ್ರಿಳೋಚನಧರಾಮರನಾತನ ಸೂನು ವಿಕ್ರಮೋದಾತ್ತಯಶದ್ವೈರಿ ವಸಿಷ್ಟಂ
33 ನೆಗಳ್ದಂ ಪ್ರಭು ಬಮ್ಮದೇವನತ್ಯುತ್ತಮನಾತನಗ್ರಜನುಪೇಂದ್ರನುಪೇಂದ್ರ ಮ-
34 ಹಾ ದ್ವಿಜಂಗೆ ಲೋಕೋತ್ತಮ ನಾ ಮಹೇಶ್ವರನೆ ಪುಟ್ಟಿದನಂತೆನಿಪಂ ಮಹೇಶ್ವರ॥
35 ವ॥ ಅಸ್ತು ಪ್ರತಾಪದೊಳು ಮಹೇಶ್ವರನೆನಿಸಿದ ಮಹೇಶ್ವರಂಗಂ ಉಮಾದೇವಿ-
36 ಸಮಾನವೆನಿಸಿದ ಚಂಗಣಬ್ಬೆಗಂ ॥ವೃ॥ ಅಕಳಂಕಾಭರಣರ್ಕ್ಕಕಳಂಕರಣವೆಂ-
37 ದೊರ್ಪ್ಪಿ ಗಡಪೆಂದುಪೇಂದ್ರಕುಳಾಂಭೋನಿಧಿವರ್ದ್ಧನಕ್ಕೆ ಸಸಿಯೆಂದುಗ್ರಾರಿ ಕಾಂತಾರ
38 ಪಾವಕನೆಂದುಜ್ವಳಕೀರ್ತಿಯೆಂದು ಗುಣಿಯೆಂದೀ ಭೂತಳಂ ಕೂರ್ತ್ತು ಬಣ್ಣಿಕು ವೆಂದ[ಡೇಂ]
39 ನೆಗರ್ತ್ತೆವೆತ್ತ ಮಗನಾ ಗೋವಿ ದಂಡಾಧಿಪ ॥ವೃ॥ಶ್ರೀಮನ್ನ ಭೋಗನಿಳಯಂ ವಿಭು
40 ಸೋಯಣ ದಂಡನಾಥಚೂಡಾಮಣಿಗಂ ಸಮಸ್ತಗುಣಶೀಳಸಮನ್ವಿತೆ ಚಾಕಣಬ್ಬೆ ಗಂ ಪ್ರೇ-
41 ಮದೆ ಪುಟ್ಟಿದಂ ನೆಗಳ್ದ ನಾರಣದೇವನುಪೇಂದ್ರವಂಶಜೋದ್ದಾಮ ಗುಣಾಧಿಕಂ . . . . .ವನು
42 . . . . ಕರ ದಂಡನಾಥನು ॥ಂ॥ ಅವರೊಳಗೆ ॥ವೃ॥

ಹಿಂಭಾಗ

43 *ಅಪ್ರತಿಮ ಪ್ರತಾಪನಸಹಾಯ ಪರಾಕ್ರಮನಾಶ್ರಿತಾಶ್ರ-
44 ಯಂ ವಿಪ್ರಕುಳಾಂಬರದ್ಯುಮಣಿ ಮಂತ್ರಿಶಿಖಾಮಣಿಪೂಜಿತಂ ವಶಿಷ್ಠ ಪ್ರ
45 ವರ ಪ್ರಭೂತನನವದ್ಯ ಚರಿತ್ರನನೂನದಾನಕೀರ್ತ್ತಿಪ್ರಿಯನೆಂದು ಬಣ್ಣಿ
46 ಪುದಿಳಾವಳಿಯುಂ ವಿಭು ನಾರಣಯ್ಯನ ॥ಕಂ॥ ಆತನ ಕುಲವಧು
47 ಹಿಮಗಿರಿಧರೆಗರುಂಧತಿಗೆ ರತಿಗೆ ರಂಭೆಗೆ ಧರಣೀಜಾತೆಗೆ ಸಾವಿತ್ರಿ-
48 ಗೆ ಪಡಿ ಭೂತಳದೊಳು ತಾನೆ ಸಿರಿಯಮದೇವಿಯೆನಿಪ್ಪಳು ॥ವ॥ ಅಸ್ತು ಶೌರ್ಯ-
49 ದೊಳು ನಾರಾಯಣನೆನಿಸಿದ ನಾರಾಯಣಂಗಂ ಮಾತೇನೋ ವಿಶಾಳವಕ್ಷಸ್ಥಳ ನಿವಾಸಿನಿ

50 ಯಿಸಿದ ಸಿರಿಯಾದೇವಿಗ ॥ಕಂ॥ ಉದಯಗಿರೀಂದ್ರದ ಸಿಖರದೊಳುದಯಿಸಿ-
51 ಸುದಾಪಿತ್ರನಂತೆ ನಿಜಕುಳನಳಿನೀಮುದವವದೆ ವಂಶವರ್ದ್ಧನನಾದಿಯಿಸಿದಂ ಗೋಪ-
52 ದೇವದಂಡಾಧೀಶ ॥ವೃ॥ ಆನೊಳ್ಗಿಂ ಮದನಾಗಿ[ದ]ತ್ರಿಪುರನೆಂದಿಂದ್ರದಪ್ರ-
53 ಮಂ ಸಿಂಗ ನೀರನಾಸೊಳ್ಗಿಂದ್ರಿಗವಾಗೆನೆಂದಮುನ್ನೊಂದೆಯಾಗ್ಯಾಗಿ ಗೋ-
54 ವಿಂದನೆಂದೇನಾದಂ ಜಿದಿನಾದದಂ ಮನುಜರೂಪಾಗದ್ದರ್ಪ್ಪೋಳಿದ್ದರ್ಪಂ ತಾನಾಪ್ಪಿರ್ಗಂ ಭು
55 ಜ ವಿಕ್ರಮೋಂನತಿಕೆಯಿಂ ಗೋವಿಂದ ದಂಡಾಧಿಪ ॥ * ಶ್ರೀನಾರಣೇಶ್ವರ ದೇವರ್ಗ್ಗೆ
56 ಪೂಜಾ ನೈವೇದ್ಯ ಜೀರ್ನ್ನೋದ್ಧಾರ ನಿಮಿತ್ತವಾಗಿ ಬಿಟ್ಟ ದತ್ತಿಯೆಂತೆನೆ ಊರಿಂ ಬಡಗಲು
57 ಗುರುಕುಂಟೆಯ ಸ್ಥಳವಲ್ಲಿ ಕಂಬಟಾಣದ ಗಡಿಯಾದೀವು ಸಹಿತವಾಗಿ ನಿಗರಂ-
58 ಕೋಲ ಮತ್ತರು ಎರಡು ೨ ಊರಿಂ ತೆಂಕ ಕೆಱೆಯ ಕೆಳಗಣ ಗದ್ದೆ ಕೋಲ ಮತ್ತ-
59 ರು ಎರಡು ೨ ಊರಿಂ ಮೂಡಲು ಮೂಡೋಂಟು ಕೋಲ ಮತ್ತರು ಮೂಱು ೩ ಮತ್ತಂ
60 ಬ್ರಾಹ್ಮಣರ್ಗ್ಗಂ ತಪೋಧನರ್ಗ್ಗಂ ಭೋಜನಕ್ಕೆ ಬಿಟ್ಟ ಸತ್ರವೆಂತೆಂದಡೆ ಊರಿಂ ಪಡುವಲು
61 ಗಡಿಗೆ ಯೆರೆಯಲ್ಲಿ ಈಡು ಸಹಿತವಾಗಿ ನಿಗರಂಕೋಲಮತ್ತರು ಎರ-
62 ಡು ೨ ಮತ್ತಂ ದೇವರ್ಗ್ಗೆ ಬಿಟ್ಟ ಅಯಮೆಂತೆಂದಡೆ ಊರಲು ಮಾಡಿದ ಭೂಮಿ
63 ಯಲ್ಲಿ ನಿಗರಂಕೋಲ ಮತ್ತರೊಂದಕೆ ಪ್ರತ್ಯೇಕ ದ್ರಂಮ್ಮ ಎರ
64 ಡು [ಬಸುಗು] ಮನೆಯಲ್ಲಿ ಪ್ರತ್ಯೇಕ ದ್ರಮ್ಮ ೧ ದೇವರ ಮುಂದ್ದಣ
65 ಕೇರಿ ಎರಡು ೨ ಗಾಣ ಎರಡು ೨ ಮತ್ತಂ ಬ್ರಾಹ್ಮಣವೃತ್ತಿ
66 ಇಪ್ಪತ್ತಕ್ಕಂ ೨೦ ಬಿಟ್ಟ ದತ್ತಿಯೆಂತೆನೆ ಪ್ರತ್ಯೇಕ ನಿವೇಶನ ಅಗಲ
67 ಮಂಟು ನೀಳಂ ಮನೆಯು ೧೨ ಕಂಬ್ಯಾಗಲ. ಅಂತಾನಿವೇಶನ-
68 ಕ್ಕೆ ಕರಿಯ ಕೋಲ ಮತ್ತರು ಆಱು ೬ ಗದ್ದೆ ಮತ್ತರೊಂದು ೧ ಕರಂಬ
69 ಕೋಲ ಮತ್ತರು ಇಪ್ಪತ್ತು ೨೦ ಅಲ್ಲಿ ಬಿಂನಾಣಿ ಬಸದಿಗೆ ಕರಿಯ
70 ಕೋಲ ಮತ್ತರು ಆಱು ೬ ಆ ಮತ್ತರಲು ಗದ್ದೆ ಮತ್ತರು ೧ ಕರಂಬ
71 ೨೭ * *

ಅ. ಪು. ಶ್ರೀನಿವಾಸಮೂರ್ತಿ

ಆಹಾರಧಾನ್ಯಗಳ ಸಗಟು ವ್ಯಾಪಾರ ರಾಷ್ಟ್ರೀಕರಣ

ಗೋದಿ. ಅಕ್ಕಿ ಮತ್ತು ಇತರ ಆಹಾರಧಾನ್ಯಗಳ ಸಗಟು ವ್ಯಾಪಾರೋದ್ಯಮದ ರಾಷ್ಟ್ರೀಕರಣ ಕುರಿತ ಚರ್ಚೆ ಇಂದು ಭಾರತದಲ್ಲಿ ನಡೆಯುತ್ತಿದೆ. ರಾಷ್ಟ್ರೀಕರಣದ ಪರವಾಗಿ ಅನೇಕ ವಾದಗಳನ್ನು ಹೂಡಲಾಗುತ್ತಿದೆ. ಈ ವಾದಗಳ ಪರಿಶೀಲನೆಯೇ ಈ ಕಿರುಲೇಖನದ ಉದ್ದೇಶ.

ಇಂದಿನ ಭಾಗಶಃ ಸಂಗ್ರಹಣೆ ಹಾಗೂ ವಿತರಣೆ ಪದ್ಧತಿ

ಆಹಾರಧಾನ್ಯಗಳ ವಿತರಣೆಯಲ್ಲಿ ಸರ್ಕಾರ ಅನುಸರಿಸುತ್ತಿರುವ ಹಾಗೂ ವಹಿಸುತ್ತಿರುವ ಪಾತ್ರಗಳ ಸಂಕ್ಷಿಪ್ತ ವಿವರಣೆ ಪ್ರಥಮತಃ ಇಲ್ಲಿ ಉಪಯುಕ್ತವಾಗುವುದು. ಕೆಲವು ಆಹಾರಧಾನ್ಯಗಳ ಬೆಲೆ, ನೀಡಿಕೆ ಹಾಗೂ ವಿತರಣೆಗಳ ಮೇಲೆ ಸ್ವಲ್ಪಮಟ್ಟಿಗೆ ಒಂದು ವಿಧದ ನಿಯಂತ್ರಣವನ್ನು ಹೊಂದಿರುವುದು ಸರ್ಕಾರದ ಆಹಾರನೀತಿಯ ಒಂದು ಅಂಶವಾಗಿದೆ. ಇಂಥ ನಿಯಂತ್ರಣ ಕ್ರಮಗಳು, ಸಾಮಾನ್ಯವಾಗಿ ಹೇಳುವುದಾದರೆ, ಎರಡನೆಯ ಮಹಾಯುದ್ಧಕಾಲದಲ್ಲಿ ಹುಟ್ಟಿದುವು. ಆದರೆ, ಸ್ವತಂತ್ರ ಭಾರತ ಆರ್ಥಿಕ ಯೋಜನೆ ಅನುಸರಿಸಿದಂದಿನಿಂದ ಇವು ಹೆಚ್ಚು ಭಾವಗರ್ಭಿತವಾದುವು. ಸುಖೀರಾಜ್ಯದ ಸರ್ಕಾರವಾಗಿ ಅದು ಕೈಕೊಂಡಿರುವ ಹೊಣೆ, ಆರ್ಥಿಕ ಯೋಜನೆಗಳ ತಂತ್ರರಚನೆ—ಇವುಗಳ ದೆಸೆಯಿಂದ ಆಹಾರಧಾನ್ಯಗಳ ನೀಡಿಕೆ. ಬೆಲೆ ಮತ್ತು ವಿತರಣೆಗಳ ಮೇಲೆ ಒಂದು ರೀತಿಯ ಸರ್ಕಾರಿ ನಿಯಂತ್ರಣ ಅವಶ್ಯಕವಾಗಿದೆ.

ರಾಷ್ಟ್ರೀಯ ಆಹಾರ ಬಜೆಟ್ಟು ನಿರ್ಮಾಣ, ಆಹಾರ ಸರಕುಗಳ ಉತ್ಪಾದನೆ–ಹೆಚ್ಚುವರಿಗಳಿಗಾಗಿ ಯೋಜನೆಗಳನ್ನು ಸಿದ್ಧಪಡಿಸುವುದು, ಆಹಾರ ಸರಬರಾಜು ಕೊರತೆ ಆಗುವ ನಿರೀಕ್ಷೆ ಇದ್ದಾಗ ಆಮದುಗಳನ್ನು ಏರ್ಪಡಿಸುವುದು. ಕೊರತೆಯುಂಟಾಗಬಹುದಾದ ಸಂದರ್ಭಗಳನ್ನು ಎದುರಿಸುವ ಸಲುವಾಗಿ ಕಾಪು ದಾಸ್ತಾನು (ಬಫರ್ ಸ್ಟಾಕ್) ಕೂಡಿಡುವುದು, ಅಂತರರಾಜ್ಯ ಮತ್ತು ರಾಜ್ಯಗಳ ಆಂತರಿಕ ಆಹಾರಧಾನ್ಯ ಚಲನೆಯ ನಿಯಂತ್ರಣ, ಲೆವಿ ಅಥವಾ ಮಾರುಕಟ್ಟೆಯಲ್ಲಿ ಕೊಳ್ಳುವುದರ ಮೂಲಕ ಭಾಗಶಃ ಧಾನ್ಯಸಂಗ್ರಹಣೆ, ಕಾನೂನಿಕ ಅಥವಾ ಅನೌಪಚಾರಿಕ ಪಡಿತರ ಪದ್ಧತಿಯ ಪ್ರಕಾರ ಸರ್ಕಾರಿ ಧಾನ್ಯ ಹಂಚಿಕೆ ಏರ್ಪಾಡು. ಇತ್ಯಾದಿ ಅಂಶಗಳೆಲ್ಲವೂ ಭಾರತದ ಯೋಜಿತ ಆರ್ಥಿಕತೆಯಲ್ಲಿ ವಿಕಾಸಗೊಂಡಿರುವ ಆಹಾರನೀತಿಯಲ್ಲಿ ಅಡಗಿವೆ.

ಆಹಾರಧಾನ್ಯಗಳ ಸಂಗ್ರಹಣೆ ಹಾಗೂ ವಿತರಣೆಯಲ್ಲಿ ಸರ್ಕಾರ ಅನೇಕ ವರ್ಷಗಳಿಂದ ಪಾತ್ರ ವಹಿಸುತ್ತಿದೆಯಾದರೂ ಅದರ ಪಾತ್ರ ಕೇವಲ ಕೆಲವು ಧಾನ್ಯಗಳಿಗೆ ಸೀಮಿತವಾಗಿರುವುದಲ್ಲದೆ ಒಟ್ಟು ಉತ್ಪಾದನೆಯ ಅಲ್ಪ ಭಾಗ ಮಾತ್ರ ಹೀಗೆ ಸರ್ಕಾರದ ಸಂಗ್ರಹಣೆ ಹಾಗೂ ವಿತರಣೆಗೆ ಸೇರಿರುವುದನ್ನು ಕೆಳಗಣ ಅಂಕಿ ಅಂಶಗಳು ತೋರಿಸುವುವು[1]:

---

1 GOI, Economic Survey 1971-72, p. 87 and 1972-73, p, 105

ವರ್ಷ	ಆಹಾರ ಧಾನ್ಯಗಳ ನಿವ್ವಳ ಉತ್ಪನ್ನದಲ್ಲಿ ಸರ್ಕಾರಿ ಸಂಗ್ರಹಣೆಯ ಸೇಕಡ ಭಾಗ	ವಿತರಣೆಗೆ ಇರತಕ್ಕ ನಿವ್ವಳ ಆಹಾರಧಾನ್ಯಗಳಲ್ಲಿ ಸರ್ಕಾರಿ ವಿತರಣೆಗೆ ಸೇರಿದ ಸೇಕಡ ಭಾಗ
1951	8.0	15.3
1956	0.1	3.3
1961	0.8	5.3
1962	0.7	5.7
1963	1.1	6.9
1964	2.0	11.1
1965	5.2	11.9
1966	6.3	19.2
1967	6.9	17.8
1968	8.2	11.8
1969	7.8	11.0
1970	7.7	19.9
1971	9.3	8.3
1972	8.4	11.9

ಒಟ್ಟು ಉತ್ಪಾದಿತ ಆಹಾರಧಾನ್ಯದಲ್ಲಿ ಮಾರಾಟಕ್ಕಿರುವ ಹೆಚ್ಚಳ ಮೊತ್ತದಲ್ಲಿ ಸರ್ಕಾರಿ ಸಂಗ್ರಹಣೆ ಹಾಗೂ ವಿತರಣೆಯ ಭಾಗ ಎಷ್ಟು ಎಂಬುದು ಆಹಾರಧಾನ್ಯ ಮಾರಾಟ ವ್ಯವಹಾರದಲ್ಲಿ ಸರ್ಕಾರದ ಪಾತ್ರವನ್ನು ಹೆಚ್ಚು ನಿರ್ದಿಷ್ಟವಾಗಿ ಸೂಚಿಸುವುದು. ಆದರೆ. ಈ ಸಂಖ್ಯಾವಿವರ ಲಭ್ಯವಿಲ್ಲ. ಆದ್ದರಿಂದ. ಮೇಲೆ ಕೊಟ್ಟಿರುವ ಸಂಖ್ಯಾವಿವರಗಳನ್ನೇ ಆಧಾರವಾಗಿಟ್ಟುಕೊಂಡು. ಅವು ತೋರಿಸುವಂತೆ ನಿವ್ವಳ ಉತ್ಪನ್ನ ಹಾಗೂ ಆಹಾರ ಧಾನ್ಯಗಳ ನಿವ್ವಳ ದಾಸ್ತಾನಿನಲ್ಲಿ ಸರ್ಕಾರಿ ಸಂಗ್ರಹಣೆ ಮತ್ತು ವಿತರಣೆ ಕೇವಲ ಅತ್ಯಲ್ಪ ಭಾಗವಾಗಿದೆ ಎಂದು ತಿಳಿಯಬಹುದು.

ಆಹಾರಧಾನ್ಯಗಳ ಭಾಗಶಃ ಸಂಗ್ರಹಣೆ ಮತ್ತು ವಿತರಣೆಯ ಕಾರ್ಯವನ್ನು ಸರ್ಕಾರ ನಿರ್ವಹಿಸಿಕೊಂಡಿರುವುದಕ್ಕೆ ತೃಪ್ತಿಕರವಾದ ಕಾರಣಗಳಿವೆ ಎಂದು ಹೇಳಬಹುದು. ಆಹಾರ ಧಾನ್ಯಗಳಿಗೆ ಬೇಡಿಕೆ ಹೆಚ್ಚಳವಿರುವ ಸಂದರ್ಭ ಬಹು ವರ್ಷಗಳಿಂದ ಇದ್ದು ಹೀಗೆಯೇ ಅನೇಕ ವರ್ಷಗಳು ಮುಂದುವರಿಯುವ ಪರಿಸ್ಥಿತಿ. ಆಹಾರಧಾನ್ಯಗಳ ಉತ್ಪಾದನೆ ಗಣನೀಯವಾಗಿ ಹಾಗೂ ಶೀಘ್ರವಾಗಿ ಹೆಚ್ಚುವ ಪ್ರತೀಕ್ಷೆ ಅಷ್ಟು ಆಶಾದಾಯಕವಾಗಿಲ್ಲದಿರುವಿಕೆ. ಆಹಾರ ಸರಕುಗಳ ಆಮದು ವ್ಯವಹಾರಗಳನ್ನು ನಿರ್ವಹಿಸುವುದರ ಆವಶ್ಯಕತೆ. ಆಹಾರಧಾನ್ಯಗಳ ಬೆಲೆಗಳನ್ನು ಹಿತಮಿತದಲ್ಲಿಟ್ಟಿರಬೇಕಾದುದರ ಪ್ರಾಮುಖ್ಯ. ತಾತ್ಕಾಲಿಕ ಹಾಗೂ ಪ್ರಾದೇಶಿಕ ಕೊರತೆ ಸರಿತೂಗಿಸಲು ಕಾಪು ದಾಸ್ತಾನು ವ್ಯವಸ್ಥೆಯ ಆವಶ್ಯಕತೆ. ವಿವಿಧ ರಾಜ್ಯಗಳೊಳಗೆ ಉದ್ಭವಿಸುವ ಆಹಾರಧಾನ್ಯ ನೀಡಿಕೆಗಳ ಅಸಮಾನತೆಯನ್ನು ಸರಿಪಡಿಸಬೇಕಾದುದರ ಜೊತೆ. ಖಾಸಗಿ ವರ್ತಕಮಂಡಲಿಯು ವ್ಯಾಪಾರದಲ್ಲಿ ಅನುಸರಿಸುತ್ತಿರುವ ಅನೈತಿಕ ಕ್ರಮಗಳು ಹಾಗೂ ದುರಭ್ಯಾಸಗಳನ್ನು ತಪ್ಪಿಸಬೇಕಾದುದರ ಆವಶ್ಯಕತೆ. ಸಾಮಾನ್ಯವಾಗಿ ಕೃಷಿ ಉತ್ಪಾದಕ ವರ್ಗ ಮತ್ತು ಅನುಭೋಗಿ ವರ್ಗ ಇವೆರಡು ಗುಂಪುಗಳವರ ಹಿತಾಕಾಂಕ್ಷೆಗಳನ್ನೂ ನ್ಯಾಯಸಮ್ಮತ

ವಾದ ರೀತಿಯಲ್ಲಿ ಸಮನ್ವಯಗೊಳಿಸುವಿಕೆ–ಇತ್ಯಾದಿ ವಿವಿಧ ಅಂಶಗಳ ದೆಸೆಯಿಂದ ಈಗಿರುವ ಭಾಗಶಃ ಸಂಗ್ರಹಣೆ ಮತ್ತು ವಿತರಣೆ ಪದ್ಧತಿಯ ಅನುಸರಣೆ ಸಾಧುವಾಗಿಯೇ ಇದೆ.

ಸರ್ಕಾರ ಆಹಾರಧಾನ್ಯಗಳ ಈ ಭಾಗಶಃ ಸಂಗ್ರಹಣೆ ಮತ್ತು ವಿತರಣೆ ಪದ್ಧತಿಯನ್ನು ಕಾರ್ಯತಃ ನಡೆಸುತ್ತಿರುವ ರೀತಿಯ ಮೇಲೆ ಕೆಲವು ಆಕ್ಷೇಪಣೆಗಳನ್ನು ಸಾಮಾನ್ಯವಾಗಿ ಎತ್ತಲಾಗಿದೆ. ಆಹಾರ ಧಾನ್ಯಗಳ ಅಂತರ ರಾಜ್ಯ ಹಾಗೂ ಅಂತರಜಿಲ್ಲಾ ಚಲನವಲನಗಳ ಮೇಲೆ ನಿರ್ಬಂಧ ವಿಧಿಸುವ ಮತ್ತು ತೆಗೆಯುವ ನಿರ್ದಿಷ್ಟ ಕಾಲ, ಆಹಾರ ಧಾನ್ಯಗಳ ಸಾಗಣೆಗೆ ಅನುಮತಿಪತ್ರ ನೀಡಿಕೆ, ಲೆವಿ ಹಾಗೂ ಸಂಗ್ರಹಣೆಯ ವಿಧಾನ, ಸಂಗ್ರಹಣೆಯ ಕಾರ್ಯದ ವಿವಿಧ ಹಂತಗಳಲ್ಲಿ ಅನೇಕ ರೀತಿಯ ದುರ್ವ್ಯವಹಾರಗಳು ಹಾಗೂ ದುರಭ್ಯಾಸಗಳು, ನಿಗದಿಯಾದ ಸಂಗ್ರಹಣೆ ಬೆಲೆಗಳು, ಧಾನ್ಯಗಳು ನಶಿಸದಂತೆ ಮತ್ತು ಕೆಡದಂತೆ ರಕ್ಷಿಸಿಕೊಳ್ಳುವ ಬಗ್ಗೆ ಇರುವ ಏರ್ಪಾಡುಗಳು, ಅನುಭೋಗಿಗಳಿಗೆ ಧಾನ್ಯಪಂಚಿಕೆ ಸಕಾಲದಲ್ಲಿ ಆಗದೆ ಸಾವಕಾಶವಾಗುವಿಕೆ–ಇತ್ಯಾದಿ ಅಂಶಗಳ ಬಗ್ಗೆ ವಿವಿಧ ರೀತಿಯ ಲೋಪದೋಷಗಳಿರುವುವೆಂದು ಜಾರಿಯಲ್ಲಿರುವ ಧಾನ್ಯಗಳ ಭಾಗಶಃ ಸಂಗ್ರಹಣೆ ಮತ್ತು ವಿತರಣೆ ಪದ್ಧತಿಯನ್ನು ಟೀಕಿಸಲಾಗಿದೆ. ವ್ಯಾಪಾರ ವ್ಯವಹಾರಗಳನ್ನು ಒಳಕೊಳ್ಳುವ ಇಂಥ ಪದ್ಧತಿಯನ್ನು ಸರ್ಕಾರ ತನ್ನ ನೌಕರ ವರ್ಗದವರ ಸಹಾಯದಿಂದ ಆಚರಣೆಗೆ ತರುವುದರಲ್ಲಿ ಮೊದಮೊದಲು ಈ ವಿವಿಧ ಲೋಪದೋಷಗಳು ಸ್ವಾಭಾವಿಕ. ಸಂಬಂಧಪಟ್ಟ ಸಚಿವಾಲಯ ಹಾಗೂ ಸರ್ಕಾರದ ವಿಭಾಗಗಳು ಈಗ ಅನೇಕ ವರ್ಷಗಳ ಅನುಭವಗಳ ಪ್ರಯೋಜನ ಪಡೆದಿವೆ. ಮುಖ್ಯವಾಗಿ ಭಾರತೀಯ ಆಹಾರ ಕಾರ್ಪೊರೇಷನ್ನು ಸ್ಥಾಪನೆಯಾದ ಅನಂತರ ಆಹಾರ ಸಂಗ್ರಹಣೆ ಹಾಗೂ ವಿತರಣೆಗೆ ಸಂಬಂಧಿಸಿದ ಸಂಸ್ಥಾ ವ್ಯವಸ್ಥೆ ಬಲಗೊಂಡಿದೆ. ಈ ಸಂಸ್ಥಾಬಲವೃದ್ಧಿಯೂ ಆಹಾರ ವಿತರಣೆ ಒಳಕೊಳ್ಳುವ ವಿವಿಧ ಸಮಸ್ಯೆಗಳ ಸೂಕ್ಷ್ಮ ತಿಳಿವಳಿಕೆಯೂ, ಬರಲಿರುವ ವರ್ಷಗಳಲ್ಲಿ ಭಾಗಶಃ ಸಂಗ್ರಹಣೆ ಮತ್ತು ವಿತರಣೆ ಪದ್ಧತಿಯ ಆಚರಣೆ ಉತ್ತಮಗೊಳ್ಳಲು ಕಾರಣವಾಗಬಹುದೆಂದು ನಿರೀಕ್ಷಿಸಬಹುದು.

ಪ್ರಸಕ್ತ ಪ್ರಶ್ನೆ

ಈ ವರೆಗೆ ಅನುಸರಿಸಲಾಗುತ್ತಿರುವ ಆಹಾರಧಾನ್ಯಗಳ ಭಾಗಶಃ ಸಂಗ್ರಹಣೆ ಮತ್ತು ವಿತರಣೆ ಪದ್ಧತಿಯನ್ನೇ ಮುಂದುವರಿಸುವುದೇ ಅಥವಾ ಆಹಾರಧಾನ್ಯಗಳ ಸಗಟು ವ್ಯಾಪಾರದ ಪೂರ್ಣ ರಾಷ್ಟ್ರೀಕರಣವಾಗುವಂತೆ ಈ ಪದ್ಧತಿಯನ್ನು ಪರಿವರ್ತನೆಗೊಳಿಸುವುದೇ ಎಂಬುದು ಪ್ರಕೃತ ಪರಿಶೀಲಿಸಬೇಕಾದ ಪ್ರಶ್ನೆಯಾಗಿದೆ. ಗೋಧಿ ಸಗಟು ವ್ಯಾಪಾರವನ್ನು ಸರ್ಕಾರ ಆಗಲೇ ವಹಿಸಿಕೊಂಡಿದೆ. ಅಸ್ಸಾಂ ಸರ್ಕಾರ ಅಕ್ಕಿ ಸಗಟು ವ್ಯಾಪಾರ ರಾಷ್ಟ್ರೀಕರಣವನ್ನು ಮಾಡಿದೆ ಮತ್ತು ಅನೇಕ ಇತರ ಸಂಸ್ಥಾನ ಸರ್ಕಾರಗಳು ಅಕ್ಕಿ ಸಗಟು ವ್ಯಾಪಾರವನ್ನು ಪೂರ್ತಿಯಾಗಿ ವಹಿಸಿಕೊಳ್ಳುವ ನೀತಿಯನ್ನು ಘೋಷಿಸಿವೆ. ಈ ಬೆಳವಣಿಗೆಗಳನ್ನು ಗಮನಿಸಿದರೆ ಹೆಜ್ಜೆಹೆಜ್ಜೆಯಾಗಿ ದೇಶ ಆಹಾರಧಾನ್ಯಗಳೆಲ್ಲದರ ವ್ಯಾಪಾರ ವ್ಯವಹಾರಗಳ ರಾಷ್ಟ್ರೀಕರಣದತ್ತ ಸಾಗುತ್ತಿದೆ ಎಂಬುದು ಸುಸ್ಪಷ್ಟ. ಆದರೆ, ಯಶಸ್ವಿಯಾಗಿ ಈ ಕ್ರಮ ಕೈಕೊಳ್ಳಲು ಅವಶ್ಯಕ ಪೂರ್ವಸಿದ್ಧತೆಗಳು ತೃಪ್ತಿಕರವಾಗಿ ಆಗಿವೆಯೆ ಎಂಬುದು ಅನುಮಾನ. ಇತ್ತೀಚೆಗೆ ಮೈಸೂರು ಸಂಸ್ಥಾನದಲ್ಲಿ ಅಕ್ಕಿ ಸಗಟು ವ್ಯಾಪಾರವನ್ನು ರಾಷ್ಟ್ರೀಕರಣ ಮಾಡುವ ಉದ್ದೇಶ ಅಧಿಕೃತ ವ್ಯಕ್ತಿಗಳಿಂದ ಘೋಷಿತವಾದ ಅನಂತರ ಸಂಭವಿಸಿದ ಘಟನೆಗಳನ್ನು ಗಮನಿಸಿದರೆ ಸರ್ಕಾರ ಮುಖ್ಯವಾಗಿ ವ್ಯಾಪಾರಸ್ಥರ ಹಾಗೂ ಸಾರ್ವಜನಿಕರ ವಿಶ್ವಾಸವನ್ನು ಈ ಬಗ್ಗೆ ಸಂಪಾದಿಸಿಕೊಂಡಿರಲಿಲ್ಲವೆಂಬುದು ವ್ಯಕ್ತವಾಗುವುದು. ಆಹಾರ ಸರಕುಗಳ ವ್ಯಾಪಾರ ರಾಷ್ಟ್ರೀಕರಣದ ಮಹತ್ವದ ಬದಲಾವಣೆಯಾಗಿದೆ. ಈ ಬದಲಾವಣೆ ಮತ್ತು ಇದರೊಡನೆ ಕೂಡಿಬರುವ ಇತರ ಬದಲಾವಣೆಗಳು ದೇಶದ ಆರ್ಥಿಕ ವ್ಯವಸ್ಥೆಯನ್ನೇ ಅರ್ಥಗರ್ಭಿತವಾದ ರೀತಿಯಲ್ಲಿ ಮಾರ್ಪಾಡುಗೊಳಿಸುವುವು. ಇದರ ಆಳವಾದ ಪರಿಶೀಲನೆ ನಡೆಸಿ, ಇದು ಒಳಗೊಳ್ಳುವ ಆರ್ಥಿಕ–ಸಾಮಾಜಿಕ–ರಾಜಕೀಯ ಬದಲಾವಣೆಗಳನ್ನು ಸಾರ್ವಜನಿಕರಿಗೆ ತಿಳಿಸಬೇಕಾದುದು ಅವಶ್ಯಕ. ಆದರೆ, ಈ ಮೂಲಭೂತ ಪರಿಶೀಲನೆ ಈ ಲೇಖನದ ವ್ಯಾಪ್ತಿಗೆ ಸೇರಿಲ್ಲ. ಆಹಾರ ಸರಕುಗಳ ಸಗಟು ವ್ಯಾಪಾರ ರಾಷ್ಟ್ರೀಕರಣದ ಪರ ನೀಡಲಾಗಿರುವ ವಾದಗಳು ಎಷ್ಟು ಮಟ್ಟಿಗೆ ವಾಸ್ತವವಾಗಿ ಸಮರ್ಥನೀಯವಾದುವು ಎಂಬುದನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ವಿವೇಚಿಸಲಾಗುವುದು.

ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ವಾದಗಳ ವಿವೇಚನೆ

ಆಹಾರಧಾನ್ಯಗಳ ಸಗಟು ವ್ಯಾಪಾರವನ್ನು ರಾಷ್ಟ್ರೀಕರಣಗೊಳಿಸಲು ಸಾಮಾನ್ಯವಾಗಿ ನೀಡಲಾಗಿರುವ ಕಾರಣಗಳಲ್ಲಿ ಇವು ಮುಖ್ಯವಾದವು:

1 ಆಹಾರಧಾನ್ಯ ವ್ಯಾಪಾರದಲ್ಲಿ ಸಟ್ಟಾ ವ್ಯವಹಾರ. ದಾಸ್ತಾನು ಬಚ್ಚಿಡುವಿಕೆ. ಕಾಳಸಂತೆ ಇತ್ಯಾದಿ ದುರ್ವ್ಯವಹಾರಗಳನ್ನು ನಿರ್ಮೂಲನಗೊಳಿಸುವಿಕೆ;

2 ಆಹಾರಧಾನ್ಯ ವ್ಯಾಪಾರ ನಿರ್ವಹಣೆಯಲ್ಲಿ ಅನಾವಶ್ಯಕ ಮಧ್ಯವರ್ತಿಗಳನ್ನು ತಪ್ಪಿಸುವುದರ ಮೂಲಕ ಈ ಕಾರ್ಯನಿರ್ವಹಣೆಯನ್ನು ಅತ್ಯಂತ ಮಿತವ್ಯಯದಿಂದ ನಡೆಸುವಿಕೆ;

3 ವಿವಿಧ ಪ್ರದೇಶಗಳು ಮತ್ತು ಜನತೆಯ ವಿವಿಧ ವರ್ಗಗಳಲ್ಲಿ ಆಹಾರಧಾನ್ಯಗಳ ವಿತರಣೆ ನ್ಯಾಯಸಮ್ಮತವಾಗಿ ಆಗುವಂತೆ ಮಾಡುವುದು;

4 ಜನರಿಗೆ, ಮುಖ್ಯವಾಗಿ ಬಡವರ್ಗದವರಿಗೆ. ಆಹಾರಧಾನ್ಯ ಸರಿಯಾಗಿಯೂ ಖಾತರಿಯಾಗಿಯೂ ಲಭಿಸುವಂತೆ ನೋಡಿಕೊಳ್ಳುವುದು;

5 ಬೆಳೆಯುವವರಿಗೆ ಹೆಚ್ಚು ಬೆಳೆ ತೆಗೆಯಲು ಉತ್ತೇಜಕವಾಗುವ ಮತ್ತು ಅನುಭೋಗಿಗಳಿಗೆ ನ್ಯಾಯಸಮ್ಮತವಾದ ಆಹಾರ ಬೆಲೆಗಳನ್ನು ಸ್ಥಾಪಿಸಿ ಕಾಪಾಡಿಕೊಂಡು ಬರುವುದು; ಮತ್ತು

6 ದೇಶವನ್ನು ಸಮತಾಸಮಾಜವಾದದ ಗುರಿಯತ್ತ ಕೊಂಡೊಯ್ಯುವುದು.

ಈ ವಿವಿಧ ವಾದಗಳನ್ನು ಒಂದೊಂದಾಗಿ ವಿವೇಚಿಸೋಣ.

ಮೊದಲನೆಯದಾಗಿ. ಮಾರಾಟಕ್ಕಿರುವ ಉತ್ಪನ್ನ ಹೆಚ್ಚಳ ಆಹಾರಧಾನ್ಯಗಳ ಮೇಲೆ ಪೂರ್ಣ ಹತೋಟಿ ಪಡೆಯುವುದರಿಂದ ಸಟ್ಟಾ. ದಾಸ್ತಾನು ಬಚ್ಚಿಡುವಿಕೆ. ಕಾಳಸಂತೆ ಮುಂತಾದ ದುರ್ವ್ಯವಹಾರಗಳನ್ನು ನಿರೋಧಿಸಬಹುದೆಂದೂ ಈ ಮೂಲಕ ಬೆಲೆ ರಚನೆ ವಿರೂಪಗೊಳ್ಳುವುದನ್ನು ತಪ್ಪಿಸಬಹುದೆಂದೂ ಹೇಳಲಾಗಿದೆ. ವ್ಯಾಪಾರದಲ್ಲಿ ಇಂಥ ದುರಭ್ಯಾಸಗಳಿರುವುದು. ಒಂದು ದೃಷ್ಟಿಯಿಂದ ನೋಡಿದರೆ. ವ್ಯಾಪಾರಸ್ಥರು ತಾವು ಅನುಸರಿಸಬೇಕಾದ ವಾಣಿಜ್ಯನೀತಿಯ ಕಟ್ಟುಪಾಡುಗಳಿಗೆ ಒಳಗಾಗಿಲ್ಲದಿರುವುದನ್ನು ಸೂಚಿಸುತ್ತದೆ; ಇನ್ನೊಂದು ದೃಷ್ಟಿಯಿಂದ ನೋಡಿದರೆ ಕಾನೂನುಬಾಹಿರವಾದ ಇಂಥ ವ್ಯವಹಾರಗಳನ್ನು ತಪ್ಪಿಸಲು ಸರ್ಕಾರದ ಅಸಹಾಯಕತೆಯನ್ನೂ ಅದಕ್ಷತೆಯನ್ನೂ ತೋರಿಸುತ್ತದೆ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳೂ ಇತರ ನೌಕರರೂ ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ವ್ಯಾಪಾರ ವರ್ಗದವರ ಅನೈತಿಕ ವ್ಯವಹಾರಗಳನ್ನು ತಪ್ಪಿಸುವಂತೆ ಸರ್ಕಾರ ಏರ್ಪಾಡು ಮಾಡುವುದು ಈ ದುರ್ವ್ಯವಹಾರಗಳಿಗೆ ಸೂಕ್ತ ಪರಿಹಾರವಾಗಿದೆ. ನಿಯಮೋಲ್ಲಂಘನೆ ಮಾಡುವ ವ್ಯಾಪಾರಿಗಳ ಬಗ್ಗೆಯೂ ಇಂಥ ವ್ಯಾಪಾರಿಗಳಿಗೆ ಗುಪ್ತ ರೀತಿಯಲ್ಲಿ ಬೆಂಬಲವಾಗಬಹುದಾದ ಸರ್ಕಾರಿ ನೌಕರರು ಮತ್ತು ರಾಜಕಾರಣಿಗಳ ಬಗ್ಗೆಯೂ ನಿರ್ದಾಕ್ಷಿಣ್ಯವಾಗಿ ವರ್ತಿಸಿ ಸರ್ಕಾರ ತನ್ನ ಆಡಳಿತ ಹಿಡಿತವನ್ನು ಬಿಗಿಮಾಡಿಕೊಳ್ಳಬಹುದು. ಆಹಾರಧಾನ್ಯಗಳ ವ್ಯಾಪಾರದ ರಾಷ್ಟ್ರೀಕರಣವೂ ಸೇರುವ ವ್ಯಾಪಕವಾದ ಹಾಗೂ ವಿವಿಧ ರೀತಿಯ ಕಾರ್ಯಾಚರಣೆಗಳನ್ನು ತೃಪ್ತಿಕರವಾಗಿ ನಿರ್ವಹಿಸಬಲ್ಲದೆಂದು ಹೇಳಿಕೊಳ್ಳುವ ಸರ್ಕಾರಕ್ಕೆ ವರ್ತಕ ವರ್ಗದಲ್ಲಿ ಒಂದು ಭಾಗದವರು ಮಾತ್ರ ನಿರತರಾಗಿರಬಹುದೆಂದು ಹೇಳಬಹುದಾದ ಮೇಲಿನ ರೀತಿಯ ಅನೈತಿಕ ಹಾಗೂ ಕಾನೂನುಬಾಹಿರ ದುರ್ವ್ಯವಹಾರಗಳನ್ನು ತಪ್ಪಿಸುವ ಕೆಲಸ ಕಷ್ಟವಾಗಿರಲಾರದು. ಒಟ್ಟಿನಲ್ಲಿ ಕಾಳಸಂತೆ ಮತ್ತು ಇದಕ್ಕೆ ಸಂಬಂಧಪಟ್ಟ ದುರ್ನಡತೆಗಳನ್ನು ತಪ್ಪಿಸುವುದಕ್ಕಾಗಿ ಖಾಸಗಿ ಸಗಟು ವ್ಯಾಪಾರ ಪದ್ಧತಿಯನ್ನು ತೊಡೆದುಹಾಕಿ. ಇದರ ಜಾಗದಲ್ಲಿ ಸರ್ಕಾರಿ ಸಗಟು ವ್ಯಾಪಾರ ಪದ್ಧತಿಯನ್ನು ಸ್ಥಾಪಿಸುವುದು ಅನಾವಶ್ಯಕ.

ಎರಡನೆಯದಾಗಿ, ಆಹಾರಧಾನ್ಯ ವ್ಯಾಪಾರ ರಾಷ್ಟ್ರೀಕರಣ ಅನಾವಶ್ಯಕ ಮಧ್ಯವರ್ತಿಗಳನ್ನು ತೊಡೆದು ಹಾಕುವುದು, ವ್ಯಾಪಾರ ವ್ಯವಸ್ಥೆಯ ವಿವಿಧ ಅಂಗಗಳೊಳಗೆ ಅತ್ಯುತ್ತಮ ಸಂಘಟನೆ ಏರ್ಪಡಿಸುವುದು, ಅನೇಕ ರೀತಿಯ ಸಣ್ಣಪುಟ್ಟ ವ್ಯರ್ಥ ವೆಚ್ಚವನ್ನು ತಪ್ಪಿಸುವುದು ಮತ್ತು ಈ ಎಲ್ಲವರ ಮೂಲಕ ಆಹಾರಧಾನ್ಯ ವ್ಯಾಪಾರ ನಿರ್ವಹಣೆಯಲ್ಲಿ ಅತ್ಯಂತ ಮಿತವ್ಯಯವನ್ನು ಉಂಟುಮಾಡುವುದು–ಎಂದು ಹೇಳಲಾಗಿದೆ. ರಾಷ್ಟ್ರೀಕರಣವಾದಿಗಳು ಹೂಡಿರುವ ಈ ವಾದ ಆಹಾರಧಾನ್ಯ ವ್ಯಾಪಾರ ರಾಷ್ಟ್ರೀಕರಣಕ್ಕೆ ಬಲವಾದ ಮತ್ತು ಸಾಧುವಾದ ಕಾರಣವಾಗಿ ತತ್‌ಕ್ಷಣವಲ್ಲಿ ತೋರಬಹುದು. ಆದರೆ ಸ್ವಲ್ಪ ವಿವೇಚಿಸಿ ನೋಡಿದರೆ ಈ ವಾದದಲ್ಲಿ ಹುರುಳಿಲ್ಲ ಎಂಬುದು ಗೋಚರವಾಗುವುದು.

ವ್ಯಾಪಾರೋದ್ಯಮದಲ್ಲಿ ಅನಾವಶ್ಯಕ ಮಧ್ಯವರ್ತಿಗಳನ್ನು ತೊಡೆದುಹಾಕಲು ಸಹಕಾರ ಸಂಘಗಳನ್ನು ಬೆಳೆಸುವುದು ಅತ್ಯುತ್ತಮ ಮಾರ್ಗ. ಉತ್ಪಾದಕರ ತುದಿಯಿಂದ ಕೃಷಿಮಾರಾಟ ಸಂಘಗಳ ಸ್ಥಾಪನೆ, ಅನುಭೋಗಿಗಳ ತುದಿಯಿಂದ ಅನುಭೋಗಿ ಸಂಘಗಳ ಸ್ಥಾಪನೆ–ಈ ಮೂಲಕ ಬೆಳೆಯುವವರನ್ನೂ, ಅಂತಿಮ ಅನುಭೋಗಿಗಳನ್ನೂ ಆದಷ್ಟು ನೇರವಾಗಿಯೂ ವ್ಯವಸ್ಥಿತವಾಗಿಯೂ ಪರಸ್ಪರವಾಗಿ ಒಂದುಗೂಡಿಸಿದಂತಾಗುವುದು. ಈ ಮಾರ್ಗವನ್ನು ಸರ್ಕಾರ ಅತ್ಯಂತ ಉತ್ಸಾಹದಿಂದ ವಿವಿಧ ರೀತಿಯಲ್ಲಿ ಬೆಂಬಲ ನೀಡಿ ಇತ್ತೀಚಿನ ವರ್ಷಗಳಲ್ಲಿ ಪೋಷಿಸುತ್ತ ಬಂದಿದೆ. ತತ್ಫಲವಾಗಿ ಕೃಷಿ ಮಾರಾಟ ಸಹಕಾರ ಸಂಘಗಳೂ ಅನುಭೋಗಿ ಸಹಕಾರ ಸಂಘಗಳೂ ತೀವ್ರವಾಗಿ ಬೆಳೆಯುವ ಒಲವು ಇತ್ತೀಚಿನ ವರ್ಷಗಳಲ್ಲಿ ಕಾಣಬರುತ್ತದೆ. ಬೆಳೆಯುವವರಿಂದ ಆಹಾರಧಾನ್ಯಗಳು ಸಹಕಾರ ಸಂಸ್ಥೆಗಳ ಮೂಲಕ ಅನುಭೋಗಿಗಳಿಗೆ ತಲಪುವ ವ್ಯವಸ್ಥೆಯಿಂದ ವ್ಯಾಪಾರ ವ್ಯವಸ್ಥೆಯ ವಿವಿಧ ಅಂಗಗಳಲ್ಲಿ ಉತ್ತಮ ಸಂಘಟನೆ ಏರ್ಪಟ್ಟು ಬೆಳೆಯುವವರ ಮತ್ತು ಅನುಭೋಗಿಗಳ ಹಿತಾಸಕ್ತಿಗಳು ಸಮನ್ವಯಗೊಳ್ಳುವುದೇ ಅಲ್ಲದೆ, ದೇಶ ಒಪ್ಪಿರುವ ಪ್ರಜಾಸತ್ತಾತ್ಮಕ ಸಮಾಜವಾದಸ್ಥಾಪನೆಗೆ ಇದು ಅತ್ಯುತ್ತಮ ಸಾಧನವಾಗಿದೆ. ಆಹಾಧಾನ್ಯಗಳ ವ್ಯಾಪಾರೋದ್ಯಮವನ್ನು ಸಹಕಾರೀಕರಣಗೊಳಿಸುವುದರಿಂದ ಸರ್ಕಾರ ಈಗ ಆಚರಣೆಯಲ್ಲಿ ಇಟ್ಟುಕೊಂಡಿರುವ ಭಾಗಶಃ ಸಂಗ್ರಹಣೆ ಹಾಗೂ ವಿತರಣೆ ಪದ್ಧತಿಯನ್ನು ಹೆಚ್ಚು ಯಶಸ್ವಿಯಾಗಿ ನಡೆಸಲು ಸಾಧ್ಯವಾಗಬಹುದು. ಹೀಗೆ, ಆಹಾರಧಾನ್ಯ ಸಗಟು ವ್ಯಾಪಾರವನ್ನು ರಾಷ್ಟ್ರೀಕರಣಗೊಳಿಸುವ ತೀವ್ರತರ ಕ್ರಮ ಅನುಸರಿಸುವುದಕ್ಕಿಂತಲೂ ಈ ಉದ್ಯಮ ಪೂರ್ಣವಾಗಿ ಸಹಕಾರೀಕರಣವಾಗುವಂತೆ ಮಾಡುವುದು ಅನೇಕ ವಿಧಗಳಲ್ಲಿ ಹೆಚ್ಚು ಉಪಯುಕ್ತವಾಗಿ ಕಾಣುತ್ತದೆ.

ಮೂರನೆಯದಾಗಿ, ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ವಿವಿಧ ಪ್ರದೇಶಗಳು, ವಿವಿಧ ಋತುಗಳು ಮತ್ತು ಜನತೆಯ ವಿವಿಧ ವರ್ಗಗಳೊಳಗೆ ನ್ಯಾಯಸಮ್ಮತವಾದ ಹಾಗೂ ಸಮರ್ಪಕವಾದ ರೀತಿಯಲ್ಲಿ ಆಹಾರಧಾನ್ಯಗಳನ್ನು ಹಂಚಲು ಸಹಾಯಕವಾಗುವುದೆಂದು ವಾದಿಸಲಾಗಿದೆ. ಆದರೆ, ಈ ಉದ್ದೇಶಸಾಧನೆಗೆ ಆಹಾರಧಾನ್ಯ ವ್ಯಾಪಾರ ರಾಷ್ಟ್ರೀಕರಣ ಅನಾವಶ್ಯಕ ಮತ್ತು ಈ ಕಾರಣ ಈ ರಾಷ್ಟ್ರೀಕರಣವನ್ನು ಸಮರ್ಥಿಸಲಾರದು ಎಂಬುದನ್ನು ತಿಳಿಯುವುದು ಕಷ್ಟವಾಗಲಾರದು. ಪ್ರಸಕ್ತ ಇರುವ ಭಾಗಶಃ ಸಂಗ್ರಹಣೆ, ಕಾಪುದಾಸ್ತಾನು ಶೇಖರಣೆ ಹಾಗೂ ವಿತರಣೆ ಪದ್ಧತಿ ಈ ಉದ್ದೇಶ ಪೂರೈಕೆಗೆ ಸಾಕಾಗಿದೆ.

ಸಾಧಾರಣವಾಗಿ ಆಹಾರ ಸರಕುಗಳ ನೀಡಿಕೆ–ಬೇಡಿಕೆಗಳಲ್ಲಿರುವ ಪ್ರಾದೇಶಿಕ ಅಂತರಗಳು ಮಾರುಕಟ್ಟೆ ಶಕ್ತಿಗಳ ಹಾಗೂ ಆರ್ಥಿಕ ನಿಯಮಗಳ ಸಕ್ರಿಯ ವರ್ತನೆಯಿಂದ ತಾವೇ ತಾವಾಗಿ ಸರಿದುಹೋಗುವ ಪ್ರವೃತ್ತಿ ಬಲವಾಗಿರುತ್ತದೆ. ಆದರೆ ಈ ಪ್ರವೃತ್ತಿ ವಾಸ್ತವವಾಗಿ ಆಚರಿಸಲು ಗತಿಶೀಲತೆ (ಮೊಬಿಲಿಟಿ) ಅತಿ ಮುಖ್ಯ. ಗತಿಶೀಲತೆ ಎಂದರೆ ಇಲ್ಲಿ ಆಹಾರಧಾನ್ಯಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಆರ್ಥಿಕ ಶಕ್ತಿಗಳ ನಿರ್ದೇಶನಕ್ಕೆ ಅನುಸಾರವಾಗಿ ಸಲೀಸಾಗಿ ಚಲಿಸುವ ಅವಕಾಶ. ಇಂಥ ಗತಿಶೀಲತೆ ಎರಡು ಅಂಶಗಳನ್ನು ಅವಲಂಬಿಸಿರುತ್ತದೆ. ಮೊದಲನೆಯದಾಗಿ, ಅಂತರ ಪ್ರದೇಶಗಳ ಗತಿಶೀಲತೆಯ ಮೇಲೆ ಯಾವ ರೀತಿಯ ಅನಾವಶ್ಯಕ ಹಾಗೂ ಕಿರುಕುಳದ ಕೃತಕ ನಿರ್ಬಂಧಗಳೂ ಇರಲಾಗದು. ಎರಡನೆಯದಾಗಿ, ಗತಿಶೀಲತೆಗೆ ಆವಶ್ಯಕವಾದ ಸಾರಿಗೆ ಸೌಲಭ್ಯಗಳು ಸಾಕಷ್ಟು ಪ್ರಮಾಣದಲ್ಲಿ ಲಭಿಸುವಂತಿರಬೇಕು. ಈ ಎರಡು ಭಾಗಗಳಲ್ಲಿಯೂ ಸರ್ಕಾರ ಸೂಕ್ತ ನೀತಿ ಹಾಗೂ ಕ್ರಮಗಳನ್ನು ಕೈಗೊಳ್ಳುವ ಮೂಲಕ ಗತಿಶೀಲತೆಗೆ ಸಹಾಯ ಮಾಡಬಲ್ಲದು.

ಅಂತರರಾಜ್ಯ ಹಾಗೂ ಅಂತರ ಜಿಲ್ಲೆಗಳ ಆಹಾರಧಾನ್ಯ ಸಾಗಾಣಿಕೆಯ ಬಗ್ಗೆ ಈಗ ಸರ್ಕಾರ ಹಾಕಿರುವ ನಿರ್ಬಂಧಗಳನ್ನೂ, ಹಾಗೆ ಸಾಗಣೆ ಮಾಡಲು ವಿಶೇಷ ಅನುಮತಿಪತ್ರಗಳನ್ನು ಪಡೆಯಬೇಕೆಂಬ ನಿಯಮವನ್ನೂ ಸಡಿಲಿಸಿದರೆ ಮಾರುಕಟ್ಟೆ ಗತಿಶೀಲತೆಗೆ ಅವಶ್ಯಕವಾದ ಅವಕಾಶ ಕೊಟ್ಟಂತೆ ಆಗುವುದು. ಆದರೆ, ಇದರೊಡನೆಯೇ ಆಹಾರ ಸಾಗಣೆಗೆ ಸಾರಿಗೆ ಸೌಲಭ್ಯಗಳನ್ನು ಹೆಚ್ಚಿಸಬೇಕಾದ್ದು ಅತ್ಯಾವಶ್ಯಕ. ಇತ್ತೀಚಿನ ವರ್ಷಗಳಲ್ಲಿಯಂತೂ ಸಾರಿಗೆ ಸೌಲಭ್ಯ ಕೊರತೆ ವ್ಯಾಪಾರವಾಹಿನಿಗೆ ಒಂದು ದೊಡ್ಡ ತಡೆ ಆಗಿರುವುದು ಸರ್ವವಿದಿತ ವಿಷಯವಾಗಿದೆ. ಆಂಧ್ರ–ತೆಲಂಗಾಣ ವಿವಾದದಂಥ ಕೆಲವು ವಿವಾದಗಳ ಪರಿಣಾಮ, ಕಲ್ಲಿದ್ದಲು, ಪೆಟ್ರೋಲ್, ಡೀಸೆಲ್ ಇತ್ಯಾದಿ ಶಕ್ತಿಮೂಲ ಸಾಧನಗಳ ಅಭಾವ, ರೈಲ್ವೆ ಮತ್ತು ಇತರ ಸಾರಿಗೆ ಸಿಬ್ಬಂದಿಯವರಿಂದ ಪದೇ ಪದೇ ಮುಷ್ಕರ, ಇತ್ಯಾದಿ ಕಾರಣಗಳಿಂದ ದೇಶದ ಸಾರಿಗೆ ಸೌಲಭ್ಯಗಳು ಅಸ್ತವ್ಯಸ್ತಗೊಂಡು ವ್ಯಾಪಾರಕ್ಕೆ ಅಡ್ಡಿ ಆತಂಕಗಳು ಉಂಟಾಗಿವೆ. ಸಾರಿಗೆಗೆ ಅಡಚಣೆ ಉಂಟುಮಾಡಿರುವ ಈ ವಿವಿಧ ಕಾರಣಗಳನ್ನು ಸೂಕ್ತ ಕ್ರಮಗಳ ಮೂಲಕ ನಿವಾರಿಸುವುದೇ ವ್ಯಾಪಾರ ಕ್ಷೇತ್ರದಲ್ಲಿ ಸಾಮಾನ್ಯ ಪರಿಸ್ಥಿತಿಯುಂಟಾಗಲು ಸರ್ಕಾರ ತ್ವರಿತವಾಗಿ ಮಾಡಬೇಕಾದ ಮುಖ್ಯ ಕರ್ತವ್ಯ. ಆಗ ಆಹಾರ ಧಾನ್ಯ ವಿತರಣೆಯಲ್ಲಿ ಪ್ರಾದೇಶಿಕ ಅಂತರಗಳು ಬಹುಮಟ್ಟಿಗೆ ಕಡಮೆಯಾಗುವುವು. ಉಳಿಯಬಹುದಾದ ಅಲ್ಪಸ್ವಲ್ಪ ಅಂತರಗಳನ್ನು ಕಾಪುದಾಸ್ತಾನಿನ ಉಪಯೋಗದಿಂದ ಸರ್ಕಾರ ಸರಿಪಡಿಸಬಹುದು.

ನಾಲ್ಕನೆಯದಾಗಿ, ಜನಕ್ಕೆ–ಮುಖ್ಯವಾಗಿ ಬಡವರ್ಗದ ಜನಕ್ಕೆ–ಆಹಾರಧಾನ್ಯ ಒದಗಿಸುವುದು ಸರ್ಕಾರದ ಹೊಣೆ ಮತ್ತು ಈ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ಅವಶ್ಯಕ ಎಂದು ಹೇಳಲಾಗಿದೆ. ದೀರ್ಘಕಾಲದ ಅನುಭವದ ದೃಷ್ಟಿಯಿಂದ ಈ ವಾದವನ್ನು ವಿವೇಚಿಸುವುದಾದರೆ, ಆಹಾರೋತ್ಪಾದನೆ ದೇಶದಲ್ಲಿ ಸಮರ್ಪಕವಾಗಿ ಇರುವ ಕಾಲದಲ್ಲಿ ವ್ಯಾಪಾರದಲ್ಲಿ ಸುಸ್ಥವಾದ ಅಭ್ಯಾಸಗಳನ್ನು ಕಾಪಾಡಿಕೊಂಡು ಬರಲು ವಿನಾ, ಆಹಾರ ವಿತರಣೆಯಲ್ಲಿ ಸರ್ಕಾರದ ಪ್ರವೇಶ ಅನಗತ್ಯ. ಉತ್ಪಾದಕರು, ವ್ಯಾಪಾರಿಗಳು, ಅನುಭೋಗಿಗಳು–ಇವರುಗಳೊಳಗೆ ನಡೆಯುವ ಪರಸ್ಪರ ವ್ಯವಹಾರಗಳ ಮೂಲಕ ಧಾನ್ಯ ಹಂಚಿಕೆ ತಾನೇ ತಾನಾಗಿ ನಡೆಯುವುದು. ನೀಡಿಕೆ ಮೀರಿದ ಬೇಡಿಕೆ ಇರುವ, ಆಹಾರ ಕೊರತೆ ಇರುವ ಸಂದರ್ಭಗಳಲ್ಲಿ ಸರ್ಕಾರ ಬೆಲೆ ಹತೋಟಿ, ಹಾಗೂ ಪಡಿತರ ಕ್ರಮಗಳನ್ನು ತಾತ್ಕಾಲಿಕವಾಗಿ ಜಾರಿಗೆ ತರುವುದು ಸಾಧುವಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಉತ್ಪಾದನೆ ಹೆಚ್ಚಿಸಲು ತೀವ್ರಕ್ರಮ ಕೈಗೊಳ್ಳುವುದು ವಾಸ್ತವ ಪರಿಹಾರೋಪಾಯವಾಗಿ ಇರುತ್ತದೆ. ಅಂದಮೇಲೆ, ಜನತೆಗೆ, ಆಹಾರ ಒದಗಿಸುವ ಹೊಣೆ ನಿರ್ವಹಿಸುವ ದೃಷ್ಟಿಯಿಂದ ಸರ್ಕಾರ ಆಹಾರ ಧಾನ್ಯ ಸಗಟು ವ್ಯಾಪಾರವನ್ನು ಖಾಯಂ ಆಗಿ ವಹಿಸಿಕೊಳ್ಳುವುದು ಅಸಮರ್ಥನೀಯ. ಧಾನ್ಯ ಕೊರತೆ ಇರುವ ವರೆಗೆ ಪಡಿತರ, ಭಾಗಶಃ ಸಂಗ್ರಹಣೆ ಹಾಗೂ ವಿತರಣೆ, ಬೆಲೆ ಹತೋಟಿ ಇವುಗಳ ಮೂಲಕ ಜನತೆಗೆ ಸರ್ಕಾರ ಸಹಾಯಮಾಡಬಲ್ಲುದು.

ಕೆಲವು ಸಂಖ್ಯಾವಿವರಗಳನ್ನು ಪರಿಶೀಲಿಸಿದರೆ ದೇಶದಲ್ಲಿ ಆಹಾರಧಾನ್ಯಗಳ ನೀಡಿಕೆ ಪರಿಸ್ಥಿತಿ ಈಗ ಸುಮಾರು ಒಂದು ದಶಕದಿಂದಲೂ ಹೆಚ್ಚು ಕಡಮೆ ಏಕರೀತಿಯಾಗಿಯೇ ಇದ್ದು, ರಾಷ್ಟ್ರೀಕರಣಕೆ ಬೆಂಬಲ ನೀಡುವಂತೆ ಇಂದಿನ ಪರಿಸ್ಥಿತಿಯಲ್ಲಿ ಯಾವ ತೀವ್ರ ಬದಲಾವಣೆಯೂ ಆಗಿಲ್ಲವೆಂಬುದು ವ್ಯಕ್ತವಾಗುವುದು. ದೇಶದಲ್ಲಿ ಇರತಕ್ಕ ಆಹಾರಧಾನ್ಯ ದಿನವೊಂದಕ್ಕೆ ತಲಾ ಒಬ್ಬನಿಗೆ 1951ರಲ್ಲಿ 13.92 ಔನ್ಸುಗಳಿದ್ದುದು 1961ರಲ್ಲಿ 16.50 ಔನ್ಸುಗಳಿಗೆ ಹೆಚ್ಚಿತು. 1961ರಿಂದ ಅದು ಸುಮಾರು 16 ಔನ್ಸುಗಳ ಮಟ್ಟದಲ್ಲಿಯೇ ಇದೆ. 1966 ಮತ್ತು 1967ರಲ್ಲಿ ಮಾತ್ರ ದಿನವೊಂದಕ್ಕೆ ತಲಾ ಆಹಾರ ಧಾನ್ಯ ದೇಶದಲ್ಲಿ ಕೇವಲ 14 ಔನ್ಸಿನಷ್ಟು ಕಡಮೆ ಮಟ್ಟಕ್ಕೆ ಇಳಿದಿತ್ತು. ಆಹಾರಧಾನ್ಯ ನೀಡಿಕೆ ಮಟ್ಟ ಹಾಗೆ ಗಮನಾರ್ಹವಾಗಿ ಕೆಳಗಿಳಿದಿದ್ದ ಕಾಲದಲ್ಲಿ ಧಾನ್ಯಗಳ ಸಗಟು ವ್ಯಾಪಾರ ರಾಷ್ಟ್ರೀಕರಣದ ಯೋಚನೆ ಮಾಡದೆ, ಪ್ರಸ್ತುತ ಸಂದರ್ಭದಲ್ಲಿ ಧಾನ್ಯ ನೀಡಿಕೆ ಕೊರತೆಯನ್ನು ಒಂದು ಕಾರಣವಾಗಿ ಇಟ್ಟುಕೊಂಡು ರಾಷ್ಟ್ರೀಕರಣ ಕೈಗೊಳ್ಳುವುದು ಸಮಂಜಸವಾಗಿ ಕಾಣುವುದಿಲ್ಲ.

ನೀಡಿಕೆ ಕೊರತೆಯ ಆಧಾರದ ಮೇಲೆ ಸರ್ಕಾರ ಸಗಟು ವ್ಯಾಪಾರವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದಾದರೆ ಅಕ್ಕಿ, ಗೋದಿ, ಇಂಥ ಧಾನ್ಯಗಳಿಗಿಂತಲೂ ಬೇಳೆಗಳ ನೀಡಿಕೆಯಲ್ಲಿ ಕೊರತೆ ಹೆಚ್ಚು

ತೀವ್ರವಾಗಿರುವುದನ್ನು ಅಂಕಿ ಅಂಶಗಳು ಸೂಚಿಸುವುವು. ಬೇಳೆಗಳ ಬಗ್ಗೆ ದಿನವೊಂದರ ತಲಾ ಪ್ರಮಾಣ 1951ರಿಂದ 1965ರ ವರೆಗೆ ಸುಮಾರು 2 ಔನ್ಸುಗಳಿಗೂ ಹೆಚ್ಚು ಇದ್ದುದು. ಅಲ್ಲಿಂದ ತರುವಾಯ ತೀವ್ರವಾಗಿ ಕಡಮೆಯಾಗಿದೆ. ಆದರೆ, ಹಿಂದೆಯೇ ಹೇಳಿದಂತೆ, ತಾತ್ಕಾಲಿಕ ನೀಡಿಕೆ ಕೊರತೆ ಇರುವಾಗ ಈಗಿರುವ ಭಾಗಶಃ ಸಂಗ್ರಹಣೆ ಹಾಗೂ ವಿತರಣೆ ಪದ್ಧತಿಯ ಮೂಲಕ ಜನರಿಗೆ ಸೂಕ್ತ ಪರಿಹಾರ ದೊರಕಿಸುವುದು ಸೂಕ್ತವೇ ಹೊರತು, ಸಗಟು ವ್ಯಾಪಾರದ ಖಾಯಂ ರಾಷ್ಟ್ರೀಕರಣ ಈ ಕಾರಣದ ಆಧಾರದ ಮೇಲೆ ಸಲ್ಲದು.

ಐದನೆಯದಾಗಿ, ಬೆಳೆಯುವವರಿಗೆ ಉತ್ತೇಜಕ ಬೆಲೆ ಹಾಗೂ ಅನುಭೋಗಿಗಳಿಗೆ ಕಡಮೆಯಾದ ಮತ್ತು ಸ್ಥಿಮಿತವಾದ ಬೆಲೆ ಬಗ್ಗೆ ಭರವಸೆ ಕೊಡಬಲ್ಲ ಆಹಾರಧಾನ್ಯಗಳ ಬೆಲೆ ರಚನೆಯನ್ನು ರೂಪಿಸಲು ಇವುಗಳ ವ್ಯಾಪಾರ ರಾಷ್ಟ್ರೀಕರಣ ಸಹಾಯ ಮಾಡುವುದೆಂಬ ವಾದವನ್ನು ಹೂಡಲಾಗಿದೆ. ಈ ಉದ್ದೇಶಗಳು ಅಪೇಕ್ಷಣೀಯ ಮತ್ತು, ಇವುಗಳ ಸಾಧನೆಗಾಗಿ ಮಾರುಕಟ್ಟೆ ಶಕ್ತಿಗಳ ಸ್ವಲ್ಪಮಟ್ಟಿನ ನಿಯಂತ್ರಣ ಆವಶ್ಯಕ ಎಂಬುವು ಒಪ್ಪತಕ್ಕ ವಿಷಯಗಳಾಗಿವೆ. ಏಕೆಂದರೆ, ಮಾರುಕಟ್ಟೆ ಶಕ್ತಿಗಳಾದ ನೀಡಿಕೆ ಬೇಡಿಕೆಗಳ ಪರಸ್ಪರ ಅನಿರ್ಬಂಧಿತ ಪ್ರತಿಕ್ರಿಯೆಯಿಂದ ಬೆಲೆಗಳು ನಿರ್ಣಯವಾಗಲು ಬಿಟ್ಟರೆ ಆಹಾರ ಬೆಲೆಗಳು ಏಕಪ್ರಕಾರವಾಗಿ ಏರುವುವು; ಅಲ್ಪಾವಧಿಯಲ್ಲಿ ಬಹುಮಟ್ಟಿಗೆ ಸಾಪೇಕ್ಷವಾಗಿ ಅಪ್ರುಟಿತತೆಯ ನೀಡಿಕೆ ಸ್ಥಿತಿಯ ಎದುರಾಗಿ ಏರುವ ಹಣರೂಪಿ ವರಮಾನಗಳು, ಜನಸಂಖ್ಯಾ ಏರಿಕೆ ಮತ್ತು ನಗರೀಕರಣ ಇಂಥ ಕಾರಣಗಳಿಂದ ತೀವ್ರವಾಗಿ ಏರುವ ಬೇಡಿಕೆ ಇರುವುದರಿಂದ ಆಹಾರ ಬೆಲೆಗಳು ಹೀಗೆ ಏರುವುವೆಂದು ಹೇಳಬಹುದು. ಆಹಾರ ಬೆಲೆಗಳ ಈ ಏರಿಕೆ—ವಿಶಾಲವಾಗಿ, ವಾಸ್ತವವಾಗಿ ಕೃಷಿ ಸರಕುಗಳೆಲ್ಲವುಗಳ ಬೆಲೆ ಏರಿಕೆ—ದೇಶದಲ್ಲಿ ಇರುವ ಹಣಬಾಹುಳ್ಯ ಶಕ್ತಿಗಳನ್ನು ಬಹುಮಟ್ಟಿಗೆ ಬಲಪಡಿಸುವುದು. ಹಣಬಾಹುಳ್ಯ ತಡೆಯಲೂ, ಅನುಭೋಗಿಗಳ ಹಿತಾಸಕ್ತಿಗಳನ್ನು ರಕ್ಷಿಸಲೂ, ಆಹಾರಧಾನ್ಯಗಳ ಬೆಲೆಗಳನ್ನು, ಉತ್ಪನ್ನ ವೆಚ್ಚವನ್ನು ಮುಚ್ಚುವಂತೆಯೂ, ಇದರ ಮೇಲೆ ಅಲ್ಪ ಲಾಭವನ್ನು ಬೆಳೆಯುವವರಿಗೆ ದೊರಕಿಸುವಂತೆಯೂ, ಆದರೆ ಅನಿರ್ಬಂಧಿತ ಮಾರುಕಟ್ಟೆಯಲ್ಲಿ ಉಂಟಾಗಬಹುದಾಗಿದ್ದಂತಹ 'ಛಾಯಾ ಬೆಲೆ'ಗಳಿಗಿಂತ (ಷ್ಯಾಡೋ ಫ್ರೀ ಮಾರ್ಕೆಟ್ ಪ್ರೈಸಸ್) ಕಡಮೆಯಾಗಿರುವಂತೆಯೂ ಇರುವ ಮಟ್ಟಗಳಲ್ಲಿ ಸ್ಥಾಪಿಸುವುದು ಉಪಯುಕ್ತವಾದ ಕ್ರಮವಾಗಿರುತ್ತದೆ. ಆದರೆ, ಸರ್ಕಾರದ ಇಂಥ ಬೆಲೆ ನಿಯಂತ್ರಣ ಕ್ರಮಗಳಿಗೆ ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ಅವಶ್ಯವಿಲ್ಲ. ಬೆಲೆ ನಿಯಂತ್ರಣದ ಬಗ್ಗೆ ಸರ್ಕಾರ ಈಗ ಹೊಂದಿರುವ ಅಧಿಕಾರ ಈ ಉದ್ದೇಶ ಸಾಧನೆಗೆ ಸಾಕು. ಕಾಲಕ್ರಮೇಣ, ಹಸಿರುಕ್ರಾಂತಿಯ ಫಲ ದೇಶಾದ್ಯಂತ ಹರಡಿದ ಅನಂತರ, ನೀಡಿಕೆ ಪರಿಸ್ಥಿತಿ ಗಮನಾರ್ಹವಾಗಿ ಉತ್ತಮವಾಗುವ ಕಾಲ ಬರಬಹುದು. ಆಗ, ಖಜಾನೆ ಹಾಗೂ ಹಣಕಾಸಿನ ನೀತಿಗಳ ಮೂಲಕ ಸರ್ಕಾರ ಬೆಲೆಗಳ ಸಾಮಾನ್ಯ ಮಟ್ಟ ನಿಯಂತ್ರಿಸುವುದು ಮುಂದುವರಿಯುವುದಾದರೂ, ಸಾಪೇಕ್ಷ ಬೆಲೆಗಳ, ಆಹಾರಧಾನ್ಯಗಳ ಬೆಲೆಗಳ ನಿರ್ಣಯವನ್ನು ಮಾರುಕಟ್ಟೆ ಶಕ್ತಿಗಳ ಪ್ರಕ್ರಿಯೆಗೆ ಬಿಡಬಹುದು. ಆಹಾರಧಾನ್ಯಗಳ ಬೆಲೆಗಳು ಅಧಿಕೋತ್ಪನ್ನದ ಫಲವಾಗಿ ಇಳಿಯುವ ಸಂದರ್ಭ ಒದಗಿದರೆ ರೈತರಿಗೆ ಅನುಕೂಲವಾಗುವಂತೆ 'ಬೆಲೆ ಬೆಂಬಲ ಕ್ರಮಗಳನ್ನು ('ಪ್ರೈಸ್ ಸಪೋರ್ಟ್ ಮೆಷರ್ಸ್) ಕೈಗೊಳ್ಳಬೇಕಾಗಿ ಬರಬಹುದು.

ಕೊನೆಯದಾಗಿ, ಆಹಾರಧಾನ್ಯ ವ್ಯಾಪಾರ ರಾಷ್ಟ್ರೀಕರಣಕ್ಕೆ ಸಮಾಜವಾದಿ ಧ್ಯೇಯದ ಗುರಿಯನ್ನು ಕಾರಣವಾಗಿ ಕೊಡಲಾಗಿದೆ. ವರಮಾನ ಹಂಚಿಕೆಯಲ್ಲಿ ಮತ್ತು ಆರ್ಥಿಕ ಅವಕಾಶಗಳಲ್ಲಿ ಸಮಾನತೆಯನ್ನು ಸಾಮಾನ್ಯವಾಗಿ ಎಲ್ಲ ತರಹದ ಸಮಾಜವಾದಿ ಪದ್ಧತಿಗಳೂ ಒತ್ತಿ ಹೇಳಿವೆ; ಉತ್ಪಾದನ ಸಾಧನಗಳ ರಾಷ್ಟ್ರೀಕರಣ ಈ ಉದ್ದೇಶ ಸಾಧನೆಗೆ ಆವಶ್ಯಕವೆಂದೂ ಅನೇಕ ಮಾದರಿಯ ಸಮಾಜವಾದಿ ಪದ್ಧತಿಗಳು ಹೇಳಿವೆ.

ಆಹಾರಧಾನ್ಯ ವ್ಯಾಪಾರ ರಾಷ್ಟ್ರೀಕರಣ ಕ್ರಮೇಣ ಇತರ ಉದ್ಯಮಗಳ ರಾಷ್ಟ್ರೀಕರಣವನ್ನೂ ಒಳಗೊಳ್ಳುವ ಸಮಾಜವಾದದತ್ತ ಒಂದು ಹೆಜ್ಜೆ ಎಂದು ಪರಿಗಣಿಸುವುದಾದರೆ, ಆಗ ಈ ವಿಷಯ ಸಹಜವಾಗಿಯೂ ಮಹತ್ವಪೂರಿತ ಪ್ರಶ್ನೆಯಾಗಿರುವುದು. ಏಕೆಂದರೆ ದೀರ್ಘಾವಧಿಯಲ್ಲಿ ದೇಶ ಇಂದಿನ ಮಿಶ್ರ ಆರ್ಥಿಕ ಪದ್ಧತಿಯನ್ನು—ಖಾಸಗಿ, ಸರ್ಕಾರಿ ಹಾಗೂ ಜಂಟಿ ವಲಯಗಳನ್ನು ಒಳಗೊಂಡಂತೆ—ತ್ಯಜಿಸಿ, ಖಾಸಗಿ ಮತ್ತು ಜಂಟಿವಲಯಗಳನ್ನು ಅಳಿಸಿ, ಕೇವಲ ಸರ್ಕಾರಿ ವಲಯವಿರುವ

ಸಮಾಜವಾದಿ ಆರ್ಥಿಕ ಪದ್ಧತಿಯನ್ನು ಹೊಂದುವುದೆಂದು ಅರ್ಥವಾಗುತ್ತದೆ. ಇಂಥ ಅಂತಿಮ ಆರ್ಥಿಕ ಸ್ವರೂಪ ನಿರ್ಮಿಸಲು ಹೆಜ್ಜೆ ಹಾಕುವ ಮೊದಲು ಇದು ಅಪೇಕ್ಷಣೀಯವೇ ಎಂಬ ಬಗ್ಗೆ ದೇಶದಲ್ಲಿ ಸಾಕಷ್ಟು ಸಾರ್ವಜನಿಕ ಚರ್ಚೆ ಹಾಗೂ ವಿವೇಚನೆ ಅಗತ್ಯ. ಖಾಸಗಿ ವಲಯವನ್ನು ಪೂರ್ಣವಾಗಿ ಕ್ರಮೇಣ ಅಳಿಸುವುದರ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಮಾನಸಿಕ ಅಂಶಗಳ ಪರಿಶೀಲನೆ ನಡೆಸಿ ಜನತೆಯ ಮುಂದೆ ವಿವರಗಳನ್ನು ಇಡುವುದು ಜನತಾಪ್ರತಿನಿಧಿಗಳ, ಬುದ್ಧಿಜೀವಿಗಳ ಇಂದಿನ ಮುಖ್ಯ ಹೊಣೆಯಾಗಿದೆ.

ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ಒಳಗೊಳ್ಳುವ ಕೆಲವು ಸಮಸ್ಯೆಗಳು

ವಿಕಲ್ಪ ಆರ್ಥಿಕ ಪದ್ಧತಿಗಳ ಗುಣಾವಗುಣಗಳ ಪೂರ್ಣ ಅಧ್ಯಯನದ ಅನಂತರ ಪೂರ್ಣ ರಾಷ್ಟ್ರೀಕರಣವನ್ನೊಳಗೊಂಡ ಸಮಾಜವಾದ ನಮ್ಮ ದೇಶಕ್ಕೆ ಒಳ್ಳೆಯದು ಎಂಬ ಮತ್ತು ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ಈ ಸಮಾಜ ಸ್ಥಾಪನೆಗೆ ಕೈಕೊಳ್ಳಬೇಕಾದ ತ್ವರಿತ ಕ್ರಮ ಎಂಬ ತೀರ್ಮಾನಕ್ಕೆ ಬರುವುದಾದರೆ, ಈ ಕ್ರಮಕ್ಕೆ ಸಂಬಂಧಿಸಿದಂತೆ ಅನೇಕ ವಾಸ್ತವ ಸಮಸ್ಯೆಗಳನ್ನು ಸರ್ಕಾರ ಎದುರಿಸಬೇಕಾಗುವುದು. ಇವುಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಲಾಗುವುದು.

ಮೊದಲನೆಯದಾಗಿ, ಆಹಾರ ಧಾನ್ಯಗಳ ವ್ಯಾಪಾರಕ್ಕೆ ಸಂಬಂಧಪಟ್ಟ ವಿವಿಧ ಸರ್ಕಾರಿ ಸಂಸ್ಥೆಗಳ ಮತ್ತು ಶಾಖೆಗಳ ವಿಸ್ತರಣೆ ಹಾಗೂ ಉತ್ತಮಪಡಿಸುವ ಸಮಸ್ಯೆ ಬರುವುದು. ಕೇಂದ್ರ ಹಾಗೂ ರಾಜ್ಯ ಮಟ್ಟಗಳಲ್ಲಿ ಆಹಾರ ಸಚಿವಶಾಖೆ ಮತ್ತು ಆಹಾರ ಇಲಾಖೆಗಳು, ಭಾರತದ ಆಹಾರ ಕಾರ್ಪೊರೇಷನ್ನು ಮತ್ತು ಇದರ ರಾಜ್ಯ ಶಾಖೆಗಳು, ಉಗ್ರಾಣ ಕಾರ್ಪೊರೇಷನ್ನುಗಳು, ಸಗಟು ವ್ಯಾಪಾರ ಸಹಕಾರ ಸಂಸ್ಥೆಗಳು, ಇತ್ಯಾದಿಗಳ ಚಟುವಟಿಕೆಗಳೆಲ್ಲವೂ ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣದಿಂದ ಅತ್ಯಂತ ಗಣನೀಯವಾಗಿ ಹೆಚ್ಚುವುವು. ಈ ಸಂಸ್ಥೆಗಳ ಬಲವನ್ನು ಅನುಗುಣವಾಗಿ ಹೆಚ್ಚಿಸಬೇಕಾಗುವುದಲ್ಲದೆ, ಕಾರ್ಯಾಚರಣೆಯಲ್ಲಿ ಇವುಗಳಲ್ಲಿರುವ ದೋಷದೋಷಗಳನ್ನೂ ನಿವಾರಿಸಬೇಕಾಗುವುದು. ಈ ಸಂಸ್ಥೆಗಳ ಕ್ರಿಯಾಶಕ್ತಿ ಬಹುಮಟ್ಟಿಗೆ ಇವುಗಳ ಸಿಬ್ಬಂದಿ ವರ್ಗದವರ ದಕ್ಷತೆ ಹಾಗೂ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಖಾಸಗಿ ಸಗಟು ವರ್ತಕರಿಗಾಗಿ ಈಗ ಕೆಲಸ ಮಾಡುತ್ತಿರುವ ಕಾರ್ಮಿಕರು, ಸಾರಿಗೆ ನೌಕರರು, ಇತ್ಯಾದಿ ಕೆಲಸದವರನ್ನು ಸರ್ಕಾರ ತಾನು ವಹಿಸಿಕೊಳ್ಳುವ ವ್ಯಾಪಾರಕಾರ್ಯ ನಿರ್ವಹಣೆಗೆ ವರ್ಗಾಯಿಸಿಕೊಳ್ಳಬಲ್ಲದಾದರೂ ಆಡಳಿತ ಹಾಗೂ ಮೇಲ್ವಿಚಾರಕ ಸಿಬ್ಬಂದಿಗೆ ನುರಿತ, ಕರ್ತವ್ಯನಿಷ್ಠೆಯುಳ್ಳ, ದುರ್ವ್ಯವಹಾರಗಳ ಬಲೆಗೆ ಬೀಳದಂಥ ಪ್ರಾಮಾಣಿಕ ಜನರನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಿಕೊಳ್ಳುವುದು ಸರ್ಕಾರಕ್ಕೆ ದೊಡ್ಡ ಸಮಸ್ಯೆಯೇ ಆದೀತು. ಸಿಬ್ಬಂದಿ ವರ್ಗದವರ ಕುಂದುಕೊರತೆಗಳಿಂದ ಆಡಳಿತದಲ್ಲಿ ಯಾವುದೇ ಒಂದು ಹಂತದಲ್ಲಿ ದೌರ್ಬಲ್ಯ ವ್ಯಕ್ತವಾದರೂ, ಇದರಿಂದ ಸಾರ್ವಜನಿಕರಿಗೆ ಆಗಬಹುದಾದ ಆತಂಕ ಮತ್ತು ಅನಾನುಕೂಲಗಳನ್ನು ಜಾರಿಯಲ್ಲಿರುವ ಆಹಾರಧಾನ್ಯಗಳ ಭಾಗಶಃ ಸಂಗ್ರಹಣೆ ಮತ್ತು ವಿತರಣೆ ಪದ್ಧತಿಯ ಅನುಭವಗಳು ತಿಳಿಯಪಡಿಸಿವೆ.

ಎರಡನೆಯದಾಗಿ, ಆಹಾರಧಾನ್ಯಗಳ ಸಂಗ್ರಹಣೆ, ಸಾಗಣೆ, ದಾಸ್ತಾನು ರಕ್ಷಣೆ, ವಿತರಣೆ ಇತ್ಯಾದಿ ಕಾರ್ಯಗಳ ನಿರ್ವಹಣೆಗೆ ಅವಶ್ಯಕವಾದ ಮೂಲಭೂತ ಸೌಲಭ್ಯಗಳನ್ನು ಗಮನಾರ್ಹವಾದ ಪ್ರಮಾಣದಲ್ಲಿ ಸರ್ಕಾರ ವಿಸ್ತರಿಸಿಕೊಳ್ಳಬೇಕಾಗುವುದು. ಬೆಳೆಯುವವರಿಂದ ಧಾನ್ಯಗಳನ್ನು ಕೊಳ್ಳಲು ಮತ್ತು ಕೊಂಡುದನ್ನು ದಾಸ್ತಾನು ಇಡಲು ದೇಶಾದ್ಯಂತವೂ ಹರಡಿದಂತೆ ಅನೇಕ ಸುಸಜ್ಜಿತ ಮಾರುಕಟ್ಟೆ ಅಂಗಳಗಳು ನಿರ್ಮಿತವಾಗಬೇಕಾಗುವುದು. ಸರಿಯಾದ ಅಳತೆ ಹಾಗೂ ತೂಕ ಮಾಡುವ ಏರ್ಪಾಡು, ಕ್ರಮವಾದ ಲೆಕ್ಕವಿಡುವ ಮತ್ತು ಹಣ ವ್ಯವಹಾರ ನಡೆಸುವ ವ್ಯವಸ್ಥೆ, ಧಾನ್ಯಗಳು ಕೆಡದಂತೆ, ನಶಿಸದಂತೆ ದಾಸ್ತಾನು ಇಡುವ ಏರ್ಪಾಡು, ಇವೆಲ್ಲವೂ ಸುಸಜ್ಜಿತ ಮಾರುಕಟ್ಟೆ ಅಂಗಳ ಹೊಂದಿರಬೇಕಾದ ಕೆಲವು ಮುಖ್ಯ ಅವಶ್ಯಕತೆಗಳಾಗಿವೆ. ಆಹಾರಧಾನ್ಯಗಳ ಸಾಗಣೆಗೂ ವಿತರಣೆಗೂ ಸರ್ಕಾರಕ್ಕೆ ಬೇಕಾಗುವ ಸೌಲಭ್ಯಗಳು ಬಹುಮಟ್ಟಿಗೆ ಹೆಚ್ಚಬೇಕಾಗುವುದು. ಈಗ ಸರ್ಕಾರ ಹೊಂದಿರುವ ಈ ವಿವಿಧ ರೀತಿಯ ಸೌಲಭ್ಯಗಳು ಭಾಗಶಃ ಸಂಗ್ರಹಣೆ ಮತ್ತು ವಿತರಣೆಗೆ ಅನುಗುಣವಾಗಿವೆ. 1972ರಲ್ಲಿ ಆಹಾರಧಾನ್ಯಗಳ

ಒಟ್ಟು ನಿವ್ವಳ ಉತ್ಪಾದನೆಯಲ್ಲಿ ಸರ್ಕಾರ ಸಂಗ್ರಹಣೆ ಮಾಡಿದ ಭಾಗ ಸೇಕಡ 8.4ರಷ್ಟು ಮಾತ್ರವಾಗಿತ್ತು. ರಾಷ್ಟ್ರೀಕರಣದೊಡನೆ ಅದು ಮಾರಾಟಕ್ಕಿರುವ ಹೆಚ್ಚಳ ಉತ್ಪನ್ನವನ್ನೆಲ್ಲಾ ಲಕ್ಷಾಂತರ ಬೆಳೆಯುವವರಿಂದ ಕೊಂಡು ಲಕ್ಷಾಂತರ ಚಿಲ್ಲರೆ ವ್ಯಾಪಾರಿಗಳಿಗೆ ಹಂಚುವ ವ್ಯವಸ್ಥೆ ಮಾಡಬೇಕಾಗಿ ಬರುವುದರಿಂದ ಸರ್ಕಾರಕ್ಕೆ ಬೇಕಾಗುವ ಮೂಲಭೂತ ಮಾರುಕಟ್ಟೆ ಸೌಕರ್ಯಗಳು ಅತ್ಯಧಿಕ ಪ್ರಮಾಣದಲ್ಲಿ ಹೆಚ್ಚಬೇಕಾಗುವುದು. ಮಾರುಕಟ್ಟೆ ಅಂಗಳಗಳ ನಿರ್ಮಾಣ, ಸಾರಿಗೆ ವಾಹನಗಳನ್ನು ಕೊಳ್ಳುವುದು ಮತ್ತು ಇತರ ಸಂಸ್ಥಾರಚನೆಯನ್ನು ವ್ಯವಸ್ಥೆಗೊಳಿಸುವುದು–ಇವುಗಳಿಗೆ ಅಪಾರ ಹಣ ಹೂಡಬೇಕಾಗುವುದು. ಹೀಗೆ ಬೇಕಾಗುವ ಹಣ. ವಿವಿಧ ಸೌಕರ್ಯಗಳ ನಿರ್ಮಾಣಕ್ಕೆ ಬೇಕಾಗುವ ಕಾಲ ಇವೆಲ್ಲವನ್ನೂ ರಾಷ್ಟ್ರೀಕರಣ ಮಾಡುವುದಕ್ಕೆ ಸಾಕಷ್ಟು ಮುಂಚೆಯೇ ವಿವರವಾಗಿ ವಿವೇಚಿಸಿ ಸೂಕ್ತವಾದ, ಕಾರ್ಯಗತ ಮಾಡಲು ಸಾಧ್ಯವಾದ ಯೋಜನೆಗಳನ್ನು ರೂಪಿಸಿಕೊಳ್ಳುವುದು ವಿವೇಕಯುತ ಮಾರ್ಗವಾಗುವುದು.

ಮೂರನೆಯದಾಗಿ, ಸಂಗ್ರಹಣ ಬೆಲೆ ಮತ್ತು ಮಾರಾಟ ಬೆಲೆಗಳ ನಿರ್ಣಯ ಇನ್ನೊಂದು ಅತಿ ಮುಖ್ಯ ಸಮಸ್ಯೆಯಾಗಿದೆ. ಈಗ ಸರ್ಕಾರ ಬೆಲೆಗಳ ಸಾಮಾನ್ಯ ಮಟ್ಟದ ಏರಿಕೆಯನ್ನು ತಡೆಗಟ್ಟಲು ಪ್ರಯತ್ನ ಪಡುತ್ತಿದೆಯೇ ಅಲ್ಲದೆ ಸಾಪೇಕ್ಷಬೆಲೆಗಳ ಮೇಲೆಯೂ ಮುಖ್ಯ ಪ್ರಭಾವ ಬೀರುತ್ತಿದೆ. ಆಹಾರಧಾನ್ಯಗಳ ಬೆಲೆಗಳ ಮಟ್ಟಿಗೆ ಹೇಳುವುದಾದರೆ. ಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣದ ಅಂಗವಾಗಿ ಪ್ರಥಮ ಸಂಗ್ರಹಣ ಬೆಲೆಗಳ ಮತ್ತು ಇವುಗಳಲ್ಲಿ ತರುವಾಯ ಮಾಡಬೇಕಾದ ಬೆಲೆಗಳ ನಿರ್ಣಯಕ್ಕೆ ಸುದೀರ್ಘ ವ್ಯವಸ್ಥೆಯೊಂದನ್ನು ನಿರ್ಮಿಸಬೇಕಾಗುವುದು. ಈ ಕೆಲಸಗಳನ್ನು ಕ್ಷಿಪ್ರವಾಗಿಯೂ, ಕರಾರುವಾಕ್ಕಾಗಿಯೂ ನಿರ್ವಹಿಸಬಲ್ಲ ಯಂತ್ರವನ್ನು ನಿರ್ಮಿಸುವುದು ಅತ್ಯಂತ ಜಟಿಲ ಸಮಸ್ಯೆಯಾಗಿದೆ. ಮೊಟ್ಟಮೊದಲು ವಿವಿಧ ಬೆಳೆಗಳ ಪ್ರದೇಶವಾರು ಉತ್ಪಾದನ ವೆಚ್ಚಗಳ ಅಧ್ಯಯನಗಳನ್ನು ಆದಷ್ಟು ಕ್ಷಿಪ್ರವಾಗಿಯೂ ನಿಷ್ಪಕ್ಷಪಾತವಾಗಿಯೂ ನೆರವೇರಿಸಬೇಕು. ಸಂಗ್ರಹಣೆ ಕಾರ್ಯ ಸಲೀಸಾಗುವಂತೆಯೂ ಬೆಳೆಯುವವರಿಗೆ ಹೆಚ್ಚು ಬೆಳೆಯಲು ಪ್ರಚೋದನೆಯಾಗುವಂತೆಯೂ ಸೂಕ್ತ ಪ್ರಮಾಣದ ಲಾಭ ಸಿಗುವಂತೆ ಈ ವೆಚ್ಚಗಳ ಅಧ್ಯಯನದ ಆಧಾರದ ಮೇಲೆ ಸಂಗ್ರಹಣೆ ಬೆಲೆಗಳನ್ನು ಗೊತ್ತುಪಡಿಸಬೇಕು. ಅನಂತರ. ಪ್ರತಿಯೊಂದು ಋತುವಿಗೂ ಸಂಬಂಧಿಸಿದಂತೆ ಉತ್ಪಾದನ ವೆಚ್ಚಗಳ ಬದಲಾವಣೆಗಳನ್ನು ಸರಿಯಾಗಿ ಪರಿಶೀಲಿಸಿ ಇದಕ್ಕೆ ಅನುಗುಣವಾಗಿ ಸಂಗ್ರಹಣೆ ಬೆಲೆಗಳನ್ನು ಬದಲಾಯಿಸಬೇಕು. ಈ ಎಲ್ಲ ಸೂಕ್ಷ್ಮವಾದ ಹಾಗೂ ಜಟಿಲವಾದ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುವಂತೆ ಈಗ ಸರ್ಕಾರ ಹೊಂದಿರುವ ಬೆಲೆ ನಿಯಂತ್ರಣ ಯಂತ್ರವನ್ನು ಅಳವಡಿಸಿ ಅಭಿವೃದ್ಧಿಪಡಿಸಬೇಕಾಗುವುದು.

ಕೊನೆಯದಾಗಿ. ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ದೇಶದಾದ್ಯಂತವೂ ಬಹುಮಂದಿ ವರ್ತಕರನ್ನು ತಮ್ಮ ಬಹುಕಾಲದ ವೃತ್ತಿಯನ್ನು ಕಡ್ಡಾಯವಾಗಿ ತ್ಯಜಿಸುವಂತೆ ಮಾಡುವುದು. ರಸ್ತೆ ಸಾರಿಗೆ ರಾಷ್ಟ್ರೀಕರಣ ದೇಶದಲ್ಲಿದ್ದ ಸಾರಿಗೆ ಮುಂದಾಳುಗಳ ಒಂದು ಸಣ್ಣ ವರ್ಗದವರ ಉಪಯುಕ್ತವಾಗಿದ್ದ ಖಾಸಗಿ ಉದ್ಯಮ ಸಾಹಸವನ್ನು ಕೊನೆ ಮಾಡಿದ್ದು ಸಾಮಾನ್ಯ ತಿಳಿವಳಿಕೆಯ ವಿಷಯವಾಗಿದೆ. ಆಹಾರಧಾನ್ಯಗಳ ಸಗಟು ವ್ಯಾಪಾರ ರಾಷ್ಟ್ರೀಕರಣ ಇನ್ನೂ ವಿಸ್ತಾರವಾಗಿ ಹರಡಿರುವ ವಾಣಿಜ್ಯೋದ್ಯಮಿಗಳ ದೊಡ್ಡ ಗುಂಪನ್ನು ಅವರು ಅನೇಕ ವರ್ಷಗಳಿಂದ ಕೈಕೊಂಡಿರುವ ವೃತ್ತಿಯಿಂದ ನಿವೃತ್ತಿಗೊಳಿಸಿದಂತಾಗುವುದು. ಇವರ ವಾಣಿಜ್ಯಾನುಭವ ಮತ್ತು ಬುದ್ಧಿಶಕ್ತಿಯನ್ನು ಹೇಗೆ ದೇಶದ ಆರ್ಥಿಕತೆಗೆ ಪ್ರಯೋಜನವಾಗುವಂತೆ ಬಳಸಿಕೊಳ್ಳಬೇಕೆಂಬ ಪ್ರಶ್ನೆಯೂ ವಿವೇಚನಾರ್ಹವಾಗಿದೆ.

ಸಮಾಪ್ತಿ

ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣಕ್ಕೆ ಸಮಾಜವಾದಿ ಧ್ಯೇಯಾತ್ಮಕವಾದ ಹೊರತು ಬೇರೆ ಯಾವ ಸಾಧುವಾದ ಕಾರಣವೂ ಇಲ್ಲ ಎಂಬುದು ಮೇಲಿನ ಸಂಕ್ಷಿಪ್ತ ವಿವೇಚನೆಯಿಂದ ಸ್ಪಷ್ಟವಾಗಿದೆ. ಖಾಸಗಿ ವಲಯವನ್ನು ಸಂಪೂರ್ಣವಾಗಿ ತೊಡೆದುಹಾಕುವ ಸಮಾಜವಾದಿ ಆರ್ಥಿಕ ಪದ್ಧತಿ. ಖಾಸಗಿ, ಸರ್ಕಾರಿ ಮತ್ತು ಮಿಶ್ರ ವಲಯಗಳನ್ನು ಒಳಗೊಂಡ ಇಂದಿನ ಮಿಶ್ರ ಆರ್ಥಿಕ ಪದ್ಧತಿಗಿಂತ ಮೇಲು ಎಂಬುದು ನಿರ್ವಿವಾದವಾಗಿ ಸ್ಥಿರಪಟ್ಟಿರುವುದಿಲ್ಲ. ಆದ್ದರಿಂದ ಇಂಥ ಪರಿವರ್ತನೆಯತ್ತ ಯಾವುದೇ

ಕ್ರಮ ಕೈಗೊಳ್ಳುವ ಮುಂಚೆ ಈ ಎರಡು ಪದ್ಧತಿಗಳ ಸಾಪೇಕ್ಷ ಗುಣಾವಗುಣಗಳ ಪೂರ್ಣ ಪರಿಶೀಲನೆಯಾಗಬೇಕು. ಇಂಥ ಪರಿವರ್ತನೆ ಅಪೇಕ್ಷಣೀಯ ಎಂಬುದು ನಿರ್ಣಯವಾದರೆ ಮತ್ತು ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ಈ ಪರಿವರ್ತನೆಯ ಪಥದಲ್ಲಿ ಕೈಗೊಳ್ಳಬೇಕಾಗಿರುವ ತತ್‌ಕ್ಷಣದ ಮುಂದಿನ ಹೆಜ್ಜೆ ಎಂದು ನಿರ್ಣಯವಾದರೆ, ಈ ಕ್ರಮವನ್ನು ಜಾರಿಗೆ ತರುವುದರಲ್ಲಿ ಇರುವ ವಿವಿಧ ಸಮಸ್ಯೆಗಳ ಪೂರ್ಣ ಅಧ್ಯಯನ ನಡೆಸಿ, ಈ ಬಗ್ಗೆ ಕಾರ್ಯಸಿದ್ಧಿಯಾಗುವಂಥ ಯೋಜನೆಗಳನ್ನು ಹಾಕಿಕೊಂಡು ಮುಂದುವರಿಯುವುದು ಒಳ್ಳೆಯದು. ಇಲ್ಲದಿದ್ದಲ್ಲಿ, ಈ ಕ್ರಮದಿಂದ ಜನತೆಗೆ ಹಾನಿಯುಂಟಾಗುವ ಸಂಭವವೇ ಹೆಚ್ಚು. ಒಟ್ಟಿನಲ್ಲಿ, ಆಹಾರಧಾನ್ಯ ಸಗಟು ವ್ಯಾಪಾರ ರಾಷ್ಟ್ರೀಕರಣ ಮಹತ್ವಪೂರಿತ ಹಾಗೂ ಘಾಮಾರ್ಘಿತ ವಿಷಯವಾಗಿದೆ; ಈ ಕ್ರಮದ ಬಗ್ಗೆ ತೋರುತ್ತಿರುವ ಆತುರ ಸಲ್ಲದು. ನಿಷ್ಪಕ್ಷಪಾತ ಅಧ್ಯಯನ, ಕೂಲಂಕಷ ಚರ್ಚೆ ಇವುಗಳಿಗೆ ಸ್ವಲ್ಪ ಕಾಲ ಕೊಡುವುದರಿಂದ ದೇಶಕ್ಕೆ ಪ್ರಯೋಜನವುಂಟು.

ಬಿ. ಎಸ್. ಚಂದ್ರಶೇಖರ

ಸಮುದಾಯಸಂಪರ್ಕಮಾಧ್ಯಮಗಳಲ್ಲಿ ಕ್ರೌರ್ಯ, ಅಪರಾಧ

ಸಮುದಾಯ ಸಂಪರ್ಕ ಮಾಧ್ಯಮಗಳಲ್ಲಿ ಹೇರಳವಾಗಿರುವ ಹಿಂಸೆ, ಕ್ರೌರ್ಯ, ಅಪರಾಧಗಳ ಚಿತ್ರಣಗಳಿಂದ ಪ್ರೇಕ್ಷಕರ ಮೇಲೆ ಆಗಬಹುದಾದ ಪರಿಣಾಮಗಳನ್ನು ಕುರಿತು ವಿಚಾರವಂತರು ಆಗಾಗ ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ. ಈಚೆಗೆ ನಮ್ಮ ದೇಶದಲ್ಲಿ ಈ ಸಮಸ್ಯೆಯ ವಿಚಾರವಾಗಿ—ಮುಖ್ಯವಾಗಿ ಚಲನಚಿತ್ರದಲ್ಲಿರುವ ಹಿಂಸೆಯ ದೃಶ್ಯಗಳನ್ನು ಕುರಿತು—ಪ್ರಧಾನಮಂತ್ರಿಗಳು, ಸಮಾಚಾರ ಪ್ರಸಾರ ಮಂತ್ರಿಗಳು, ಸೆನ್ಸಾರ್ ಬೋರ್ಡಿನವರು ಚಲನಚಿತ್ರ ನಿರ್ಮಾಪಕರು, ನಟ–ನಟಿ–ನಿರ್ದೇಶಕರು, ಸಮಾಜಕಾರ್ಯಕರ್ತರು, ಚಿತ್ರ ಪ್ರೇಕ್ಷಕರು, ಹೀಗೆ ಎಲ್ಲ ರೀತಿಯ ಜನ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಸಮುದಾಯ ಸಂಪರ್ಕ ಮಾಧ್ಯಮಗಳಲ್ಲಿಯ ಹಿಂಸೆ–ಅಪರಾಧಗಳಿಂದಾಗಬಹುದಾದ ಪರಿಣಾಮಗಳು ಯಾವ ರೀತಿಯವು, ಇಂಥ ಪರಿಣಾಮಗಳನ್ನು ಕಂಡುಕೊಳ್ಳುವುದು ಹೇಗೆ, ಇಲ್ಲಿಯ ವರೆಗಿನ ವೈಜ್ಞಾನಿಕ ಸಂಶೋಧನೆಗಳಿಂದ ತಿಳಿದುಬಂದಿರುವ ಅಂಶಗಳಾವುವು ಎಂಬುದನ್ನು ಗಮನಿಸುವುದು ಅವಶ್ಯಕವೆನಿಸುತ್ತದೆ.

ಈಚೆಗೆ ಅಪರಾಧ, ಮೋಸ, ವಂಚನೆ, ಕಳ್ಳತನ, ಕೊಲೆ, ಆತ್ಮಹತ್ಯೆ ಹೆಚ್ಚುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ ಜನ ಹೆಚ್ಚಾಗಿ ಪತ್ತೇದಾರಿ ಕಥೆ, ಸಿನಿಮಾ, ಟೆಲಿವಿಷನ್ ನೋಡುತ್ತಿರುವುದೇ ಎಂದು ಕೆಲವರು ವಾದಿಸುತ್ತಾರೆ. ಆಗಾಗ ಪತ್ರಿಕೆಗಳಲ್ಲಿ ಬರುವ—ಯಾವುದೋ ಸಿನಿಮಾದಲ್ಲಿ ತೋರಿಸಿದ ತಂತ್ರವನ್ನು ಅನುಸರಿಸಿ ವಸ್ತು ಸಂಗ್ರಹಾಲಯದಲ್ಲಿಯ ಅಮೂಲ್ಯ ಕಲಾಕೃತಿಗಳನ್ನು ಕಳ್ಳರು ತುಂಬ ಚಮತ್ಕಾರಿಕವಾಗಿ ಸಾಗಿಸಿಕೊಂಡು ಹೋದುದು, ಇನ್ನೊಂದು ಕಡೆ ಬಾಲಕನೊಬ್ಬ ಟೆಲಿವಿಷನ್ ಕಾರ್ಯಕ್ರಮ ನೋಡುತ್ತ ಉದ್ರೇಕಗೊಂಡು ತನ್ನ ತಾಯಿಗೇ ಗುಂಡಿಟ್ಟು ಹೊಡೆದುದು ಮೊದಲಾದ—ವರದಿಗಳನ್ನು ಮಾಧ್ಯಮಗಳ ಹಾನಿಕಾರಕ ಪರಿಣಾಮಗಳಿಗೆ ಅನೇಕರು ನಿದರ್ಶನಗಳಾಗಿ ಕೊಡುತ್ತಾರೆ. ಅಮೆರಿಕದ ಗ್ಯಾಲಪ್ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಶೇಕಡ 70 ಜನ ಬಾಲಾಪರಾಧಕ್ಕೆ ಚಲನಚಿತ್ರಗಳು ಕಾರಣ ಎಂದರಂತೆ. ಆದರೆ ಇಂತಹ ವಿಷಯಗಳನ್ನು—ಮಾಧ್ಯಮದಲ್ಲಿಯ ವಸ್ತು ಅಪರಾಧ ಪ್ರವೃತ್ತಿಯನ್ನು ಹೆಚ್ಚಿಸುತ್ತದೆಯೆ, ಇಂತಹ ವಸ್ತುವಿನಿಂದ ಸಾಮಾಜಿಕವಾಗಿ ದುಷ್ಪರಿಣಾಮವಾಗುತ್ತದೆಯೋ ಎನ್ನುವುದನ್ನು—ಅಲ್ಲಲ್ಲಿಯ ಬಿಡಿ ಘಟನೆಗಳಿಂದಾಗಲಿ, ಬಹುಮತಾಭಿಪ್ರಾಯದಿಂದಾಗಲಿ ನಿರ್ಧರಿಸುವುದು ಸಾಧ್ಯವಿಲ್ಲ. ಯಾವುದೇ ತೀರ್ಮಾನಕ್ಕೆ ಬರಲು ವೈಜ್ಞಾನಿಕವಾಗಿ ನಡೆಸಿದ ಸಮೀಕ್ಷೆ ಪ್ರಯೋಗಗಳ ಆಧಾರ ಬೇಕಾಗುತ್ತದೆ. ಇಂಥ ವಸ್ತುವಿನಿಂದ ಕೆಟ್ಟ ಪರಿಣಾಮ ಆಗಿರುವುದಕ್ಕೆ ಅಥವಾ ಆಗದಿರುವುದಕ್ಕೆ ಸಂದೇಹಕ್ಕೆಡೆಯಿಲ್ಲದ ಸಾಕ್ಷ್ಯ ಬೇಕಾಗುತ್ತದೆ.

ಮಾಧ್ಯಮಗಳ ಜನಪ್ರಿಯತೆ

ಮಾಧ್ಯಮಗಳಲ್ಲಿಯ ಹಿಂಸೆ-ಅಪರಾಧ ಸನ್ನಿವೇಶಗಳು ಪ್ರೇಕ್ಷಕರ ಮೇಲೆ ಮಾಡಬಹುದಾದ ಪರಿಣಾಮವನ್ನೂ ಈ ಪರಿಣಾಮವನ್ನು ತಿಳಿಯುವ ರೀತಿಗಳನ್ನೂ ಚರ್ಚಿಸುವುದಕ್ಕೆ ಮುಂಚೆ ಒಂದು

ಮುಖ್ಯ ಸಂಗತಿಯನ್ನು ಗಮನಿಸಬೇಕು. ಇಂದಿನ ನಾಗರಿಕರ ದೈನಂದಿನ ಚಟುವಟಿಕೆಗಳಲ್ಲಿ ಸಮೂಹ ಮಾಧ್ಯಮಗಳ ಪ್ರಾಮುಖ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಮಾಧ್ಯಮಗಳ ಬಳಕೆ ತುಂಬ ಕಡಮೆಯೆನ್ನುವ ಭಾರತದಲ್ಲಿ ಚಲನಚಿತ್ರ ಮಂದಿರಗಳ ವಾರ್ಷಿಕ ಹಾಜರಾತಿ 2.190 ಮಿಲಿಯನ್. ಬೆಂಗಳೂರು ನಗರವೊಂದರಲ್ಲೇ ಇಲ್ಲಿರುವ 70ಕ್ಕಿಂತ ಹೆಚ್ಚು ಚಿತ್ರಮಂದಿರಗಳಲ್ಲಿ ಯಾವುದೇ ಭಾನುವಾರ ಒಂದೂವರೆ ಲಕ್ಷ ಜನ ಚಲನಚಿತ್ರ ನೋಡುತ್ತಾರೆ. ಒಂದು ವಾರದಲ್ಲಿ ಈ ನಗರವೊಂದರಲ್ಲೇ ಐದು ಲಕ್ಷ ಜನ ಚಲನಚಿತ್ರ ಮಂದಿರಗಳಿಗೆ ಭೇಟಿಕೊಡುತ್ತಾರೆ ಎಂದು ಅಂದಾಜು ಮಾಡಬಹುದು. ಈ ನಗರದ ಜನಸಂಖ್ಯೆ 17 ಲಕ್ಷ ಮಾತ್ರ. ಚಿತ್ರಮಂದಿರಗಳ ಸಂಖ್ಯೆ ಹೆಚ್ಚಾಗುತ್ತಿರುವಂತೆಯೇ ಆ ಮಂದಿರಗಳ ಮುಂದಿನ ಕ್ಯೂ ಸಹ ಹೇಗೆ ಬೆಳೆಯುತ್ತಿದೆ. ಚಿತ್ರ ನೋಡಬಯಸುವವರ ಸಂಖ್ಯೆ ಹೇಗೆ ಏರುತ್ತಿದೆ ಎನ್ನುವುದು ಎಲ್ಲರ ಗಮನಕ್ಕೂ ಬಂದಿದೆ. ಚಲನಚಿತ್ರಗಳಷ್ಟು ತೀವ್ರವಾಗಲ್ಲದಿದ್ದರೂ ಬೇರೆ ಮಾಧ್ಯಮಗಳ ಉಪಯೋಗದಲ್ಲೂ ಸಾಕಷ್ಟು ಪ್ರಗತಿಯಾಗುತ್ತಿದೆ. ಪತ್ರಿಕೆಗಳ, ಅದರಲ್ಲೂ ವಿನೋದ ಚಿತ್ರಕಥೆ, ಪತ್ತೇದಾರಿ, ಸಾಹಸ ಕಥೆಗಳನ್ನೊಳಗೊಂಡಿರುವ ನಿಯತಕಾಲಿಕಗಳ ಬೇಡಿಕೆ ಸಾಕಷ್ಟು ತೀವ್ರವಾಗಿ ಏರುತ್ತಿದೆ. ಪಾಶ್ಚಾತ್ಯ ದೇಶಗಳಲ್ಲಿ ಪ್ರತಿಕುಟುಂಬದಲ್ಲೂ ಟೆಲಿವಿಷನ್ ಸೆಟ್‌ಗಳಿವೆ. ಅಲ್ಲಿಯ ಒಂದು ಕುಟುಂಬ ದಿನಕ್ಕೆ ಸರಾಸರಿ 5ರಿಂದ 6 ಗಂಟೆಯ ವರೆಗೂ ಟೆಲಿವಿಷನ್ ಕಾರ್ಯಕ್ರಮವನ್ನು ನೋಡುವುದರಲ್ಲಿ ಕಳೆಯುತ್ತದೆ.

ಒಂದು ಕಡೆ ಜನರು ಮಾಧ್ಯಮಗಳೊಂದಿಗೆ ಕಳೆಯುವ ವೇಳೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮತ್ತೊಂದು ಕಡೆ ಮಾಧ್ಯಮದಲ್ಲಿಯ ವಸ್ತುವಿನಲ್ಲಿ ಹಿಂಸೆ ಅಪರಾಧಗಳ ಅಂಶ ಹೆಚ್ಚುತ್ತ ಬರುತ್ತಿದೆ. ಇಲ್ಲಿ ಮಾಧ್ಯಮಗಳೆಂದು ಹೇಳುವಾಗ ಒಂದು ವಿಚಾರವನ್ನು ಸ್ಪಷ್ಟಪಡಿಸಬೇಕು. ಎಲ್ಲ ಮಾಧ್ಯಮಗಳಲ್ಲೂ ಹಿಂಸೆ, ಅಪರಾಧ ತೀರ ಸಾಮಾನ್ಯವೇನಲ್ಲ. ಹೆಚ್ಚಿನ ದಿನಪತ್ರಿಕೆಗಳಲ್ಲಿ ರೇಡಿಯೋ ಕಾರ್ಯಕ್ರಮಗಳಲ್ಲಿ ಇಂಥ ವಸ್ತು ಕಂಡು ಬರುವುದು ಅಪರೂಪವಾಗಿ ಮಾತ್ರ. ಹಿಂಸೆ, ಅಪರಾಧಗಳ ಚಿತ್ರಣದಲ್ಲಿ ತುಂಬ ದೂಷಿತವಾದ ಮಾಧ್ಯಮಗಳೆಂದರೆ ವಿನೋದ ಚಿತ್ರಕಥೆಗಳು (ಕಾಮಿಕ್ ಸ್ಟ್ರಿಪ್ಸ್), ಪತ್ತೇದಾರಿ ಕಾದಂಬರಿಗಳು, ಚಲನಚಿತ್ರ ಮತ್ತು ಟೆಲಿವಿಷನ್. ಇಂದು ಸಾಧಾರಣವಾಗಿ ಎಲ್ಲ ದೇಶಗಳ ಎಲ್ಲ ಭಾಷೆಗಳ ಪತ್ರಿಕೆಗಳಲ್ಲಿ ವಿನೋದ ಚಿತ್ರಕತೆಗಳು ಅನಿವಾರ್ಯವೆನಿಸಿವೆ. ಕನ್ನಡದ ಪತ್ರಿಕೆಗಳಲ್ಲೇ ಈಗ ಕೆಲವೇ ವರ್ಷಗಳ ಹಿಂದೆ ಕೇವಲ ತಮಾಷೆಯ ಒಂದು ಚಿತ್ರಕಥೆ ಇರುತ್ತಿತ್ತು. ಇಂದು ಮೂರು-ನಾಲ್ಕು ಸರಣಿಗಳಿರುತ್ತವೆ. ಇವುಗಳಲ್ಲಿ ಒಂದೆರಡಾದರೂ ಸಾಹಸ-ಪತ್ತೆದಾರಿ ಕತೆಗಳು. ಚಲನಚಿತ್ರಗಳಿಗೆ ನಮ್ಮ ಜನಜೀವನದಲ್ಲಿ—ಅದರಲ್ಲೂ ಮಕ್ಕಳ, ಯುವಜನರ ಜೀವನದಲ್ಲಿ—ಇರುವ ಮಹತ್ವದ ಸ್ಥಾನದ ಬಗ್ಗೆ ಮೇಲೆ ಒಂದು ನಿದರ್ಶನ ಕೊಡಲಾಗಿದೆ. ಇಂಗ್ಲಿಷ್‌ನಲ್ಲಿ ಅರ್ಲ್ ಸ್ಟಾನ್ಲಿ ಗಾರ್ಡ್‌ನರ್, ಮಿಕಿ ಸ್ಪಿಲೇನ್ ಮೊದಲಾದವರ ಪತ್ತೆದಾರಿ ಕಾದಂಬರಿಗಳಿಗಿರುವ ಜನಪ್ರಿಯತೆ ಕನ್ನಡ ಮತ್ತಿತರ ಭಾಷೆಗಳಲ್ಲಿಯ ಪತ್ತೇದಾರಿ ಕಾದಂಬರಿಗಳಿಗಿಲ್ಲದಿದ್ದರೂ ಈ ಭಾಷೆಗಳಲ್ಲಿರುವ ಪತ್ತೇದಾರಿ ಕೃತಿಗಳನ್ನು ಓದುವವರ ಸಂಖ್ಯೆ ನಿರ್ಲಕ್ಷಿಸುವಂತಹುದೇನಲ್ಲ. ಕನ್ನಡದಲ್ಲಿ ಸಹ ಯಾವುದೇ ಪತ್ತೇದಾರಿ ಕಾದಂಬರಿಯ ಮೊದಲ ಮುದ್ರಣವೇ ಸುಮಾರು 10.000 ಪ್ರತಿಗಳಂತೆ. ಅತಿ ಜನಪ್ರಿಯ ಸಾಮಾಜಿಕ ಕಾದಂಬರಿ ಸಹ ಒಂದೆರಡು ಸಾವಿರಕ್ಕಿಂತ ಹೆಚ್ಚು ಮಾರಾಟವಾಗುವುದು ಕಷ್ಟ ಎಂಬುದು ಇಲ್ಲಿ ಗಮನಾರ್ಹ. ಟೆಲಿವಿಷನ್ ನಮ್ಮ ದೇಶದಲ್ಲಿ ಇನ್ನೂ ದೆಹಲಿ, ಮುಂಬಯಿ ಮೊದಲಾದ ನಾಲ್ಕಾರು ನಗರಗಳನ್ನು ಬಿಟ್ಟು ಹೊರಗೆ ಬಂದಿಲ್ಲವಾದರೂ, ಇನ್ನು 8–10 ವರ್ಷಗಳಲ್ಲಿ ದೇಶದ ಶೇಕಡ 80ರಷ್ಟು ಜನರಿಗೆ ಟೆಲಿವಿಷನ್ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಾಧ್ಯವಾಗಬಹುದೆಂದು ವರದಿಯಾಗಿದೆ. ಈ ಎಲ್ಲ ಅಂಶಗಳೂ ಮಾಧ್ಯಮದಲ್ಲಿಯ ಹಿಂಸೆಯಿಂದಾಗಬಹುದಾದ ಪರಿಣಾಮಗಳ ಬಗ್ಗೆ ಹೆಚ್ಚಿನ ಕಾಳಜಿ ತೋರಿಸುವುದು ಅಗತ್ಯವಾಗಿ ಮಾಡಿವೆ.

ಹಿಂಸೆಯ ರೀತಿ

ಈ ಮಾಧ್ಯಮಗಳಲ್ಲಿ ಕಂಡುಬರುವ ಹಿಂಸೆ, ಅಪರಾಧಗಳ ವಿವಿಧ ರೀತಿಗಳನ್ನು ವರ್ಣಿಸುವುದಕ್ಕೆ ಹಲವು ಪುಸ್ತಕಗಳಾದರೂ ಸಾಲದು. ಇಲ್ಲಿ ಹೆಚ್ಚಾಗಿ ದೂಷಿತವಾಗುವ ಹಿಂಸೆಯ ಕೆಲವು ರೀತಿಗಳನ್ನು

ಗಮನಿಸಬಹುದು. ಯಾವುದೇ ಚಲನಚಿತ್ರ, ಟೆಲಿವಿಷನ್ ಕಾರ್ಯಕ್ರಮ, ಪತ್ತೇದಾರಿ ಕಥೆ ಯಶಸ್ವಿಯಾಗಬೇಕಾದರೆ—ಎಂದರೆ ಜನಪ್ರಿಯವಾಗಬೇಕಾದರೆ—ಹೊಸಹೊಸ ರೀತಿಯಲ್ಲಿ ಅಪರಾಧವನ್ನು ಚಿತ್ರಿಸಬೇಕು, ಅಪರಾಧಿಗಳೊಂದಿಗೆ ಹೋರಾಡುವುದರಲ್ಲಿ ನವೀನ ಕೌಶಲ ತೋರಿಸಬೇಕು, ನಾಯಕ ಖಳನಾಯಕನಿಗೆ ಬೇರೆಬೇರೆ ಪಟ್ಟುಗಳನ್ನು, ವರಸೆಗಳನ್ನು ತೋರಿಸಬೇಕು.

ಹಿಂಸೆ–ಅಪರಾಧ ಚಿತ್ರಣದ ಒಂದು ಜನಪ್ರಿಯರೀತಿಯೆಂದರೆ ವಿನೋದ ಚಿತ್ರಕಥೆಗಳಲ್ಲಿಯ ಹೋರಾಟ, ಸಾಹಸಗಳು—ಫ್ಯಾಂಟಮ್, ಟಾರ್ಜಾನ್, ಡಾಬೂದಿನ ಸಾಹಸಗಳಲ್ಲಿ ಸಾಮಾನ್ಯವಾಗಿರುವ ಹೊಡೆದಾಟ ಬಡಿದಾಟಗಳು ಮತ್ತು ಬೀಭತ್ಸ ಚಿತ್ರಕತೆಗಳಲ್ಲಿ (ಹಾರರ್ ಕಾಮಿಕ್ಸ್) ಹೆಚ್ಚಾಗಿ ಕಂಡು ಬರುವ ಕೊಳೆತ ಹೆಣ, ಅಸ್ಥಿಪಂಜರ, ಚಾಟಿಯೇಟಿನ ಹೊಡೆತ, ಕಣ್ಣುಕೀಳುವುದು, ಹೆಂಗಸರ ಮೇಲೆ ಅತ್ಯಾಚಾರ, ಅಂಗಾಂಗಗಳ ವಿಚ್ಛೇದನೆ, ಬರೆ ಎಳೆಯುವುದು ಮುಂತಾದವು. ಎಲ್ಲ ವಿನೋದ ಚಿತ್ರಗಳನ್ನು ಒಟ್ಟಾರೆ ತೆಗೆದುಕೊಂಡರೆ ಯಾವುದೇ ಹದಿನಾಲ್ಕು ಬಿಡಿಚಿತ್ರಗಳಲ್ಲಿ ಒಂದರಲ್ಲಾದರೂ ಕ್ರೌರ್ಯದ ಸನ್ನಿವೇಶವಿರುತ್ತದೆ ಎಂದು ವಿಶ್ಲೇಷಿಸಲಾಗಿದೆ. ಕೇವಲ ಸಾಹಸ ಚಿತ್ರಕತೆಗಳನ್ನು ತೆಗೆದುಕೊಂಡರೆ ಮೂರು ಚಿತ್ರಗಳಲ್ಲಿ ಒಂದರಲ್ಲಾದರೂ ಕೊಲೆ, ಹೊಡೆದಾಟ ಇರುತ್ತವೆ. ಪತ್ತೇದಾರಿ ಕಾದಂಬರಿಗಳಲ್ಲೂ ಇಂಥವೇ ಘಟನೆಗಳ ವರದಿ ಇರುತ್ತದೆ. ಪತ್ತೇದಾರ ನಿಜವಾದ ಕೊಲೆಗಾರನನ್ನು ಬಂಧಿಸುವ ಮುನ್ನ ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶವಿಲ್ಲದೆ ಹಲವಾರು ಜನರ ಸಾವಿಗೆ ಕಾರಣನಾಗುತ್ತಾನೆ. ಇಂಥ ಕೆಲವು ಸಾವುಗಳ ವಿವರವಾದ ವರ್ಣನೆ ಕಾದಂಬರಿಯಲ್ಲಿ ತುಂಬಿರುತ್ತದೆ. ಚಲನಚಿತ್ರದಲ್ಲಿ ಹಿಂಸೆಗೆ ಇನ್ನೂ ಮುಖ್ಯವಾದ ಸ್ಥಾನವಿರುತ್ತದೆ. ಹಾಲಿವುಡ್‌ನ ಕೌಬಾಯ್ ಮತ್ತು ವೆಸ್ಟರ್ನ್ ಜಾತಿಯ ಚಿತ್ರಗಳಲ್ಲಿ ರೆಡ್ ಇಂಡಿಯನರ ಮತ್ತು ಬಿಳಿ ಜನರ ನಡುವಿನ ಸತತ ಹೋರಾಟವನ್ನು ಹೊಸಹೊಸ ರೀತಿಯಲ್ಲಿ ಚಿತ್ರಿಸಲಾಗುತ್ತಿದೆ. ಇಲ್ಲಿ ಸಾಯುವವರ ಸಂಖ್ಯೆಗೆ ಲೆಕ್ಕವಿಲ್ಲ. ಸಾಯಿಸಲು ಯಾವ ಕಾರಣವೂ ಬೇಕಾಗಿಲ್ಲ. ಗುಂಡು ತುಂಬಿದ ಬಂದೂಕವನ್ನು ಗುಂಪಿನತ್ತ ತಿರುಗಿಸಿದರೆ ಸಾಕು. ಸಾಲು ಸಾಲು ಹೆಣ. ಸಮರ ಚಿತ್ರಗಳಲ್ಲೂ ಕಗ್ಗೊಲೆ ತೀರ ಸಾಮಾನ್ಯ. ಹಿಂಸೆ–ಕ್ರೌರ್ಯದ ದೃಶ್ಯಗಳಿಗೆ ಇಂದಿನ 'ಸಾಮಾಜಿಕ' ಚಿತ್ರದ ಯಶಸ್ಸಿನ ಫಾರ್ಮುಲಾದಲ್ಲಿ ಮುಖ್ಯ ಪಾತ್ರವಿದೆ. ಕೆಲವು ನಟರಿದ್ದರೆ ಹೊಡೆದಾಟದ ದೃಶ್ಯಗಳನ್ನೇ ಪ್ರೇಕ್ಷಕರು ನಿರೀಕ್ಷಿಸುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಹಿಂಸೆಯ ವಿಚಾರದಲ್ಲಿ ಚಲನಚಿತ್ರಕ್ಕಿಂತ ಹೆಚ್ಚು ದೂಷಣೆಗಳಿಗೊಳಗಾಗಿರುವ ಮಾಧ್ಯಮ ಟೆಲಿವಿಷನ್. ಇಲ್ಲೂ ಜನಪ್ರಿಯಕಾರ್ಯಕ್ರಮಗಳೆಂದರೆ ಸಾಹಸಕತೆಗಳು. ಐದು ವರ್ಷದ ಮಗು ಹದಿನಾಲ್ಕು ವರ್ಷ ಮುಟ್ಟುವ ಹೊತ್ತಿಗೆ ಟೆಲಿವಿಷನ್ ಪರದೆಯ ಮೇಲೆ 13,000 ಜನರು ನಾಶವಾಗುವುದನ್ನು ನೋಡುತ್ತಾನೆ ಎಂದು ಒಬ್ಬರು ಅಂದಾಜು ಮಾಡಿದ್ದಾರೆ.

ಆರೋಪಗಳು

ಇದು ಹಿಂಸೆಯ ಚಿತ್ರಣದ ರೀತಿ. ಇದರಿಂದಾಗಬಹುದಾದ ಪರಿಣಾಮಗಳನ್ನು ಕುರಿತ ಕೆಲವು ಆರೋಪಗಳನ್ನು ಈಗ ನೋಡೋಣ. ಕೆಲವರು ಇಂಥ ದೃಶ್ಯಗಳನ್ನು ನೋಡುವುದರಿಂದ ಮಕ್ಕಳು ಅಡ್ಡದಾರಿಗೆ ಹೋಗುತ್ತಾರೆ, ಜನ ಕೆಡುತ್ತಾರೆ ಎನ್ನುವ ಸಾಮಾನ್ಯ ಆರೋಪ ಮಾಡಿದರೆ ಮತ್ತೆ ಕೆಲವರು ಇದರಿಂದಾಗುವ ಹಲವು ಪರಿಣಾಮಗಳನ್ನು ವರ್ಣಿಸುತ್ತಾರೆ. ಜನ ಈ ಹಿಂಸೆಯ ರೀತಿಯನ್ನು ಅನುಕರಿಸುತ್ತಾರೆ. ಚಲನಚಿತ್ರದಲ್ಲಿ ಕಿಸೆಗಳ್ಳತನ ಮಾಡುವುದನ್ನು ನೋಡಿ ದುಡ್ಡು ಹಾರಿಸುವ ವಿಧಾನವನ್ನು ಕಲಿಯುತ್ತಾರೆ; ಮೂಗಿನ ಮೇಲೆ, ಹೊಟ್ಟೆಯ ಮೇಲೆ ಹೊಡೆಯುವುದನ್ನು ಕಂಡು ಅದನ್ನು ಬೇರೆಯವರ ಮೇಲೂ ಪ್ರಯೋಗಿಸುತ್ತಾರೆ ಎನ್ನುತ್ತಾರೆ. ಕೆಲವರಂತೂ ಟೆಲಿವಿಷನ್ ಚಲನಚಿತ್ರಗಳನ್ನು ಅಪರಾಧಗಳ ತರಬೇತಿ ಶಾಲೆ ಎಂದು ವರ್ಣಿಸಿದ್ದಾರೆ. ಇಂಥ ಚಿತ್ರಗಳನ್ನು ಸತತವಾಗಿ ನೋಡುವುದರಿಂದ ಸಹಜವರ್ತನೆಯ ಜನರೂ ತುಂಬ ಒತ್ತಡದ ಪರಿಸ್ಥಿತಿಯಲ್ಲಿ ಆಕ್ರಮಣಕಾರಿ ಮನೋವೃತ್ತಿಯನ್ನು ಪ್ರದರ್ಶಿಸುವಂತಾಗುತ್ತದೆ. ಮಾಧ್ಯಮದ ಈ ವಸ್ತು ಇಂಥ ಪ್ರವೃತ್ತಿಗಳನ್ನು ಬಿಡುಗಡೆಮಾಡುವ ಕೀಲಿಕೈಯಂತೆ ಕೆಲಸ ಮಾಡುತ್ತದೆ ಎಂದು ಇನ್ನು ಕೆಲವರು ಹೇಳುತ್ತಾರೆ. ಇಂಥ ಕೊಲೆ– ಹೊಡೆದಾಟಗಳನ್ನು ಸತತವಾಗಿ ನೋಡುತ್ತಿದ್ದರೆ ಜನರ—ಅದರಲ್ಲೂ ಮಕ್ಕಳ—ದೃಷ್ಟಿಯಲ್ಲಿ ಮಾನವಜೀವನದ ಬೆಲೆಯೇ ಕಡಿಮೆ

ಯಾಗುತ್ತದೆ ಎಂಬುದು ಮತ್ತೆ ಕೆಲವರ ಅಭಿಪ್ರಾಯ. ನೋವು, ನರಳುವಿಕೆಯ ಬಗ್ಗೆ ಅನುಕಂಪದ ಬದಲು ಉದಾಸೀನತೆ ಬೆಳೆಯುತ್ತದೆ ಎಂದು ಭಾವಿಸುತ್ತಾರೆ. ಇವುಗಳಿಗೆ ವಿರುದ್ಧವಾಗಿ ಅಭಿಪ್ರಾಯ ವ್ಯಕ್ತಪಡಿಸಿರುವವರೂ ಉಂಟು. ಇಂಥ ಚಿತ್ರಗಳನ್ನು ನೋಡುವುದರಿಂದ ಸಾಮಾಜಿಕವಾಗಿ, ಮಾನಸಿಕವಾಗಿ ಕೆಡುಕಾಗುವಂತೆ ಆಕ್ರಮಣಕಾರಿ ಪ್ರವೃತ್ತಿಗಳನ್ನು ಹೊರಹಾಕಲು ಒಂದು ಒಳ್ಳೆಯ ಅವಕಾಶ ಸಿಗುತ್ತದೆ. ಇಂಥ ಪ್ರವೃತ್ತಿಗಳನ್ನು ಹೊರಹಾಕಲು ಒಂದು ಪರಾತ್ಮಕದಾರಿ ಒದಗಿಸುವುದರ ಮೂಲಕ ಇಂಥ ವಸ್ತುವಿನಿಂದ ಸಾಮಾಜಿಕವಾಗಿ ಒಳಿತೇ ಆಗುತ್ತದೆ ಎಂದು ಅವರು ವಾದಿಸುತ್ತಾರೆ.

ಪರಿಣಾಮಗಳನ್ನು ಕಂಡುಕೊಳ್ಳುವ ವಿಧಾನಗಳು

ಇಂದು ಜನರು ಸಮೂಹ ಸಂಪರ್ಕ ಮಾಧ್ಯಮಗಳೊಂದಿಗೆ ಹೆಚ್ಚು ಹೆಚ್ಚು ವೇಳೆ ಕಳೆಯುತ್ತಿದ್ದಾರೆ. ಮಾಧ್ಯಮಗಳಲ್ಲಿ ಹಿಂಸೆಯ ದೃಶ್ಯಗಳು ಹೆಚ್ಚಾಗುತ್ತಿವೆ ಮತ್ತು ಇದೇ ಸಂದರ್ಭದಲ್ಲಿ ಎಲ್ಲಾ ಸಮಾಜಗಳಲ್ಲಿಯೂ ಹಿಂಸಾಚಾರ ಹೆಚ್ಚುತ್ತಿದೆ. ಈ ಸಂಗತಿಗಳಿಗೆ ಪರಸ್ಪರ ಸಂಬಂಧವುಂಟು. ಹಿಂಸಾಚಾರ ಹೆಚ್ಚುತ್ತಿರುವುದಕ್ಕೆ ಮಾಧ್ಯಮಗಳಲ್ಲಿಯ ಹಿಂಸೆಯ ಚಿತ್ರಣ ಒಂದು ಮುಖ್ಯ ಕಾರಣ ಎನ್ನುವ ವಾದ ಮೇಲ್ನೋಟಕ್ಕೆ ತರ್ಕಬದ್ಧ ಎನ್ನಿಸುತ್ತದೆ. ಆದರೆ ಕೊಂಚ ಆಳವಾಗಿ ನೋಡಿದಾಗ ಇಂಥ ಬಗೆಯ ಸರಳ ಸಂಬಂಧ ಇರುವುದರ ಬಗ್ಗೆ ಅನುಮಾನಗಳೇಳುತ್ತವೆ. ಇಂದಿನ ಮಕ್ಕಳು ಹಿಂದಿನ ಕಾಲದ ಮಕ್ಕಳಿಗಿಂತ ಬೇರೆ ರೀತಿ ವರ್ತಿಸುತ್ತಿದ್ದರೆ ಅದಕ್ಕೆ ಹಲವು ಕಾರಣಗಳಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಇಂದಿನ ಮಕ್ಕಳು ಬೆಳೆಯುವ ಪರಿಸರ ಮೂಲಭೂತವಾಗಿ ಬದಲಾಗಿದೆ. ಪ್ರಪಂಚದ ಜನಸಂಖ್ಯೆ ವಿಪರೀತ ಏರಿದೆ. ನಗರೀಕರಣ ತೀವ್ರವಾಗಿದೆ. ಜನ ತಮಗೆ ಪರಿಚಯವಿಲ್ಲದವರೊಡನೆ ಬಾಳುವುದು ಇಂದು ಅನಿವಾರ್ಯ. ಜನರ ಆದಾಯದಲ್ಲಿ ಅಪೂರ್ವ ಹೆಚ್ಚಳವಾಗಿದೆ. ಹಲವರ ಜೀವನ ಮಟ್ಟ ಸಾಕಷ್ಟು ಸುಧಾರಿಸಿದೆ. ಇವರಿಗೆ ಹೆಚ್ಚಿನ ಬಿಡುವುಂಟು. ಇಂದು ಅನೇಕ ತಾಯಂದಿರು ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ ದುಡಿಯುತ್ತಿದ್ದಾರೆ. ಇವುಗಳಿಂದಾಗಿ ಕುಟುಂಬ ಜೀವನದ ಅರ್ಥ ಪೂರ್ಣವಾಗಿ ಬದಲಾಗಿದೆ. ಇಂದಿನ ಮಕ್ಕಳ ವರ್ತನೆಯಲ್ಲಿ ಆಗಿರುವ ವ್ಯತ್ಯಾಸಗಳನ್ನು ನೋಡುವಾಗ ಈ ಎಲ್ಲ ಸಂಗತಿಗಳನ್ನು ಗಮನಿಸಬೇಕು. ಎಲ್ಲಕ್ಕೂ ಸಮೂಹ ಸಂಪರ್ಕ ಮಾಧ್ಯಮಗಳನ್ನೇ ಹೊಣೆಮಾಡುವುದು ತಪ್ಪಾಗುತ್ತದೆ.

ಮಾಧ್ಯಮಗಳ ಹಿಂಸೆ, ಅಪರಾಧಗಳಿಂದ ಆಗಬಹುದಾದ ಪರಿಣಾಮಗಳನ್ನು ವೈಜ್ಞಾನಿಕವೆಂದು ಒಪ್ಪಿಕೊಳ್ಳಬಹುದಾದ ಮೂರು ವಿಧಾನಗಳಲ್ಲಿ ಗುರುತಿಸುವುದು ಸಾಧ್ಯ:1 ಇಂಥ ವಸ್ತುಗಳಲ್ಲಿ ಹೆಚ್ಚು ಆಸಕ್ತರಾಗಿರುವ ಮತ್ತು ಅಷ್ಟಾಗಿ ಆಸಕ್ತರಾಗಿಲ್ಲದ ಮಕ್ಕಳ ವರ್ತನೆಯ ರೀತಿಗಳನ್ನು ಅಭ್ಯಸಿಸಿ ಇವೆರಡೂ ಗುಂಪುಗಳ ನಡುವೆ ವ್ಯತ್ಯಾಸವಿದೆಯೇ ಎಂದು ನೋಡುವುದು. 2 ಹಿಂಸೆ ಅಪರಾಧಗಳ ಚಿತ್ರಣವನ್ನು ನಿಯಂತ್ರಿತ ಪರಿಸ್ಥಿತಿಯಲ್ಲಿ ಮಕ್ಕಳ ಮುಂದೆ ಪ್ರದರ್ಶಿಸಿ ಅವರ ಪ್ರತಿಕ್ರಿಯೆಗಳನ್ನು ಗಮನಿಸುವುದು. 3 ಹಿಂಸಾ ಮನೋವೃತ್ತಿಯನ್ನು ಹೆಚ್ಚಾಗಿ ಪ್ರಕಟಿಸುತ್ತಿರುವ ಕೆಲವರನ್ನು ಆಳವಾಗಿ ಪರೀಕ್ಷಿಸಿ ಈ ಪ್ರವೃತ್ತಿಗಳಿಗೆ ಕಾರಣವನ್ನು ಹುಡುಕಿ ಅದರಲ್ಲಿ ಮಾಧ್ಯಮಗಳ ಪಾತ್ರವೆಂತಹುದು ಎಂದು ನೋಡುವುದು. ಈ ಮೂರು ರೀತಿಗಳಲ್ಲೂ ಅಧ್ಯಯನಗಳು ನಡೆದಿವೆ. ಈ ಅಧ್ಯಯನದ ವಿಧಾನಗಳನ್ನೂ ಅವುಗಳಿಂದ ಬಂದಿರುವ ತೀರ್ಮಾನಗಳನ್ನೂ ಈಗ ಗಮನಿಸಬಹುದು.

ಸಮಾಜವಿಜ್ಞಾನ ತಂತ್ರ

ಹಿಂಸೆಯ ಕಾರ್ಯಕ್ರಮಗಳಲ್ಲಿ ಹೆಚ್ಚು ಆಸಕ್ತರಾಗಿರುವ ಮತ್ತು ಈ ಕಾರ್ಯಕ್ರಮಗಳನ್ನು ಅಷ್ಟಾಗಿ ನೋಡದ ಮಕ್ಕಳನ್ನು ಬೇರೆ ಎಲ್ಲಾ ಅಂಶಗಳಲ್ಲಿಯೂ ಹೋಲಿಸಲು ಸಾಧ್ಯವಾಗಿರುವಂಥ ಎರಡು ಗುಂಪುಗಳಾಗಿ ಸಮಾಜವಿಜ್ಞಾನಿಗಳು ವಿಂಗಡಿಸಿ, ಈ ಗುಂಪುಗಳ ಆಸಕ್ತಿ, ಚಟುವಟಿಕೆ, ಅಭ್ಯಾಸ ಮುಂತಾದವನ್ನು ಪರಿಶೀಲಿಸಿದ್ದಾರೆ. ಹಿಂಸೆಯ ಕಾರ್ಯಕ್ರಮಗಳನ್ನು ಹೆಚ್ಚು ನೋಡುವ ಮಕ್ಕಳು ಬೇರೆ ಮಕ್ಕಳಿಗಿಂತ ವಿಶೇಷವೆನ್ನಬಹುದಾದ ಅಪರಾಧ ಮನೋವೃತ್ತಿಯನ್ನಾಗಲಿ ಆಕ್ರಮಣಕಾರಕ ಚಟುವಟಿಕೆಗಳನ್ನಾಗಲಿ ತೋರಿಸುವುದು ಇಂಥ ಅಧ್ಯಯನಗಳಲ್ಲಿ ಕಂಡುಬಂದಿಲ್ಲ. ಅಲ್ಲದೆ ಹಿಂಸೆಯ ಕಾರ್ಯಕ್ರಮಗಳ

ಅಭಿಮಾನಿ ಬಾಲಕರು ಶಾಲಾ ಚಟುವಟಿಕೆಗಳಲ್ಲಿ ಹಿಂದೆ ಬೀಳುವುದಾಗಲಿ, ಶಾಲೆಗಳಿಂದ ತಪ್ಪಿಸಿಕೊಳ್ಳುವುದಾಗಲಿ, ಇತರ ರೀತಿಯ ಅನಪೇಕ್ಷಣೀಯ ಅಭ್ಯಾಸಗಳನ್ನು ಬೇರೆ ಬಾಲಕರಿಗಿಂತ ಹೆಚ್ಚಾಗಿ ಹೊಂದಿರುವುದಾಗಲಿ ಕಂಡುಬಂದಿಲ್ಲ. ಆದರೆ ಕೆಲವು ಅಧ್ಯಯನಗಳಲ್ಲಿ ಹಿಂಸೆಯ ತೀವ್ರ ಅಭಿಮಾನಿಗಳ ಕೆಲವು ವಿಶೇಷ ವ್ಯಕ್ತಿತ್ವ ಲಕ್ಷಣಗಳನ್ನು ಗುರುತಿಸುವುದು ಸಾಧ್ಯವಾಗಿದೆ. ಇಂಥ ಮಕ್ಕಳು ತಮ್ಮ ಪರಿಸರದೊಂದಿಗೆ ಸರಿಯಾದ ಹೊಂದಾಣಿಕೆ ಇಲ್ಲದವರಾಗಿರುತ್ತಾರೆ. ಸಮವಯಸ್ಕರೊಡನೆ ಹೆಚ್ಚಿನ ಒಡನಾಟ ಹೊಂದಿರುವುದಿಲ್ಲ. ಹಲವಾರು ಕಾರಣಗಳಿಂದ ಈ ರೀತಿ ತೊಂದರೆಗೊಳಗಾದ ಮಕ್ಕಳು ಮಾಧ್ಯಮದ ಹಿಂಸೆಯ ಕಾರ್ಯಕ್ರಮಗಳ ಭಕ್ತರಾಗುತ್ತಾರೆ. ಅಂಥ ವಸ್ತುವನ್ನು ನೋಡಿ ಖುಷಿಪಡುತ್ತಾರೆ. ಅಂದರೆ ಮಾಧ್ಯಮದ ಹಿಂಸೆಯಿಂದ ಮಕ್ಕಳ ಮೇಲೆ ಪರಿಣಾಮ ಆಗುತ್ತದೆ ಎಂದು ಹೇಳಲಾಗುವುದಿಲ್ಲವಾದರೂ ಮೊದಲೇ ತೊಂದರೆಗೊಳಗಾದ ಮಕ್ಕಳು ಮಾಧ್ಯಮದ ಹಿಂಸೆಯ ತೀವ್ರ ಅಭಿಮಾನಿಗಳಾಗುವುದು ಸಾಧ್ಯ.

ಸಮುದಾಯ ಸಂಪರ್ಕದಿಂದ ಮೊದಲೇ ಇರುವ ಅಭ್ಯಾಸಗಳು ಅಭಿಪ್ರಾಯ ಅಭಿವೃತ್ತಿಗಳು ಬಲಪಡುತ್ತವಷ್ಟೆ. ಇದು ತನ್ನಷ್ಟರಿಂದಲೇ ಹೊಸ ಅಭಿಪ್ರಾಯ ಅಭಿವೃತ್ತಿಗಳನ್ನು ಬೆಳೆಸಲಾರದು ಎಂದು ಸಮಾಜವಿಜ್ಞಾನಿಗಳು ಹೇಳುತ್ತಾರೆ.ಹಿಂಸೆಯ ಮನೋಭಾವವನ್ನು ಬೆಳೆಸಿಕೊಂಡಿರುವ ಮಕ್ಕಳಿಗೆ ಆ ಮನೋಭಾವವನ್ನು ಬಲಪಡಿಸುವಷ್ಟು ಮಾತ್ರ ಮಾಧ್ಯಮದ ಪ್ರಭಾವವಾಗುತ್ತದೆ. ಸರಿಯಾದ ಹೊಂದಾಣಿಕೆ ಇರುವ ಮಕ್ಕಳು ಮಾಧ್ಯಮದಿಂದ ಹಿಂಸೆಯನ್ನು ಕಲಿಯುವುದಿಲ್ಲ. ಯಾವುದೇ ಮಗುವಿನಲ್ಲಿ ಆಕ್ರಮಣಕಾರಿ ಪ್ರವೃತ್ತಿ ಬೆಳೆದಿದ್ದರೆ ಅದಕ್ಕೆ ಅವನು ಬೆಳೆಯುತ್ತಿರುವ ವಾತಾವರಣ, ಅವನ ತಂದೆ–ತಾಯಿಗಳು, ಅಣ್ಣ–ಅಕ್ಕಂದಿರು, ಶಾಲೆ–ಶಿಕ್ಷಕರು, ಸ್ನೇಹಿತರು ಮುಖ್ಯ ಕಾರಣರಾಗುತ್ತಾರೆ. ಇಂಥ ಪ್ರಭಾವಗಳಿಂದ ಈಗಾಗಲೇ ಆಕ್ರಮಣಕಾರಿ ಪ್ರವೃತ್ತಿಗಳನ್ನು ಬೆಳೆಸಿಕೊಂಡಿರುವ ಮಗುವಿಗೆ ಅದನ್ನು ದೃಢಪಡಿಸಿಕೊಳ್ಳುವಷ್ಟರ ಮಟ್ಟಿಗೆ ಮಾಧ್ಯಮ ಸಹಾಯಕವಾಗುತ್ತದೆ ಎಂಬುದು ಸಮಾಜ ವಿಜ್ಞಾನಿಗಳ ವಾದ.

ಈ ವಾದಕ್ಕೆ ಸಮರ್ಥನೆ ಎನಿಸುವ ಒಂದು ಸಂಗತಿಯನ್ನು ನಮ್ಮ ಸುತ್ತಮುತ್ತ ಗಮನಿಸಬಹುದು. ಕತ್ತಿವರಸೆ, ದೊಣ್ಣೆವರಸೆ, ಮುಷ್ಟಿ ಕಾಳಗಗಳು ತುಂಬಿರುವ ಸ್ಟಂಟ್ ಚಲನಚಿತ್ರಗಳನ್ನು ಹೆಚ್ಚು ಕಡಿಮೆ ಎಲ್ಲ ವರ್ಗಗಳ ಎಲ್ಲ ತರಹದ ಮಕ್ಕಳೂ ನೋಡುತ್ತಾರೆ. ಆದರೆ ಅಲ್ಲಿಯ ದೊಣ್ಣೆ ವರಸೆಗಳನ್ನು ಮನೆಯ ಮುಂದೆ ಅಭ್ಯಾಸ ಮಾಡುವವರು ಕೆಲವೇ ಬಾಲಕರು—ಮನೆಯಲ್ಲಿ ಸರಿಯಾದ ಮೇಲ್ವಿಚಾರಣೆಯಿಲ್ಲದ, ಸರಿಯಾದ ಹೊಂದಾಣಿಕೆ ಇಲ್ಲದ ಮಕ್ಕಳು. ಈ ಚಿತ್ರಗಳನ್ನು ಆಸಕ್ತಿಯಿಂದ ನಿರೀಕ್ಷಿಸುವ ಇಂಥ ಚಟುವಟಿಕೆಗಳ ಆವಶ್ಯಕತೆ ಹೆಚ್ಚಾಗಿರುವ ಮಕ್ಕಳ ಮೇಲೆ ಮಾತ್ರ ಇವುಗಳ ಪ್ರಭಾವ ತೋರುತ್ತದೆ.

ಮನೋವಿಜ್ಞಾನ ವಿಧಾನ

ಮಾಧ್ಯಮಗಳಿಂದ. ಹಿಂಸೆಯ ದೃಶ್ಯಗಳಿಂದ ಆಗಬಹುದಾದ ಪರಿಣಾಮಗಳನ್ನು ನೋಡುವ ಎರಡನೆಯ ರೀತಿ. ಮನೋವಿಜ್ಞಾನಿಗಳು ಪ್ರಯೋಗಶಾಲೆಯಲ್ಲಿ ನಡೆಸುವ ಅಧ್ಯಯನಗಳು. ಇಲ್ಲಿ ನಿಯಂತ್ರಿತ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಹಿಂಸೆಯನ್ನು ಚಿತ್ರಿಸುವ ಹಲವು ರೀತಿಯ ವಸ್ತುಗಳನ್ನು ತೋರಿಸಿ ಅವರ ಪ್ರತಿಕ್ರಿಯೆಗಳನ್ನು ಗಮನಿಸಲಾಗುತ್ತದೆ. ಇಂಥ ಹಲವು ಅಧ್ಯಯನಗಳ ಫಲಿತಾಂಶಗಳನ್ನು ಕ್ರೋಡೀಕರಿಸಿ ಹೇಳುವುದಾದರೆ, ಹಿಂಸೆಯ ವಸ್ತುಗಳನ್ನು ನೋಡುವುದರಿಂದ ಎರಡು ರೀತಿಯ ಪರಿಣಾಮ ಸಾಧ್ಯ. ಒಂದು, ಹಿಂಸೆಯನ್ನು ನೋಡುವುದರಿಂದ ಇಂಥ ಚಟುವಟಿಕೆಗಳ ಬಗೆಗೆ ಮೊದಲಿದ್ದ ಭಯ ಕಡಿಮೆಯಾಗುತ್ತದೆ. ಎರಡು, ಇಂಥ ವಸ್ತು ಅದರ ಪ್ರೇಕ್ಷಕರಿಗೆ ಅಗತ್ಯವೆನಿಸಿದಾಗ ಉಪಯೋಗಕ್ಕೆ ಬರುವ ಆಕ್ರಮಣದ ರೀತಿಗಳನ್ನು ಕಲಿಸುತ್ತದೆ—ಎಲ್ಲಿ ಹೊಡೆಯಬೇಕು, ಹೇಗೆ ಹೊಡೆಯಬೇಕು ಇತ್ಯಾದಿ. ಸಾಮಾನ್ಯ ನಡತೆಯ ಒಬ್ಬ ಬಾಲಕ ಸಹ ಇಂಥ ಕಾರ್ಯಕ್ರಮಗಳನ್ನು ನೋಡುತ್ತಲೇ ಇದ್ದರೆ ಎಂದಾದರೂ ಒಂದು ದಿನ ಒತ್ತಡ ಪರಿಸ್ಥಿತಿಯಲ್ಲಿ ಅನಾಮತ್ತಾಗಿ ಆಕ್ರಮಣ ಮಾಡುವುದು ಸಾಧ್ಯವೆಂದು. ಇಂಥ ಕಾರ್ಯಕ್ರಮಗಳು ಹಿಂಸಾ ಚಟುವಟಿಕೆಗಳನ್ನು ಟ್ರಿಗರ್ ಮಾಡಬಹುದೆಂದು ಈ ಪ್ರಯೋಗಗಳಿಂದ

ತಳೆದು ಬರುತ್ತದೆ. ಆದರೆ ಮೂರು ಪರಿಸ್ಥಿತಿಗಳಲ್ಲಿ ಮಾಧ್ಯಮದ ವಸ್ತುಗಳಿಂದ ಕಲಿತ ಹಿಂಸಾ–ಪ್ರವೃತ್ತಿ ಪ್ರಕಟವಾಗಬಹುದು. ಒಂದು. ಹಿಂಸೆಯ ರೀತಿಗಳನ್ನು ಆ ಬಾಲಕ ಎಷ್ಟರಮಟ್ಟಿಗೆ ಒಪ್ಪಿಕೊಳ್ಳುತ್ತಾನೆ ಎನ್ನುವುದು. ಎರಡು. ಅವನ ಮನಸ್ಸಿನಲ್ಲಿ ಹಿಂಸಾಚಾರದ ವಿರುದ್ಧ ಭಾವನೆಗಳು ಎಷ್ಟು ಆಳವಾಗಿವೆ ಎನ್ನುವುದು. ಮೂರು. ಮಾಧ್ಯಮದಲ್ಲಿ ಕಲಿತ ಹಿಂಸಾಪ್ರವೃತ್ತಿಯನ್ನು ಪ್ರಚೋದಿಸುವಂಥ ಘಟನೆಗಳನ್ನು, ವ್ಯಕ್ತಿಗಳನ್ನು ಆ ಬಾಲಕ ನಿಜಜೀವನದಲ್ಲಿ ಎದುರಿಸುತ್ತಾನೆಯೋ ಎನ್ನುವುದು. ಒಂದು ಉದಾಹರಣೆಯ ಮೂಲಕ ಈ ಮಾತನ್ನು ಸ್ಪಷ್ಟಪಡಿಸಬಹುದು. ಹಿಂಸೆಯ ದೃಶ್ಯಗಳನ್ನು ಒಳಗೊಂಡಿರುವ ಒಂದು ಚಲನಚಿತ್ರವನ್ನು ಒಬ್ಬ ಬಾಲಕ ನೋಡುತ್ತಿರುವಾಗ, ಅದರಲ್ಲಿರುವ ಖಳನಾಯಕನನ್ನು ನಾಯಕ ಗುದ್ದುತ್ತಿರುವುದನ್ನು ಕಂಡರೆ ಈ ಬಾಲಕನಲ್ಲಿ ಕೆಲವು ರೀತಿಯ ಆಕ್ರಮಣಕಾರಿ ಪ್ರವೃತ್ತಿಗಳು ತಾತ್ಕಾಲಿಕವಾಗಿ ಪ್ರಚೋದಿತವಾಗಬಹುದು. ತಾನೂ ಹಾಗೆಯೇ ಯಾರನ್ನಾದರೂ ಗುದ್ದಬಹುದಲ್ಲ, ಎನಿಸಬಹುದು. ಆದರೆ ಈ ವರ್ತನೆ ಪ್ರಕಟವಾಗಬೇಕಾದರೆ ಆಕ್ರಮಣಕಾರಕ ಚಟುವಟಿಕೆಗಳ ಬಗ್ಗೆ ಇವನ ಮನೋಭಾವವೆಂಥದು, ಬೇರೊಬ್ಬರನ್ನು ಗುದ್ದುವುದು ತಪ್ಪು ಎಂದು ಇವನು ಎಷ್ಟು ಗಾಢವಾಗಿ ನಂಬುತ್ತಾನೆ–ಎನ್ನುವುದು ಮುಖ್ಯವಾಗುತ್ತದೆ. ಈ ಪರಿಸ್ಥಿತಿಗಳಿದ್ದು ಆ ಬಾಲಕ ಆಕ್ರಮಣಕಾರಿ ಪ್ರವೃತ್ತಿಯನ್ನು ತೋರಿಸಲು ತಯಾರಾಗಿದ್ದರೆ, ಆ ಚಿತ್ರದಲ್ಲಿ ಕಂಡಂಥ ಖಳನಾಯಕನನ್ನು ಇವನು ನಿಜ ಜೀವನದಲ್ಲಿ, ಆ ಮನೋಭಾವ ಇನ್ನೂ ಹಸಿಯಾಗಿರುವಾಗಲೇ, ಎದುರಿಸುತ್ತಾನೆಯೋ ಎನ್ನುವುದನ್ನು ನೋಡಬೇಕಾಗುತ್ತದೆ. ಇದು ಸಾಧ್ಯವಾದರೆ ಅವನ ಆಕ್ರಮಣಕಾರಿ ಪ್ರವೃತ್ತಿ ಪ್ರಕಟವಾಗಬಹುದು. ಆದರೆ ವಾಸ್ತವ ಜೀವನದಲ್ಲಿ ಇಂಥ ವ್ಯಕ್ತಿಯನ್ನು ನೋಡುವ ಸಂಭವ ತೀರಾ ಕಡಿಮೆ ಎನ್ನುವುದು ಸ್ವಯಂವೇದ್ಯ.

ಇದೇ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಹಿಂಸೆ–ಅಪರಾಧ ಹೆಚ್ಚಾಗಿರುವ ಕತೆಯ ಕೊನೆಯಲ್ಲಿ ದುಷ್ಟರಿಗೆ ಶಿಕ್ಷೆಯಾಗುತ್ತದೆ. ಎಲ್ಲರನ್ನೂ ಹಿಂಸಿಸುತ್ತಿರುವವನು ಕೊನೆಯ ದೃಶ್ಯದಲ್ಲಿ ತನ್ನ ಅಪರಾಧದ ಫಲವನ್ನು ಅನುಭವಿಸುತ್ತಾನೆ. ಇಂಥ ಮುಕ್ತಾಯದಿಂದಾಗಿ ಮೊದಲು ಪ್ರಚೋದಿತವಾಗುವ ಹಿಂಸಾಪ್ರವೃತ್ತಿ ಕೊನೆಯ ಹೊತ್ತಿಗೆ ಇಳಿದು ಹೋಗುವುದು ಸಾಧ್ಯ. ಚಿತ್ರಮಂದಿರಗಳಲ್ಲಿ ಹಲವು ಸಲ ಈ ಮಾತಿಗೆ ನಿದರ್ಶನಗಳನ್ನು ಕಾಣಬಹುದು. ನಾಯಕ, ಖಳನಾಯಕನೊಡನೆ ಹೋರಾಡುತ್ತಿರುವಾಗ ಕೆಲವರು, ಹೆಚ್ಚಾಗಿ ಮುಂಬೆಂಚಿನ ಬಾಲಕರು, ಕಿರಿಚುತ್ತಿರುತ್ತಾರೆ. ತಾವೂ ಹೊಡೆಯುವವರಂತೆ ಮುಷ್ಟಿ ಪ್ರದರ್ಶಿಸುತ್ತಾರೆ. ಇನ್ನೂ ಹೊಡಿ ಎಂದು ನಾಯಕನಿಗೆ ಉತ್ತೇಜನ ಕೊಡುತ್ತಾರೆ. ನಾಯಕ ಇನ್ನೇನು ಕಂದರದೊಳಗೆ ಬಿದ್ದ, ಖಳನಾಯಕ ಗೆದ್ದ ಎನಿಸಿದಾಗ ಉಸಿರು ಬಿಗಿ ಹಿಡಿದುಕೊಳ್ಳುತ್ತಾರೆ. ಕೊನೆಯ ಘಳಿಗೆಯಲ್ಲಿ ನಾಯಕ ಖಳನಾಯಕನನ್ನು ಉರುಳಿಸಿದಾಗ ಜೋರಾಗಿ ಸಿಳ್ಳುಹಾಕಿ, ಚಪ್ಪಾಳೆ ತಟ್ಟಿ ತಮಗಾದ ಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಆದರೆ ಸಿನಿಮಾ ಮಂದಿರದಿಂದ ಹೊರಗೆ ಬರುವಾಗ ಎಲ್ಲಾ ಭಾವನೆಗಳೂ ತಣ್ಣಗಾಗಿರುತ್ತವೆ.

ಅನುಭವಿಗಳ ವಾದ

ಸಮಾಜವಿಜ್ಞಾನಿಗಳ, ಮನೋವಿಜ್ಞಾನಿಗಳ ಅಧ್ಯಯನದ ರೀತಿಗಳನ್ನು, ಅವರ ತೀರ್ಮಾನಗಳನ್ನು ಒಪ್ಪಿಕೊಳ್ಳದ, ಮಾಧ್ಯಮಗಳ ಹಿಂಸಾ ಕಾರ್ಯಕ್ರಮದಿಂದ ಕೆಟ್ಟ ಪರಿಣಾಮವಾಗಿರುವುದಕ್ಕೆ ತಮ್ಮ ಅನುಭವದಿಂದ ಜೀವಂತ ನಿದರ್ಶನಗಳನ್ನು ಕೊಡುತ್ತೇವೆಂದು ಹೇಳುವ ಹಲವಾರು ಜನರಿದ್ದಾರೆ. ಇವರು ಮಂಡಿಸುವ ವಾದವನ್ನು ಅಮೆರಿಕದ ಖ್ಯಾತ ಚಿಕಿತ್ಸಾತಜ್ಞ ಡಾ. ವರ್ಟ್‌ಹಾಮರ ಲೇಖನದಿಂದ ಒಂದು ವಾಕ್ಯವನ್ನು ಉಲ್ಲೇಖಿಸುವುದರ ಮೂಲಕ ತೋರಿಸಬಹುದು: "ಒಂದು ವಿನೋದ ಚಿತ್ರದಲ್ಲಿ ಒಬ್ಬ ಹುಡುಗಿ ಇನ್ನೊಬ್ಬಳ ಸ್ತನದ ಮೇಲೆ 'ರೇಡಿಯಂ' ದೂಳನ್ನು ಎರಚಿ 'ನಿನ್ನ ಮರ್ಮಸ್ಥಾನವನ್ನು ಕಂಡುಕೊಂಡೆ' ಎಂದು ಕಿರಿಚುತ್ತಿದ್ದಾಳೆ. ಇನ್ನೊಂದು ಕಡೆ ಬಿಳಿ ಜನ ಕರಿಯರನ್ನು ಹೊಡೆದು ದರದರ ಎಳೆದುಕೊಂಡು ಹೋಗುತ್ತಿದ್ದಾರೆ. ಮತ್ತೊಂದು ಕಡೆ ಬರೆ ಎಳೆದಿರುವ ಸ್ತನದ ಸಮೀಪ ದೃಶ್ಯವಿದೆ. ಇಂಥ ಚಿತ್ರಗಳು ತುಂಬಿರುವ ಪುಸ್ತಕವನ್ನು ಏಳು ವರ್ಷದ ಮಗುವಿನ ಕೈಲಿ ನೋಡಿದಾಗ, ಅವನ

ಕಣ್ಣುಗಳು ಈ ಚಿತ್ರಗಳಲ್ಲಿ ನೆಟ್ಟಿರುವುದನ್ನು ಕಂಡಾಗ, ಈ ವಸ್ತು ಮಕ್ಕಳಿಗೆ ಒಳ್ಳೆಯದಲ್ಲ ಎಂದು ಸಾಧಿಸಿ ತೋರಿಸಬೇಕೆನ್ನುವುದು ಮೂರ್ಖತನದ ಮಾತು." ಸಮಾಜವಿಜ್ಞಾನಿಗಳ ಪ್ರಶ್ನಾವಳಿಯ ರೀತಿಯಿಂದಾಗಲಿ, ಮನೋವಿಜ್ಞಾನಿಗಳ ಅಸಂಬದ್ಧ ಪ್ರಯೋಗಗಳಿಂದಾಗಲಿ ಈ ವಸ್ತುಗಳ ಹಾನಿಕಾರಕ ಪರಿಣಾಮಗಳನ್ನು ಅಳೆಯುವುದು ಸಾಧ್ಯವಿಲ್ಲವೆಂದೂ, ಮಗುವನ್ನು ಸಂಪೂರ್ಣವಾಗಿ ಪರೀಕ್ಷಿಸಿದಾಗ ಮಾತ್ರ ಇಂಥ ವಸ್ತುಗಳಿಂದ ಆಗಬಹುದಾದ ಅಪಾಯದ ಅರಿವಾಗುತ್ತದೆಂದೂ, ತಾವು ಹೀಗೆ ಸಾವಿರಾರು ಮಕ್ಕಳನ್ನು ಪರೀಕ್ಷಿಸಿರುವುದಾಗಿಯೂ, ಮಕ್ಕಳ ಮೇಲೆ ಮಾಧ್ಯಮಗಳಿಂದಾಗಿರುವ ಹಾನಿಕಾರಕ ಪರಿಣಾಮಗಳಿಗೆ ತಮ್ಮಲ್ಲಿ ಸಾಕ್ಷ್ಯವಿದೆಯೆಂದೂ ಇವರು ವಾದಿಸುತ್ತಾರೆ.

ಒಟ್ಟಾರೆ ನೋಟ

ಮೇಲಿನ ಮೂರು ರೀತಿಯ ಪರಿಶೀಲನೆಗಳಿಗೂ ಇರುವ ಮಿತಿಗಳು ಸಾಕಷ್ಟು ಸ್ಪಷ್ಟವಾಗಿವೆ. ಸಮುದಾಯ ಸಂಪರ್ಕ ಒಟ್ಟಾರೆ ಸಮಾಜದಲ್ಲಿ ಕೆಲಸ ಮಾಡುತ್ತಿರುವ ಶಕ್ತಿಗಳಲ್ಲಿ ಒಂದು ಮಾತ್ರ. ಇವರೊಂದಿಗೆ ಇತರ ಹಲವಾರು ಶಕ್ತಿಗಳು ಜನರ ಮನಸ್ಸಿನ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಲೇ ಇರುತ್ತವೆ. ಯಾವುದೇ ಒಂದು ಬದಲಾವಣೆ ಕಂಡು ಬಂದಾಗ ಈ ಬದಲಾವಣೆಗೆ ಸಮುದಾಯ ಸಂಪರ್ಕ ಎಷ್ಟರ ಮಟ್ಟಿಗೆ ಕಾರಣ, ಬೇರೆ ಶಕ್ತಿಗಳು ಎಷ್ಟರಮಟ್ಟಿಗೆ ಕಾರಣ ಎಂದು ಹೇಳುವುದು ಕಷ್ಟವಾಗುತ್ತದೆ. ಅಲ್ಲದೆ ಸಮೀಕ್ಷೆ, ಪ್ರಯೋಗಗಳಿಂದ ತತ್‌ಕ್ಷಣದ ಪರಿಣಾಮಗಳನ್ನು ಗುರುತಿಸುವುದು ಸಾಧ್ಯವೆಂದಿಟ್ಟುಕೊಂಡರೂ, ದೀರ್ಘಕಾಲಿಕ ಪರಿಣಾಮಗಳನ್ನು ಅಳೆಯುವುದು ಇನ್ನೂ ಕಷ್ಟ. ಆದರೆ ದೀರ್ಘಕಾಲಿಕ ಪರಿಣಾಮಗಳು ಹೆಚ್ಚು ಮಹತ್ವದವಾಗಬಹುದು. ಇದರಿಂದಾಗಿ ಸಮೀಕ್ಷಾ ತಂತ್ರ ಅಥವಾ ಮನೋವೈಜ್ಞಾನಿಕ ಪ್ರಯೋಗಗಳ ತೀರ್ಮಾನಗಳನ್ನು ಪೂರ್ಣವಾಗಿ ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಮಾಧ್ಯಮಗಳು ಜನರ ಅಭಿರುಚಿಗಳನ್ನು ಪೋಷಿಸುವುದಷ್ಟೇ ಅಲ್ಲ, ಅವು ಅಭಿರುಚಿಯನ್ನು ಬೆಳೆಸುತ್ತವೆ ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕು. ಪ್ರತಿನಿತ್ಯ ಗುಂಡಿನ ಕಾಳಗಗಳು, ಕೊಲೆ, ಹೊಡೆದಾಟಗಳನ್ನು ನೋಡಿ ಅಭ್ಯಾಸವಾದವರಿಗೆ ಅದೇ ಚೆನ್ನ. ಅಂತಹುದೇ ಇನ್ನಷ್ಟು ಬೇಕು ಎನಿಸುವುದು ಸ್ವಾಭಾವಿಕ. ಆದ್ದರಿಂದ ಸಮಾಜ–ವಿಜ್ಞಾನಿಗಳು ಹೇಳುವ ಮಾಧ್ಯಮಗಳ ನೈತಿಕ ತಾಟಸ್ಥ್ಯ ಇಲ್ಲಿ ಅಷ್ಟಾಗಿ ಅನ್ವಯವಾಗುವುದಿಲ್ಲ. ಎನಿಸುತ್ತದೆ. ಮಾಧ್ಯಮಗಳು ಸಾತ್ವಿಕರನ್ನು ಕ್ರೂರಿಗಳನ್ನಾಗಿ' ಮಾಡದಿರಬಹುದು. ಸಾಮಾನ್ಯ ಜನರನ್ನು ಕೊಲೆಗಾರರನ್ನಾಗಿ ಪರಿವರ್ತಿಸದಿರಬಹುದು. ಆದರೆ ಹಿಂಸೆಯ ದೃಶ್ಯಗಳನ್ನೇ ನೋಡುತ್ತಿರುವುದರಿಂದ ಹಿಂಸೆಯ ಬಗ್ಗೆ ಇರಬಹುದಾದ ಪ್ರತಿರೋಧ ಕಡಿಮೆಯಾಗುತ್ತದೆ. ಹಲವು ಸಮಸ್ಯೆಗಳಿಗೆ ಹಿಂಸೆಯೇ ಸ್ವಾಭಾವಿಕವಾದ ಗಂಡಸುತನದ ಉತ್ತರ ಎನ್ನುವ ಭಾವನೆ ನಿಧಾನವಾಗಿಯಾದರೂ ಬೆಳೆಯುತ್ತದೆ. ಬೇರೆಯವರ ನೋವು ನರಳುವಿಕೆಗಳ ಬಗೆಗೆ ಅನುಕಂಪದ ಬದಲು ಉದಾಸೀನತೆ ಹೆಚ್ಚುತ್ತದೆ–ಎನ್ನುವ ಭೀತಿಗೆ ಸಾಕಷ್ಟು ಆಧಾರಗಳಿವೆ. ಈ ಸಂದರ್ಭದಲ್ಲಿ ಟೆಲಿವಿಷನಿನಂಥ ಒಂದು ಮಾಧ್ಯಮ ಬೇರೆ ಮಾಧ್ಯಮಗಳಿಗಿಂತ ಹೆಚ್ಚು ಅಪಾಯಕಾರಿಯಾಗಬಹುದು–ಎನ್ನುವುದನ್ನು ಗಮನಿಸಬೇಕು. ಚಲನಚಿತ್ರ, ವಿನೋದಚಿತ್ರಕತೆಗಳಂತಹ ಮಾಧ್ಯಮಗಳಲ್ಲಿ ಪ್ರೇಕ್ಷಕರಿಗೆ ಆಯ್ಕೆಯ ಸ್ವಾತಂತ್ರ್ಯವಿರುತ್ತದೆ. ಇಂಥ ವಸ್ತುಗಳನ್ನು ಮಕ್ಕಳು ಹೆಚ್ಚಾಗಿ ನೋಡದಂತೆ ತಂದೆ ತಾಯಿ ಶಿಕ್ಷಕರು ಸ್ವಲ್ಪಮಟ್ಟಿಗಾದರೂ ನಿರ್ಬಂಧಿಸಬಹುದು. ಅದು ಕೆಟ್ಟ ಚಲನಚಿತ್ರ, ಅದಕ್ಕೆ ಹೋಗಬೇಡ—ಎನ್ನಬಹುದು. ಕೆಲವು ರೀತಿಯ ವಿನೋದ ಚಿತ್ರಕತೆಗಳನ್ನು ಕೊಳ್ಳದಿರಬಹುದು. ಅಲ್ಲದೆ ಚಲನಚಿತ್ರ ನೋಡುವುದು ತಿಂಗಳಿಗೊಂದೆರಡು ಸಲವಾದ್ದರಿಂದ ಅದರಿಂದಾಗಬಹುದಾದ ಹಾನಿ ಅಷ್ಟಾಗಿರುವುದಿಲ್ಲ. ಟೆಲಿವಿಷನ್‌ನಂಥ, ಮನೆಯಲ್ಲೇ ಇರುವ, ಮಾಧ್ಯಮದಿಂದ ತಪ್ಪಿಸಿಕೊಳ್ಳುವುದು ಕಷ್ಟ. ವ್ಯಾಪಾರಿ ಟೆಲಿವಿಷನ್ ಕಾರ್ಯಕ್ರಮಗಳು ಜನಪ್ರಿಯತೆಯ ಮೇಲೇ ಬದುಕಬೇಕಾಗಿರುವುದರಿಂದ, ಜನಪ್ರಿಯತೆಯನ್ನು ಗಳಿಸಲು ಸುಲಭ ಸಾಧನ ಹಿಂಸೆಯಾದ್ದರಿಂದ ಇದರ ಅಪಾಯ ತೀವ್ರರೀತಿಯದಾಗಿರುತ್ತದೆ.

ನಿಯಂತ್ರಣ

ಇದು ಹಿಂಸೆಯ ಚಿತ್ರಣದಿಂದಾಗಬಹುದಾದ ಪರಿಣಾಮಗಳನ್ನು ಕುರಿತ ಮಾತಾಯಿತು. ಹಿಂಸೆಯ ಚಿತ್ರಣ ಹಾನಿಕಾರಕ ಎಂದು ಒಪ್ಪಿಕೊಂಡರೆ ಇದನ್ನು ಎದುರಿಸುವುದು ಹೇಗೆ?–ಎನ್ನುವುದು ಮುಖ್ಯ ಸಮಸ್ಯೆ. ಇದು ಹಿಂಸೆ. ಇದು ಹಿಂಸೆಯಲ್ಲ ಎನ್ನುವುದನ್ನು ನಿರ್ಧರಿಸುವುದು ಹೇಗೆ? ಇದನ್ನು ನಿರ್ಧರಿಸಬೇಕಾದವರು ಯಾರು? ಇವು ಮೊದಲು ಉತ್ತರಿಸಬೇಕಾದ ಪ್ರಶ್ನೆಗಳು. ಜನಪದ ಸಾಹಿತ್ಯದ ಮಂತ್ರವಾದಿ ರಾಜಕುಮಾರಿಯನ್ನು ಹಿಂಸಿಸುವ ಕತೆಗಳಿಂದ ಷೇಕ್ಸ್‌ಪಿಯರ್ ನಾಟಕಗಳ ವರೆಗೂ ಎಲ್ಲ ರೀತಿಯ ಸಾಂಸ್ಕೃತಿಕ ವಸ್ತುಗಳಲ್ಲಿ ಒಂದಲ್ಲ ಒಂದು ರೀತಿಯ ಹಿಂಸೆಯ ದೃಶ್ಯಗಳು ಇದ್ದೇ ಇರುತ್ತವೆ. ರಾಮಾಯಣ ಮಹಾಭಾರತಗಳಲ್ಲಿ ಹಿಂಸೆ ಇದೆ. ಗ್ರಾಮಾಯಣ. ಕಾನೂರು ಹೆಗ್ಗಡತಿಯಲ್ಲಿ ಹೊಡೆದಾಟ, ಮೋಸ, ವಂಚನೆಗಳ ವರ್ಣನೆಯಿದೆ. ಮಾಧ್ಯಮಗಳು ಜನಜೀವನವನ್ನು ಪ್ರತಿಬಿಂಬಿಸಬೇಕೆಂದು ನಿರೀಕ್ಷಿಸಿದರೆ ಜೀವನದಲ್ಲಿ ಸಾಮಾನ್ಯವಾಗಿರುವ ಹಿಂಸೆಯ ದೃಶ್ಯಗಳಿಗೆ ಮಾಧ್ಯಮದಲ್ಲಿಯೂ ಅವಕಾಶವಿರುವುದು ಅಗತ್ಯವಾಗುತ್ತದೆ. ಒಂದು ಕೃತಿಯ ಕಲಾತ್ಮಕ ಅಭಿವ್ಯಕ್ತಿಗೆ ಹಲವು ಸಂದರ್ಭಗಳಲ್ಲಿ ಹಿಂಸೆ ಅನಿವಾರ್ಯವಾಗುತ್ತದೆ. ಮಾಧ್ಯಮಗಳಲ್ಲಿ ಹಿಂಸೆ ಹೀಗೆ ಅನಿವಾರ್ಯವಾಗಿ ಬರುವುದಿಲ್ಲ; ಅದು ಯಶಸ್ವೀ ಫಾರ್ಮ್ಯುಲಾದ ಒಂದು ಮಸಾಲೆ ಮಾತ್ರ ಎಂದು ಒಪ್ಪಿಕೊಂಡರೂ ಯಾವುದು ಅನಿವಾರ್ಯ, ಯಾವುದಲ್ಲ. ಯಾವ ದೃಶ್ಯದಲ್ಲಿ ಎಷ್ಟು ಹಿಂಸೆಗೆ ಅವಕಾಶವಿರಬೇಕು–ಎನ್ನುವುದರ ಬಗ್ಗೆ ನಿಯಮಾವಳಿಯನ್ನು ರೂಪಿಸುವುದು ಮತ್ತು ಈ ನಿಯಮಾವಳಿಯನ್ನು ಪಾಲಿಸುವಂತೆ ಮಾಡುವುದು ಅಷ್ಟು ಸುಲಭವಲ್ಲ.ಮಾಧ್ಯಮಗಳ ವಸ್ತುವನ್ನೆಲ್ಲ ಪೂರ್ವ ಪರಿಶೀಲನೆಗೆ ಒಳಪಡಿಸುವುದು ಸಾಧುವೂ ಅಲ್ಲ. ಸಾಧ್ಯವೂ ಅಲ್ಲ. ಅಲ್ಲದೆ ಈಗಾಗಲೇ ಬಿಗಿಯಾದ ಪೂರ್ವ ಪರಿಶೀಲನೆಯಿರುವ ಚಲನಚಿತ್ರ ಕ್ಷೇತ್ರದಲ್ಲಿ ಪೂರ್ವಪರಿಶೀಲನೆ ಇಂಥ ಹಾನಿಕಾರಕ ಪ್ರವೃತ್ತಿಗಳನ್ನು ಕಡಿಮೆ ಮಾಡುವ ಬದಲು ಸೃಜನಾತ್ಮಕತೆಯನ್ನು ಕುಂದಿಸುವುದರಲ್ಲಿ ಮಾತ್ರ ಯಶಸ್ವಿಯಾಗಿದೆ ಎನ್ನುವುದು ಹಲವರ ಅಭಿಪ್ರಾಯ. ಆದರೂ ಮಾಧ್ಯಮಗಳೂ ಸಾರ್ವಜನಿಕರೂ ಆಡಳಿತವೂ ಪರಸ್ಪರ ಸಹಕರಿಸಿದಾಗ. ಮಾಧ್ಯಮಗಳು ತಮ್ಮ ಸಾಮಾಜಿಕ ಹೊಣೆಯನ್ನು ಅರಿತಾಗ. ಇಂಥ ಹೊಣೆಯನ್ನು ಅರಿಯುವಂತೆ ಸಾರ್ವಜನಿಕರು ಮಾಡಿದಾಗ ಕನಿಷ್ಠಾಂಶಗಳ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದೂ ಸ್ವಯಂನಿಯಂತ್ರಣದ ಯೋಜನೆಯನ್ನು ಹಾಕಿಕೊಳ್ಳುವುದೂ ಸಾಧ್ಯವಾಗಬಹುದು.

ಸೀತಾರಾಮ ಜಾಗೀರ್‌ದಾರ್

ಹೆಗ್ಗೆರೆಯ ಶಾಸನ ಮತ್ತು ಜಯಕೀರ್ತಿಯ ಕಾಲದ ವಿಚಾರ

'ಜಯಕೀರ್ತಿ' ಎಂದಾಗ ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೆ ಒಂದು ವಿಶಿಷ್ಟ ಭಾವನೆ ಮೂಡಿ ನಿಲ್ಲುತ್ತದೆ. ಏಕೆಂದರೆ ಕನ್ನಡಿಗರ ಧೀಶಕ್ತಿಯ ಕೀರ್ತಿ ಪತಾಕೆಯನ್ನು ಕನ್ನಡ ನಾಡಿನ ಗಡಿಗಳಾಚೆಗೆ ಒಯ್ದು ನೆಟ್ಟ ಮಹಾನುಭಾವರಲ್ಲಿ ಆತನೂ ಒಬ್ಬ. ಸದ್ಯ ತಿಳಿದಂತೆ ಆತ ಕನ್ನಡ ಹಾಗೂ ಸಂಸ್ಕೃತ–ಎರಡರ ಛಂದಶ್ಶಾಸ್ತ್ರಕ್ಕೂ 'ಛಂದೋನುಶಾಸನ' ಎಂಬ ವಿಶಿಷ್ಟ ಕೊಡುಗೆಯನ್ನು ಕೊಟ್ಟ ಶಾಸ್ತ್ರಜ್ಞ. ಜಯಕೀರ್ತಿಯನ್ನು ಮೊದಲ ಬಾರಿಗೆ ಬೆಳಕಿಗೆ ತಂದ ಕೀರ್ತಿ, ಪ್ರೊ. ಹಂ ದಾಮೋದರ ವೇಲಣಕರ್ ಅವರಿಗೆ ಸಲ್ಲುತ್ತದೆ. 'Chandōnuśāsana of Jayakirti and The Ancient Kannada Meters' ಎಂಬುದು ಈ ದಿಶೆಯಲ್ಲಿ ಅವರ ಮೊದಲ ಲೇಖನ[1]. 'ಜಯಕೀರ್ತಿ' ದಿಗಂಬರ ಪಂಥದ ಜೈನ ಸನ್ಯಾಸಿ ಎಂಬ—ಕನ್ನಡಿಗನೆಂಬ—ವಿಷಯವನ್ನು ಎಲ್ಲ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಆದರೆ ಆತ ಬಾಳಿ ಬದುಕಿದ ಕಾಲಮಾನದ ಬಗ್ಗೆ ಏಕಾಭಿಪ್ರಾಯವನ್ನು ತಳೆದಿಲ್ಲ:

1 'ಛಂದೋನುಶಾಸನ' ಕೃತಿಯನ್ನು ಪ್ರಕಟಿಸಿದ ಪ್ರೊ. ವೇಲಣಕರರು 'ಜಯಕೀರ್ತಿ' ಕ್ರಿ.ಶ. ಸು. 1000ದಲ್ಲಿ ಇದ್ದನೆಂದು ಅಭಿಪ್ರಾಯ ಪಟ್ಟಿದ್ದಾರೆ[2].

2 ದಿವಂಗತ ಗೋವಿಂದ ಪೈ ಅವರು ಜಯಕೀರ್ತಿ ಪಂಪನಿಗೆ ಮೊದಲು, ಅಸಗನಿಗೆ ತರುವಾಯ. ಅಂದರೆ ಕ್ರಿ.ಶ.ಸು. 900ರ ಆಚೀಚೆಗೆ ಇದ್ದಿರಬಹುದು ಎಂದಿದ್ದಾರೆ[3].

3 ಪಂಡಿತ ಜುಗಲ್ ಕಿಶೋರ ಮುಖ್ತಾರ್ ಹಾಗೂ ಪಂಡಿತ ನಾಥೂರಾಮ ಪ್ರೇಮಿ ಅವರು ಜಯಕೀರ್ತಿ ಕ್ರಿ.ಶ. ಸು. 12ನೆಯ ಶತಮಾನದ ಪೂರ್ವಾರ್ಧದಲ್ಲಿ ಇದ್ದನೆಂದು ಅಭಿಪ್ರಾಯವನ್ನು ತಳೆದಿದ್ದಾರೆ[4].

---

[1] JBBRAS, Vol.12 (N.S.) 1945. ಇದರ ಅನುವಾದವನ್ನು ಎಚ್. ದೇವೀರಪ್ಪನವರು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ. ಸಂಪುಟ 40, ಸಂಚಿಕೆ 1–2, ಪು 1–20(1956)ರಲ್ಲಿ ಪ್ರಕಟಿಸಿದ್ದಾರೆ.

[2] (ಎ) ಅದೇ. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಪುಟ 13

(ಬಿ) Prof. H. D. Velankar, JAYADAMAN : *Jayakirti lived about 1000 A. D.* –General Introduction, p. 37–38

[3] ಪ್ರಬುದ್ಧ ಕರ್ಣಾಟಕ, ಸಂಪುಟ 28, ಸಂಚಿಕೆ 3: ಜಯಕೀರ್ತಿಯ ಛಂದೋನುಶಾಸನದ ಕಾಲ, ಪುಟ, 113–121

[4] ಪಂಡಿತ ನಾಥೂರಾಮ ಪ್ರೇಮಿ, ಜೈನಸಾಹಿತ್ಯ ಔರ್ ಇತಿಹಾಸ (ಹಿಂದಿ), 405

ಪ್ರೊ. ವೇಲಣಕರರ ಅಭಿಪ್ರಾಯವನ್ನು ಪ್ರೊ. ಡಿ. ಎಲ್. ನರಸಿಂಹಾಚಾರ್ ಅವರೂ[5] ಶ್ರೀ ಟಿ. ವಿ. ವೆಂಕಟಾಚಲಶಾಸ್ತ್ರಿಗಳೂ[6] ಅನುಮೋದಿಸಿದ್ದಾರೆ. ಶ್ರೀ ಶಾಸ್ತ್ರಿಗಳು "ಛಂದೋಂಬುಧಿ ಮತ್ತು ಛಂದೋನುಶಾಸನಗಳಲ್ಲಿ ಸ್ಪಷ್ಟ ಸಾಮ್ಯಗಳು ಕಂಡುಬರುವುದರಿಂದ ಕ್ರಿ.ಶ. 990ರಲ್ಲಿದ್ದ 'ಛಂದೋಂಬುಧಿ'ಯ ಕರ್ತೃ ನಾಗವರ್ಮನಿಂದೀಚೆಗೆ, ಕ್ರಿ.ಶ. ಸು. 1000ದಲ್ಲಿದ್ದ 'ಚೂಡಾಮಣಿ' ಕಾವ್ಯಕರ್ತೃವಾದ ಕಂದರ್ಪ ದೇವನಿಗೂ ಈಚೆಗೆ, ಸು. 1050ರಲ್ಲಿ ಜಯಕೀರ್ತಿ ಇದ್ದಿರಬಹುದು. ಅಂತೂ ಜಯಕೀರ್ತಿಯ ಕಾಲ ಕ್ರಿ.ಶ. 11ನೆಯ ಶತಮಾನವೆಂಬ ಗ್ರಹಿಕೆಯೇ ಒಟ್ಟುಮಟ್ಟಿಗೆ ಸರಿ"–ಎಂದಿದ್ದಾರೆ. ಶಾಸ್ತ್ರಿಗಳ ಈ ವಾದವನ್ನು ಪ್ರ. ಗೊ. ಕುಲಕರ್ಣಿ ಎಂಬವರು ಸರಿಯಲ್ಲವೆಂದು ವಾದಿಸಿ, ದಿವಗಂತ ಪೈ ಅವರ ಹೇಳಿಕೆ, 'ಕ್ರಿ.ಶ.ಸು. 900ರ ಆಚೀಚೆಗೆ ಜೀವಿಸಿರಬೇಕೆಂಬ' ಅಭಿಪ್ರಾಯ, 'ಸಮಂಜಸವಾಗಿದೆಯೆಂದು ಹೇಳಬೇಕು' ಎಂದಿದ್ದಾರೆ.[7] ಇದು ಕುಲಕರ್ಣಿಯವರ ದೃಢವಾದ ನಿಲುವಾಗಿದೆ[8]. ಇದೇ ರೀತಿಯ, ಎಂದರೆ, 'ಜಯಕೀರ್ತಿಯ ಕಾಲ ಪಂಪನಿಗೆ (ಕ್ರಿ.ಶ. 941) ಮೊದಲು. ಅಂದರೆ ಪೈಗಳು ಹೇಳುವಂತೆ ಕನಿಷ್ಠ ಪಕ್ಷ ಕ್ರಿ.ಶ. 900 ಆಗಿರಬಹುದು". ಎಂದಿದ್ದಾರೆ ಡಾ. ಎಂ. ಎಂ. ಕಲಬುರ್ಗಿ[9]. ಹೀಗೆ ಒಟ್ಟು 'ಜಯಕೀರ್ತಿಯ ಕಾಲ' ಇನ್ನೂ ಅನಿಶ್ಚಿತ ಸ್ಥಿತಿಯಲ್ಲೇ ಇದೆ. ಸತ್ಯ ಇನ್ನೂ ಹೊರಬೀಳಬೇಕಾಗಿದೆ. ಅದರ ಶೋಧನೆಯೆ ಈ ಲೇಖನದ ಉದ್ದೇಶ. ಈ ದಿಶೆಯಲ್ಲಿ, ಹೆಗ್ಗೆರೆಯ ಒಂದು ಶಾಸನ ವಿಶೇಷ ಬೆಳಕನ್ನು ಬೀರುತ್ತದೆ[10].

ಹೆಗ್ಗೆರೆಯ ಬಸದಿಯಲ್ಲಿರುವ ಈ ದೊಡ್ಡ ಶಿಲಾಶಾಸನವನ್ನು ಕ್ರಿ.ಶ. 1161ರಲ್ಲಿ ಹೊಯ್ಸಳ ದೊರೆ 1ನೆಯ ನರಸಿಂಹನ ಕಾಲದಲ್ಲಿ ಬರೆಯಲಾಗಿದೆ. ಇದರ ಕರ್ತೃ, ದೇವಭದ್ರಮುನಿ, ಒಳ್ಳೆಯ ಪಂಡಿತ. ಅತ:

ಉಚಿತ ಪದಾಳಂಕಾರಂ।
ಪ್ರಚುರರಸಂ ನೆಗಳಲಿನ್ನು ಜಿನಶಾಸನಮಂ॥
ರಚಿಯಿಸಿದಂ ಪರವಾಸ।
ನ್ರುಚಿರಯಶಂ ದೇವಭದ್ರಮುನಿಪೋತ್ತಂಸಂ॥[11]

ಎಂದು ತನ್ನ ಬಗೆಗೆ ಹೇಳಿಕೊಂಡಿದ್ದಾನೆ. ಈ ದೇವಭದ್ರಮುನಿ, ಶಾಸನವನ್ನು ರಚಿಸುವಲ್ಲಿ ಒಂದು ಗಮನಾರ್ಹವಾದ ವಿಷಯವನ್ನು ಶಾಸನದಲ್ಲಿ ಬರೆದಿದ್ದಾನೆ. ಅದೆಂದರೆ ಸುವಿಖ್ಯಾತ 'ಚಂಪಕಮಾಲೆ'

---

5 ಕ.ಸಾ.ಪ.ಪ. ಸಂ. 40. ಸಂಚಿಕೆ 1–2. ಪುಟ 13. ಅ.ಟಿ. 2. ಈ ಅಭಿಪ್ರಾಯವನ್ನು ಶ್ರೀಯುತರು ಬದಲಿಸಿಕೊಂಡಂತೆ ತೋರುತ್ತದೆ. ನೋಡಿ, ಕರ್ನಾಟಕ ಭಾರತಿ, ಸಂ. 4, ಸಂಚಿಕೆ 1, ಪುಟ 7–8. ಆದರೆ ವಿಶಿಷ್ಟ ಲೇಖನ ಬರೆದಿಲ್ಲ.

6 ಕನ್ನಡ ಛಂದಸ್ಸು. ಪುಟ 75. ಪುಟ 5, 10, 28ರಲ್ಲೂ ಇದೇ ತೇದಿ (ಕ್ರಿ.ಶ. 1050) ಇದೆ.

7 ಕರ್ನಾಟಕ ಭಾರತಿ; ಸಂಪುಟ 4, ಸಂಚಿಕೆ 1, ಪುಟ 4–6

8 ಅದೇ. ಸಂಪುಟ 5, ಸಂಚಿಕೆ 3; ಪುಟ 19

9 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ', ಪುಟ 216

10 *Ep. Car.* Vol. xii ck. No. 21 (ಹೆಗ್ಗೆರೆಯ ಶಾಸನ) pp. 218–222

11 ಅದೇ, ಪುಟ 222

ಎಂಬ ವೃತ್ತವನ್ನು 'ಚಿತ್ರಲತೆ' ಎಂದು ಕರೆದುದು. ಆ ಭಾಗವಿಂತಿದೆ: ಸಕಳ ಲಕ್ಷ್ಮೀಕಾನ್ತ ಶ್ರೀ ಬಿಟ್ಟಿದೇವಸಾಮನ್ತ। ಸ್ಥಿರಂಜೀಯಾತ್ ॥ಚಿತ್ರಲತೆ॥

ನಲಿದುಲಿದಟ್ಟಿಕೊಣ್ಡು ಕಪಿತಪ್ಪ ವಿರೋಧಿ ಬಳಕ್ಕೆ ಭೀತಿಯಿಂ।
ನೆಲಪ್ಪೊಲಸೆನ್ನದಲ್ಲಿದಿದು ಪೆರ್ಬ್ಬುಲವೆನ್ನದೆ ದೋಃಜ್ತಾಪದಿಂ॥
ಗಿಲಿಗಿಲಿಗಂಬವಾಡಿಸುವನಾಹವದೊಳ್ ಕಲಿಬಿಟ್ಟಿದೇವನಿ
ನ್ನೆಲೆಗಿಸವಂಗೆ ಸಂಗರದೊಳಾಂಪನೆ ಗಾಂಪನವಾರ್ಯ್ಯ ಶೌರ್ಯ್ಯನೊಳ್॥12

ನಮಗೆ ತಿಳಿದಂತೆ 'ಚಂಪಕಮಾಲೆ' ಎಂಬ ವೃತ್ತವನ್ನು ಜಯಕೀರ್ತಿಯ ವಿನಾ ಬೇರಾವ ಛಂದಶ್ಶಾಸ್ತ್ರಜ್ಞನೂ 'ಚಿತ್ರಲತೆ'ಎಂದು ಹೆಸರಿಸಿ ಹೇಳಿಲ್ಲ[13]. ಜಯಕೀರ್ತಿಯ 'ಛಂದೋನುಶಾಸನ' ಗ್ರಂಥದಲ್ಲಿ ಆ ಸೂತ್ರ ವಿಂತಿದೆ: ನಜಭಜಜಜ್ರೌ ಚಿತ್ರಲತಿಕಾ ಸತಿ ಚಮ್ಪಕಮಾಲಿಕಾ ಕ್ವಚಿತ್॥239॥[14]. ಈ ಚಿತ್ರಲತಿಕಾ→ಚಿತ್ರಲತಾ→ಚಿತ್ರಲತೆ–ಆಗಿದೆಯೆಂದರೆ ತಪ್ಪಾಗದು. ಈ ಶಾಸನಕವಿ ದೇವಭದ್ರಮುನಿ, 'ಚಂಪಕಮಾಲಾ' ವೃತ್ತವನ್ನು 'ಚಿತ್ರಲತೆ' ಎಂದು ಹೆಸರಿಸಿ ಹೇಳಿರಬೇಕಾದರೆ ಆತನು ಜಯಕೀರ್ತಿಯನ್ನು ಅನುಸರಿಸಿರಬೇಕೆಂದು ನಮಗೆ ತೋರುತ್ತದೆ. ಜಯಕೀರ್ತಿಯ 'ಛಂದೋನುಶಾಸನ' ಜಸಲ್ಮೇರ ಹಸ್ತಪ್ರತಿಯ ಪ್ರಕಾರ ಸಂವತ್ 1192 ಆಷಾಢ ಶುದ್ಧ ದಶಮಿ ಶನಿವಾರದಂದು [15] (ಶನಿವಾರ, 22ನೆಯ ಜೂನ್, 1135–ಕ್ರಿ.ಶ.) ಎಂದರೆ ಕ್ರಿ.ಶ. 1135ರಲ್ಲೆ ರಚಿತವಾಗಿತ್ತೆಂಬುದು ಸುನಿಶ್ಚಿತ ವಿಷಯವಾದುದರಿಂದ, ದೇವಭದ್ರಮುನಿ 'ಛಂದೋನುಶಾಸನ'ವನ್ನು ನೋಡಿದ್ದನೆಂದು ಹೇಳಿದ್ದರೆ ತಪ್ಪಾಗದು; ಕ್ರಿ.ಶ. 1161ರಲ್ಲಿ ಇದ್ದ ಆತ ಅದನ್ನು ನೋಡಿದ್ದುದು ಅಸಹಜವೇನಲ್ಲ. ದೇವಭದ್ರಮುನಿ ಜಯಕೀರ್ತಿಯನ್ನು ಬಲ್ಲವನಾಗಿದ್ದನೆನ್ನುವುದಕ್ಕೆ 'ಚಿತ್ರಲತೆ' ಒಂದೇ ಅಲ್ಲದೆ ಇನ್ನೂ ಒಂದು ಬಲವಾದ ಆಧಾರವೂ ಆ ಶಾಸನದಲ್ಲಿಯೇ ಇದೆ. ಅದೆಂದರೆ 'ಚಾಂದ್ರಾಯಣ ದೇವರ' ಉಲ್ಲೇಖ: ಇನ್ತು ಸ್ವಸ್ತಿ ಶ್ರೀ ಮೂಲಸಂಘದ ದೇಶಿಯ ಗಣದ ಪುಸ್ತಕ ಗಚ್ಛದ ಕೊಣ್ಡ ಕುನ್ದಾನ್ವಯದ ಶ್ರೀ ಚಾಂದ್ರಾಯಣದೇವರ ಗುಡ್ಡಂ। ಶ್ರೀ ಮನ್ಮಹಾ ಸಾಮನ್ತಗೋವಿದೇವಂ... ಇತ್ಯಾದಿ[16]. ಕ್ರಿ.ಶ. 1149ರಲ್ಲಿ ಬರೆದ ಇದೇ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 'ತಂಡಗದ' ಶಾಸನದಿಂದ ಈ ಗೋವಿದೇವನು ಚಾಂದ್ರಾಯಣ ಮುನೀಂದ್ರ ಪಾದಾರಾಧಕನಾಗಿದ್ದು ಮುಗರೆನಾಡು ಮೂನೂರನ್ನು ಆಳುತ್ತಿದ್ದನೆಂದೂ ತಿಳಿದು ಬರುತ್ತದೆ: ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತ ವೀರಲಕ್ಷ್ಮೀಕಾನ್ತ ಚಾಂದ್ರಾಯಣ ಮುನೀಂದ್ರ ಪಾದಾರಾಧಕ ಪರಬಳಸಾಧಕ ಪದ್ಮಾವತೀ ದೇವೀ ಲಬ್ಧವರ ಪ್ರಸಾದ। ಮೃಗಮದಾಮೋದ ಸಮ್ಯಕ್ತ್ವರತ್ನಾಕರ ಶ್ರೀ ಮನ್ಮಹಾ ಸಾಮನ್ತ ಗೋವಿದೇವ ಮುಗರೆನಾಡು ಮೂನೂಱುಮ ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನದಿಂ ಸುಕ ಸಂಕಥಾವಿನೋದ[ದಿಂ] ರಾಜ್ಯಂಗೆಯ್ಯುತ್ತಿರೆ॥......ಇತ್ಯಾದಿ[17]. ಮತ್ತೆ ಪೆಗ್ಗೆರೆಯ ಆ ಶಾಸನದ ಕೊನೆಯಲ್ಲಿ ಬಂದಿರುವ ಪರಿಹರ (ಅಥವಾ ಹರ್ಯ್ಯಲ) ದೇವಿಯು

---

12 ಅದೇ. ಪುಟ 220 (33–35ರ ವರೆಗಿನ ಸಾಲುಗಳು). ಎಲೆಗಿಳವನ್ ಎಲೆ ಇಡುವ ಸಮಯದಲ್ಲಿ ಕಿತ್ತೊಗೆವ–ಕುಡಿಯಲ್ಲಿ ಚಿವುಟಿ ಒಗೆಯುವ ಜಾಣ.

13 ಪ್ರೊ. ಎಚ್. ಡಿ. ವೇಲಣಕರ. 'ಹೇಮಚಂದ್ರನ ಛಂದೋನುಶಾಸನ'. ಸಿಂಘಜೈನ ಗ್ರಂಥಮಾಲಾ: ಗ್ರಂಥಾಂಕ–49: ಭಾರತೀಯ ವಿದ್ಯಾಭವನದ ಪ್ರಕಟಣೆ. 1961. ಪು. 304

14 ಅದೇ. ಗ್ರಂಥ—ಜಯದಾಮದಲ್ಲಿನ ಜಯಕೀರ್ತಿಯ 'ಛಂದೋನುಶಾಸನ'. ಪು. 49

15 ಅದೇ ಗ್ರಂಥ: ಎಂಟನೆಯ ಅಧಿಕಾರದ ಕೊನೆಯಲ್ಲಿರುವ ಗದ್ಯ: ಇತಿ ಜಯಕೀರ್ತಿ ಕೃತೌ ಛಂದೋನುಶಾಸನೇ (ಪ್ರಸ್ತಾರಾದಿ ಪ್ರತ್ಯಯಾಧಿಕಾರಃ)॥ ಸಂವತ್ 1192. ಆಷಾಢ ಶುದಿ 10 ಶನೌ ಲಿಖಿತಮ್ 1–ಪು. 70

16 *Ep. Car* Vol xii, ck. No. 21, pp. 221 (Lines 60–61)

17 *Ibid.*, ck. No. 18, pp. 215 (Lines 9–14)

ಕೂಡ 'ಚಾಂದ್ರಾಯಣ ದೇವರ' ಶಿಷ್ಯಶಿ(ಅಥವಾ ಗುಡ್ಡಿ) ಆಗಿದ್ದಳೆಂಬುದು ತಿಪಟೂರು ತಾಲ್ಲೂಕಿನ ಕರಡಾಳು ಗ್ರಾಮದ ಪಾಳುಬಸದಿಯ ಶಾಸನದಿಂದ ತಿಳಿದುಬರುತ್ತದೆ[18].

'ಚಾಂದ್ರಾಯಣದೇವ' ಎಂಬುವರಿಗೂ ಜಯಕೀರ್ತಿಗೂ ಏನು ಸಂಬಂಧ ಎಂಬ ಪ್ರಶ್ನೆ ಏಳುವುದು ಸಹಜ. ಇದು ಜಯಕೀರ್ತಿಯ ಇನ್ನೊಂದು ಹೆಸರೆಂಬುದು ನಮಗೆ 'ಚಿಕ್ಕ ಹನಸೋಗೆ'ಯ ಎರಡು ಶಾಸನಗಳಿಂದ ಸುಸ್ಪಷ್ಟ. 'ಚಾಂದ್ರಾಯಣ' ಎಂಬ ನೋಂಪಿ (ವ್ರತ ಅಥವಾ ತಪಸ್ಸು)ಯನ್ನು ಆಚರಿಸಿದುದರಿಂದ ಜಯಕೀರ್ತಿಗೆ 'ಚಾಂದ್ರಾಯಣದೇವ' ಅಥವಾ 'ಚಾಂದ್ರಾಯಣೆದೇವ' ಎಂಬ ಹೆಸರು ಬಂದಿತು:

(1) ಉಪವಾಸ ಪ್ರೋನ್ನತ ವಿಧಿ।
ಯುಪವಾಸಾನೇಕ ವಾರ ಚಾನ್ದ್ರಾಯಣದಿಂ॥
ದಪಮದ[ದುಪನಾಮದ?] ಜಯಕೀರ್ತಿ ಮು
ನಿ ಪ್ರವರಂ ಶ್ರೀಪುಸ್ತಕಾನ್ವಯಾಂಬುಜ ಸೂರ್ಯಂ॥[19]

(2) 1 ಶ್ರೀಮದ್ದೇಸಿಗಗಣಪುಸ್ತಕಗಚ್ಛದ ಶ್ರೀಧರದೇವರ ಶಿಷ್ಯ ದೇಶಾಚಾರ್ಯರವರ ಶಿಷ್ಯರ್ಮ್ಮಾಘನಂದಿ ಭಟ್ಟಾರಕರವರ ಸಧರ್ಮ್ಮರ್ಗಳ್ ಚಂದ್ರಕೀರ್ತ್ತಿ ಭಟ್ಟಾರಕರವರ ಶಿಷ್ಯರ್ದ್ದಿ
2 ವಾಕರಣನ್ದಿ ಸಿದ್ಧಾನ್ತದೇವರವರ ಶಿಷ್ಯ ಚಾಂದ್ರಾಯಣ ದೇವಾಪರನಾಮಧೇಯರಪ್ಪ ಶ್ರೀಮಜ್ಜಯಕೀರ್ತ್ತಿದೇವರಾದಿಯಾಗಾ
3 ಸಮುದಾಯಂ ಮುಖ್ಯಮೀ ಬಸದಿಗೆ......ಇತ್ಯಾದಿ.[20]

ಆದುದರಿಂದ ಹೆಗ್ಗೆರೆಯ, ತಂಡಗದ, ಕರಡಾಳಿನ ಮತ್ತು ಚಿಕ್ಕ ಹನಸೋಗೆಯ ಶಾಸನಗಳಲ್ಲಿ ಬರುವ "ಚಾಂದ್ರಾಯಣ ದೇವ ಅಥವಾ ಚಾಂದ್ರಾಯಣೆದೇವ" ಮತ್ತು ಜಯಕೀರ್ತಿ ಒಬ್ಬನೇ ವ್ಯಕ್ತಿಯಾಗಿದ್ದು ಆತನೇ 'ಛಂದೋನುಶಾಸನ' ಗ್ರಂಥದ ಕರ್ತೃ ಎಂಬುದು ಖಚಿತವಾಗುತ್ತದೆ—"ಚಿತ್ರಲತೆ" ಎಂಬ ಉಲ್ಲೇಖದಿಂದ. ಈ ಜಯಕೀರ್ತಿ ಕ್ರಿ.ಶ. 1099 (ಶಾ.ಶ. 1021ನೆಯ ಪ್ರಮಾದಿ ಸಂವತ್ಸರ)[21]ರಲ್ಲಿ ಇದ್ದ ದಿವಾಕರನಂದಿ ಸಿದ್ಧಾನ್ತರ ಶಿಷ್ಯನಾಗಿದ್ದುದರಿಂದ ಅವನಿಗಿಂತ ಸ್ವಲ್ಪ ಚಿಕ್ಕವನಾಗಿರಬೇಕು. ದಿವಾಕರನಂದಿಯ ಸಮಕಾಲೀನ ಎಂಬುವರಲ್ಲಿ ಸಂದೇಹವಿಲ್ಲ. ಮತ್ತೆ ಕ್ರಿ.ಶ. 1149ರಲ್ಲಿ ಇದ್ದ ಗೋವಿಂದೇವನಿಂದ ಜಯಕೀರ್ತಿ ಪಾದಪೂಜೆಗೊಂಡನೆಂಬುದೂ ಸುಸ್ಪಷ್ಟವೇ ಇರುವುದರಿಂದ. 11ನೆಯ ಶತಮಾನದ ತುತ್ತತುದಿ ಮತ್ತು 12ನೆಯ ಶತಮಾನದ ಪೂರ್ವಾರ್ಧದಲ್ಲಿ, ಎಂದರೆ ಕ್ರಿ.ಶ. 1100ರ ಎಡಬಲದಲ್ಲಿ ಆತ ಬಾಳಿ ಬದುಕಿದನೆಂಬುದು ಖಚಿತವಾಗುತ್ತದೆ.

ಪಂಡಿತದ್ವಯರಾದ ಜುಗಲ್ ಕಿಶೋರ ಮುಖ್ತಾರ್ ಹಾಗೂ ನಾಥೂರಾಮ ಪ್ರೇಮಿ ಇವರು ಊಹಿಸಿರುವಂತೆ[22] ಚಿತ್ತೋಡಗಡ ಶಿಲಾಲೇಖನದಲ್ಲಿ ಬರುವ ದಿಗಂಬರ ಪಂಥದ ರಾಮಕೀರ್ತಿ

---

[18] *Ibid*, Tp. No. 94 (93ನೆಯ ಹಾಗೂ 94ನೆಯ ಶಾಸನಗಳು ಒಂದೇ ಶಾಸನದ ಎರಡು ಭಾಗಗಳಾಗಿದ್ದು ಅವನ್ನು ರೈಸ್ ಸಾಹೇಬರು ಎರಡೆಂದು ಏಕೆ ಪರಿಗ್ರಹಿಸಿದರೊ ನಮಗೆ ತಿಳಿಯದು.) ಎರಡೂ (ಹೆಗ್ಗೆರೆ ಮತ್ತು ಕರಡಾಳು) ಶಾಸನಗಳಲ್ಲಿ ಒಂದೇ ಪದ್ಯ ಬಂದಿದೆ (ಸ್ವಲ್ಪ ಪಾಠಾಂತರಗಳಿದ್ದುದು ಈ ಲೇಖಕನಿಗೆ ತಿಳಿದಿದೆ)]ಪು. 169

[19] *Ibid.*, Vol. IV *Yadatore*, No. 26, pp. 143

[20] *Ep.*, *Car*. Vol. IV, Yd. No. 28, pp 143

[21] *Ibid.*, Yd. No. 24, pp. 142 (Lines 23–26)

[22] ನಾಥೂರಾಮಪ್ರೇಮಿ. ಜೈನಸಾಹಿತ್ಯ ಔರ್ ಇತಿಹಾಸ (ಹಿಂದಿ) ಪು. 405

(ಸಂವತ್ 1207 ಕ್ರಿ.ಶ. 1149) ಈ ಜಯಕೀರ್ತಿಯ ಶಿಷ್ಯನಾಗಿದ್ದನೆಂಬ ಸಂಗತಿ 23 ಸರಿಯಾದ ವಿಷಯವೆಂದೇ ನಮಗೆ ತೋರುತ್ತದೆ. ನಾಥೂರಾಮ ಪ್ರೇಮಿಯವರು, 'ಯೋಗಸಾರ' ಗ್ರಂಥವಲ್ಲಿಯ ಉಲ್ಲೇಖದಲ್ಲಿ:

ಶ್ರೀ ಜಯಕೀರ್ತಿಸೂರಿಣಾ, ಶಿಷ್ಯೇಣಾಮಲಕೀರ್ತಿ ನಾ।
ಲೇಖಿತಂ ಯೋಗಸಾರಾಖ್ಯಂ ವಿದಾ ಶ್ರೀರಾಮಕೀರ್ತಿನಾ॥24

ಎಂಬುವದರಿಂದ, ರಾಮಕೀರ್ತಿಯು ಜಯಕೀರ್ತಿಯ ಶಿಷ್ಯನೆಂಬುದನ್ನು ಸಾಧಾರಣವಾಗಿ ವಿವರಿಸಿದ್ದಾರೆ. ಈ ವಿಷಯ ಸರಿಯೆಂಬುವದಕ್ಕೆ ಕಾರಣವೆಂದರೆ ಚಿಕ್ಕಹನಸೋಗೆಯ ಮಠದ ಗುರುಪರಂಪರೆಯೇ ಉತ್ತರ ಭಾರತದ ಆರಾಮಠದ ಅಧಿಪತಿಗಳೂ ಆಗಿರಬೇಕೆಂಬುದು. ಆರಾಮಠದ ಪ್ರಸಕ್ತಿ, ಚಿಕ್ಕಹನ ಸೋಗೆಯಲ್ಲಿಯ ಶಾಸನವೊಂದರಲ್ಲಿದೆ. ಸು. 11–12ನೆಯ ಶತಮಾನದಲ್ಲಿ ಬರೆಯಲಾದ ಅದರಲ್ಲಿ, ನನ್ನಿ ಚಂಗಾಳ್ವ ದೇವನು ಆರಾಮಠದ ತಾಂಬ್ರಶಾಸನದತ್ತಿಯನ್ನು ಮೊದಲಿನಂತೆ ಕಾವನೆಂದು ಬರೆಯಲಾಗಿದೆ......ಮುನ್ನಿನಂತೆ ಕಾದನಾರಾಮಠದತ್ತಿಯ ತಾಂಬ್ರ ಶಾಸನ ಪಡಿಯ।...ಇತ್ಯಾದಿ 25. ಆದುದರಿಂದ ಡಾ. ಎಂ. ಎಂ. ಕಲ್ಬುರ್ಗಿಯವರು ಹೇಳುವ "ಜೈನಮುನಿಗಳ ಪರ್ಯಟನ ಪ್ರವೃತ್ತಿ 12ನೆಯ ಶತಮಾನದ ಹೊತ್ತಿಗೆ ಶಿಥಿಲಗೊಂಡು ಅವರು ಒಂದೆಡೆ ನಿಲ್ಲಲು ಪ್ರಾರಂಭಿಸಿದ ಕಾರಣ ದೂರದ ಚಿತೋಡಗಡ ಶಾಸನೋಕ್ತ ರಾಮಕೀರ್ತಿಯ ಗುರು ಜಯಕೀರ್ತಿಗೂ ಕರ್ನಾಟಕದ ಜಯಕೀರ್ತಿಗೂ ಸಂಬಂಧ ಕಲ್ಪಿಸುವುದೆಂದರೆ ಕೇವಲ ನಾಮಸಾಮ್ಯದ ತಳುಕು. ಅದಕ್ಕಾಗಿ ಜುಗಲ್ ಕಿಶೋರ ಮುಖ್ತಾರ್ ಮತ್ತು ನಾಥೂರಾಮ ಪ್ರೇಮಿಯವರ ಅಭಿಪ್ರಾಯ ಊಹೆಯೇ ಸರಿ"26 ಎಂಬ ಹೇಳಿಕೆ ಸರಿಯಲ್ಲ. ಜಯಕೀರ್ತಿ ಹಲವು ಯತಿಗಳಿಂದ ಕೂಡಿದವನಾಗಿ (ಶಾಸನದಲ್ಲಿ ಬರುವ 'ಆ ಸಮುದಾಯ' ಎಂಬಮಾತನ್ನು ಗಮನಿಸಿ.) ಕನ್ನಡ ನಾಡಿನಲ್ಲಷ್ಟೇ ಅಲ್ಲ, ಉತ್ತರ ಭಾರತದಲ್ಲಿಯ ತಮ್ಮ ಆರಾಮಠಕ್ಕೂ ಹೋಗಿರಬೇಕು; ಉತ್ತರ ಭಾರತದಲ್ಲಿ ಪರ್ಯಟನಗೈದಿರಬೇಕು. ಹೀಗೆ ಉತ್ತರಕ್ಕೆ ಹೋದಾಗ್ಗೆ ರಾಮಕೀರ್ತಿಗೆ ಗುರುವಾಗಿರಬೇಕು. ಅಥವಾ ರಾಮಕೀರ್ತಿಯೇ ಜಯಕೀರ್ತಿಯ ಜೊತೆಗಿದ್ದ ಯತಿಗಳ ತಂಡಕ್ಕೆ ಸೇರಿರಬಹುದು–ಶಿಷ್ಯನಾಗಿರಬಹುದು. 'ಪಂಪ ಭಾರತ' ಮುಂತಾದ ಕನ್ನಡ ಗ್ರಂಥಗಳ ತಾಳವಾಲೆಯ ಪ್ರತಿಗಳು ಆರಾ ಎಂಬ ಸ್ಥಳದಲ್ಲಿಯ ಜೈನಪ್ರಾಚ್ಯ ಗ್ರಂಥಕೋಶಾಲಯದಲ್ಲಿ (Central Jain Oriental Library, Arrah) ದೊರೆಯಲು27 ಚಿಕ್ಕಹನಸೋಗೆ ಹಾಗೂ ಆರಾಮಠದ ಸಂಬಂಧವೇ ಕಾರಣವಾಗಿರಬೇಕೆಂದು ನಮಗೆ ಈಗ ತೋರುತ್ತದೆ. ಈ ವಿಷಯದಲ್ಲಿ ಇನ್ನೂ ಸಂಶೋಧನೆ ಆಗಬೇಕು.

'ಛಂದೋನುಶಾಸನ' ಗ್ರಂಥದ ಕರ್ತೃ ಜಯಕೀರ್ತಿ, 'ಚಾಂದ್ರಾಯಣದೇವ' ಎಂಬ ಅಪರನಾಮವನ್ನು ಹೊಂದಿದ್ದು 12ನೆಯ ಶತಮಾನದ ಪೂರ್ವಾರ್ಧದಲ್ಲಿ ಚಿಕ್ಕ ಹನಸೋಗೆ ಹಾಗೂ ತಲಕಾವೇರಿಯ

---

23 ಅದೇ, ಅ.ಟಿ. 2:
ಶ್ರೀ ಜಯಕೀರ್ತಿ ಶಿಷ್ಯೇಣ ದಿಗಮ್ಬರ ಗಣೇಶಿನಾ।
ಪ್ರಶಸ್ತಿರೀದೃಶೀ ಚಕ್ರೇ (ವಿದಾ।) ಶ್ರೀ ರಾಮಕೀರ್ತಿನಾ॥
ಸಂವತ್ 1207 ಸೂತ್ರಧಾ......ಇ.

24 ಅದೇ, ಪುಟ 405, ಅ.ಟಿ.2

25 *Ep. Car.*, Vol. IV, Yd. No. 25, pp. 143 (ಲಿಪ್ಯಂತರಕಾರರು ಇದನ್ನು ತಪ್ಪು ಓದಿರುವುದರ ಅರಿವು ಈ ಲೇಖಕನಿಗಿದೆ.)

26 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ', ಪು. 214–15

27 'ವಿಕ್ರಮಾರ್ಜುನ ವಿಜಯ'ದ ಉಪೋದ್ಘಾತ, ಪು. V (ಕ.ಸಾ.ಪ. ಮುದ್ರಣ)

ಬಸದಿಗಳಿಗೆ ಮತ್ತು ಅಲ್ಲಿನ ಯತಿಗಳ ಸಮುದಾಯಕ್ಕೆ ಮುಖ್ಯನಾಗಿದ್ದು[28] ಪ್ರಾಯಃ ಉತ್ತರ ಭಾರತವರ್ಷದ ಆರಾಮಕ್ಕೂ ಅಧಿಪತಿಯಾಗಿ ಬಾಳಿ ಬದುಕಿದನೆಂದೂ, ಆತ ಮೂಲಸಂಘದ ದೇಸಿಯ ಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯದ ದಿಗಂಬರ ಪಂಥಕ್ಕೆ ಸೇರಿದ ಜೈನ ಸಂನ್ಯಾಸಿ ಎಂದೂ ನಿರೂಪಿಸುವರೆ ತಪ್ಪಾಗದು[29]. ಹೆಗ್ಗೆರೆಯ ಶಾಸನ ಈ ದಿಶೆಯಲ್ಲಿ ಒಂದು ಹೊಸ ಸಾಧನವಾಗಿ ಕೈನೀಡಿಗೆ ಯಾಗಿದೆಯೆಂದು ಹೇಳಬಹುದು. ನಾಗವರ್ಮನ 'ಛಂದೋಂಬುಧಿ'ಯನ್ನು ಜಯಕೀರ್ತಿ ನೋಡಿದ್ದ ನೆಂಬ ಹೇಳಿಕೆಯಲ್ಲೂ ತಥ್ಯವಿದೆ ಎಂದೂ ಹೇಳಬಹುದು.

---

28 *Ep. Car.*, Vol IV, Yd. No. 26, pp. 143

29 *Ep. Car.*, Vol. xii, Tp. 110–94

ಸತಪತ್ರಬ್ರಜದಿಂ ಸರೋವರಕುಲಂ ಮೇರುಪ್ರಕೂಟಂ ಪ್ರಭೋ
ನ್ನತಿಯಿಂದದ್ರಿಚಯಿಂ[ಚಯಂ?]ಮದೇಭಪ [ಘ?]ಟೆಯಿಂ ಸೈನ್ಯಾಳಿ ಸನ್ಮಾರ್ಗ್ಗ ಸ
ತ್ಕ್ರತ[ತಿ?] ಕಾವ್ಯನಿಬಂಧಮಂತೆಸಗುಮಿಂತೀ ಲೋಕದೊಳ್[ಳ್?] ಲೋಕಸಂ
ಸ್ತುತ ಜಾಂಬ್ರಾಯುಣ ದೇವರಿಂದೆಸೆಗುಮೀ ಶ್ರೀ ಕೊಂಡ ಕುಂದಾನ್ವಯಂ॥

pp. 169

ಡಾ. ಎಚ್. ಎಂ. ಸದಾಶಿವಯ್ಯ

ಸಾಮಾಜಿಕ ಬದಲಾವಣೆ : ಗಾಂಧೀಜಿಯವರ ದೃಷ್ಟಿ

ಸಾಮಾಜಿಕ ಬದಲಾವಣೆಯನ್ನು ಸ್ಥೂಲವಾಗಿ ಸಾಮಾಜಿಕ ಸಂಬಂಧಗಳಲ್ಲಿ ಆಗುವ ಬದಲಾವಣೆಗಳೆಂದು ಹೇಳಬಹುದು. ಈ ಬದಲಾವಣೆಗಳು ವ್ಯಕ್ತಿ ವ್ಯಕ್ತಿ ಸಂಬಂಧಗಳಿಗೆ ಸೀಮಿತವಾಗದೆ, ಸಂಘ ಸಂಸ್ಥೆಗಳ ವಿವಿಧ ಸಂಬಂಧಗಳಿಗೆ ವ್ಯಾಪಕವಾಗಿರಬಹುದು. ವ್ಯಕ್ತಿ ಈ ಸಂಬಂಧಗಳ ಕೇಂದ್ರವೆಂಬುದನ್ನು ನಾವು ಕಡೆಗಣಿಸಬಾರದು.

ಪ್ರತಿಯೊಂದು ಸಮಾಜವೂ ನಿರಂತರವಾಗಿ ಬದಲಾವಣೆಯಾಗುತ್ತದೆ. ಕೆಲವು ಸಮಾಜಗಳಲ್ಲಿ ಆಗುವ ಬದಲಾವಣೆಗಳು ವಿಶೇಷವಾಗಿರುವುದರಿಂದ ಅವು ನಮ್ಮ ಅವಲೋಕನೆಗೆ ಹೆಚ್ಚಾಗಿ ಬೀಳುತ್ತವೆ. ಇನ್ನು ಕೆಲವು ಸಮಾಜಗಳಲ್ಲಿ ಬದಲಾವಣೆಗಳು ನಿಧಾನವಾಗಿ ಜರಗುತ್ತವೆ. ಆ ಸಮಾಜಗಳು ಹಿಂದುಳಿದ, ಬದಲಾವಣೆಯಾಗದ ಸಮಾಜಗಳೆಂಬ ಭ್ರಾಂತಿ ನಮ್ಮಲ್ಲಿ ಉಂಟಾಗುತ್ತದೆ. ಸ್ವಲ್ಪ ವಿವೇಚಿಸಿದರೆ ಬದಲಾವಣೆಯಾಗದ ಯಾವ ಸಮಾಜವೂ ಇಲ್ಲವೆಂಬ ವಿಷಯ ಸ್ಪಷ್ಟವಾಗಿ ತಿಳಿದು ಬರುತ್ತದೆ.

ಸಾಮಾಜಿಕ ಬದಲಾವಣೆ ಎಂಬುದು ಯಾವ ವಿಧವಾದ ಮೌಲ್ಯವನ್ನೂ ಸೂಚಿಸುವುದಿಲ್ಲ. ಬದಲಾವಣೆ ಯಾವಾಗಲೂ ಪ್ರಗತಿಪರವಾಗಿ ಇರಬೇಕಾದುದೂ ಇಲ್ಲ. ಆದರೆ ಸಾಮಾಜಿಕ ಬದಲಾವಣೆಗಳು ಪ್ರಗತಿಮಾರ್ಗದಲ್ಲಿ ಚಲಿಸಬಹುದು. ಕೆಲವು ಬದಲಾವಣೆಗಳು ಸಾಮಾಜಿಕ ಜೀವನಕ್ಕೆ ಕಂಟಕಪ್ರಾಯವಾಗಿರಬಹುದು. ಸಮಾಜಿಕ ಬದಲಾವಣೆ ಪ್ರಗತಿಯನ್ನು ಸಾಧಿಸಬೇಕಾದರೆ ಅದು ಒಂದು ಧ್ಯೇಯಕ್ಕೆ ಅನುಸಾರವಾಗಿ ಸಮಾಜದ ಸದಸ್ಯರಿಗೆ ಸುಖವನ್ನು ಒದಗಿಸಿಕೊಡಬೇಕು. ಆಗ ಅದನ್ನು ಪ್ರಗತಿಪೂರ್ವಕ ಬದಲಾವಣೆಗಳೆಂದು ಹೇಳುತ್ತೇವೆ. ಈ ಸಂದರ್ಭದಲ್ಲಿ ಪ್ರಕೃತಿ ವಿಜ್ಞಾನಗಳು ಸಾಧಿಸಿರುವ ಮಟ್ಟದ ಮುಂದೆ ಸಾಮಾಜಿಕ ವಿಜ್ಞಾನಗಳ ಸಾಧನೆ ಅತ್ಯಲ್ಪವಾಗಿ ಗೋಚರಿಸುತ್ತದೆ. ಆದ್ದರಿಂದಲೇ ಸುಪ್ರಸಿದ್ಧ ಮಾನವ ಶಾಸ್ತ್ರಜ್ಞನಾದ ರಾಡ್‌ಕ್ಲಿಫ್ ಬ್ರೌನ್ ಮಾನವ ಸಮಾಜ ವಿಜ್ಞಾನ ಅತ್ಯಂತ ಶೈಶವಾವಸ್ಥೆಯಲ್ಲಿದೆಯೆಂದು ತಿಳಿಸಿದ್ದಾನೆ.

ಲೌಕಿಕ ಜೀವನದ ವಿಷಯಗಳನ್ನು ಕಾರ್ಯಕಾರಣ ದೃಷ್ಟಿಯಿಂದ ಪರೀಕ್ಷಿಸುವ ಮನೋಭಾವವನ್ನು ಮಾನವ ಬಹಳ ಹಿಂದಿನಿಂದಲೂ ಬೆಳೆಸಿಕೊಂಡು ಬಂದಿದ್ದಾನೆ. ಪ್ರಕೃತಿ ನಿಯಮಗಳನ್ನು ಅವಲೋಕಿಸುವ ಸಂಗಡವೇ ಸಾಮಾಜಿಕ ಜೀವನದ ನಿಯಮಗಳನ್ನೂ ಅವಲೋಕಿಸಲು ಪ್ರಾರಂಭಿಸಿದ. ಸಮಾಜದ ನಿಯಮಗಳು ಪ್ರಕೃತಿ ನಿಯಮಗಳ ಪ್ರತಿಬಿಂಬವೆಂಬ ಭಾವನೆ ಬಹಳ ಕಾಲದ ವರೆಗೆ ವ್ಯಾಪಕವಾಗಿತ್ತು. ಕಾಲಕ್ರಮೇಣ ಮಾನವನಲ್ಲಿ ಸ್ವಾತಂತ್ರ್ಯ ಮತ್ತು ಅರ್ಥ ಎಂಬ ಭಾವನೆಗಳು ಇರುವುದರಿಂದಲೇ ಅವನ ಜೀವನ ವೈವಿಧ್ಯಪೂರ್ಣವಾಗಿರುವುದೆಂಬ ಅರಿವುಂಟಾಯಿತು. ಪ್ರಕೃತಿ ನಿಯಮಗಳು ಎಲ್ಲ ಕಾಲದೇಶಗಳಲ್ಲೂ ಒಂದೇ ಆಗಿವೆ. ಆದರೆ ಮಾನವಜೀವನದ ವಿವಿಧ ಮುಖಗಳಲ್ಲಿ ಅನೇಕ ವ್ಯತ್ಯಾಸಗಳು ಕಾಣಬರುತ್ತವೆ. ಆದುದರಿಂದ ಸಮಾಜವಿಜ್ಞಾನಿ ಪ್ರಕೃತಿವಿಜ್ಞಾನಿಗಿಂತ ಹೆಚ್ಚು ಶ್ರಮ ವಹಿಸುವುದು ಅಗತ್ಯ. ಇದಲ್ಲದೆ ಸಮಾಜ ವಿಜ್ಞಾನದ ಪ್ರಗತಿ ಪ್ರಕೃತಿ ವಿಜ್ಞಾನದ ಪ್ರಗತಿಗೆ ಸಮನಾಗದೆ ಇರಲು ಮತ್ತೊಂದು ಕಾರಣವಿರುತ್ತದೆ. ಮನುಷ್ಯ ತಾನು ಬಾಳುವ ಸಮಾಜದ ರೀತಿನೀತಿಗಳನ್ನು ನಿರ್ವಿಕಾರ ಮನಸ್ಸಿನಿಂದ ಅವಲೋಕಿಸುವುದು ಸುಲಭವಲ್ಲ. ಮಿಕ್ಕ ವಿಜ್ಞಾನಗಳ ವಸ್ತುವನ್ನು ವೀಕ್ಷಿಸು

ವಾಗ ನಿರ್ಲಿಪ್ತ ಮನೋಭಾವ ಸಾಧ್ಯ. ಆದರೆ ಮನುಷ್ಯ ತನ್ನ ಜೀವನದ ಹಾಸುಹೊಕ್ಕಾಗಿರುವ ವಿವಿಧ ಸಂಘಸಂಸ್ಥೆಗಳ ಕಾರ್ಯಕ್ಷೇತ್ರವನ್ನು ವೀಕ್ಷಿಸುವಾಗ ಆತನ ಆಸೆ ಆಕಾಂಕ್ಷೆಗಳು ಆತನ ಅಧ್ಯಯನದ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ. ನಿರ್ವಿಕಾರ ಮನೋಭಾವದಿಂದ ನೋಡುವವರು ಅತ್ಯಂತ ವಿರಳ. ಒಂದು ತಲೆಮಾರಿಗೆ ಒಬ್ಬಿಬ್ಬರು ಸಿಕ್ಕಬಹುದು.

ಭೌತಶಾಸ್ತ್ರದ ಒಂದು ನಿಯಮವನ್ನು ಹೊಸದಾಗಿ ತಿಳಿದುಬಂದ ಜ್ಞಾನದ ಆಧಾರದ ಮೇಲೆ ಬದಲಾಯಿಸುವ ಆವಶ್ಯಕತೆ ತೋರಿ ಬಂದರೆ ಆತ ಅದನ್ನು ನಿರ್ಭಯವಾಗಿ ತಿಳಿಸಬಹುದು. ಆದರೆ ಸಾಮಾಜಿಕ ಸಂಬಂಧಗಳಲ್ಲಿ ಇರುವ ಅನ್ಯಾಯವನ್ನು ತೋರಿಸಲು ಅದೇ ರೀತಿಯ ವಸ್ತುನಿಷ್ಠೆಯ ಮನೋಭಾವ ಬಹಳ ದುರ್ಲಭ. ಸಾಕ್ರಟೀಸನ ನಿರ್ಭಯತೆ ಪ್ಲೇಟೋಗೆ ಇರಲಿಲ್ಲ. ವೈಜ್ಞಾನಿಕ ದೃಷ್ಟಿಗೆ ತಳಹದಿಯನ್ನು ಹಾಕಿದ ಅರಿಸ್ಟಾಟಲನೂ ತಾನು ಸರಿ ಎಂದು ಭಾವಿಸಿದ ಅಭಿಪ್ರಾಯವನ್ನು ತಿಳಿಸಲು ಹಿಂಜರಿದ. ಆತ ಗುಲಾಮಗಿರಿ ನ್ಯಾಯವಾದ ಪದ್ಧತಿಯಲ್ಲವೆಂದು ತಿಳಿದಿದ್ದ. ಆದರೆ ಆ ಪದ್ಧತಿ ಅಂದಿನ ಸಮಾಜದಲ್ಲಿ ಎಲ್ಲ ದೇಶಗಳಲ್ಲೂ ವ್ಯಾಪಕವಾಗಿತ್ತು. ಆದ್ದರಿಂದ ಕೆಲವರು ಅವರ ಸ್ವಭಾವದಿಂದ (ನೈಜವಾಗಿ) ಗುಲಾಮರಾಗಲು ಅರ್ಹರೆಂದು ತಿಳಿಸಿದ. ಆದರೆ ಆ ಸ್ವಭಾವವೇನೆಂಬುದನ್ನು ತಿಳಿಸಲಿಲ್ಲ. ಗುಲಾಮಗಿರಿಯ ವಿಚಾರದಲ್ಲಿ ತನ್ನ ನಿಜವಾದ ಅಭಿಪ್ರಾಯವನ್ನು ಆತ ಮರಣಶಾಸನದಲ್ಲಿ ನಿರೂಪಿಸಿದ್ದ. ಆತ ತನ್ನ ಗುಲಾಮರೆಲ್ಲರೂ ತನ್ನ ಮರಣಾನಂತರ ಸ್ವತಂತ್ರರೆಂದು ತಿಳಿಸಿದ್ದ. ಇದನ್ನು ಚರಿತ್ರೆಯ ಪ್ರಥಮ ಗುಲಾಮವಿಮೋಚನಾ ಘೋಷಣೆಯೆಂದು ಹೇಳಲಾಗಿದೆ. ಹೀಗೆ ಮಾನವನ ಚರಿತ್ರೆಯಲ್ಲಿ ಮಾನವ ಸಂಬಂಧಗಳ ವಿಚಾರದಲ್ಲಿ ವಿವೇಚಿಸಿ ನಿರ್ಭಯವಾಗಿ ಅವುಗಳನ್ನು ತಿಳಿಸಿದವರು ಬಹಳ ವಿರಳ. ಸಾಧಾರಣವಾಗಿ ಅನೇಕರು ಇರುವ ಸ್ಥಿತಿಯನ್ನು ಸರಿ ಎಂದು ತಿಳಿಸಲು ಪ್ರಯತ್ನಿಸುತ್ತಿದ್ದರು. ಮಾನವನ ಏಳಿಗೆಗೆ. ಮಾನವತ್ವಕ್ಕೆ ಅಗತ್ಯವಾಗಿ ಅನುಸರಿಸಬೇಕಾದ ನಡೆವಳಿಕೆಯನ್ನು ನಿರೂಪಿಸುವ ಗೋಜಿಗೆ ಹೋಗಲಿಲ್ಲ. ಇದರಿಂದ ಧಾರ್ಮಿಕರು ಮಾನವ ಜೀವನದ ರೀತಿಯ ವಿಚಾರವಾಗಿ ಆಲೋಚಿಸಲಿಲ್ಲವೆಂದು ಅರ್ಥಮಾಡಿಕೊಳ್ಳಬಾರದು. ಜನರು ಸಮಾಜದಲ್ಲಿ ಬಾಳಬೇಕಾದ ರೀತಿಯನ್ನೂ ಅವರು ಜೀವನದಲ್ಲಿ ನೆನಪಿಡಬೇಕಾದ ಆದರ್ಶಗಳನ್ನೂ ಪೂರ್ವಕಾಲದಲ್ಲಿ ನಾನಾ ದೇಶಗಳಲ್ಲಿ ಬಾಳಿದ ಮಹಾ ವ್ಯಕ್ತಿಗಳು ನೀತಿಶಾಸ್ತ್ರ ಮತ್ತು ಧರ್ಮ ನಿರೂಪಣೆಯ ಮಾರ್ಗದಲ್ಲಿ ಬೋಧಿಸಿದರು. ಸಾಮಾಜಿಕ ಜೀವನದಲ್ಲಿ ವಾಸ್ತವಿಕತೆಗೆ ಹೆಚ್ಚು ಗಮನಕೊಡಲಿಲ್ಲ. ಸಾಮಾಜಿಕ ಜೀವನದಲ್ಲಿ ವ್ಯಕ್ತಿಯ ಮೇಲೆ ಪ್ರಭಾವ ಬೀರುವ ಹಲವಾರು ಶಕ್ತಿಗಳ ಪ್ರಭಾವವನ್ನು ನಿತ್ಯ ಜೀವನಕ್ಕೆ ಸಂಬಂಧಿಸಿದಂತೆ ವಿವರಣೆಗಳನ್ನು ತಿಳಿದುಕೊಳ್ಳುವ ಪ್ರಯಾಸಕ್ಕೆ ಹೋಗಲಿಲ್ಲ. ಒಟ್ಟಿನಲ್ಲಿ ಅವರು ಕೇವಲ ಆದರ್ಶಗಳ ಬೆಳಕಿನಲ್ಲಿ ಸಮಾಜದ ಸ್ಥಿತಿಗತಿಗಳನ್ನು ನಿರೂಪಿಸಿದರು. ಅವುಗಳ ವಿಚಾರದಲ್ಲಿ ಕೇವಲ ಸೂತ್ರರೂಪದಲ್ಲಿ ಸ್ಥೂಲವಾಗಿ ಹೇಳಿದರು. ಪ್ಲೇಟೋನ ರಿಪಬ್ಲಿಕ್ 'ಅರಿಸ್ಟಾಟಲನ ಪಾಲಿಟಿಕ್ಸ್. ಕೌಟಿಲ್ಯನ ಅರ್ಥಶಾಸ್ತ್ರ. ಮನು ಮೊದಲಾದವರ ಧರ್ಮಶಾಸ್ತ್ರಗಳು ಉದಾಹರಣೆಗಳು. ತಾತ್ವಿಕ. ನೈತಿಕ ಮತ್ತು ಆದರ್ಶ ದೃಷ್ಟಿ ಸಾಮಾಜಿಕ ಜೀವನಕ್ಕೆ ಅಗತ್ಯವಾದರೂ ಮುಖ್ಯವಾಗಿ ಸಮಾಜದ ವಾಸ್ತವಿಕ ಸಂಗತಿಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಅವಲೋಕಿಸಿ, ವೈಜ್ಞಾನಿಕ ಪದ್ಧತಿಯಿಂದ ಅವುಗಳನ್ನು ಅಧ್ಯಯನ ಮಾಡುವ ಗೋಜಿಗೆ ಹೋಗಲಿಲ್ಲ.

ಸಮಾಜಶಾಸ್ತ್ರ ಬೆಳೆದು ರೂಪುಗೊಂಡದ್ದು ಪಾಶ್ಚಾತ್ಯದೇಶಗಳಲ್ಲಿ. ನಮ್ಮ ದೇಶದಲ್ಲಿ ಸಮಾಜಶಾಸ್ತ್ರ ಸುವ್ಯವಸ್ಥಿತವಾಗಿ ಬೆಳೆದದ್ದು ಇಂಗ್ಲಿಷರ ಸಂಪರ್ಕವಾದ ಮೇಲೆ. ಸಾಮಾಜಿಕ ಸಂಬಂಧಗಳ ವಿಚಾರವಾಗಿ ವಸ್ತುನಿಷ್ಠೆಯ ದೃಷ್ಟಿಯಿಂದ ಹಲವಾರು ಅಧ್ಯಯನಗಳು ರೂಪಿತವಾಗಿವೆ.

ಸಾಮಾಜಿಕ ಸಂಬಂಧಗಳಲ್ಲಿ ಆಗುವ ಬದಲಾವಣೆಗಳಿಗೆ ಹಲವಾರು ಕಾರಣಗಳಿರುತ್ತವೆ. ಸ್ಥೂಲವಾಗಿ ಅವುಗಳನ್ನು ಜೈವಿಕ ಅಂಶಗಳು. ಭೌತಿಕ ಅಂಶಗಳು: ತಾಂತ್ರಿಕ ಅಂಶಗಳು ಮತ್ತು ಸಾಂಸ್ಕೃತಿಕ ಅಂಶಗಳೆಂದು ವಿಂಗಡಿಸಬಹುದು. ಸಾಮಾಜಿಕ ಬದಲಾವಣೆಯ ವಿಚಾರದಲ್ಲಿ ಗಾಂಧೀಜಿಯವರ ದೃಷ್ಟಿ ಮತ್ತು ಅವರು ನಿರ್ವಹಿಸಿದ ಪಾತ್ರ ಸಾಂಸ್ಕೃತಿಕ ಅಂಶಗಳಿಗೆ ಸಂಬಂಧಿಸಿದುದು.

ಸಾಮಾಜಿಕ ಬದಲಾವಣೆಗಳಲ್ಲಿ ಮಹಾವ್ಯಕ್ತಿಗಳ ಪಾತ್ರ ಅತ್ಯಂತ ಮುಖ್ಯವಾದುದು. ವ್ಯಕ್ತಿ ಕೇವಲ ಆಗಿನ ಕಾಲದ ಸಾಮಾಜಿಕ ಶಕ್ತಿಗಳನ್ನು ರೂಪಿಸುವ ಕಾರ್ಯದಲ್ಲಿ ನಿರತನಾಗಿರುವನೆಂದೂ,

ಆತನೇ ಹೊಸದಾಗಿ ಯಾವ ಶಕ್ತಿಯನ್ನೂ ನಿರ್ಮಿಸಲಾರನೆಂದೂ ಅನೇಕರು ತಿಳಿಸಿದ್ದಾರೆ. ಇದರ ವಿಚಾರದಲ್ಲಿ ನಾವು ಚರ್ಚೆಯ ಗೊಡವೆಗೆ ಹೋಗದೆ, ಒಬ್ಬ ಮಹಾವ್ಯಕ್ತಿಯ ಕಾರ್ಯಸಾಧನೆಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ನಿರೂಪಿಸಬಹುದು.

ಮಹಾತ್ಮಗಾಂಧಿಯವರು ಕೇವಲ ತಾತ್ವಿಕ ವಿಜ್ಞಾನಿಯಲ್ಲ. ಅವರು ಪ್ರಾಯೋಗಿಕ ವಿಜ್ಞಾನಿ. ಅವರು ಕೇವಲ ದಾರ್ಶನಿಕರಲ್ಲ. ಅವರು ಮಾನವ ಜೀವನದಲ್ಲಿ ಅನುಸರಿಸಬೇಕಾದ ನೀತಿನಿಯಮಗಳನ್ನು ವಿವಿಧ ರೀತಿಯಲ್ಲಿ ಬೋಧಿಸಿದವರಲ್ಲದೆ ಅವನ್ನು ತಮ್ಮ ಜೀವನದಲ್ಲಿ ನಿರಂತರವಾಗಿ ಪ್ರಯೋಗಿಸಿದರು. ಅವರ ಅನುಯಾಯಿಗಳು ಆ ತತ್ವಗಳನ್ನು ಪ್ರಯೋಗಿಸುವಂತೆ ಪ್ರಚೋದಿಸಿದರು. ಅವುಗಳ ನಿರ್ವಹಣೆ ಯಲ್ಲಿ ಬರುವ ದೋಷಗಳನ್ನು ನಿರ್ವಿಕಾರ ಮನಸ್ಸಿನಿಂದ ಅವಲೋಕಿಸಿ, ಅವುಗಳಲ್ಲಿ ನ್ಯೂನತೆಗಳು ಕಂಡು ಬಂದರೆ ಅವುಗಳನ್ನು ಬದಲಾಯಿಸಲು ಹಿಂಜರಿಯುತ್ತಿರಲಿಲ್ಲ. ಅವರು ಕೇವಲ ಬೋಧನೆಯಲ್ಲಿ ತೃಪ್ತ ರಾಗದೆ, ಅವನ್ನು ನಿತ್ಯ ಜೀವನದಲ್ಲಿ ವ್ಯವಹಾರದಲ್ಲಿ, ಹೇಗೆ ಅಳವಡಿಸಿಕೊಳ್ಳಬೇಕೆಂಬುದನ್ನು ಜನರಿಗೆ ಮನವರಿಕೆ ಮಾಡಲು ನಿರಂತರವಾಗಿ ಶ್ರಮಿಸಿದರು. ಅವರು ಯಾವ ವಿಷಯವನ್ನೇ ಆಗಲಿ ವಿಚಾರ ಮಾಡದೆ ಯಾರೂ ಒಪ್ಪಕೂಡದೆಂದು ಪದೇಪದೇ ತಿಳಿಸುತ್ತಿದ್ದರು. ಅವರ ಜೀವನದ ಮಾರ್ಗವೇ ಅದಕ್ಕೆ ಸಾಕ್ಷಿಯಾಗಿದೆ. ಒಂದು ವಿಷಯ ಬಹಳ ಗಹನವಾದ, ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರವಾಗಿರ ಬಹುದು. ಅಥವಾ ಅದು ಸಾಧಾರಣವಾದ ವಿಚಾರವಾಗಿರಬಹುದು. ಅವರು ಪ್ರತಿಯೊಂದು ಸಂಗತಿ ಯನ್ನೂ ಕಾರ್ಯಕಾರಣ ದೃಷ್ಟಿಯಿಂದ ಸರಿಯಾದ ವಿಷಯಗಳ ಆಧಾರದ ಮೇಲೆ ಪರೀಕ್ಷಿಸಿ ನಿರ್ಧರಿಸ ಬೇಕೆಂದು ತಿಳಿಸುತ್ತಿದ್ದರು. "ನಾನು ಎಲ್ಲರಿಗಿಂತಲೂ ಹೆಚ್ಚು ಪ್ರಜಾಪ್ರಭುತ್ವವಾದಿಯಾಗಿದ್ದೇನೆ" ಎಂದು ಗಾಂಧೀಜಿಯವರು ಆಗಾಗ್ಗೆ ಹೇಳುತ್ತಿದ್ದರು. ಅವರು ಇನ್ನೊಬ್ಬರ ಮೇಲೆ ಎಂದೂ ಯಾವ ಬಗೆಯ ಒತ್ತಾಯವನ್ನೂ ಹೇರುತ್ತಿರಲಿಲ್ಲ. ಇದು ರಾಷ್ಟ್ರಸಭೆಯ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆಗೆ ಬಂದ ವಿಷಯವಾಗಿದ್ದಿರಬಹುದು. ಅಥವಾ ಮದುವೆಯ ವಿಚಾರದಲ್ಲಿರುವ ಒಂದು ಸಮಸ್ಯೆಯಾಗಿದ್ದಿರ ಬಹುದು. ಎಲ್ಲ ವಿಷಯಗಳನ್ನೂ ಅವರು ಬಿಚ್ಚು ಮನಸ್ಸಿನಿಂದ ಚರ್ಚಿಸಿ ತಮ್ಮ ಅಭಿಪ್ರಾಯವನ್ನು ಜನರ ಮುಂದಿಡುತ್ತಿದ್ದರು. ಸಂದೇಹವಿದ್ದರೆ ಚರ್ಚಿಸಲು ಸದಾ ಸಿದ್ಧರಿರುತ್ತಿದ್ದರು. ಇದು ಪ್ರಗತಿಗೆ ಅಗತ್ಯವಾದ ಮಾರ್ಗ. ಒಂದು ಬಾರಿ ಕಾರ್ಯಕಾರಿ ಸಮಿತಿಯಲ್ಲಿ ದೇಶಬಂಧು ದಾಸರು "ಇಂದು ನಾನು ಮಹಾತ್ಮಗಾಂಧಿಯವರ ಸಂಗಡ ಬಹಳ ಚರ್ಚೆಮಾಡುವ ವಿಷಯಗಳನ್ನು ಗೊತ್ತುಮಾಡಿಕೊಂಡಿರುವೆನು. ಎಂದು ಹೇಳಿ ಸಭೆಗೆ ಹೋದರು. ಗಾಂಧೀಜಿಯವರ ಪವಿತ್ರ ಪ್ರಾಮಾಣಿಕವಾದ ವಿಚಾರಸರಣಿಯನ್ನು ಕೇಳಿ ಅವರ ಸಂದೇಹಗಳು ನಿವೃತ್ತಿಯಾದುವು. ಹೀಗೆಯೇ ಭಾರತವನ್ನು ಇಬ್ಭಾಗ ಮಾಡುವ ವಿಚಾರ ದಲ್ಲೂ ಅವರು ಬಿಚ್ಚುಮನಸ್ಸಿನಿಂದ ಚರ್ಚಿಸಿ, ಎದುರಾಳಿಗಳನ್ನು ಸಕಾರಣವಾಗಿ ತಮ್ಮ ಕಡೆ ಒಲಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದರು. ಸಾಮಾಜಿಕ ಬದಲಾವಣೆಯಲ್ಲಿ ಮುಖ್ಯವಾಗಿ ನಾವು ವ್ಯಕ್ತಿಯನ್ನು ಗಣನೆಗೆ ತಂದುಕೊಂಡು ಆತ ಸ್ವಂತ ಇಚ್ಛೆಯಿಂದ ಬದಲಾವಣೆಗೆ ಒಪ್ಪುವಂತೆ ಮಾಡುವುದು ಅಗತ್ಯ.

ಪ್ರತಿಯೊಂದು ಸಮಾಜದಲ್ಲೂ ನಾವು ಸಾಮಾಜಿಕ ಭಿನ್ನತೆಗಳನ್ನೂ ಶ್ರೇಣಿಗಳನ್ನೂ ಕಾಣಬಹುದು. ಈ ಪ್ರಕ್ರಿಯೆಗಳು ಕುಟುಂಬದ ನೆರೆಹೊರೆ, ರಾಜಕೀಯ–ಆರ್ಥಿಕ–ಧಾರ್ಮಿಕವೇ ಮುಂತಾದ ಸಂಘ ಸಂಸ್ಥೆಗಳು—ಇವನ್ನು ರೂಪಿಸುತ್ತವೆ. ಈ ವಿವಿಧ ಸಂಘ ಸಂಸ್ಥೆಗಳು ವ್ಯಕ್ತಿಯ ನೀತಿ ಮೌಲ್ಯಗಳನ್ನು ಗೊತ್ತು ಮಾಡುತ್ತವೆ. ಈ ನೀತಿನಿಯಮಗಳು ಒಂದು ಸಮಾಜದಿಂದ ಇನ್ನೊಂದು ಸಮಾಜಕ್ಕೆ ಭಿನ್ನ ವಾಗಿರುತ್ತವೆ. ಈ ಭಿನ್ನತೆಯಿಂದ ಸಮಾಜದಲ್ಲಿ ಹಲವಾರು ಘರ್ಷಣೆಗಳು ಅನಿವಾರ್ಯವೆಂದು ಹಲವು ಬಾರಿ ನಮಗೆ ಗೋಚರಿಸುತ್ತದೆ. ಈ ಭಿನ್ನತೆಗಳು ಸಮಾಜ ಸಂಬದ್ಧತೆಗೆ ಅಡಚಣೆಯನ್ನುಂಟು ಮಾಡುತ್ತವೆ.

ಒಂದು ಸಮಾಜದಲ್ಲಿ ಭಿನ್ನಭಿನ್ನವಾಗಿರುವ ಮೌಲ್ಯಗಳನು ವಿವಿಧ ಸಂಸ್ಥೆಗಳು ಹೊಂದಿದ್ದರೆ ಅವನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಂಡು, ಅವುಗಳಲ್ಲಿ ಒಂದು ಸಾಮರಸ್ಯ ಭಾವನೆಯನ್ನು ತಂದರೆ ಒಂದು ಹೊಸ ಸಮಾಜವ್ಯವಸ್ಥೆ ಅಸ್ತಿತ್ವಕ್ಕೆ ಬರುತ್ತದೆ. ಭೇದದಿಂದ ವಿರೋಧ ಸಿದ್ಧವಾಗು ವುದಿಲ್ಲ. ಭೇದ ಸಹಕಾರಿಯಾದರೆ ಸಾಮಾಜಿಕ ಜೀವನ ಚೆನ್ನ. ನಾವು ಯುದ್ಧವನ್ನು ವರ್ಜಿಸಿ ಒಂದು ರಚನಾತ್ಮಕ ಲೋಕಹಿತಾರ್ಥ ವ್ಯವಸ್ಥೆಯನ್ನು ಸ್ಥಾಪಿಸಬೇಕಾದರೆ ನಮ್ಮ ಸಂಸ್ಕೃತಿಯನ್ನು ಮತ್ತು

ಸಮಾಜದ ಸಂಘಸಂಸ್ಥೆಗಳನ್ನು ಮತ್ತು ಸಮಾಜದ ಸದಸ್ಯರನ್ನು ಏಕಕಾಲದಲ್ಲಿ ಮಾರ್ಪಡಿಸಬೇಕು. ಈ ಬಗೆಯ ಒಂದು ಪೂರ್ಣ ದೃಷ್ಟಿ ನಮಗೆ ಗಾಂಧೀಜಿಯವರ ಸಮಾಜ ಬದಲಾವಣೆಯ ಪ್ರಯತ್ನದಲ್ಲಿ ಗೋಚರಿಸುತ್ತದೆ. ಅವರ ಸಾಮಾಜಿಕ ವ್ಯವಸ್ಥೆಯ ತತ್ತ್ವ ಸಮಾಜದ ಪ್ರತಿಯೊಂದು ಭಾಗಕ್ಕೂ ಅನ್ವಯಿಸುತ್ತದೆ. ಅವರ ದೃಷ್ಟಿಯಲ್ಲಿ ಸಾಮಾಜಿಕ ಬದಲಾವಣೆ ಕೇವಲ ಒಂದು ಭಾಗಕ್ಕೆ ಸೀಮಿತವಾದುದಲ್ಲ. ಅವರ ಪೂರ್ಣ ದೃಷ್ಟಿ ಸಮಾಜದ ಎಲ್ಲ ಭಾಗಗಳನ್ನೂ ಆವರಿಸಿ, ಅವುಗಳಲ್ಲಿ ಪರಸ್ಪರ ವಿರೋಧ ಭಾವನೆಗಳು ತಲೆದೋರದಂತೆ, ಒಂದು ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಲು ನಿರಂತರವಾಗಿ ಪ್ರಯತ್ನಿಸಿದರು. ಗಾಂಧೀಜಿಯವರ ಬರವಣಿಗೆಗಳನ್ನು ಅವಲೋಕಿಸಿದರೆ, ಅವರು ವೈಯಕ್ತಿಕ ಶುಚಿತ್ವದಿಂದ ಹಿಡಿದು ರಾಷ್ಟ್ರಕ್ಕೆ ಸಂಬಂಧಿಸಿದ ಅತ್ಯಂತ ವ್ಯಾಪಕವಾದ ವಿಷಯಗಳ ವರೆಗೂ ನಿಧಾನವಾಗಿ ವಿಚಾರ ಮಾಡಿ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು. ಆ ಸಮಸ್ಯೆಗಳಿಗೆ ಒಂದು ಗೊತ್ತಾದ ನಿವಾರಣೋಪಾಯವನ್ನು ಸೂಚಿಸುತ್ತಿದ್ದರು. ಈ ಸೂಚನೆಗಳನ್ನು ಕಾರ್ಯಗತಮಾಡುವುದು ಶಕ್ಯವೆಂಬುದನ್ನು ತಮ್ಮ ಜೀವನದಿಂದ ನಿದರ್ಶಿಸುತ್ತಿದ್ದರು. ಆದುದರಿಂದಲೆ ಗಾಂಧೀಜಿಯವರು ಕೇವಲ ತಾತ್ತ್ವಿಕ ವಿಜ್ಞಾನಿಯಲ್ಲ. ಅವರು ಪ್ರಾಯೋಗಿಕ ವಿಜ್ಞಾನಿ. ಅವರು ತಮ್ಮ ಆತ್ಮಕಥೆಯನ್ನು ಸತ್ಯಶೋಧನೆಯೆಂದು. ತಾವು ಈ ಬಗ್ಗೆ ನಡೆಸಿದ ಪ್ರಯೋಗಗಳಿಂದು ಭಾವಿಸಿದರು.

ಗಾಂಧೀಜಿಯವರ ನಿರಂತರ ಕಾರ್ಯಶೀಲತೆ ಕೆಲವರಿಗೆ ತಪ್ಪು ಭಾವನೆಗೆ ಎಡೆಕೊಟ್ಟಿತ್ತು. ಅವರು ತತ್ತ್ವದ ಅಧ್ಯಯನಕ್ಕಿಂತ ಹೆಚ್ಚಾಗಿ ಕಾರ್ಯನಿರ್ವಹಣೆಯಲ್ಲಿ ಆಸಕ್ತಿಯನ್ನು ತೋರಿಸುವರೆಂಬ ಭಾವನೆ ಕೆಲವರಲ್ಲಿತ್ತು. ಅವರು ಕಾರ್ಯಕ್ಕೆ ಅಧಿಕ ಗಮನ ಕೊಡುತ್ತಿದ್ದುದು ನಿಶ್ಚಯ. ಆದರೆ ಅವರ ಕಾರ್ಯನಿರ್ವಹಣೆ ಆಳವಾದ ಆಲೋಚನೆಯ ಫಲವಾಗಿತ್ತು. ಅವರು ಯಾವ ಕಾರ್ಯವನ್ನೇ ಆಗಲಿ, ಅದರಿಂದ ವೈಯಕ್ತಿಕವಾಗಿ ಯಾವ ವಿಧವಾದ ಪ್ರಯೋಜನವೇ ಬರಲಿ, ಅದನ್ನು ಅವರು ಕೇವಲ ಸಮಯಸಾಧಕ ದೃಷ್ಟಿಯಿಂದ ನಿರ್ವಹಿಸುತ್ತಿರಲಿಲ್ಲ. ಅವರ ಪ್ರತಿಯೊಂದು ಕಾರ್ಯವೂ ಆಳವಾದ ತತ್ತ್ವದೃಷ್ಟಿಯ ಫಲ. ಇದೂ ಅಲ್ಲದೆ ಅವರು ತಮ್ಮ ಪ್ರತಿಯೊಂದು ಭಾವನೆಯನ್ನೂ ಮೊದಲು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಅದು ಸರಿಯಾದ ರೀತಿಯಲ್ಲಿ ಫಲಿತಾಂಶವನ್ನು ಕೊಡಬಲ್ಲದೇ. ಎಂಬುದನ್ನು ಮೊದಲು ತಮ್ಮ ಜೀವನದ ಕ್ಷೇತ್ರದಲ್ಲಿ ಪರೀಕ್ಷಿಸುತ್ತಿದ್ದರು. ಅನಂತರ ಅದನ್ನು ಮಿಕ್ಕವರು ಅನುಸರಿಸಬಹುದೆಂದು ಧೈರ್ಯವಾಗಿ ಸೂಚಿಸುತ್ತಿದ್ದರು. ಅವರ ಜೀವನವನ್ನು ನಾವು ಆಳವಾಗಿ ಅವಲೋಕಿಸಿದರೆ, ಅವರ ಜ್ಞಾನ ಕೇವಲ ಅವರ ಬೆಳವಣಿಗೆಗೆ ಸೀಮಿತವಾಗಿರಲಿಲ್ಲವೆಂಬುದು ತಿಳಿದು ಬರುತ್ತದೆ. ಪ್ರತಿಯೊಂದು ಹಂತದಲ್ಲೂ ಪ್ರಪಂಚದ ವಿವಿಧ ವ್ಯಾಪಾರಗಳಿಗೆ ಅದು ಎಷ್ಟರ ಮಟ್ಟಿಗೆ ಅನ್ವಯಿಸುತ್ತದೆಂಬುದನ್ನು ಸದಾ ಅವರು ಪರೀಕ್ಷಿಸುತ್ತಿದ್ದರು. ಅವರದು ಅಚ್ಚ ವೈಜ್ಞಾನಿಕ ಮನೋವೃತ್ತಿ. ಅವರು ಸದಾ ಪ್ರಯೋಗದಲ್ಲಿ ನಿರತರಾಗಿದ್ದರು. ಜೀವನವೇ ಅವರ ಪ್ರಯೋಗಶಾಲೆ.

ಗಾಂಧೀಜಿಯವರ ಬರವಣಿಗೆಗಳಲ್ಲಿ ಅವರ ಜೀವನಮಾರ್ಗದ ಮೂಲತತ್ತ್ವಗಳನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾದವು ಕೆಲವು. ಅವು ತತ್ತ್ವದ ತಿರುಳು. ಇನ್ನುಳಿದ ಕೆಲವು ಪರಿಧಿಗೆ ಸೇರಿದವು. ಈ ಸಂದರ್ಭದಲ್ಲಿ ನಾವು ಒಂದು ವಿಚಾರವನ್ನು ಸ್ಮರಿಸಬಹುದು. ಅನೇಕ ಸಂತರು ಬೋಧಿಸಿರುವ ತತ್ತ್ವದ ತಿರುಳನ್ನು ಮೂಲೆಗೊತ್ತಿ ಅವರು ನಿರೂಪಿಸಿದ ಪರಿಧಿಗೆ ಸಂಬಂಧಿಸಿದ ವಿಚಾರಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿರುವುದನ್ನು ನಾವು ಕಾಣಬಹುದು. ಉದಾ: ಪೂಜೆ ಮೊದಲಾದ ಧರ್ಮದ ಕ್ರಿಯಾವಿಧಿಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಧರ್ಮದ ತಿರುಳಿಗೆ (ತತ್ತ್ವಕ್ಕೆ) ವಿರೋಧವಾದ ನಡೆವಳಿಕೆಗಳನ್ನೂ ಕಾಣಬಹುದು.

ಅವರು ತಿಳಿಸಿದ ಹಲವು ವಿಚಾರಗಳಲ್ಲಿ—ಉದಾಹರಣೆ: ಮೂಲಶಿಕ್ಷಣ, ಕೈಗಾರಿಕಾನೀತಿ ಮೊದಲಾದವುಗಳಲ್ಲಿ—ಪ್ರತಿಯೊಂದು ಯೋಜನೆಯೂ ಕಾರ್ಯಗತಮಾಡಲು ಸಾಧ್ಯವಿಲ್ಲ. ಅದು ಸಾಧುವೂ ಅಲ್ಲವೆಂದು ಆ ಕ್ಷೇತ್ರಗಳ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅವರು ನಿರೂಪಿಸಿದ ಜೀವನದ ತತ್ತ್ವಗಳನ್ನು ಸೂಚಿಸುವ ಮೊದಲು, ಸಾಮಾಜಿಕ ಬದಲಾವಣೆಯ ವಿಚಾರದಲ್ಲಿ ಅವರಿಗಿದ್ದ ಹಲವು ಭಾವನೆಗಳನ್ನು ಸ್ಮರಿಸಬೇಕು. ಒಂದು ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಿ, ಗಣನೀಯ ಮಟ್ಟದಲ್ಲಿ

ಪ್ರಗತಿಯನ್ನು ಸಾಧಿಸಬೇಕಾದರೆ, ಅದರ ಸಾಂಸ್ಕೃತಿಕ ವ್ಯವಸ್ಥೆ, ಸಮಾಜದಲ್ಲಿರುವ ಸಂಘಗಳ ಪರಸ್ಪರ ಸಂಬಂಧಗಳು ಮತ್ತು ವ್ಯವಸ್ಥೆಗಳನ್ನು ಬದಲಾಯಿಸುವುದು ಅಗತ್ಯವೆಂದು ಗಾಂಧೀಜಿಯವರು ಭಾವಿಸಿದರು. ಆದುದರಿಂದಲೇ ಅವರು ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸುವುದಕ್ಕೆ ಕಾತರರಾಗಿದ್ದರು. ರಾಜಕೀಯ ಸ್ವಾತಂತ್ರ್ಯ ಅವರ ಪೂರ್ಣ ಜೀವನ ದೃಷ್ಟಿಯ ಒಂದು ಭಾಗ ಮಾತ್ರವಾಗಿತ್ತು. ಅದನ್ನು ಅವರು ಸಾಮಾಜಿಕ ಜೀವನದ ಉತ್ಕೃಷ್ಟತೆಗೆ ಒಂದು ಪ್ರಮುಖವಾದ ಹೆಜ್ಜೆಯೆಂದು ಭಾವಿಸಿದ್ದರು. ಆದ್ದರಿಂದ ಅವರು ಸಮಾಜವನ್ನು ಎಲ್ಲ ಮಟ್ಟದಲ್ಲೂ ಎಲ್ಲ ಮುಖಗಳಲ್ಲೂ ಪರಿಷ್ಕರಿಸಲು ಹೊರಟರು. ಅವರ ಕಾರ್ಯಕ್ಷೇತ್ರದ ವಿವಿಧ ಮುಖಗಳಿಗೂ ಅನ್ವಯವಾಗುವ ಹಲವು ತತ್ವಗಳನ್ನು ಸ್ಥೂಲವಾಗಿ ನಿರೂಪಿಸಬಹುದು. ಸಾಮಾಜಿಕ ಬದಲಾವಣೆಗಳಿಗೆ ನಾವು ಪ್ರಮುಖವಾಗಿ ಗಣನೆಗೆ ತೆಗೆದುಕೊಳ್ಳಬೇಕಾದುದು ಸಾಂಸ್ಕೃತಿಕ ಅಂಶವೆಂಬುದು ಅವರ ಅಚಲವಾದ ಅಭಿಪ್ರಾಯ. ತಾಂತ್ರಿಕ ಅಂಶವನ್ನು ಸಂಸ್ಕೃತಿಯ ಅಂಶಕ್ಕೆ ಅಳವಡಿಸಿಕೊಳ್ಳದೆ ಹೋದರೆ "ಮಾರ್ಗವಿಲ್ಲದ ಶಕ್ತಿಯಾಗುತ್ತದೆ". ಅವರು ನಿರೂಪಿಸಿದ ತತ್ತ್ವಗಳಿಂದ ಈ ವಿಚಾರ ಸ್ಪಷ್ಟವಾಗುತ್ತದೆ :

1 ಅಹಿಂಸೆ ವ್ಯಕ್ತಿಯ ಮತ್ತು ಸಮಾಜದ ಕಾರ್ಯಗಳ ಗುರಿ ಮತ್ತು ದಾರಿಯಾಗಿರಬೇಕು.

2 ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಘಸಂಸ್ಥೆಗಳು ಸಮಾನತೆಯ ತತ್ವದ ಮೇಲೆ ನಿರೂಪಿತವಾಗಿರಬೇಕು. ಸಮಾಜದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಪದ್ಧತಿಗಳಾವುವೇ ಇರಲಿ, ಅವು ಸಮಾನತೆಯ ತತ್ತ್ವಕ್ಕೆ ಮಾನ್ಯತೆ ಕೊಡದೆ ಇದ್ದರೆ, ಅವುಗಳನ್ನು ಪುರಸ್ಕರಿಸಬಾರದು.

3 ದೇವರಲ್ಲಿ ಅಚಲವಾದ ನಂಬಿಕೆ ಮತ್ತು ಪರಧರ್ಮಸಹಿಷ್ಣುತೆ.

4 ವ್ಯಕ್ತಿಯ ಜೀವನವನ್ನು ಅಹಿಂಸಾತತ್ವದ ಮೇಲೆ ಪ್ರತಿಪಾದಿತವಾದ ನೀತಿನಿಯಮಗಳ ಆಧಾರದ ಮೇಲೆ, ನಿರಂತರವಾಗಿ, ಉತ್ತಮಗೊಳಿಸುವುದು.

5 ವ್ಯಕ್ತಿ ಸತ್ಯ ಅಹಿಂಸೆಗಳ ಮಾರ್ಗದಲ್ಲಿ ನಿರ್ಭಯವಾಗಿ ನಿಸ್ವಾರ್ಥ ಕಾರ್ಯಾಚರಣೆಯಲ್ಲಿ ನಿರತನಾಗಿ ತನ್ನ ಕ್ಷೇಮವನ್ನು ಸಮಗ್ರ ಸಮಾಜದ ಹಿತದೊಡನೆ ಸಂಮಿಲನಗೊಳಿಸುವುದು.

ಅಶುದ್ಧವಾದ ಸಾಧನದಿಂದ ಶುದ್ಧಿಯನ್ನು ಸಾಧಿಸಲು ಶಕ್ಯವಿಲ್ಲ. ಆದುದರಿಂದಲೇ ಅವರು ಸಾಧನಕ್ಕೆ ಹೆಚ್ಚು ಪ್ರಾಮುಖ್ಯ ಕೊಟ್ಟರು. ಸಮಾಜ ಒಂದು ಗುರಿಯನ್ನು ಸಾಧಿಸಲು ಹೊರಟಾಗ, ಅದು ಅನುಸರಿಸುವ ಮಾರ್ಗದ ವಿಚಾರವಾಗಿ ನಿರಂತರವಾದ ಎಚ್ಚರಿಕೆ ಅಗತ್ಯ. ಗುರಿಯ ಮೆರಗು ನಮ್ಮನ್ನು ತಪ್ಪುದಾರಿಗೆ ತೆಗೆದುಕೊಂಡು ಹೋದರೆ ಆ ಗುರಿಯನ್ನು ಮುಟ್ಟಲಾರೆವು. ದಾರಿಯನ್ನು ತಪ್ಪಿದರೆ ಗುರಿಯನ್ನು ಮುಟ್ಟಲಾರೆವೆಂಬುದು ಖಚಿತ. ಅಹಿಂಸಾಮಾರ್ಗ ಬಹಳ ಪ್ರಾಚೀನವಾದ್ದು; ಮತ್ತು ನೂತನವೂ ಅಹುದು. ಅದರ ಆಧುನಿಕತೆ ಇರುವುದು ಮಹಾತ್ಮಗಾಂಧಿಯವರು ಆ ತತ್ವವನ್ನು ಉಪಯೋಗಿಸಿದ ರೀತಿಯಲ್ಲಿ. ಇದುವರೆಗೆ ಅಹಿಂಸೆ ಕೇವಲ ವ್ಯಕ್ತಿ ಜೀವನದ ನಿಷ್ಠೆಯಾಗಿತ್ತು. ಗಾಂಧೀಜಿಯವರು ಅಹಿಂಸಾತತ್ವವನ್ನು ರಾಷ್ಟ್ರಜೀವನಕ್ಕೆ ಅಳವಡಿಸಲು ಪ್ರಯತ್ನಿಸಿದರು. ಇದರ ಅತ್ಯಂತ ಉತ್ಕೃಷ್ಟ ಫಲವೇ ಭಾರತದ ಸ್ವಾತಂತ್ರ್ಯ. ಅಹಿಂಸಾತತ್ತ್ವ ನಕಾರಾತ್ಮಕವಾದ್ದಲ್ಲ. ಸಕಾರಾತ್ಮಕವಾದ್ದು. ಆದ್ದರಿಂದ ಅಹಿಂಸೆ ಕೇವಲ ಹಿಂಸೆ ಮಾಡದೆ ಇರುವುದಕ್ಕೆ ಸೀಮಿತವಾಗದೆ. ಪರಿಪೂರ್ಣಪ್ರೇಮವಾಗಿ ಪರಿಣಮಿಸಬೇಕು.

ಈ ಧ್ಯೇಯಗಳನ್ನು ಕಾರ್ಯಗತಮಾಡಲು ಏಕಾಗ್ರತೆ. ಸತತ ಪ್ರಯತ್ನ, ನಮ್ರತೆ ಮತ್ತು ನಿರ್ಭಯತೆಗಳು ಅಗತ್ಯ. ಗಾಂಧೀಜಿಯವರ ಜೀವನದಲ್ಲಿ ಇವು ವ್ಯಾಪಕವಾಗಿದ್ದುವು. ಸಮಾಜದ ಸುಖದುಃಖಗಳು ವ್ಯಕ್ತಿಗೆ ಅವಿಭಾಜ್ಯವಾಗಿ ಅಂಟಿಕೊಂಡಿವೆ. ಆದ್ದರಿಂದ ಜ್ಞಾನಿಗೆ ಕೇವಲ ಸ್ವಾರ್ಥಚಿಂತನೆ ಅರ್ಥವಿಲ್ಲದ್ದು.

ಸಮಾಜದಲ್ಲಿರುವ ಸರ್ವರಿಗೂ ಒಂದೇ ಸಾಮಾಜಿಕ ಸ್ಥಾನವಿರಬೇಕಾದ್ದು ಅಗತ್ಯ. ಆಗಲೇ ಸಮಾಜದಲ್ಲಿ ಒಗ್ಗಟ್ಟು ಸ್ಥಾಪಿತವಾಗಿ. ಸಾಮಾಜಿಕ ಕಾರ್ಯಾಚರಣೆಯ ಯಶಸ್ಸು ಸ್ಥಿರವಾಗುವುದೆಂದು ಗಾಂಧೀಜಿ ಭಾವಿಸಿದ್ದರು. ಸಮಾನತೆಯ ತತ್ತ್ವವನ್ನು ಭಾರತದ ಜೀವನದ ಹಾಸುಹೊಕ್ಕಾಗಿ ಮಾಡಲು ಅವರು ನಿರಂತರವಾಗಿ ಶ್ರಮಿಸಿದರು. ಅವರು ಹರಿಜನರ ವಿಚಾರದಲ್ಲಿ ಅನುಸರಿಸಿದ ಜೀವನದ ರೀತಿಯೇ ಇದಕ್ಕೆ ಸಾಕ್ಷಿ.

ತಮಗೆ ಇಳಿದುಕೊಳ್ಳಲು ಉತ್ತಮವಾದ ಸೌಧಗಳ ಅನುಕೂಲತೆಗಳಿದ್ದರೂ ಹರಿಜನರು ವಾಸ ಮಾಡುವ ಸ್ಥಳದಲ್ಲಿ ಗಾಂಧಿಯವರು ಇಳಿದುಕೊಳ್ಳುತ್ತಿದ್ದರು. ಅವರ ಆರ್ಥಿಕ ಅಭಿವೃದ್ಧಿಗೆ ಆದ್ಯಗಮನ ಕೊಡುವಂತೆ ಸರ್ಕಾರದ ನೀತಿ ರೂಪಿತವಾಗಬೇಕೆಂದು ಒತ್ತಾಯ ಮಾಡುತ್ತಿದ್ದರು. ದಲಿತರು ಬಾಳಬೇಕೆಂಬುದು ಅವರ ಇಚ್ಛೆ. "ಯಾವಳಾದರೊಬ್ಬ ಭಂಗಿಹುಡುಗಿ ಈ ರಾಷ್ಟ್ರದ ಮೊದಲನೆಯ ಅಧ್ಯಕ್ಷಳಾಗಬೇಕೆಂಬುದೆ ನನ್ನ ಹಂಬಲ. "ಸಾಧಾರಣವಾಗಿ ಕಲ್ಮಶವನ್ನು ತೆಗೆಯುವ ಕೆಲಸಗಳಲ್ಲಿ ನಿರತರಾಗಿರುವವರ ವಿಷಯವಾಗಿ ಸಮಾಜ ತುಚ್ಛಭಾವನೆ ತೋರುತ್ತದೆ. ಇವನ್ನು ಗಾಂಧೀಜಿಯವರು ತಮ್ಮ ಕುಟುಂಬದಲ್ಲಿಯೂ ನೆರೆಹೊರೆಯಲ್ಲಿಯೂ ಕಂಡರು: ಯಾವ ಸಮಾಜ ದೇವರನ್ನು ನಮ್ಮ ಪಾಪ ಮತ್ತು ಕಲ್ಮಶಗಳಿಂದ ಪಾರು ಮಾಡಿ ನಮ್ಮನ್ನು ರಕ್ಷಿಸುತ್ತಾನೆಂದು ಭಾವಿಸಿದ್ದಿತೋ, ಅದೇ ಸಮಾಜ ಕೊಳಚೆಯನ್ನು ತೆಗೆಯುವ ಸಹೋದರರ ಮೇಲೆ ಜಿಗುಪ್ಸೆಯನ್ನು ತಾಳುವ ಮನೋಭಾವ ಅವರನ್ನು ವಿಸ್ಮಯಗೊಳಿಸಿತು. "ಭಗವಂತ ಎಲ್ಲರನ್ನೂ ಸೃಷ್ಟಿಸಿದನೆಂದು ನಂಬುವವರೇ ಭಗವಂತ ಸೃಷ್ಟಿಸಿದ ಸಹೋದರರನ್ನು ಅಮಾನುಷವಾಗಿ ಕಂಡೂ ನಾವು ನ್ಯಾಯಸ್ಥರೆಂದು ಹೇಳಿಕೊಳ್ಳುವುದು ಹೇಗೆ ಸಾಧ್ಯ?" ಎಂಬುದು ಅವರು ಪದೇಪದೇ ಕೇಳುತ್ತಿದ್ದ ಪ್ರಶ್ನೆ.

ಅಸ್ಪೃಶ್ಯತೆ ಮಾನವೀಯತೆಯ ಮೇಲೆ ಮಾಡಿದ ಪಾಪ. ಗಾಂಧೀಜಿಯವರ ಮಾತಿನಲ್ಲಿ, "ಇಂದು ನಾವು ಅನುಸರಿಸುವ ವ್ಯತ್ಯಾಸ ಧರ್ಮಗ್ರಂಥಗಳಿಗೆ ಅನುಸಾರವಾಗಿದೆಯೆಂದು ಹೇಳಿದರೆ, ನಾವು ಆ ಧರ್ಮಗಳ ಮೇಲೆ ಮಾಡುವ ದುರಾಚಾರ. ಧರ್ಮಗ್ರಂಥಗಳೇನಾದರೂ ಅಸ್ಪೃಶ್ಯರಿರುವರೆಂದು ತಿಳಿಸಿದ್ದರೆ, ಅವು ನಿಜವಾಗಿಯೂ ದುಷ್ಟಮನೋವಿಕಾರಗಳು. ಜಾತಿಯ ವಿಚಾರವಾಗಿ ಧರ್ಮಗ್ರಂಥಗಳು ಉಪಯೋಗಿಸಿರುವ ಮನುಷ್ಯದೇಹದ ಉಪಮಾನ ಸಹ ಅವಯವಗಳ ಪರಸ್ಪರ ಅವಲಂಬನೆಯನ್ನು ತಿಳಿಸುವುದೇ ಹೊರತು ಮೇಲುಕೀಳು ಭಾವನೆಗಳನ್ನು ಸೂಚಿಸುವುದಿಲ್ಲ. ವಿವಿಧ ಅಂಗಗಳ ರಚನೆ ಅವುಗಳ ಕಾರ್ಯ ನಿರ್ವಹಣೆಗೆ ಅನುಕೂಲವಾಗುವಂತೆ ಇರುವುದೇ ಹೊರತು. ಇನ್ನಾವ ತತ್ತ್ವವನ್ನೂ ನಿರೂಪಿಸಿಲ್ಲವೆಂದು ಗಾಂಧೀಜಿಯವರು ತಿಳಿಸಿದರು. ಆದುದರಿಂದ ಉಚ್ಚ ನೀಚ ಭಾವನೆಗಳ ಮೇಲೆ ರೂಪಿತವಾಗಿರುವ ವರ್ಗ ವಿಭಾಗ ಸಾಮಾಜಿಕ ವ್ಯವಸ್ಥೆಯ ನೈಜ ಪರಿಸ್ಥಿತಿಯ ಮೇಲೆ ಎಸಗಿದ ದೌರ್ಜನ್ಯವೆಂದು ತಿಳಿಸಿದ್ದಾರೆ. ಹಿಂದೂ ಧರ್ಮ ಸೃಷ್ಟಿಯ ಸಕಲಪ್ರಾಣಿಗಳ ಏಕತೆ ಮತ್ತು ಸರ್ವರಲ್ಲಿ ಸಹೋದರ ಭಾವನೆಯನ್ನು ನಿರೂಪಿಸುವುದರಿಂದ. ಭಗವಂತನಲ್ಲಿಗೆ ಹೋಗಲು ಎಲ್ಲರಿಗೂ ಸಮಾನವಾದ ಪ್ರವೇಶಾಧಿಕಾರವಿರುತ್ತದೆ. "ಅಸ್ಪೃಶ್ಯತೆಗೆ ಧರ್ಮದ ಬೆಂಬಲವಿಲ್ಲ. ಶ್ರುತಿಗಳು ಸತ್ಯ ಮತ್ತು ವಿವೇಚನೆಗೆ ಅತೀತವಾದವುಗಳಲ್ಲ. ಅವು ವಿವೇಚನಾಶಕ್ತಿಯನ್ನು ಸ್ವಚ್ಛಗೊಳಿಸಿ ಸತ್ಯವನ್ನು ಪ್ರಕಾಶಗೊಳಿಸಬೇಕು. ಜಾಡಮಾಲಿಗಳನ್ನು ನಾಯಿಗಳಂತೆ ತುಚ್ಛವಾಗಿ ಕಾಣುವುದರಲ್ಲಿ ಧೈರ್ಯವಾಗಲಿ ಘನತೆಯಾಗಲಿ ಇಲ್ಲ."

ಹೀಗೆ ಗಾಂಧೀಜಿಯವರು ಹರಿಜನರಿಗೆ ನ್ಯಾಯ ದೊರಕಿಸಲು ನಿರಂತರವಾಗಿ ಪ್ರಯತ್ನಿಸಿದರು. ಅದರ ಫಲವಾಗಿ ಭಾರತ ಸಂವಿಧಾನದಲ್ಲಿ ನಿಮ್ನವರ್ಗದವರಿಗೆ ರಕ್ಷಣೆ ದೊರಕಿದೆ.

ಹೀಗೆ ಸಾಮಾಜಿಕ ಸಂಬಂಧಗಳ ಯಾವ ವಿಚಾರದಲ್ಲೇ ಆಗಲಿ, ಅವರು ಸಮಾಜದ ಪೂರ್ಣದೃಷ್ಟಿಯಿಂದ ಸಾಮಾಜಿಕ ರಚನೆಯ ವಿವಿಧ ಸಂಬಂಧಗಳನ್ನು ಆಳವಾಗಿ ಆಲೋಚಿಸಿ, ಸಮಾಜದ ಹಿತದೃಷ್ಟಿಯಿಂದ ಆಗಬೇಕಾದ ಬದಲಾವಣೆಗಳನ್ನು ನಿರ್ಭಯವಾಗಿ ನಿರೂಪಿಸುತ್ತಿದ್ದರು. ಆ ವಿಚಾರ ಸ್ತ್ರೀಯರ ಸ್ಥಾನಮಾನಗಳಾಗಿರಬಹುದು. ಕಾರ್ಮಿಕರ ಮತ್ತು ಗಿರಣಿಗಳ ಮಾಲೀಕರ ಸಂಬಂಧಗಳಾಗಿರಬಹುದು, ಮಂತ್ರಿಮಂಡಲದ ರಚನೆ ಅಥವಾ ಜವಾಬ್ದಾರಿಗಳಾಗಿರಬಹುದು, ವೈದ್ಯರ ಸಾಮಾಜಿಕ ಪ್ರಜ್ಞೆಯಾಗಿರಬಹುದು, ಅಥವಾ ವಿಶ್ವಕ್ಕೆ ಸಂಬಂಧಿಸಿದ ಮಾನವ ಹಕ್ಕುಗಳಾಗಿರಬಹುದು. ಇವುಗಳೆಲ್ಲವನ್ನೂ ಸತ್ಯ,

ಅಹಿಂಸೆ, ಶಾಂತಿ ಮತ್ತು ಸುಖಗಳ ಮಾಪಕಗಳಿಂದ ಅಳೆದು ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಿದ್ದರು. ಈ ವಿವಿಧ ಅಭಿಪ್ರಾಯಗಳ ಪ್ರಾಯೋಗಿಕ ಫಲವೇ ಸರ್ವೋದಯ ಸಮಾಜವೆಂದರೆ ಅತಿಶಯೋಕ್ತಿಯಲ್ಲ.

ಒಟ್ಟಿನಲ್ಲಿ ಗಾಂಧೀಜಿಯವರು ಜೀವನದಲ್ಲಿ ಇದು ಆಧ್ಯಾತ್ಮಿಕ, ಇದು ಲೌಕಿಕ ಎಂಬ ಬೇಧಗಳನ್ನು ಮಾಡಿ ಜನರ ಶೋಷಣೆಗೆ ಎಡೆಮಾಡಿಕೊಡಲಿಲ್ಲ. ಅವೆರಡೂ ಜೀವನದ ವಿವಿಧ ಸಂಕೀರ್ಣ ಸಂಬಂಧಗಳನ್ನೊಳಗೊಂಡ ಪೂರ್ಣತೆಯ ಅಂಶಗಳೆಂದು ಅವರು ಭಾವಿಸಿದ್ದರು. "ಆಧ್ಯಾತ್ಮಿಕವಾದ್ದು ಬರಿಯ ಕಲ್ಪನೆಯಲ್ಲ. ಅದು ಕಾರ್ಯಪ್ರವೃತ್ತಿಯುಳ್ಳದ್ದು" ಎಂಬುದು ಅವರ ಅಚಲವಾದ ನಂಬಿಕೆ. ಅವರು ನೀತಿಯ ಆಧಾರದ ಮೇಲೆ ರೂಪಿತವಾದ ಆಧ್ಯಾತ್ಮಿಕ ಜೀವನ ನಡೆಸಿ, ಕರ್ಮಕಾಂಡದ ಮುಸುಕಿನಲ್ಲಿ ಕವಿದಿದ್ದ ಧರ್ಮವನ್ನು ನಮಗೆ ಗೋಚರಿಸುವಂತೆ ಮಾಡಿದರು. ದಾರ್ಶನಿಕರು ಅವರಿಂದ ಕಲಿಯಬೇಕಾದ ವಿಷಯಗಳು ಎರಡೆಂದು ದಿವಂಗತ ಪ್ರೊಫೆಸರ್ ವಾಡಿಯರವರು ತಿಳಿಸಿದ್ದರು. ಮೊದಲನೆಯದು, ಅವರ ನಿರ್ಭಯತೆ. ಎರಡನೆಯದು. ಗ್ರಂಥಗಳ ದಬ್ಬಾಳಿಕೆಯಿಂದ ವಿಮುಕ್ತಿ.

ಸಂಪ್ರದಾಯಬದ್ಧರು ಭವಿಷ್ಯವನ್ನು ಕಂಡರೆ ಹೆದರುತ್ತಾರೆ. ಮಾನವ ಚೇತನ ಕೇವಲ ಹಿಂದಿನ (ಹಳೆಯ) ಜ್ಞಾನವನ್ನು ಅವಲಂಬಿಸದೆ ಅವಿಚ್ಛಿನ್ನವಾಗಿ ಪ್ರಗತಿಪೂರ್ಣ ಪಥದಲ್ಲಿ ಹೋಗುತ್ತದೆ. ಈ ಚೈತನ್ಯದ ಪ್ರಕಾಶವನ್ನು ನಾವು ಗಾಂಧೀಜಿಯವರ ಜೀವನದ ನಾನಾಮುಖಗಳಲ್ಲಿ ಕಾಣುತ್ತೇವೆ. ಅವರು ತೋರಿಸಿದ ಹಾದಿಯಲ್ಲಿ ಅಹಿಂಸೆ ಮತ್ತು ಸತ್ಯಗಳ ಮೇಲೆ ಸಾಮಾಜಿಕ ಜೀವನದ ವಿವಿಧ ಸಂಸ್ಥೆಗಳನ್ನು ರೂಪಿಸಿದರೆ, ವಿಜ್ಞಾನದ ಉಪಯೋಗ ಅರ್ಥಪೂರ್ಣವಾಗಿ ಸಮಾಜದಲ್ಲಿ ಶಾಂತಿ ನೆಲಸಲು ಅನುಕೂಲವಾಗುತ್ತದೆ. ಗಾಂಧೀಜಿಯವರ ಜೀವನ ನಿರ್ಭಯವಾಗಿ ನಿರಂತರವಾಗಿ ಸಮಾಜದಲ್ಲಿದ್ದ ಮೂಢ ಪದ್ಧತಿಗಳ ಮೇಲೆ ಹೋರಾಟ ನಡೆಸಿತು. ವಿವೇಕಪೂರ್ಣ ವಿಚಾರವೇ ಜೀವನದ ಬೆಳಕಾಗಿ, ಸಮಾಜದ ಸರ್ವರ ಹಿತವೇ ಗುರಿಯಾಗಿ ಸಾಮಾಜಿಕ ಸಂಸ್ಥೆಗಳು ರೂಪಿತವಾದರೆ ಸಮಾಜದಲ್ಲಿ ಸುಖ ಶಾಂತಿಗಳು ಲಭಿಸುತ್ತವೆಂದು ಗಾಂಧೀಜಿಯವರು ತಿಳಿಸಿದರು. ಗುರಿ ಉತ್ಸಾಹವನ್ನು ಕೊಡಬಲ್ಲದು, ಆದರೆ ದಾರಿ ಕಠಿಣ. ಈ ದಾರಿಯಲ್ಲದೆ ಬೇರೆ ದಾರಿ ಅಪಾಯಕರವೆಂದು ಜನ ಅರಿತಾಗಲೇ ಅವರು ಶಾಂತಿಯುತ ಸಹಜೀವನದ ಕಡೆಗೆ. ಏನು ಕಷ್ಟಗಳು ಬಂದರೂ ಎದುರಿಸಿ, ಹೋಗಲು ಸಿದ್ಧರಾಗುತ್ತಾರೆ. ಗಾಂಧೀಜಿಯವರು ರೂಪಿಸಿದ ಸಾಮಾಜಿಕ ದರ್ಶನದ ಮೇಲೆ ಮಾನವ ಶ್ರಮಿಸುವುದಾದರೆ, ವಿಜ್ಞಾನ ವರವಾಗಿ ನಮ್ಮ ಜೀವನ ಸುಖಮಯವಾಗುತ್ತದೆ.

ಗಾಂಧೀಜಿ ಸತ್ಯಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಒತ್ತಿ ಹೇಳಿದ್ದಕ್ಕೆ ಮಾತಿನಲ್ಲಿ ಸತ್ಯವಂತಿಕೆಯನ್ನು ತೋರಿಸಬೇಕೆಂಬುದಷ್ಟೇ ಅರ್ಥವಲ್ಲ. ಜೀವನ ಮತ್ತು ಅನುಭವಗಳ ಅಂತರಂಗದಲ್ಲಿ ಅಡಗಿಕೊಂಡಿರುವ ಸತ್ಯವನ್ನು ವ್ಯಾಪಕವಾಗಿ ಅನ್ವೇಷಿಸಬೇಕು ಎಂದು ಅದರರ್ಥ. ಈ ಶೋಧನೆಯಲ್ಲಿ ವ್ಯಕ್ತಿ ಹೆಚ್ಚು ಹೆಚ್ಚು ಆಳವಾಗಿ ಪ್ರವೇಶಿಸಿದಂತೆ, ತನ್ನ ಇಂದ್ರಿಯ ಸ್ವಭಾವಕ್ಕಿಂತ ಮೇಲಾದ ಉನ್ನತವಾದ ತನ್ನ ಆಧ್ಯಾತ್ಮಿಕ ಸ್ವಭಾವವನ್ನು ಕುರಿತ ಮೂಲ ಸತ್ಯವನ್ನು ಅರಿಯುತ್ತಾನೆ; ಹಾಗೆಯೇ ಇಡೀ ವಿಶ್ವದೊಂದಿಗೆ ತನಗಿರುವ ಆಧ್ಯಾತ್ಮಿಕ ಐಕ್ಯ ಮತ್ತು ಒಗ್ಗಟ್ಟನ್ನು ಕಂಡುಕೊಳ್ಳುತ್ತಾನೆ. ಈ ಸಂಶೋಧನೆಯ ಪರಿಣಾಮ ಅವನು ಹೆಚ್ಚು ಹೆಚ್ಚಾಗಿ ಸಮಸ್ತ ಜೀವಿಗಳನ್ನು ಕುರಿತೂ ಪ್ರೀತಿಯನ್ನು ಬೆಳೆಸಿಕೊಳ್ಳುವುದು; ಏಕೆಂದರೆ ಪ್ರೇಮವು ಹುಟ್ಟುವುದು ಮತ್ತು ಪೋಷಿತವಾಗುವುದು ಆಧ್ಯಾತ್ಮಿಕ ಏಕಮತ್ಯ ಮತ್ತು ನಂಟುತನಗಳ ಪ್ರಜ್ಞೆಯಿಂದ. ಆದ್ದರಿಂದ ಗಾಂಧೀಜಿ ಸತ್ಯಕ್ಕೆ ಎಷ್ಟು ಪ್ರಾಧಾನ್ಯ ಕೊಟ್ಟರೋ ಪ್ರೇಮಕ್ಕೂ ಅಷ್ಟೇ ಪ್ರಾಧಾನ್ಯ ಕೊಟ್ಟು ಎರಡನ್ನೂ ಜೊತೆಗೂಡಿಸಿದರು. ಅದನ್ನೇ ಅಹಿಂಸಾ ಎಂಬ ಸಂಸ್ಕೃತ ಶಬ್ದದಿಂದ ಅವರು ವ್ಯಕ್ತಪಡಿಸಿದ್ದು. ಅಹಿಂಸಾ ಎನ್ನುವುದು ಅಕ್ಷರಶಃ 'ಹಿಂಸೆಯಿಲ್ಲದಿರುವುದು' ಎಂಬ ಅರ್ಥವನ್ನು ಕೊಡುತ್ತದೆ. ವಿಪರೀತವಾದ ಮಾನಸಿಕ ಹಾಗೂ ದೈಹಿಕ ಹಿಂಸೆಗಳಿಂದ ತುಂಬಿದ ಪ್ರಪಂಚ ಸುತ್ತುವರಿದಿರುವುದನ್ನು ಕಂಡ ಗಾಂಧೀಜಿ ಅಹಿಂಸಾ ಅಥವಾ ಹಿಂಸೆಯಿಲ್ಲದಿರುವಿಕೆ ಎಂಬ ಗುಣಕ್ಕೆ ಅತ್ಯಧಿಕ ಪ್ರಾಧಾನ್ಯ ಕೊಟ್ಟರು. ಆದರೂ ಈ ಗುಣದ ಅಪಾರವಾದ ನೇತ್ಯಾತ್ಮಕ ಗುಣದಿಂದ ಉದ್ಭವಿಸುವ ಇತಿಮಿತಿಗಳ ಅರಿವು ಅವರಿಗೆ ಚೆನ್ನಾಗಿಯೇ ಇತ್ತು. ಆದ್ದರಿಂದ ಅವರು ದೊರೆತ ಎಲ್ಲ ಅವಕಾಶಗಳನ್ನೂ ಉಪಯೋಗಿಸಿಕೊಂಡು, ಅಹಿಂಸಾ ಎಂಬುದಕ್ಕೆ ತಾವು ಕೊಡುವ ಅರ್ಥ ಪ್ರೇಮದ ಇತ್ಯಾತ್ಮಕ ಶಕ್ತಿ ಎಂದು ವಿವರಿಸಿದರು. ನಾವು ಒಂದು ಕ್ರಿಯಾತ್ಮಕವಾದ ಸಾಮಾಜಿಕ ನೈತಿಕತೆಯನ್ನು ರೂಪುಗೊಳಿಸಿ ಪೋಷಿಸಲು ಸಾಧ್ಯವಾಗುವುದು ಪ್ರೇಮದ ಇತ್ಯಾತ್ಮಕ ಶಕ್ತಿಯಿಂದಲೇ ಹೊರತು ಹಿಂಸಾರಾಹಿತ್ಯದ ನೇತ್ಯಾತ್ಮಕ ತತ್ತ್ವದಿಂದ ಅಲ್ಲ. ಗಾಂಧೀಜಿಯವರಾದರೋ ಒಂದು ಕ್ರಿಯಾತ್ಮಕವಾದ ಸಾಮಾಜಿಕ ನೈತಿಕತೆಯನ್ನು ಬೋಧಿಸಿದವರು ಮತ್ತು ಅದಕ್ಕೆ ಮಾದರಿಯಾಗಿ ನಡೆದುಕೊಂಡವರು. ಸಮಾಜದ ನೈತಿಕತೆಯ ನೆಮ್ಮಯನ್ನು ಬಲಗೊಳಿಸುವುದಕ್ಕಾಗಿ, ಆಧ್ಯಾತ್ಮಿಕವಾಗಿ ಸಂವೇದಿಗಳಾದ ಸ್ತ್ರೀ ಪುರುಷರಲ್ಲಿ ಪ್ರೇಮದ ಶಕ್ತಿಯನ್ನು ಉದ್ದೀಪಿಸಿ ಅದನ್ನು ಹೊರಕ್ಕೆ ಪ್ರಕಟಿಸುವ ಉದ್ದೇಶವನ್ನು ಅವರು ಹೊಂದಿದ್ದರು. ಅಂಥ ಸಮಾಜ ಮಾತ್ರವೇ ತನ್ನ ಸದಸ್ಯರ ಸರ್ವತೋಮುಖ ಬೆಳವಣಿಗೆಮತ್ತು ಕೃತಕೃತ್ಯತೆಗಳಿಗೆ ಪೋಷಣೆಯನ್ನೂ ಪ್ರಚೋದನೆಯನ್ನೂ ಒದಗಿಸಬಲ್ಲುದು1.

—ಸ್ವಾಮಿ ರಂಗನಾಥಾನಂದ

---

1 ಅನುವಾದ: ಆರ್. ಎಲ್. ಅನಂತರಾಮಯ್ಯ, ಮಹಾತ್ಮಾ ಗಾಂಧಿ: ಅವರ ಜೀವನ ಮತ್ತು ಸಾಧನೆಯಲ್ಲಿನ ಶಾಶ್ವತ ಅಂಶಗಳು, ಮಹಾತ್ಮಾ ಗಾಂಧಿ: 100 ವರ್ಷಗಳು, ಗಾಂಧೀ ಭವನ, ಮಾನಸ ಗಂಗೋತ್ರಿ, ಮೈಸೂರು (1970), ಪು. 262–3

ಎಚ್. ಆರ್. ರಘುನಾಥ ಭಟ್

ಹೊಯ್ಸಳ ವಾಸ್ತುಶೈಲಿಯಲ್ಲಿ ನಕ್ಷತ್ರಾಕಾರದ ತಲವಿನ್ಯಾಸ

ಒಂದು ದೇವಾಲಯದ ವಾಸ್ತುರಚನೆಯ ಸತ್ತ್ವ ಹಾಗೂ ಸೊಬಗು ಎಲ್ಲಿರುತ್ತವೆ, ಅವುಗಳ ಗುಣಲಕ್ಷಣಗಳೇನು–ಎಂಬುದನ್ನು ತಿಳಿಯಬೇಕಾದರೆ ಆ ಕಟ್ಟಡದ ಅಂಗಭಾಗಗಳನ್ನು ವಿವರವಾಗಿ ಪರಿಶೀಲಿಸಬೇಕು. ಕಟ್ಟಡ ಕಣ್ಣಿಗೆ ಒದಗಿಸುವ ಒಟ್ಟುನೋಟದಲ್ಲಿ ಅದರ ಪಾಯ, ಗೋಡೆ, ಮಾಡುಗಳು ಮುಖ್ಯ ಪಾತ್ರವಹಿಸುತ್ತವೆ. ಇವುಗಳಲ್ಲೆಲ್ಲ ತಲವಿನ್ಯಾಸ, ಅದರಲ್ಲೂ ಗರ್ಭಗೃಹದ ತಲವಿನ್ಯಾಸ, ವಿಶೇಷವಾದ ಮಹತ್ತ್ವ ಪಡೆದಿದೆ1. ಬೀಜದ ಗುಣ ಮೊಳಕೆಯಲ್ಲಿ ಕಾಣಿಸುತ್ತದೆ ಎಂಬಂತೆ—ವಾಸ್ತುಗಳ ತಳಪಾಯವೆ ಮುಂದಿನ ರಚನೆಗಳ ಕುರುಹನ್ನು ಹೊರಗೆಡವಬಲ್ಲುದು2. ವಾಸ್ತವವಾಗಿ ತಲವಿನ್ಯಾಸವೆ ವಾಸ್ತುಶೈಲಿಯನ್ನು ನಿರ್ಧರಿಸುವ ಪ್ರಮುಖ ಸೂಚಿ.

ಕರ್ನಾಟಕದ ಪ್ರಾಚೀನ ದೇವಾಲಯಗಳಲ್ಲಿ ಚತುರಸ್ರ, ಅಷ್ಟಾಸ್ರ, ವೃತ್ತಾಯತ, ಆಯತಸ್ರ, ಗಜಪೃಷ್ಠಾಕಾರ ಮುಂತಾದ ತಲವಿನ್ಯಾಸಗಳನ್ನು ಗುರುತಿಸಬಹುದು. ಮಧ್ಯಕಾಲದ ಸುಮಾರಿಗೆ (ಕ್ರಿ.ಶ. 12–13ನೆಯ ಶತಮಾನ) ತಳಪಾಯದ ರಚನೆಯಲ್ಲಿ ಅನೇಕ ನವ್ಯ ಪ್ರಯೋಗಗಳಾದ್ದುಂಟು3. ಹೀಗೆ ಚತುರಸ್ರತಲವಿನ್ಯಾಸವನ್ನಾಧರಿಸಿ ಮಾಡಿದ ಒಂದು ಪ್ರಯೋಗದ ಫಲವೇ 'ನಕ್ಷತ್ರಾಕಾರದ ತಲವಿನ್ಯಾಸ'. ಈ ಪ್ರಯತ್ನವನ್ನು ಪ್ರಪ್ರಥಮವಾಗಿ ಮಾಡಿದವರು ಹೊಯ್ಸಳ ವಾಸ್ತುಶಿಲ್ಪಿಗಳೆಂದು ಹೇಳಲಾಗದಿದ್ದರೂ4. ನಕ್ಷತ್ರಾಕಾರದ ತಲವಿನ್ಯಾಸವನ್ನು ತಮ್ಮ ದೇವಾಲಯಗಳ ರಚನೆಯಲ್ಲಿ ವಿಶೇಷ

---

1 K. V. Soundara Rajan: *Indian Temple styles-The Personality of Hindu Architecture*, New Delhi, 1972, p. 78

2 ಡಾ. ಶಿವರಾಮ ಕಾರಂತ: ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಬೆಂಗಳೂರು, 1969, ಪು. 29

3 ವಾಸ್ತುಶಿಲ್ಪಿಗಳು ಸಾಂಪ್ರದಾಯಿಕವಾಗಿ ಬಂದ ಅನೇಕ ಆಗಮ ಪದ್ಧತಿಗಳನ್ನು ಮೀರಿ, ತಮ್ಮ ಸೃಜನಶೀಲತೆಯನ್ನು ನವ್ಯ ಪ್ರಯೋಗಗಳಲ್ಲಿ ತೋರಿಸಿದ್ದಾರೆ. ನೋಡಿ–*Srikanthikā–Dr. S. Srikantha Sastri Felicitation Volume*, Mysore, 1973, p. 3

4 ದಖ್ಖನ ಅನೇಕ ದೇವಾಲಯಗಳಲ್ಲಿ ನಕ್ಷತ್ರಾಕಾರದ ತಲವಿನ್ಯಾಸವನ್ನು ಗಮನಿಸಬಹುದು. ಉದಾ: ಜಗದಂಬಾ ದೇವಾಲಯ, ಕೊಕಂಥನ್ (12ನೆಯ ಶತಮಾನ); ಮಹೇಶ್ವರ ದೇವಾಲಯ, ಪಟಣ್ (ಗುಜರಾತ್) (12ನೆಯ ಶತಮಾನ);ಕಾಳಿಕಾದೇವಾಲಯ ಬಿಸ್ನಿ–ಟಕ್ಳಿ) (ಬೇರಾರ್); ದೈತ್ಯಸೂದನ ದೇವಾಲಯ, ಲೋನಾರ್ (13ನೆಯ ಶತಮಾನ); ಬಲ್ಸಾನೆ ದೇವಾಲಯ (ನಂ.4), ಖಾಂದೇಶ್, ಇತ್ಯಾದಿ. ಆದರೆ "ಇವುಗಳಲ್ಲಿ ನಕ್ಷತ್ರರೂಪವನ್ನು ಮುಂದೆ ಚಾಚಿ ಹಿಂದಕ್ಕೆ ಎಳೆದುಕೊಂಡ ಸಮಕೋಣ ಮತ್ತು ಬಗ್ಗುಗಳಿಂದ ಮಾಡಿದಂತೆ ಕಂಡುಬರುತ್ತದೆ. ಹೊಯ್ಸಳ ಶಿಲ್ಪದ ಅಷ್ಟಭದ್ರತಲವಿನ್ಯಾಸ ಬೇರೆ ರೀತಿಯಲ್ಲಿ ಹುಟ್ಟಿತು," ಎಂದು ಡಾ. ಎಸ್. ಶ್ರೀಕಂಠಶಾಸ್ತ್ರಿಯವರು ಹೇಳಿದ್ದಾರೆ. (ಹೊಯ್ಸಳ ವಾಸ್ತುಶಿಲ್ಪ, ಮೈಸೂರು, 1965, ಪು. 15). ವಾಸ್ತವವಾಗಿ ಹೊಯ್ಸಳ ದೇವಾಲಯದ ಗರ್ಭಗೃಹದ ನಕ್ಷತ್ರಾ-

ವಾಗಿ ಅಳವಡಿಸಿಕೊಂಡದ್ದನ್ನು ಅಲ್ಲಗಳೆಯುವಂತಿಲ್ಲ. (ಚಿತ್ರ 1 ಮತ್ತು 2) ಅನೇಕ ವಿದ್ವಾಂಸರು ಹೊಯ್ಸಳವಾಸ್ತುಶೈಲಿಯ ವೈಶಿಷ್ಟ್ಯಗಳನ್ನು ವರ್ಣಿಸುತ್ತಾ ಅದರ ನಕ್ಷತ್ರಾಕಾರದ ಜಗತಿ ಇಲ್ಲವೆ ತಲವಿನ್ಯಾಸವನ್ನು ಉಲ್ಲೇಖಿಸಿದ್ದಾರೆ5. ಆದರೆ ಹೊಯ್ಸಳರ ಎಲ್ಲ ದೇವಾಲಯಗಳಲ್ಲೂ, ಅವುಗಳ ಒಟ್ಟು ತಳಪಾಯದಲ್ಲೂ ನಕ್ಷತ್ರಾಕಾರವನ್ನೇ ಗುರುತಿಸುವುದು ಕಷ್ಟಸಾಧ್ಯವಾದೀತು. ಅಲ್ಲದೆ ಒಂದು ಹೊಯ್ಸಳ ದೇವಾಲಯವನ್ನು ತೆಗೆದುಕೊಂಡರೂ ಅದರ ಇಡೀ ತಲವಿನ್ಯಾಸ ನಕ್ಷತ್ರಾಕಾರವಾಗಿರುವುದು ತೀರ ವಿರಳವೆಂದು ಹೇಳಬಹುದು.

ಸಾಮಾನ್ಯವಾಗಿ ಹೊಯ್ಸಳಶೈಲಿಯ ದೇವಾಲಯಗಳಲ್ಲಿ ಗರ್ಭಗೃಹವನ್ನು ನಕ್ಷತ್ರಾಕಾರವಾದ ತಲವಿನ್ಯಾಸದ ಮೇಲೂ, ನವರಂಗ, ಮುಖಮಂಟಪ ಮುಂತಾದ ಅಂಗಭಾಗಗಳನ್ನು 'ಮುಂಬಣೆ-ಹಿಂಬಣೆಗಳಿಂದುಂಟಾದ ತಲವಿನ್ಯಾಸದ ಮೇಲೂ ಕಟ್ಟಿರುವುದನ್ನು ಗಮನಿಸಬಹುದು6 (ಚಿತ್ರ 2). ಇಲ್ಲಿ ನಕ್ಷತ್ರಾಕಾರದ ತಲವಿನ್ಯಾಸ ಹಾಗೂ ಸಮಚತುರಸ್ರಗಳ ಮುಂಬಣೆ-ಹಿಂಬಣೆಗಳಿಂದುಂಟಾದ ತಲವಿನ್ಯಾಸ—ಇವೆರಡರಲ್ಲಿರುವ ತಾಂತ್ರಿಕ ವ್ಯತ್ಯಾಸವನ್ನು ಪರಿಶೀಲಿಸಬಹುದು.

ನಕ್ಷತ್ರಾಕಾರದ ತಲವಿನ್ಯಾಸ

ಡಾ. ಶಿವರಾಮ ಕಾರಂತರು ಸೂಚಿಸುವಂತೆ ಹಲವು ಮುಂಬಣೆಗಳಿಂದ ಚೌಕತಳಪಾಯವನ್ನೇ ನಕ್ಷತ್ರಾಕಾರವಾಗಿ ಮಾಡಿದ್ದಾರೆ7. ಒಂದು ಆಯತ ಇನ್ನೊಂದನ್ನು ಕತ್ತರಿಸುವಂತೆ, ಚೌಕ ಅಂಕಣಗಳ ಕೂಟದಿಂದ ನಕ್ಷತ್ರರೂಪಬರುವಂತೆ ವಾಸ್ತುಕಾರರು ವಿವಿಧ ರೀತಿಯ ಪ್ರಯೋಗ ಮಾಡಿದ್ದಾರೆ8. ಚಾಳುಕ್ಯ-ಹೊಯ್ಸಳ ವಾಸ್ತುಶಿಲ್ಪಿಗಳು ವಿವಿಧ ತೆರನ ಪ್ರಯೋಗಗಳನ್ನು ಮಾಡಿದ್ದೇನೋ ನಿಜ. ಆದರೆ ನಕ್ಷತ್ರಾಕಾರದ ತಲವಿನ್ಯಾಸವನ್ನು ಮೇಲೆ ಸೂಚಿಸಿದ ಪ್ರಯೋಗದಿಂದ ಸ್ಪಷ್ಟವಾಗಿ ರಚಿಸಲು ಸಾಧ್ಯವಾಗಲಾರದು. ಪ್ರಸಿದ್ಧ ವಾಸ್ತುಶಿಲ್ಪಶಾಸ್ತ್ರಜ್ಞನಾದ ಪರ್ಸಿ ಬ್ರೌನ್ ಸೂಚಿಸುವಂತೆ, ಜ್ಯಾಮಿತಿಯ ಒಂದು ವಿಶಿಷ್ಟವಾದ ತತ್ತ್ವವನ್ನಾಧರಿಸಿ ಈ ನಕ್ಷತ್ರಾಕಾರದ ತಲವಿನ್ಯಾಸವನ್ನು ರಚಿಸಿರಬೇಕೆಂಬುದು ಹೆಚ್ಚು ಸಮಂಜಸವಾಗಿದೆ. ಚಿತ್ರದಲ್ಲಿ ತೋರಿಸಿದಂತೆ (ಚಿತ್ರ 2)ನಿಶ್ಚಿತ ಅಳತೆಯ ಸಮಚೌಕವನ್ನು ತೆಗೆದುಕೊಂಡು ಅದರ ಕೇಂದ್ರ ಬಿಂದು ಒಂದೇ ಇರುವ ಹಾಗೆ ಗಮನವಿಟ್ಟು ಚೌಕವನ್ನು ಒಂದು ಕ್ರಮದಲ್ಲಿ

ಕಾರದ ತಲವಿನ್ಯಾಸಕ್ಕೂ ಮೇಲ್ಕಾಣಿಸಿದ ದೇವಾಲಯಗಳ ಗರ್ಭಗೃಹಗಳ ತಲವಿನ್ಯಾಸಕ್ಕೂ ಯಾವ ರೀತಿಯ ತಾಂತ್ರಿಕ ವ್ಯತ್ಯಾಸವೂ ಕಂಡುಬರುವುದಿಲ್ಲ. ಅಲ್ಲದೆ ಈ ನಕ್ಷತ್ರಾಕಾರದ ತಲವಿನ್ಯಾಸ ಹೊಯ್ಸಳ ವಾಸ್ತುಶಿಲ್ಪಕ್ಕಷ್ಟೆ ಸೀಮಿತವಾಗಿಲ್ಲ ಎಂಬುದು ಸ್ಪಷ್ಟ—ನೋಡಿ (This star-shaped ground plan is an innovation that the Hoysalas introduced and is unique to the style (Dr. M. Seshadri : Hoysala Temple Architecture (in *Hoysala Dynasty*, Ed. Prof. B. Sheik Ali, Mysore, 1972. p. 185) ನೋಡಿ-P. Brown : *Indian Architecture* (*Buddhist and Hindu period*), Bombay, 1971 (6th reprint), p. 139


5 Ed. Prof. B. Sheik Ali : *Hoysala Dynasty*, Mysore, 1972. p. 185.

ಡಾ. ಎಸ್. ಶ್ರೀಕಂಠಶಾಸ್ತ್ರಿ: ಹೊಯ್ಸಳ ವಾಸ್ತುಶಿಲ್ಪ, ಮೈಸೂರು, 1965, ಪು. 15.


6 ಇದಕ್ಕೆ ಅಪವಾದಗಳೂ ಇಲ್ಲದಿಲ್ಲ. ಉದಾ: ಅರಸೀಕೆರೆಯ ಈಶ್ವರ ದೇವಾಲಯದಲ್ಲಿ ಗರ್ಭಗೃಹ ಹಾಗೂ ಮುಖಮಂಟಪಗಳೆರಡೂ ನಕ್ಷತ್ರಾಕಾರದ ತಲವಿನ್ಯಾಸದ ಮೇಲೆ ರಚಿತವಾದವು.

7 ಡಾ. ಶಿವರಾಮ ಕಾರಂತ: ಚಾಲುಕ್ಯ ವಾಸ್ತುಶಿಲ್ಪ, ಬೆಂಗಳೂರು, 1969, ಪು. 41(ಚಿತ್ರ 17)

8 ಅದೇ, ಪು. 21



ಚಿತ್ರ ೧ : ಹೊಯ್ಸಳೇತರ ದೇವಾಲಯಗಳಲ್ಲಿ ನಕ್ಷತ್ರಾಕಾರದ ತಲವಿನ್ಯಾಸ : ಮಹದೇಶ್ವರ ದೇವಾಲಯ, ಪಟಣ್ (ಗುಜರಾತ್, ೧೨ನೆಯ ಶತಮಾನ), ದೈತ್ಯಸೂದನ ದೇವಾಲಯ, ಲೋನಾರ್ (ಖಾಂದೇಶ್, ೧೩ ನೆಯ ಶತಮಾನ), ದೊಡ್ಡಬಸಪ್ಪ ದೇವಾಲಯ, ಡಂಬಳ (ಕರ್ನಾಟಕ, ೧೩ ನೆಯ ಶತಮಾನ)



ಚಿತ್ರ ೨ : ಹೊಯ್ಸಳರ ಚೆನ್ನಕೇಶವ (ಬೇಲೂರು) (೧೨ನೆಯ ಶತಮಾನ) ಹಾಗೂ ಪ್ರಸನ್ನಕೇಶವ (ಸೋಮನಾಥಪುರ) (೧೩ನೆಯ ಶತಮಾನ) ದೇವಾಲಯಗಳ ತಲವಿನ್ಯಾಸ. ನಕ್ಷತ್ರಾಕಾರದ ಗರ್ಭಗೃಹತಲವಿನ್ಯಾಸವನ್ನೂ ಮುಂಬಚೆ-ಹಿಂಬಚೆಗಳಿಂದುಂಟಾದ ನವರಂಗ ತಲವಿನ್ಯಾಸವನ್ನೂ ಗಮನಿಸಬಹುದು.

ಸರಿಸುತ್ತಿರಬೇಕು. ಅಂದರೆ "ಸಮಚತುರಸ್ರಗಳಿಗೆ ಒಂದೇ ಕೇಂದ್ರವಿರುವಂತೆ, ಆದರೆ ಭಾಜಕರೇಖೆಗಳು ಬೇರೆ ಬೇರೆ ಅಂಶಗಳಲ್ಲಿರುವಂತೆ, ಎಷ್ಟು ಕೋನಗಳು ಆವಶ್ಯಕವೋ ಅದಕ್ಕೆ ತಕ್ಕಂತೆ ಅಂಶಗಳನ್ನು ಬದಲಾಯಿಸಿಕೊಂಡು ಗುರುತು ಮಾಡಿದರೆ ನಿಶ್ಚಿತವಾದ ನಕ್ಷತ್ರರೂಪ ಬರುವುದು"9. ಹೀಗೆ ಬರುವ ನಕ್ಷತ್ರರೂಪ 'ಮುಂಬಣೆ-ಹಿಂಬಣೆ'ಗಳಿಂದಾಗುವ ರೂಪಕ್ಕಿಂತ ಬೇರೆಯಾಗಿದೆ(ಚಿತ್ರ 3).

ಮುಂಬಣೆ-ಹಿಂಬಣೆ

ದೇವಾಲಯದ ಪಾಯ (ಬಹುತೇಕವಾಗಿ ನವರಂಗ, ಮುಖಮಂಟಪಗಳ ಪಾಯ) ಬೋಳಾಗಿ ಕಾಣದಂತೆ ಅದರ ಹೊರಮೈಯನ್ನು (ಲಂಬವಲ್ಲಿ) ಕೆಲವು ವಿಭಾಗಳನ್ನಾಗಿ ಒಡೆದು, ಮಧ್ಯಭಾಗ ಮುಂದೊತ್ತಿರುವಂತೆ, ಉಳಿದ ಭಾಗಗಳು ಅದಕ್ಕಿಂತ ಹಿಂದೆ ಕ್ರಮಾಗತವಾಗಿ ನಿಲ್ಲುವಂತೆ (ಚಿತ್ರವಲ್ಲಿ ತೋರಿಸಿದಂತೆ) ರಚಿಸುವ ಕ್ರಮವೇ ಬೇರೆ. ಪಾಯದ ಮುಂದೊತ್ತುವಿಕೆಯನ್ನು 'ಮುಂಬಣೆ'ಯೆಂದೂ, ಹಿಂದಕ್ಕೆ ಸರಿದಿರುವಂತೆ ಕಾಣುವ ಭಾಗವನ್ನು 'ಹಿಂಬಣೆ' ಎಂದೂ ಕರೆಯಬಹುದು.10. ಈ ರೀತಿ ರಚಿಸಿದ ವಿನ್ಯಾಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ನಕ್ಷತ್ರರೂಪವೇನೂ ಕಾಣುವುದಿಲ್ಲ (ಚಿತ್ರ 3 ನೋಡಿ). ಆದ್ದರಿಂದ ವಾಸ್ತುರಚನೆಯಲ್ಲಿ ಈ ಅಂಗಭಾಗವನ್ನು 'ನಕ್ಷತ್ರಾಕಾರದ ತಲವಿನ್ಯಾಸ' ಎಂದು ಕರೆಯುವುದೂ ಅಷ್ಟು ಸಮಂಜಸವಾಗಲಾರದು11 (ಚಿತ್ರ 4).

ನಕ್ಷತ್ರಾಕಾರದ ತಲವಿನ್ಯಾಸಕ್ಕೆ ತನ್ನದೇ ಆದ ಚೆಲುವೂ (ಸ್ಥಾಪತ್ಯ ದೃಷ್ಟಿಯಿಂದ) ಮಹತ್ವವೂ ಉಂಟು. ಸಾಮಾನ್ಯವಾಗಿ ಈ ನಕ್ಷತ್ರರೂಪದ ತಲವಿನ್ಯಾಸವನ್ನಾಧರಿಸಿ ರಚಿಸಿದ ಗರ್ಭಗೃಹದ ಗೋಡೆ ಮತ್ತು ಶಿಖರ ಮೇಲೇರುತ್ತ ಹೋದಂತೆ ಕಿರಿದಾಗುತ್ತವೆ. ಶಿಖರದ ತುದಿಯಲ್ಲಿ ನಕ್ಷತ್ರಾಕಾರದ ಹೂವೊಂದನ್ನು ಕವುಚಿಟ್ಟಂತೆಯೂ ಕಾಣುತ್ತದೆ. ಇದರ ಮೇಲೆ ಕಳಶ ಶೋಭಿಸುತ್ತದೆ.ಇಲ್ಲಿ ಗರ್ಭಗೃಹದ ಗೋಡೆ ಹಾಗೂ ಶಿಖರದ ಮೈಯನ್ನು ನೀಳವಾದ (ಲಂಬ) ರೇಖೆಗಳು ವಿಭಾಗಿಸುವ ರೀತಿ ಹಾಗೂ ಮಟ್ಟಸರೇಖೆಗಳು ಹಲವು ಬಾರಿ ಮರುಕಳಿಸುವ ಕ್ರಮ ತೀರ ಚಮತ್ಕಾರವಾಗಿ ಕಾಣುತ್ತದೆ. (ಒಮ್ಮೊಮ್ಮೆ ಜಟಿಲವಾಗಿ ಕಂಡುಬರುತ್ತದೆ.) ಅದೇನಿದ್ದರೂ ನಕ್ಷತ್ರಾಕಾರದ ವಿನ್ಯಾಸದಿಂದಾಗಿ ಆಲಂಕಾರಿಕ ಶಿಲ್ಪಕೃತಿಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಿದಂತಾಯಿತು. ಅಂತೆಯೆ ಹೊಯ್ಸಳ ಕಲಾವೈಭವ ವಿಮಾನದ ಹೊರಮೈಯಲ್ಲಿ ತುಂಬಿತುಳುಕುತ್ತದೆಯೆನ್ನಬಹುದು. ಅಲ್ಲದೆ ಈ ನಕ್ಷತ್ರದ ಏಣುಗಳಲ್ಲಿ ಬೆಳಕು ನೆಳಲು ಚೆಲ್ಲಾಟದ ಮೋಡಿ ಮೆಚ್ಚುವಂತಹದು.

ಸ್ಥಾಪತ್ಯದೃಷ್ಟಿಯಿಂದ ಈ ನಕ್ಷತ್ರಾಕಾರದ ತಲವಿನ್ಯಾಸದ ಮೇಲೆ ಕಟ್ಟಿದ ಗೋಡೆಗಳ ದಪ್ಪ ಹೆಚ್ಚುವುದರಿಂದ ಭಾರವಾದ ಶಿಖರವನ್ನು ಹೊರಲು ಸಾಧ್ಯವಾಗುವುದು. ಆದರೆ ಈ ದಪ್ಪ ಗೋಡೆಗಳಿಂದಾಗಿ ಗರ್ಭಗೃಹದೊಳಗೆ ಪ್ರದಕ್ಷಿಣಾಪಥಕ್ಕೆ ಜಾಗವಿರುವುದಿಲ್ಲ12. (ಈ ರೀತಿಯ ಆಂತರಿಕ


---

9. Percy Brown: *Indian Architecture* (*Buddhist and Hindu* (*Period*) Bombay, 1971, 6th Reprient), p. 139


10 ಡಾ. ಶಿವರಾಮಕಾರಂತ: ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಬೆಂಗಳೂರು, 1969, ಪು. 41, ಚಿತ್ರ 17

11 ಅದೇ, ಪು. 19: "......ಹೊರಭಾಗದ ಮುಂಬಣೆಗಳ ದಪ್ಪ ಹೆಚ್ಚುವುದರಿಂದ ಪಾಯ ನಕ್ಷತ್ರಾಕಾರ ತಾಳತೊಡಗುತ್ತದೆ"(?) (ಚಿತ್ರದಲ್ಲಿ ತೋರಿಸಿದಂತೆ) ಈ ಹಿಂಬಣೆ-ಮುಂಬಣೆಗಳಿಂದುಂಟಾದ ತಲವಿನ್ಯಾಸಗಳನ್ನು ನಾಗರಶೈಲಿಯಲ್ಲಿ ವಿಶೇಷವಾಗಿ ಗಮನಿಸಬಹುದಾಗಿದೆ. ಇವುಗಳನ್ನು ನಕ್ಷತ್ರಾಕಾರವೆಂದು ಕರೆಯುವುದಿಲ್ಲ. ಬಹುಕೋಣಾಕಾರದ ತಲವಿನ್ಯಾಸವನ್ನು ತ್ರಿರಥ, ಪಂಚರಥ, ಸಪ್ತರಥ ಎಂದು ಮುಂತಾಗಿ ರಚಿಸಬಹುದಾಗಿದೆ.

12 ಆದ್ದರಿಂದ ಹೊಯ್ಸಳ ದೇವಾಲಯಗಳ (ಸಾಮಾನ್ಯವಾಗಿ) ಹೊರಜಗತಿಯೇ ಪ್ರದಕ್ಷಿಣಾಪಥವಾಗಿರುತ್ತದೆ.



ಚಿತ್ರ ೪: ಜ್ಯಾಮಿತೀಯ ತತ್ತ್ವವನ್ನಾಧರಿಸಿ ಸಮಚತುರಸ್ರದಿಂದ ನಕ್ಷತ್ರಾಕಾರದ ವಿನ್ಯಾಸವನ್ನೂ ಮುಂಬಣೆ-ಹಿಂಬಣೆಗಳಿಂದುಂಟಾಗುವ ವಿನ್ಯಾಸವನ್ನೂ ರಚಿಸುವ ಬಗೆ



ಚಿತ್ರ ೪: ಮುಂಬಣೆ-ಹಿಂಬಣೆಗಳಿಂದುಟಾಗುವ ತಲವಿನ್ಯಾಸಕ್ಕೂ ನಕ್ಷತ್ರಾಕಾರದ ತಲವಿನ್ಯಾಸಕ್ಕೂ ಇರುವ ತಾಂತ್ರಿಕ ಹಾಗೂ ಸ್ವರೂಪ ವ್ಯತ್ಯಾಸವನ್ನು ಗಮನಿಸಬಹುದು.

ಪ್ರದಕ್ಷಿಣಾ ಪಥರಹಿತ ದೇವಾಲಯಕ್ಕೆ ನಿರಂಧಾರ ದೇವಾಲಯವೆಂದು ಹೆಸರು). ಅಲ್ಲದೆ ನಕ್ಷತ್ರಾಕಾರದ ತಳಪಾಯದ ಮೇಲೆ ಕಟ್ಟಿದ ಗೋಡೆಯ ಉನ್ನತಿಯನ್ನು ಸೂಚಿಸುವ ಲಂಬರೇಖೆಗಳಿಗೆ ಶಕ್ತಿ ಸಾಲದೆ ಹೋಗುತ್ತದೆ13. ಬಳಪದ ಕಲ್ಲುಗಳನ್ನು ಒಂದರ ಮೇಲೊಂದಿಟ್ಟು ರಚಿಸಿದ ನಕ್ಷತ್ರಾಕಾರದ ಗೋಡೆಗಳು ಆಂತರಿಕವಾಗಿ ಬೇಕಾದಷ್ಟು ಭದ್ರವಾಗಿರುವುದಿಲ್ಲ14. ಹೀಗೆ ನಕ್ಷತ್ರಾಕಾರದ ತಲವಿನ್ಯಾಸದಲ್ಲಿ ಗುಣದೋಷಗಳೇನಿದ್ದರೂ, ಇದು ಹೊಯ್ಸಳ ವಾಸ್ತುಶೈಲಿಯ ಸತ್ತ್ವ ಹಾಗೂ ಸೊಬಗನ್ನು ಹೆಚ್ಚಿಸುವಲ್ಲಿ ಬಹುಶಃ ಪ್ರಮುಖ ಪಾತ್ರ ವಹಿಸುತ್ತದೆ.

---

13 ಡಾ. ಶಿವರಾಮ ಕಾರಂತ: ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಬೆಂಗಳೂರು, 1969, ಪು. 19

14 ಅನೇಕ ಹೊಯ್ಸಳದೇವಾಲಯಗಳ ಶಿಖರಗಳು, ಗೋಡೆಗಳು ಕುಸಿದು ಬಿದ್ದಿರುವುದಕ್ಕೆ ಇದೂ ಒಂದು ಕಾರಣವಾಗಿರಬಹುದೆ?

ವಾಸ್ತು ಎಂದರೆ ದೇವಮನುಷ್ಯರು ವಾಸಿಸುವ ಸ್ಥಳ. ಆದುದರಿಂದ ವಾಸ್ತುವು ಧರೆ, ಹರ್ಮ್ಯ, ಯಾನ, ಪರ್ಯಂಕಗಳೆಂದು ನಾಲ್ಕು ವಿಧ. ಭೂಮಿಯ ಸನ್ನಿವೇಶ, ಗುಣಗಳ ಪರೀಕ್ಷೆಯನ್ನು ಮೊದಲು ಮಾಡಬೇಕು. ಗುಂಡಿಯನ್ನಗೆದು ಮಣ್ಣನ್ನು ಚೆನ್ನಾಗಿ ಶೋಧಿಸಬೇಕು. ಅನಂತರ ನಿವೇಶನದ ವಿನ್ಯಾಸ ಮುಂತಾದುವನ್ನು ಸೂತ್ರಧಾರನು ನಿರ್ಧರಿಸಬೇಕು. ದೇವಾಲಯ, ಅರಮನೆ, ಗ್ರಾಮ, ಪಟ್ಟಣಗಳನ್ನು ಕಟ್ಟಲು ಆರಂಭಿಸುವುದಕ್ಕೆ ಮೊದಲೇ ರಸ್ತೆ, ಚರಂಡಿ, ಸರಹದ್ದು, ಕೋಟೆಯ ಗೋಡೆ, ಕಂದಕ ಮುಂತಾದವುಗಳಿಗೆಲ್ಲ ಅವಕಾಶವಾಗುವಂತೆ ತಲವಿನ್ಯಾಸ ಮಾಡಬೇಕು. ಗ್ರಾಮಗಳ ಆಕಾರವು ದಣ್ಡಕ, ಸರ್ವತೋಭದ್ರ, ನನ್ದ್ಯಾವರ್ತ, ಪದ್ಮಕ, ಸ್ವಸ್ತಿಕ, ಪ್ರಸ್ತರ, ಕಾರ್ಮುಕ, ಚತುರ್ಮುಖವಾಗಿರಬಹುದು. ನಗರಗಳಲ್ಲಿ ರಾಜಧಾನೀ, ನಗರೀ, ಪುರ, ಖೇಟ, ಖರ್ವಟ, ಕುಬ್ಜಕ, ಪಟ್ಟಣಗಳೆಂಬ ಭೇದಗಳೂ, ಸೈನ್ಯಕ್ಕಾಗಿ ಶಿಬಿರ, ವಾಹಿನೀಮುಖ, ಸ್ಥಾನೀಯ, ದ್ರೋಣಕ, ಸಂವಿದ್ಧ (ವರ್ಧಕ), ಕೋಲಕ, ನಿಗಮ, ಸ್ಕನ್ಧಾವಾರಗಳೂ, ದುರ್ಗಗಳಲ್ಲಿ ಗಿರಿ, ವನ, ಜಲ, ರಥ, ದೇವ, ಪಂಕ, ಮಿಶ್ರದುರ್ಗಗಳೆಂಬ ಭೇದಗಳೂ ಇವೆ.

ಹರ್ಮ್ಯಗಳು ಪ್ರಾಸಾದ, ಮಂಟಪ, ಸಭಾ, ಶಾಲಾ, ರಂಗ ಎಂಬ ರೂಪವಾಗಿರುವುವು. ಇವುಗಳು ಆಕಾರಭೇದದಿಂದ ಜಾತಿ, ಛನ್ದ, ವಿಕಲ್ಪ (ಸಂಕಲ್ಪ) ಮತ್ತು ಆಭಾಸ ಎಂಬುದಾಗಿ ವಾಸ ಮಾಡುವವರಿಗೆ ಶಾನ್ತಿ, ಪುಷ್ಟಿ, ಜಯ, ಅದ್ಭುತ ಮತ್ತು ಸರ್ವಕಾಮಫಲಪ್ರದವಾಗುವುವು. ಶಂಕುಸ್ಥಾಪನೆ, ವಾಸ್ತುಪುರುಷಪೂಜೆಗಳನ್ನು ಮಾಡಿ ಭೂತತೃಪ್ತಿಗಾಗಿ ಬಲಿಹಾಕಿ, ಇಟ್ಟಿಗೆಗಳನ್ನು ಮಾಡಬೇಕು. ಇಟ್ಟಿಗೆಗಳು ಸಾಮಾನ್ಯವಾಗಿ $5\frac{1}{4}$ ಅಂಗುಲ ಅಗಲ $22\frac{1}{2}$ ಅಂಗುಲ ಉದ್ದವಿರುವುವು. ಉದ್ದವನ್ನು $\frac{1}{4}$, $\frac{1}{2}$ ಅಥವಾ $\frac{3}{4}$ ಅಂಗುಲ ಹೆಚ್ಚಿಸಿಕೊಳ್ಳಬಹುದು. ಭರತಖಂಡದಲ್ಲಿ ಸುಮೇರಿಯ ರೀತಿಯ ಇಟ್ಟಿಗೆಗಳು ಕಂಡು ಬರುವುದಿಲ್ಲ. ಸಾಮಾನ್ಯ ಗೃಹಗಳಿಗೆ ಕಲಸಿದ ಮಣ್ಣನ್ನೇ ಗಾರೆಯಂತೆ ಉಪಯೋಗಿಸುತ್ತಿದ್ದರು. ದೊಡ್ಡ ದೊಡ್ಡ ಕಲ್ಲುಗಳನ್ನು ನಯವಾಗಿ ಕಡೆದು ಗಾರೆಯಿಲ್ಲದೆಯೇ ಶಾಶ್ವತವಾಗಿರುವಂತೆ ಜೋಡಿಸುತ್ತಿದ್ದರು. ಆದರೂ ಗಾರೆಮಾಡುವ ವಿಧಾನವನ್ನೂ ಅರಿತಿದ್ದರು. ವರಾಹಮಿಹಿರನು ವಜ್ರಲೇಪವೆಂಬ 'ಸಿಮೆಂಟ್' ಮಾಡುವ ರೀತಿಯನ್ನು ಹೇಳಿರುವನು. ಇದರಿಂದ ಶಿಲಾಮೂರ್ತಿಗಳ ಭಿನ್ನವಾದ ಅಂಗಗಳನ್ನೂ ಭದ್ರವಾಗಿ ಜೋಡಿಸಬಹುದು[1]

—ಡಾ. ಎಸ್. ಶ್ರೀಕಂಠಶಾಸ್ತ್ರೀ

---

1 ಭಾರತೀಯ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (1954), ಪು. 284–5.

ಎನ್. ಪ್ರಭುಸ್ವಾಮಿ

ರಾಷ್ಟ್ರೀಕೃತ ಬ್ಯಾಂಕುಗಳ ಸಾಧನೆ

ಇಷ್ಟರಲ್ಲಿ (ಜುಲೈ ತಿಂಗಳಿನಲ್ಲಿ) ದೇಶಾದ್ಯಂತ ರಾಷ್ಟ್ರೀಕೃತ ಬ್ಯಾಂಕುಗಳು ಪ್ರಚಾರಕ್ಕೋಸ್ಕರ ನಾಲ್ಕನೆಯ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಿವೆ. ಬ್ಯಾಂಕುಗಳ ರಾಷ್ಟ್ರೀಕರಣದಿಂದ ದೇಶಕ್ಕೆ ಮಹದುಪಕಾರವಾಗಿದೆ–ಎಂಬ ಭಾವನೆ ಜನರ ಮನಸ್ಸಿನಲ್ಲಿ ಉಂಟಾಗುವಂತೆ ಮಾಡುವುದೇ ವಾರ್ಷಿಕೋತ್ಸವದ ಆಚರಣೆಯ ಮುಖ್ಯ ಉದ್ದೇಶವಾಗಿದೆ. ಆದರೆ ಅರ್ಥಶಾಸ್ತ್ರದ ವಿದ್ಯಾರ್ಥಿಗಳು ಯಾವ ರೀತಿ ನಿಷ್ಪಕ್ಷಪಾತ ದೃಷ್ಟಿಯಿಂದ ರಾಷ್ಟ್ರೀಕರಣದ ಪರಿಣಾಮಗಳನ್ನು ನೋಡುತ್ತಾರೆ ಎಂಬುದನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಹದಿನಾಲ್ಕು ರಾಷ್ಟ್ರೀಕೃತ ಬ್ಯಾಂಕುಗಳ ಪ್ರಗತಿ ಮತ್ತು ಸಾಧನೆಗಳನ್ನು ವಿಮರ್ಶಿಸಲು ಸಾಕಷ್ಟು ಆಧಾರಾಂಶಗಳು ಸಾಮಾನ್ಯ ಜನರಿಗೆ ದೊರೆಯುವುದಿಲ್ಲ. ಸರ್ಕಾರಿ ಅಧಿಕಾರಿಗಳಾಗಲಿ ರಿಸರ್ವ್ ಬ್ಯಾಂಕ್ ಅಧಿಕಾರಿಗಳಾಗಲಿ ತಮಗೆ ಗೊತ್ತಿರುವ ಎಲ್ಲ ಅಂಶಗಳನ್ನೂ ಹೊರಗೆಡಹುವಂತಿಲ್ಲ. ಆಗಿಂದಾಗ್ಗೆ ವಿವಿಧ ಬ್ಯಾಂಕುಗಳು ಮತ್ತು ರಿಸರ್ವ್ ಬ್ಯಾಂಕ್ ತಮ್ಮ ಪ್ರಕಟಣೆಗಳ ಮೂಲಕ ಕೆಲವು ಅಂಶಗಳನ್ನು ಬೆಳಕಿಗೆ ತಂದರೂ ಅವು ಸರಕಾರದ ದೃಷ್ಟಿಕೋನಕ್ಕೆ ಅನುಗುಣವಾಗಿರುವುದು ಕಂಡುಬರುತ್ತದೆ. ಇವನ್ನು ಪರಿಶೀಲಿಸಿದಾಗ ರಾಷ್ಟ್ರೀಕರಣದ ಪರಿಣಾಮವಾಗಿ ಉಂಟಾಗಿರುವ ಸಾಧನೆಗಳಾವುವು ಅಥವಾ ರಾಷ್ಟ್ರೀಕರಣವಾಗದಿದ್ದರೂ ದೇಶದ ಆರ್ಥಿಕಾಭಿವೃದ್ಧಿಯ ಪರಿಣಾಮವಾಗಿ ಮಾಮೂಲು ಪರಿಸ್ಥಿತಿಯಲ್ಲಿ ಒದಗಬಹುದಾದ ಸಾಧನೆಗಳಾವುವು ಎಂಬುದನ್ನು ವಿಭಜಿಸಿ ಅಧ್ಯಯನ ಮಾಡುವುದು ಕಷ್ಟವಾಗಿದೆ. ಆದಾಗ್ಯೂ ನಮ್ಮ ಮುಂದಿರುವ ಆಧಾರಾಂಶಗಳ ಸಹಾಯದಿಂದ ರಾಷ್ಟ್ರೀಕೃತ ಬ್ಯಾಂಕುಗಳ ಸಾಧನೆ ಕುರಿತು ಒಂದು ವಿಶ್ಲೇಷಣೆ ಮಾಡಲಾಗಿದೆ.

ರಾಷ್ಟ್ರೀಕೃತ ಬ್ಯಾಂಕುಗಳ ಸಾಧನೆಯ ವಿಚಾರದಲ್ಲಿ ಸಾಕಷ್ಟು ಪ್ರಚಾರ ಕಾರ್ಯ ನಡೆದಿದ್ದರೂ ಜನಸಾಮಾನ್ಯರಿಗೆ ರಾಷ್ಟ್ರೀಕರಣದಿಂದ ಆಗಿರುವ ಪ್ರಯೋಜನಗಳೇನು ಎಂಬುದು ಮನವರಿಕೆಯಾಗುತ್ತಿಲ್ಲ. ಏಕೆಂದರೆ ಅವರ ಆರ್ಥಿಕ ಸ್ಥಿತಿ ಮೊದಲಿಗಿಂತಲೂ ಕಷ್ಟಕರವಾಗಿದೆ. ಆದರೆ ಒಂದು ವಿಷಯದಲ್ಲಿ ಮಾತ್ರ ರಾಷ್ಟ್ರೀಕರಣದ ಪ್ರಯೋಜನವನ್ನು ಕಾಣಬಹುದು. ಬಹಳ ಕಾಲದ ವರೆಗೆ ನಮ್ಮ ದೇಶದ ವಾಣಿಜ್ಯ ಬ್ಯಾಂಕುಗಳು ಗ್ರಾಮಾಂತರ ಪ್ರದೇಶಗಳಿಗೆ ತಮ್ಮ ಚಟುವಟಿಕೆಗಳನ್ನು ವಿಸ್ತರಿಸುವ ವಿಷಯದಲ್ಲಿ ನಿರ್ಲಕ್ಷ್ಯ ಮನೋಭಾವ ತೋರಿದುವು. ಆದರೆ ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಶಾಖೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸುವುದರ ಮೂಲಕ ಕಳೆದ ನಾಲ್ಕು ವರ್ಷಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿವೆ ಎನ್ನಬಹುದು. ಎಲ್ಲ ಬ್ಯಾಂಕುಗಳನ್ನೂ ಗಣನೆಗೆ ತೆಗೆದುಕೊಂಡರೆ, ಜೂನ್ 1969ರಲ್ಲಿ 8,262 ಬ್ಯಾಂಕು ಶಾಖೆಗಳಿದ್ದದ್ದು, ಮಾರ್ಚ್ 1973ರ ಕೊನೆಯ ವೇಳೆಗೆ 15.124 ಶಾಖೆಗಳಿರುವುದು ಕಂಡುಬರುತ್ತದೆ. ಅಂದರೆ ನಾಲ್ಕು ವರ್ಷಗಳಲ್ಲಿ (1969–73) ಬ್ಯಾಂಕು ಶಾಖೆಗಳ ಬೆಳವಣಿಗೆಯಲ್ಲಿ ಸೇಕಡ 80ರಷ್ಟು ಪ್ರಗತಿ ಆಗಿರುವುದು ಕಂಡುಬರುತ್ತದೆ. ಕೇವಲ ಹದಿನಾಲ್ಕು ರಾಷ್ಟ್ರೀಕೃತ ಬ್ಯಾಂಕುಗಳ ಬೆಳವಣಿಗೆಯನ್ನು ಪರಿಶೀಲಿಸಿದಾಗ ಅವುಗಳ ಬೆಳವಣಿಗೆಯಲ್ಲಿ ಸೇಕಡ 94ರಷ್ಟು ಪ್ರಗತಿ ಕಂಡುಬರುತ್ತದೆ. ರಾಷ್ಟ್ರೀಕರಣಕ್ಕೆ ಒಳಪಡದಿರುವ ಬ್ಯಾಂಕುಗಳ ಬೆಳವಣಿಗೆಯನ್ನು ಗಮನಿಸಿದಾಗ ಅವು

ಕೂಡ ಸಾಕಷ್ಟು ಪ್ರಗತಿ ಸಾಧಿಸಿವೆ ಎನ್ನಬಹುದು. ಅಂದರೆ ಅವು ತಮ್ಮ ಶಾಖೆಗಳನ್ನು ಆರಂಭಿಸಿರುವುದರಲ್ಲಿ ಸೇಕಡ 70ರಷ್ಟು ಪ್ರಗತಿ ಸಾಧಿಸಿವೆ ಎನ್ನಬಹುದು.

ರಾಷ್ಟ್ರೀಕರಣವಾಗುವುದಕ್ಕೆ ಮುನ್ನ ಬ್ಯಾಂಕುಗಳು ಶಾಖೆಗಳನ್ನು ತೆರೆದು ತಮ್ಮ ಚಟುವಟಿಕೆಗಳನ್ನು ವಿಸ್ತರಿಸಬೇಕೆಂಬ ಅಭಿಪ್ರಾಯ ಹೊಂದಿದ್ದರೂ ಅದಕ್ಕೆ ಉತ್ತೇಜನವಿರಲಿಲ್ಲ. ನಾಯಿಕೊಡೆಗಳಂತೆ ಬ್ಯಾಂಕುಗಳು ಹುಟ್ಟಿಕೊಂಡು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಏರುಪೇರು ಉಂಟುಮಾಡುತ್ತವೆ ಎಂಬ ಭಯದಿಂದ ವಾಣಿಜ್ಯ ಬ್ಯಾಂಕುಗಳು ತಮಗಿಷ್ಟಬಂದಂತೆ ಶಾಖೆಗಳನ್ನು ತೆರೆಯಲು ರಿಸರ್ವ್ ಬ್ಯಾಂಕು ಅವಕಾಶ ಕೊಡುತ್ತಿರಲಿಲ್ಲ. ರಿಸರ್ವ್ ಬ್ಯಾಂಕು ಕಾದು ನೋಡಿ ಎಚ್ಚರಿಕೆಯಿಂದ ಹೆಜ್ಜೆ ಇಡುವ ನೀತಿಯನ್ನು ಅನುಸರಿಸುತ್ತಿತ್ತು. ಆದರೆ ರಾಷ್ಟ್ರೀಕರಣವಾದ ಮೇಲೆ ಶಾಖೆಗಳನ್ನು ಆದಷ್ಟು ಸಂಖ್ಯೆಯಲ್ಲಿ ಪ್ರಾರಂಭಿಸಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಗ್ರಾಮಾಂತರ ಪ್ರದೇಶಗಳಲ್ಲೂ ಸ್ಥಾಪಿಸಬೇಕೆಂಬ ಧ್ಯೇಯ ಹೊಂದಿರುವುದರಿಂದ, ಬ್ಯಾಂಕುಗಳ ಬೆಳವಣಿಗೆ ಕಂಡು ಬರುತ್ತಿದೆ. ಈಗ ರಿಸರ್ವ್ ಬ್ಯಾಂಕು ಲೈಸೆನ್ಸ್ ನೀಡುವ ನೀತಿಯಲ್ಲಿ ಸಾಕಷ್ಟು ಉದಾರ ಮನೋಭಾವ ತೋರುತ್ತಿದೆ.

ಠೇವಣಿಗಳನ್ನು ಸ್ವೀಕರಿಸಿ ಬ್ಯಾಂಕುಗಳ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ವಿಷಯವನ್ನು ಗಮನಿಸಿದಾಗ ನಿರಾಶೆಯುಂಟಾಗುತ್ತದೆ. 1969–72ರ ಅವಧಿಗೆ ಸಂಬಂಧಪಟ್ಟಂತೆ ಪ್ರಕಟಿಸಲಾಗಿರುವ ಅಧಿಕೃತ ಅಂಕಿ ಅಂಶಗಳನ್ನು ಪರಿಶೀಲಿಸಿದರೆ, ಎಲ್ಲ ಷೆಡ್ಯೂಲ್ಡ್ ಬ್ಯಾಂಕುಗಳು ಒಟ್ಟಾಗಿ 2,950 ಕೋಟಿ ರೂಪಾಯಿಗಳನ್ನು ಹೊಸ ಠೇವಣಿಗಳ ರೂಪದಲ್ಲಿ ಪಡೆದಿವೆ ಎಂಬುದು ಕಂಡುಬರುತ್ತದೆ. ಇವರ ಪೈಕಿ ಹೊಸದಾಗಿ ಸ್ಥಾಪಿಸಲ್ಪಟ್ಟ ಬ್ಯಾಂಕು ಶಾಖೆಗಳು 548 ಕೋಟಿ ರೂಪಾಯಿಗಳಷ್ಟು ಠೇವಣಿಯನ್ನು ಸಂಗ್ರಹಿಸಿವೆ. ಅಂದರೆ ಹೊಸದಾಗಿ ಅಸ್ತಿತ್ವಕ್ಕೆ ಬಂದ 5,358 ಬ್ಯಾಂಕಿನ ಶಾಖೆಗಳು 3 ವರ್ಷಗಳಲ್ಲಿ 548 ಕೋಟಿ ರೂಪಾಯಿ ಠೇವಣಿಗಳನ್ನು ಸ್ವೀಕರಿಸುವುದರಲ್ಲಿ ಯಶಸ್ವಿಯಾಗಿದ್ದರೆ, ಹಿಂದಿನಿಂದಲೂ ವ್ಯವಹಾರ ನಡೆಸುತ್ತಿರುವ 8262 ಬ್ಯಾಂಕಿನ ಶಾಖೆಗಳು 2402 ಕೋಟಿ ರೂಪಾಯಿಗಳ ಠೇವಣಿಯನ್ನು ಸಂಗ್ರಹಿಸಿರುವುದು ಕಂಡುಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಬ್ಯಾಂಕು ಶಾಖೆಗಳು 3 ವರ್ಷದ ಅವಧಿಯಲ್ಲಿ ಸ್ಥಾಪಿಸಲ್ಪಟ್ಟ ಒಟ್ಟು ಶಾಖೆಗಳ ಸೇಕಡ 70ರಷ್ಟು ಇವೆ. ಆದರೆ ಅವು ಕೇವಲ 283 ಕೋಟಿ ರೂಪಾಯಿಗಳಷ್ಟು ಠೇವಣಿಯನ್ನು ಮಾತ್ರ ಸಂಗ್ರಹಿಸುವ ಶಕ್ತಿ ಹೊಂದಿದ್ದುವು. ಠೇವಣಿಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಬ್ಯಾಂಕಿನ ಶಾಖೆಗಳು ನಿರಾಶೆಯುಂಟುಮಾಡಿದ್ದರೂ, ಬ್ಯಾಂಕಿಂಗ್ ವಿಷಯದಲ್ಲಿ ಗ್ರಾಮಾಂತರ ಪ್ರದೇಶದ ಜನರಲ್ಲಿ ಆಸಕ್ತಿ ಬೆಳೆಸುವುದರಲ್ಲಿ ಯಶಸ್ವಿಯಾಗಿವೆ ಎನ್ನಬಹುದು.

ಬ್ಯಾಂಕುಗಳು ತಮ್ಮಲ್ಲಿರುವ ಹಣವನ್ನು ಸಾಲದ ರೂಪದಲ್ಲಿ ಕೊಡುವ ನೀತಿಯನ್ನು ಪರಿಶೀಲಿಸಿದರೆ, ಅವು ಕೆಲವು ಮುಖ್ಯ ಆರ್ಥಿಕ ಚಟುವಟಿಕೆಗಳಲ್ಲಿ ನೆರವಿಗೆ ಬರುತ್ತಿವೆ ಎಂಬ ಅಂಶವನ್ನು ಕಾಣಬಹುದು. ವ್ಯವಸಾಯಗಾರರಿಗೆ, ಸಣ್ಣ ಕೈಗಾರಿಕೋದ್ಯಮಿಗಳಿಗೆ ಮತ್ತು ರಸ್ತೆ ಸಂಚಾರ ವ್ಯವಸ್ಥೆಯಲ್ಲಿ ನಿರತರಾಗಿರುವ ಬಸ್ಸು ಮತ್ತು ಲಾರಿ ಮಾಲೀಕರಿಗೆ ಆದಷ್ಟು ಜಾಗ್ರತೆ ಸಾಲಗಳನ್ನು ಒದಗಿಸುವ ಏರ್ಪಾಡನ್ನು ಬ್ಯಾಂಕುಗಳು ಕೈಗೊಂಡಿವೆ. ರಾಷ್ಟ್ರೀಕರಣವಾಗುವುದಕ್ಕೆ ಮುಂಚೆಯೂ ಮೇಲ್ಕಂಡ ಉದ್ಯಮಗಳಿಗೆ ಬ್ಯಾಂಕುಗಳು ನೆರವು ನೀಡುತ್ತಿದ್ದುವು. ಆದರೆ ರಾಷ್ಟ್ರೀಕರಣವಾದ ಮೇಲೆ ಶೀಘ್ರಗತಿಯಲ್ಲಿ ಮೇಲ್ಕಂಡ ಉದ್ಯಮಗಳಿಗೆ ನೆರವು ಒದಗಿಸುವುದರಲ್ಲಿ ಆಸಕ್ತ ತೋರುತ್ತಿವೆ.

1972ರಲ್ಲಿ ಕೆಲವು ಉದ್ಯಮಗಳಿಗೆ ಸಹಾಯ ಒದಗಿಸಲು ಅತಿ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸುವ ಏರ್ಪಾಡನ್ನು ರಾಷ್ಟ್ರೀಕೃತ ಬ್ಯಾಂಕುಗಳು ಜಾರಿಗೆ ತಂದಿವೆ. ಈ ವಿಷಯದಲ್ಲಿ ಬಹಳ ಮಟ್ಟಿನ ಪ್ರಚಾರ ಕೂಡ ನಡೆಸಲಾಯಿತು. ಆದರೆ ಇದರಿಂದ ಆಗಿರುವ ಉಪಯೋಗಕ್ಕಿಂತ ಪ್ರಚಾರವೇ ಹೆಚ್ಚು ಎಂಬ ಅಭಿಪ್ರಾಯ ಅಂಕಿಅಂಶಗಳಿಂದ ಕಂಡು ಬರುತ್ತದೆ. ಏಪ್ರಿಲ್, 1973ರ ವೇಳೆಗೆ 2.25 ಲಕ್ಷ ಉದ್ಯಮಗಳಿಗೆ ಮೇಲ್ಕಂಡ ವಿವೇಚನಾಯುತ ಬಡ್ಡಿ ನೀತಿಗನುಸಾರವಾಗಿ 87.26 ಲಕ್ಷ ರೂಪಾಯಿಗಳ ಸಾಲ ಒದಗಿಸಲಾಗಿತ್ತು. ಅಂದರೆ ಸರಾಸರಿಯಲ್ಲಿ ಪ್ರತಿ ಉದ್ಯಮಕ್ಕೂ ಕೇವಲ 40 ರೂ ಸಾಲ ದೊರಕಿದಂತಾಯಿತು. ಈ ಅಲ್ಪ ಮೌಲ್ಯದ ಸಾಲದಿಂದ ಯಾವ ಉದ್ಯಮವನ್ನು ಈ ಕಾಲದಲ್ಲಿ

ಬೆಳೆಸಬಹುದು ಎಂಬುದನ್ನು ಅವಲೋಕಿಸಿದಾಗ, ಮೇಲ್ಕಂಡ ನೀತಿ ಹಾಸ್ಯಾಸ್ಪದವಾಗಿರುವುದು ಕಂಡು ಬರುತ್ತದೆ.

ಬ್ಯಾಂಕುಗಳ ದಕ್ಷತೆಯ ದೃಷ್ಟಿಯಿಂದ ನೋಡಿದಾಗ ರಾಷ್ಟ್ರೀಕರಣವಾದ ಮೇಲೆ ಅನೇಕ ಬ್ಯಾಂಕುಗಳ ಸಿಬ್ಬಂದಿ ವರ್ಗ ಅಧಿಕಗೊಂಡಿರುವುದು ಕಾಣಬರುತ್ತದೆ. ಜೊತೆಗೆ ಸಿಬ್ಬಂದಿ ವರ್ಗಕ್ಕೆ ಕೊಡಲಾಗುತ್ತಿರುವ ಸಂಬಳ, ಭತ್ಯ ಮುಂತಾದವು ಸಾಕಷ್ಟು ಪ್ರಮಾಣದಲ್ಲಿ ಅಧಿಕಗೊಂಡಿವೆ. ಆದರೆ ಬ್ಯಾಂಕುಗಳ ದಕ್ಷತೆ ಮಾತ್ರ ಹೆಚ್ಚಲಿಲ್ಲ. ಗಿರಾಕಿಗಳು ಅನೇಕ ಸಂದರ್ಭಗಳಲ್ಲಿ ಬ್ಯಾಂಕುಗಳಿಂದ ಹಿಂದಿರುಗುವಾಗ ನಿರಾಶರಾಗಿ ಬರುತ್ತಾರೆ. ಇಂಡಿಯದಲ್ಲಿ ಈಗ ಉದ್ಭವಿಸಿರುವ ಹಣದುಬ್ಬರವನ್ನು ತಡೆಗಟ್ಟುವುದರಲ್ಲೂ ರಾಷ್ಟ್ರೀಕೃತ ಬ್ಯಾಂಕುಗಳು ವಿಫಲಗೊಂಡಿವೆ ಎಂಬ ಅಂಶ ನಮ್ಮ ದೇಶದ ಈಗಿನ ಪರಿಸ್ಥಿತಿಯಿಂದ ಕಂಡುಬರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದ ಅನಂತರ, ರಾಷ್ಟ್ರೀಕರಣದ ಪರಿಣಾಮಗಳನ್ನು ವಿಮರ್ಶಿಸಲು ಸಾಕಷ್ಟು ಕಾಲ ಇನ್ನೂ ಸಂದಿಲ್ಲ ಎಂಬ ಅಂಶವನ್ನು ಒಪ್ಪಿಕೊಳ್ಳಬಹುದು. ಜೊತೆಗೆ ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಸಾಧನೆಗಳೆಂದು ಎತ್ತಿ ತೋರಿಸುತ್ತಿರುವ ಕೆಲವು ಅಂಶಗಳನ್ನು ಪರಿಶೀಲಿಸಿದಾಗ ಆ ಸಾಧನೆಗಳು ಮಾಮೂಲು ಪರಿಸ್ಥಿತಿಯಲ್ಲೂ ಉಂಟಾಗುತ್ತಿದ್ದುವು ಎನ್ನಬಹುದು. ರಾಷ್ಟ್ರೀಕರಣವಾಗದಿದ್ದರೂ, ಭಾರತದ ಆರ್ಥಿಕಾಭಿವೃದ್ಧಿ ಕೈಗೂಡಿದಂತೆಲ್ಲ, ಬ್ಯಾಂಕುಗಳ ಚಟುವಟಿಕೆಯೂ ವಿಸ್ತಾರಗೊಳ್ಳುತ್ತಿದ್ದುವರಲ್ಲಿ ಯಾವ ಸಂಶಯವಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಆದರೆ ರಾಷ್ಟ್ರೀಕರಣವಾದ ಮೇಲೆ ಜನರಲ್ಲಿ ಒಂದ ಆಶಾಭಾವನೆಯನ್ನು ಕುದುರಿಸುವುದರಲ್ಲಿ ಬ್ಯಾಂಕುಗಳು ಸ್ವಲ್ಪಮಟ್ಟಿನ ಯಶಸ್ಸನ್ನು ಸಾಧಿಸಿವೆ ಎಂಬ ಅಂಶವನ್ನು ನಿಸ್ಸಂದೇಹವಾಗಿ ಒಪ್ಪಿಕೊಳ್ಳಬಹುದು.

ರಾಷ್ಟ್ರೀಕರಣದ ವ್ಯಾಪ್ತಿಗೆ ಒಳಪಟ್ಟ ಹದಿನಾಲ್ಕು ಬ್ಯಾಂಕುಗಳು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ಅದರ ಏಳು ಉಪಾಂಗ ಬ್ಯಾಂಕುಗಳು ಸೇರಿ ಬ್ಯಾಂಕಿಂಗ್ ಉದ್ಯಮದ ಸಾರ್ವಜನಿಕ ಕ್ಷೇತ್ರ ನಿರ್ಮಿಸಿಕೊಂಡಿವೆ. ನಮ್ಮ ದೇಶದ ಬ್ಯಾಂಕ್ ಠೇವಣಿಗಳ ಒಟ್ಟು ಮೊತ್ತದ ಶೇಕಡ 85ರಷ್ಟನ್ನು ಈ ಬ್ಯಾಂಕುಗಳು ಇಟ್ಟುಕೊಂಡಿವೆ. ರಾಷ್ಟ್ರೀಕರಣದಿಂದ ಜನರಿಗೆ ಅನಗತ್ಯವಾದ ತೊಂದರೆಯಾಗದಂತೆ ನೋಡಿಕೊಳ್ಳಲು ಈ ಹದಿನಾಲ್ಕು ಬ್ಯಾಂಕುಗಳ ವೈಯಕ್ತಿಕ ಸ್ವರೂಪವನ್ನು ಹಾಗೆಯೇ ಮುಂದುವರಿಸಿಕೊಂಡು ಬರಲಾಗಿದೆ. ಪ್ರತಿಯೊಂದು ಬ್ಯಾಂಕಿನ ಆಡಳಿತವನ್ನು ನೋಡಿಕೊಳ್ಳಲು ಒಬ್ಬೊಬ್ಬ 'ಕಸ್ಟೋಡಿಯನ್' ಎಂಬ ಹೆಸರಿನ ಅಧಿಕಾರಿಗಳನ್ನು ನೇಮಿಸಲಾಗಿದೆ. ಈ ಬ್ಯಾಂಕುಗಳ ಮುಂಚಿನ ಷೇರುದಾರರಿಗೆ ಪರಿಹಾರವನ್ನು ಹಣ ಮತ್ತು ಸರ್ಕಾರದ ಸಾಲಪತ್ರಗಳ ರೂಪದಲ್ಲಿ ಕೊಡಬೇಕೆಂದು ನಿರ್ಣಯಿಸಲಾಗಿದೆ. ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಸರ್ಕಾರ ಸೂಚಿಸಿರುವ ಉದ್ದೇಶಗಳು ಯಾವುವೆಂದರೆ: 1 ಬ್ಯಾಂಕುಗಳ ಮೇಲೆ ಕೆಲವೇ ವ್ಯಕ್ತಿಗಳ ಹತೋಟಿಯಿರುವುದನ್ನು ತೊಡೆದು ಹಾಕುವುದು; 2 ಕೃಷಿ, ಸಣ್ಣ ಕೈಗಾರಿಕೆ ಮತ್ತು ರಫ್ತುಗಳಿಗೆ ಅಗತ್ಯವಾಗುವಷ್ಟು ಸಾಲವನ್ನು ಒದಗಿಸುವುದು; ಮತ್ತು 3 ಹೊಸ ವರ್ಗಕ್ಕೆ ಸೇರಿದ ಉದ್ಯಮ ಸಾಹಸಿಗಳಿಗೆ ಉತ್ತೇಜನ ಕೊಡುವುದು. ಈ ಉದ್ದೇಶಗಳ ಸಫಲತೆ ಬ್ಯಾಂಕುಗಳ ರಾಷ್ಟ್ರೀಕರಣದ ಮುಖ್ಯ ಗುರಿ ಎಂದು ಹೇಳಲಾಗಿದೆ.

ಬ್ಯಾಂಕುಗಳ ರಾಷ್ಟ್ರೀಕರಣದ ಪರಿಣಾಮದ ಬಗ್ಗೆ ಇಷ್ಟು ಅತ್ಯಲ್ಪ ಕಾಲದಲ್ಲಿ ಖಚಿತವಾದ ಅಭಿಪ್ರಾಯವನ್ನು ವ್ಯಕ್ತಮಾಡುವುದು ತುಂಬ ಕಷ್ಟದ ಕೆಲಸ. ರಾಷ್ಟ್ರೀಕರಣದ ಯಶಸ್ಸಿನ ಬಗ್ಗೆ ಶಂಕೆಯನ್ನಿಟ್ಟುಕೊಂಡಿರುವವರು ಇನ್ನೂ ಅನೇಕ ಮಂದಿ ನಮ್ಮ ದೇಶದಲ್ಲಿ ಇದ್ದಾರೆ. ಆದರೆ ಅವರ ಶಂಕೆ ಸಾವಕಾಶವಾಗಿ ಮಾಯವಾಗುತ್ತಿದೆ. ಇದು ಸಂಪೂರ್ಣವಾಗಿ ಹೋಗಿ, ಅಂತಹ ಜನರೂ ಈ ಬ್ಯಾಂಕುಗಳಲ್ಲಿ ಅಧಿಕ ಭರವಸೆಯನ್ನು ಹೊಂದಬೇಕಾದರೆ, ರಾಷ್ಟ್ರೀಕರಿಸಿದ ಬ್ಯಾಂಕುಗಳು ಹೆಚ್ಚು ಶ್ರದ್ಧೆಯಿಂದ ದುಡಿಯಬೇಕು. ಈ ಬ್ಯಾಂಕುಗಳು ಕ್ರಿಯಾತ್ಮಕವಾಗಿ ತುಂಬಿದ ಚೈತನ್ಯದಿಂದ ಕಾರ್ಯ ನಿರ್ವಹಿಸಿ ದೇಶದ ಆರ್ಥಿಕ ಬೆಳವಣಿಗೆಗೆ ಸಹಾಯಕವಾಗಬೇಕು. ಮುಖ್ಯವಾಗಿ ಅವು ಸರಕಾರದ ಸಾಮಾಜಿಕ ಉದ್ದೇಶವನ್ನು ಸಾಧಿಸುವ ಗುರಿಯನ್ನು ಸಫಲಗೊಳಿಸಿದರೆ, ಅವುಗಳನ್ನು ರಾಷ್ಟ್ರೀಕರಿಸಿದ ಉದ್ದೇಶವು ಸಾರ್ಥಕವಾಗುತ್ತದೆ. ರಾಷ್ಟ್ರೀಕರಣವು ಬ್ಯಾಂಕುಗಳಿಗೆ ತಮ್ಮ ಸತ್ವವನ್ನು ಒರೆಗೆ ಹಚ್ಚುವಂತೆ ಮಾಡಿದೆ. ಆದರೆ ಅಷ್ಟೇ ಸದವಕಾಶಗಳನ್ನೂ ಅದು ಒದಗಿಸಿದೆ. ಈ ಗುರುತರ ಜವಾಬ್ದಾರಿಯನ್ನು ಬ್ಯಾಂಕುಗಳು ಹೇಗೆ ನಿರ್ವಹಿಸುತ್ತವೆ ಎಂಬುದನ್ನು ಇನ್ನೂ ಸ್ವಲ್ಪ ಕಾಲ ಕಾದು ನೋಡಬೇಕು[1].

—ಟಿ. ಎನ್. ವಿಜಯಪ್ಪ

---

1 ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು, ಭಾಗ 2. ಬೆಂಗಳೂರು ವಿಶ್ವವಿದ್ಯಾನಿಲಯ (1971), ಪು. 83-4

ಕೆಳದಿ ಗುಂಡಾಜೋಯಿಸ್

ಕೆಳದಿ ಅರಸರ ಕುಲದೇವರುಗಳು

ಕ್ರಿ.ಶ. 15ನೆಯ ಶತಮಾನದಲ್ಲಿ ಉದಯಗೊಂಡ ಕೆಳದಿ ಸಂಸ್ಥಾನ ದಕ್ಷಿಣ ಹಿಂದೂಸ್ಥಾನದಲ್ಲಿ, ಪ್ರಾಯಶಃ ಭಾರತದಲ್ಲಿಯೇ, ಪ್ರಮುಖವಾದ ಹಿಂದೂ ಸಾಮ್ರಾಜ್ಯಗಳ ಕೇಂದ್ರಗಳಲ್ಲೊಂದು. ವಿಜಯನಗರದ ಮಗುವಿನೋಪಾದಿಯಲ್ಲಿ ರೂಪುಗೊಂಡ ಈ ಪಾಳೆಯಪಟ್ಟು ಕಾಲಕ್ರಮೇಣ, ಅಂದರೆ ತಾಳೀಕೋಟೆ ಯುದ್ಧದ ಅನಂತರ. ಕ್ರಿ.ಶ. 1565ರ ಸರಿಸುಮಾರಿನಲ್ಲಿ ಸ್ವಾಯತ್ತತೆಯನ್ನು ಹೊಂದಿತು. ಆದರೂ ಇದು ವಿಜಯನಗರವನ್ನು ಯಾವ ರೀತಿಯಲ್ಲೂ ಅಲಕ್ಷಿಸದೆ ಧಾರ್ಮಿಕ ಕಟ್ಟುಪಾಡುಗಳಲ್ಲಿ ಆ ಸಾಮ್ರಾಜ್ಯದ ಪರಂಪರೆಯಲ್ಲಿ ತನ್ನದೇ ಆದ ನೀತಿ ನಡೆವಳಿಕೆಗಳನ್ನು ಚಾಚೂ ತಪ್ಪದೆ ಅನೂಚಾನವಾಗಿ ಪಾಲಿಸಿ ಕಾಯ್ದುಕೊಂಡು ಬಂದಿರುವುದು ಇತಿಹಾಸದಲ್ಲಿ ವೇದ್ಯವಾಗುತ್ತದೆ. ಇತರ ಸಂಸ್ಥಾನಗಳ ಸಾಂಸ್ಕೃತಿಕ ಪರಂಪರೆಯೊಂದಿಗೆ ಹೋಲಿಸಿದರೆ ಕೆಳದಿ ಅರಸರು ಧಾರ್ಮಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗಳಲ್ಲಿ ಹಿರಿದಾದ ಸ್ಥಾನ ಗಳಿಸಿಕೊಂಡಿದ್ದರೆನ್ನಬಹುದು. ಕೆಳದಿ ಬಸವರಾಜ ಶಿವತತ್ವ ರತ್ನಾಕರದಲ್ಲಿ ಉಲ್ಲೇಖಿಸಿದಂತೆ–

> ರಣೇ ವನೇ ಜಲೇ ಶೈಲೇ ಸುಪ್ತಂ ಮತ್ತಂ ಚ ದೇಹಿನಮ್
> ಪುರಾಕೃತಾನಿ ಪುಣ್ಯಾನಿ ರಕ್ಷಂತೀತಿ ನ ವಾಙ್ಮೃಷಾ॥

ಹೀಗೆ ಪೂರ್ವಕರ್ಮದ ಫಲವೋ ಎಂಬಂತೆ ದೈವದತ್ತವಾದ ಅನೇಕ ವಿಚಿತ್ರ ಸಂಗತಿಗಳು ಕೆಳದಿ ಅರಸರಿಗೆ ಸಂಭವಿಸಿದುವು. ಇವುಗಳಲ್ಲಿ ಈ ಅರಸರಿಗೆ ದೊರೆತ ಕುಲದೇವರ ಅಗೋಚರ ಸಾಕ್ಷಾತ್ಕಾರ ಪ್ರಮುಖ ಘಟನೆಗಳಾಗಿವೆ. ಇಂತಹ ಸಂಗತಿಗಳು ದಂತಕಥೆಯ ರೂಪದಲ್ಲಿದ್ದರೂ ಐತಿಹಾಸಿಕ ಸತ್ಯವನ್ನು ಮರೆಮಾಚದಷ್ಟು ಮುಂದುವರಿದುಕೊಂಡು ಬಂದಿವೆ. ಹಾಗೂ ಇವುಗಳನ್ನು ತಳ್ಳಿಹಾಕದಷ್ಟು ಸಾಧನ–ಸಾಮಗ್ರಿಗಳನ್ನು ಪುಷ್ಟೀಕರಣೆಯ ದಿಸೆಯಲ್ಲಿ ಒದಗಿಸುತ್ತಿವೆ. ಈ ಪರಿಸರಗಳಿಂದ ಮೂರ್ತಿ ಪೂಜೆಯ ರೂಪದಲ್ಲಿ ಅನೇಕ ದೇವರುಗಳು ಕೆಳದಿ ನಾಯಕರಿಗೆ ಸಹಜವಾಗಿಯೇ ಗೋಚರಿಸಿವೆ. ಹೀಗೆ ಸಂಘಟಿಸಿದ ಭಗವತ್‌ಸಾನ್ನಿಧ್ಯವನ್ನು ಈ ದೊರೆಗಳು ಸಮುಪಯೋಗಪಡಿಸಿಕೊಂಡು ಧಾರ್ಮಿಕ ಬೆಳೆವಣಿಗೆಗೆ ತಳಪದಿಯನ್ನು ನೀಡಿದ್ದಾರೆ. ಆದಿಯಲ್ಲಿ ಕೆಳದಿ ಶ್ರೀರಾಮೇಶ್ವರನು ಗೋಚರಿಸಿದ ರೀತಿಯನ್ನು ಕೆಳದಿ ನೃಪವಿಜಯ ಹೀಗೆ ಉಲ್ಲೇಖಿಸುತ್ತದೆ:

ಕೆಳದಿ ರಾಮೇಶ್ವರ

> ಅದೆಂತೆಂದೊಡಂತು ವಿರಾಜಿಸುತ್ತುಮಿರ್ಪ ಭದ್ರಪಾಗ್ರಜ ನೃಪ ಚೌಡಪನ ಸ್ವಪ್ನದೊಳ್ ಶ್ರೀಮತ್ಸ್ವರಮೇಶ್ವರಂ ಮನಂಗೊಳಿಪ್ಪ ವೃದ್ಧ ಜಂಗಮ ಸ್ವರೂಪದಿಂ ಪ್ರಸನ್ನನಾಗಿ ಕೆಳದಿ ಪುರವರದೆಡೆಯೊಳ್ ಸೀಗೆವಳ್ಳಿಯೆಂಬ ತಾಣದೊಳ್ ತರುಗುಲ್ಮಲತಾಪ್ರತಾನಾವೃತಮಾದ ಸೀಗೆವೆಳೆಯ ಮಧ್ಯದೊಳ್ ರಾಮೇಶ್ವರನೆಂಬ ಮಹಾದಿವ್ಯಲಿಂಗಂ ನೆಲೆಸಿರ್ಪುದಾಲಿಂಗಂ

> ಬಹುಕಾಲಮಾರಭ್ಯ ವಲ್ಮೀಕಾಚ್ಛಾದಿತಮಾಗಿರ್ಪುದಲ್ಲಿಂ ತಲ್ಲಿಂಗಮಿರ್ಪುದರ್ಕೆ ಕುರುಹೇನೆಂದೊಡೆ ನಿನ್ನ ಮನೆಯೊಳೆಸೆವ ಕಪಿಲೆವಣ್ಣದ ಪಸು ಕರುವೆರಸಾತಾಣಮನ್ನೈದಿ ನಿಂದಾಪುತ್ತದ ಮೇಗಡೆಯೊಳ್ ಪ್ರತಿದಿನಂ ಪಾಲ್ಗರೆದು ಬರುತಿರ್ಪುದೆ ಕುರುಹಾಲಿಂಗಮುಂ ಜನರ ಕಣ್ಣಸಕ್ಕೆ ಗೋಚರಮಪ್ಪಂತು ನಿಮಿರ್ಚಿಸಿ ತದ್ರಾಮೇಶ್ವರ ಲಿಂಗಮಂ ಸದ್ಭಕ್ತಿಯಿಂದರ್ಚಿಸಲ್ ನಿನಗಖಂಡಪೃಥ್ವೀಪತಿತ್ವಂ ಕೈಸಾರ್ಪುದೆಂದುಸಿರ್ದ ಜಂಗಮಮೂರ್ತಿಯಂತರ್ಧಾನಮನ್ನೈದಲೆಚ್ಚೆತ್ತು ಪರಮಹರ್ಷಿತನಾಗಿ ನಿಜಮಾತ್ರವಪ್ಪ ಬಸವಾಂಬಿಕೆಯೊಳಿಂತು ತನ್ನ ಸ್ವಪ್ನವನುಸಿರಲದಂ ಕೇಳ್ದಿಂತು ಸ್ವಪ್ನದೊಳ್ ನಿರೂಪಿಸಿ ಪೋದ ಜಂಗಮಮೂರ್ತಿ ಸಾಕ್ಷಾತ್ಪರಮೇಶ್ವರನೆಯುದೆ ನಿಸ್ಸಂಶಯಮಾರಾಮೇಶ್ವರಲಿಂಗಕ್ಕೆ ಭಕ್ತಿಯೊಳ್ ನಡೆಕೊಂಡೊಡೆ ಮುಂದೆ ನಿನಗೆ ಮಹಾಭಿವೃದ್ಧಿಯುಂಟಪುದರ್ಕೆ ಸಂದೇಹಮಿಲ್ಲೆಂದು ನಿಲಲಂತಾ ಮಾತಂ ಕೇಳ್ದು ಮರುದೆವಸಂ ಬೇಹುಚರರಂ ಕಾಯ್ದಿಕ್ಕಿ ನಿಜಮಂದಿರದೊಳಿರ್ಪ ಕಪಿಲೆವಣ್ಣದ ಪಸುವಾಪುತ್ತದೆಡೆಗೈದಿ ಸುರಭಿಯುಂ ಕರೆದು ಬರ್ಪುದಂ ಗೋರಕ್ಷಕರ ಮುಖದಿಂದರಿದಲ್ಲಿಗೈದಿಯಾಪುತ್ತವನಗೆಯಿಸಿ ನೋಡಲದರೊಳ್ ಕಂಗೊಳಿಸುತಿರ್ಪ ಮಂಗಳಮೂರ್ತಿಯಪ್ಪ ಶ್ರೀರಾಮೇಶ್ವರಲಿಂಗಮಿರಲ್ಕಂಡು ವಿಸ್ಮಿತನಾಗಿ ಕರಸರೋಜಮಂ ಮುಗಿದು ಭಯಭರಿತ ಭಕ್ತಿಯಿಂ ಪೊಡಮಟ್ಟು ನುತಿಸಿ ಬಳಿಕಾತರುಗುಲ್ಮಲತಾಪ್ರತಾನನಿಕಾಕುಂಜಂಗಳಂ ಸಮನಾತಾಣಮಂ ಮನೋಹರಮಪ್ಪಂತು ಸೈತುಗೊಳಿಸಿ ತತ್ಕಾಲೋಚಿತಮಾದ ತೃಣಕುಟಿಯಂ ನಿರ್ಮಿಸಿ ನಿತ್ಯಮಾಲಿಂಗಕ್ಕಂ ಧೂಪ ದೀಪ ನೈವೇದ್ಯ ನಡೆವಂತು ಕಟ್ಟಳೆಯಂ ರಚಿಸಿ ಪ್ರತಿದಿನಂಗಳೊಳ್ ತಾಂ ಪಳ್ಳಿಯಮಲಿಂದೆಳ್ತಂದಾಲಿಂಗಮಂ ಭಜಿಸಿ ಪೋಪ ನಿಯಮಮಂ ಮಾಡಿಕೊಂಡಿಂತು ವರ್ತಿಸುತ್ತುಮಿರ್ದ............

ಕೆಳದಿ ಅರಸರ ಆಸ್ಥಾನದಲ್ಲಿದ್ದ ಲಿಂಗಣ್ಣ ಕವಿ ಹೀಗೆ ಹೇಳಿದರೆ. ಇತರ ಉಲ್ಲೇಖಗಳು ವಿಭಿನ್ನ ರೂಪದಲ್ಲಿವೆ. ಕ್ರಿ.ಶ. 1698ರಿಂದ 1715ರವರೆಗೆ ಆಳಿದ ಕೆಳದಿಯ ಹಿರಿಯ ಬಸಪ್ಪನಾಯಕ ರಚಿಸಿದ ಶಿವತತ್ತ್ವ ರತ್ನಾಕರದಲ್ಲಿನ ಉಲ್ಲೇಖ ಹೀಗೆ ಹೇಳುತ್ತದೆ:

> ಇತಿ ಸಂಭಾಷಮಾಣೌ ತೌ ಮಾತಾಪುತ್ರೌ ಗೃಹಂ ಗತೌ।
> ತತೋಽಸ್ಯ ಕಪಿಲಾ ಧೇನುರೇಕಾ ಭವನವರ್ತಿನೀ ॥40॥
>
> ವನಂ ಪ್ರತಿದಿನಂ ಗತ್ವಾ ಸಾಯಮಾಯಾತಿ ತದ್ಗೃಹಮ್।
> ಪಯೋ ನ ಕಿಯದಪ್ಯೇಷಾ ದೋಗ್ಧ್ರಿತ್ಯಾಲೋಚ್ಯ ಚೇತಸಿ ॥41॥
>
> ನ ಕ್ಷೀರ ಮೂಧಸಿ ಸ್ವಲ್ಪಮಪಿ ವಾ ದೃಶ್ಯತೇ ಕುತಃ।
> ತ್ವಮೇತಾಂ ದುಗ್ಧವಾನ್ ಧೇನುಮಿತಿ ವಾಚಾ ಪ್ರತರ್ಜಿತಃ ॥42॥
>
> ಗೋಪಾಲಸ್ತಾಮನುವ್ಯಗ್ರೋ ಜಾಗ್ರದೇವ ಪರೇದ್ಯವಿ।
> ಯಯೌ ಪ್ರತೀಕ್ಷಮಾಣೋ ಗೌರಾರಾಮಾವಸರೇ ತು ಸಾ ॥43॥
>
> ಕಂಜಿದ್ಗುಲ್ಮಂ ಪ್ರವಿಶ್ಯ ಸ್ವಂ ಕ್ಷೀರಂ ತಸ್ಮಿನ್ ವದಾವಿತಿ।
> ದೃಷ್ಟ್ವೋದಂತಮಮುಂ ಗೋಪಃ ಸ್ವಾಮಿನೇಥ ನ್ಯವೇದಯತ್ ॥44॥
>
> ಪರೇದ್ಯುರದ್ಭುತಂ ಚೈತದ್ದಿದೃಕ್ಷುಃ ಸ್ವಜನೈಃ ಸಹ
> ಗತ್ವಾ ಸಂಭೇದ್ಯ ತದ್ಗುಲ್ಮಂ ಭೃತ್ಯೈಸ್ತನ್ಮಧ್ಯಗಂ ಪರಂ ॥45॥

ಲಿಂಗಮೇಕಂ ದದರ್ಶಾನ್ಯತ್ರಿಕಮಸ್ತೀತಿ ದಿದೃಕ್ಷಯಾ।
ಖಾತಾಯಾಂ ಶಾಸನ ಶಿಲಾಫಲಕೋ ಭುವ್ಯದೃಶ್ಯತ ॥46॥

ವಾಚಿತೇ ನಿರಧಾರ್ಯಸ್ಮಿನ್ ಲಿಂಗಂ ರಾಮೇಶ್ವರಾಭಿಧಮ್ ।
ಪೂಜಯಾಮಾಸ ತಂ ನಿತ್ಯಮುಪಚಾರೈಸ್ತದೇಕಧೀಃ ॥47॥

ಸ್ವೇಚ್ಛಯಾ ಸೃಜತೋ ಲೋಕಾನ್ ತೇಷಾಂ ಪ್ರೇರಯತೋಧಿಯಮ್।
ಅನ್ಯಥಾ ಕುರ್ವತೋಽಪ್ಯೇತಾನ್ ದುಷ್ಕರಂ ಕಿಂ ಮಹೇಶಿತುಃ ॥48॥

ತತ್ಪ್ರಸಾದಮಹಿಮ್ನಾಸ್ಯ ಕದಾಚಿತ್ ಸ್ವಪತೋ ನಿಶಿ
ಸ್ವಪ್ನೋ ಜಾತಃ ತ್ರಿಯಾಮಾಂತೇ ನಿಧಿ ಸಂಪ್ರಾಪ್ತಿಸೂಚಕಃ ॥49॥

ತತಃಪ್ರಾತಃಸಮುತ್ಥಾಯ ತತ್ಫಲಂ ಚ ವಿಮೃಶ್ಯ ಸಃ।
ನಿಧಾನಂ ಲಬ್ಧವಾನ್ 'ಪಶ್ಚಾತ್' ಬಹುದ್ರವಿಣಪೂರಿತಮ್ ॥50॥

ಕೆಳದಿ ನೃಪವಿಜಯದಲ್ಲಿಯ ಉಲ್ಲೇಖ ಶಿವತತ್ವ ರತ್ನಾಕರದಲ್ಲಿ ಹೀಗೆ ವಿಭಿನ್ನ ಸ್ವರೂಪದಲ್ಲಿದೆ. ಸಮಕಾಲೀನ ಗ್ರಂಥವೆಂದು ಪರಿಗಣಿಸಲ್ಪಟ್ಟಿರುವ ಈ ಉಭಯ ಕೃತಿಗಳಲ್ಲೂ ಉಪಲಬ್ಧವಿರುವ ಈ ಅಂಶಗಳು ಕುತೂಹಲವೂ ಹಾಗೂ ವಿಮರ್ಶಾತ್ಮಕವೂ ಆಗಿವೆ. ಶಿವತತ್ವ ರತ್ನಾಕರದಲ್ಲಿ ಹೇಳಿದ ಅಂಶಗಳು ಇತರೆಡೆಗಳಲ್ಲೂ ದೊರಕುತ್ತವೆ. ಆದರೆ ಡಾ. ಸ್ವಾಮಿನಾಥನ್‌ರವರು ಶಿವತತ್ವ ರತ್ನಾಕರದ ಆಧಾರದ ಮೇರೆಗೆ ಶಾಸನದೊಡನಿರುವ ಲಿಂಗವೊಂದು ಚೌಡಗೌಡನಿಗೆ ಗೋಚರಿಸಿತು ಎಂದು ಪ್ರತಿಪಾದಿಸಿದ್ದಾರೆ. ಈ ಲಿಂಗಕ್ಕೆ ರಾಮೇಶ್ವರ ಎಂಬುದಾಗಿ ನಾಮಾಂಕಿತವಿರುವ ಉಲ್ಲೇಖವಿರುವುದಾಗಿ ಹೇಳಿದ್ದಾರೆ1. ಈ ಶಾಸನ ಲಿಪಿ ಯಾವುದು? ಇದು ಎಲ್ಲಿ ಉಪಲಬ್ಧವಿದೆ ಎಂಬುದು ಕುತೂಹಲಕರವಾಗಿದೆ. ಹಲವೆಡೆಗಳಲ್ಲಿ ಇದನ್ನು ಉದ್ಭವಲಿಂಗವೆಂಬುದಾಗಿ ಹೇಳಲಾಗುತ್ತಿದೆ. ಗೋಚರಿಸಿದ ಲಿಂಗವನ್ನು ಮನೆಗೆ ಕೊಂಡುಹೋಗಿ ಗೌಡ ಅನುದಿನವೂ ಪೂಜಿಸುತ್ತಿದ್ದನೆಂದೂ ಉದ್ಧರಿಸಲ್ಪಟ್ಟಿದೆ2. ಇದು ಸಮಸ್ಯಾತ್ಮಕವಾಗಿದ್ದು ಚರ್ಚೆಗೆಡೆಯೀಯುತ್ತದೆ.

ಕೆಳದಿ ನೃಪವಿಜಯದಲ್ಲಿ ಉಕ್ತವಾದ ಕೆಳದಿಪುರವರದೆಡೆಯೊಳ್ 'ಸೀಗೆವಳ್ಳಿ'3 ಎಂಬ ತಾಣದೊಳ್ ತರುಗುಲ್ಮಲತಾ ಪ್ರತಾನಾವೃತಮಾದ ಸೀಗೆವೆಳೆಯ ಮಧ್ಯದೊಳ್ ರಾಮೇಶ್ವರನೆಂಬ ಮಹಾದಿವ್ಯಲಿಂಗಂ ನೆಲೆಸಿರ್ಪುದು ಎಂಬುದೂ ವಿಚಾರಪ್ರಚೋದಕವಾಗಿದ್ದು ಸೀಗೆ ಬಳ್ಳಿಗಳಿಂದಲೂ ಇತರ ಗಿಡಗಂಟಿಗಳಿಂದಲೂ ಆವರಿಸಲ್ಪಟ್ಟ ಈ ಪ್ರದೇಶದಲ್ಲಿ ಲಿಂಗ ಗೋಚರಿಸಿದ ಕೆಳದಿಪುರ4 ಎಂದು ಕರೆಯಲ್ಪಡುತ್ತಿರುವ ಈಗಿನ ಹಳ್ಳಿ ಇಲ್ಲಿಯ ವರೆಗೂ ಪ್ರಸರಿಸಿದ್ದಿರಬಹುದೆಂದು ಊಹಿಸಲವಕಾಶವಿದೆ.

---

1 *Nayakas of Ikkeri*, p. 13

2 *Ibid.*

3 ಇದೇ ರೀತಿ ಬಸವಾಪಟ್ಟಣಕ್ಕೆ 'ಆನೆವಳ್ಳಿ' ಎಂಬುದಾಗಿ ಪೂರ್ವನಾಮಾಂಕಿತವಿರುವುದು ಕಂಡುಬರುತ್ತದೆ. ಕೆ.ನೃ.ವಿ. ಪುಟ 99

4 ಈಗಲೂ ಅತ್ಯಂತ ಹಳೆಯದಾದ ಸಾಲುಮರಗಳು ಕೆಳದಿಪುರದಲ್ಲಿ ಇರುತ್ತವೆ. ಇವು ಧೂಪದ ಮರಗಳೆಂದು ಹೇಳಲಾಗುತ್ತಿದೆ. ಗತೈತಿಹಾಸಿಕ ಸಾಕ್ಷಾಧಾರಕ್ಕೆ ಇವು ಮಾದರಿಯಾಗಿದ್ದು ಅಗತ್ಯವಿರುವುದರಿಂದ ಕಾಪಾಡುವುದು ಸೂಕ್ತ. ಅನೇಕ ಈಗಾಗಲೇ ನಶಿಸಿ ಹೋಗಿವೆ.

ಕೆಳದಿ ವೀರಭದ್ರದೇವರು

ಇದೇ ಕ್ರಮದಲ್ಲಿ ಕೆಳದಿ ವೀರಭದ್ರ ದೇವರ ಬಗ್ಗೆಯೂ ಕೆಲವು ಘಟನೆಗಳು ಈ ದೊರೆಗಳಿಗೆ ಸಂಘಟಿಸಿದುವು. ಅದೇ ಕೆಳದಿ ನೃಪವಿಜಯದಲ್ಲಿನ ಉಲ್ಲೇಖ:

……ಪಂಪಾಕ್ಷೇತ್ರಮುಂ ಸಾರ್ದಲ್ಲಿಂ ತೆರಳ್ದು ಮಾಸೂರ ಸೀಮೆಯೊಳೆಸೆವಾಲವಳ್ಳಿ5 ಯೆಂಬ ಗ್ರಾಮಮಂ ಪೊರ್ದಿ ಮಲಂಗರಲಾಗ್ರಾಮತಟಾಕದೊಳಿರ್ಪ ವೀರಭದ್ರ ಮೂರ್ತಿಯಾ ಸಂಕಣ್ಣನಾಯಕನ ಸ್ವಪ್ನದೊಳ್ ಜಂಗಮಮೂರ್ತಿಯಾಕಾರದಿಂದೈತಂದೆನ್ನಂ ನಿನ್ನ ರಾಷ್ಟ್ರಕ್ಕೆ ತೆಗೆದುಕೊಂಡು ಪೋಗಿ ಪ್ರತಿಷ್ಠೆಯಂ ರಚಿಸಿ ಪೂಜಿಸಲ್ಕಿನಗೆ ಸಮಸ್ತ ಮನೋಭೀಷ್ಟಂಗಳೀವೆನೆಂದುಸಿರ್ದಂತರ್ಧಾನವನೈದಲೆಚ್ಚತ್ತು ಬಳಿಕಾತಟಾಕ ಜಲಮಧ್ಯ ದೊಳಿರ್ಪ ವೀರಭದ್ರಮೂರ್ತಿಯಂ ಸ್ವಾಧೀನಂಗೈದು……

ಬಳಿಕಾ ಸಂಕಣ ಭೂಪಂ
ಘಳಿಲನೆ ಮಾಸೂರ ದೇಶದಿಂ ಪೊರಟೊಡನು।
ಜ್ವಲಿಪ ನಿಜರಾಷ್ಟ್ರಮಂ ಸಾ
ರ್ದೊಲವಿಂದೆಳ್ತಂದು ಕೆಳದಿಪುರಮಂ ಪೊಕ್ಕಂ ॥75॥

ಇಂತಾ ಸಂಕಣನಾಯಕಂ ಕೆಳದಿಪುರವರಮಂ ಪೊಕ್ಕನಂತರಮಾ ಕೆಳದಿಯ ರಾಮೇಶ್ವರ ಲಿಂಗದ ದಕ್ಷಿಣ ಪಾರ್ಶ್ವದೊಳ್6

ಬಲ್ಲಿದ ದಾನವಸುರರೆರ್ದೆ
ದಲ್ಲಣನಹ ವೀರಭದ್ರಮೂರ್ತಿಯನೆಸೆವಂ ।
ತಲ್ಲಿ ನೆಲೆಗೊಳಿಸಿ ತತ್ಪದ
ಪಲ್ಲವಮಂ ಭಜಿಸಿ ಪಡೆದನತ್ಯುಚ್ಛ್ರಯಮಂ॥

……ಇಂತಾಗಮೋಕ್ತವಿಧಾನದಿಂ ವೀರಭದ್ರಮೂರ್ತಿಯಂ ಪ್ರತಿಷ್ಠೆಯಂ ರಚಿಸಿ ಶಿಲಾಮಯವಾದ ಗರ್ಭಗೃಹಮಂ ಕಟ್ಟಿಸಿ ತದ್ದೇವತಾ ಪೂಜಾರ್ಥಮತಿ ಮನೋಹರಮಪ್ಪ ಭೂರಿ ಭೂಸ್ವಾಸ್ಥ್ಯಮಂ ಬಿಡಿಸಿ7…………

ಅದೇ ಶಿವತತ್ವ ರತ್ನಾಕರದಲ್ಲಿ:–

ಮಾಸೂರು ದೇಶಮಾಸಾದ್ಯ ವಟವಲ್ಲೀತಿ ವಿಶ್ರುತೇ
ಗ್ರಾಮೇಽವಸತ್ತಸ್ಮಿನ್ ಸ್ವಪ್ನೇ ಕಂಚಿದ್ಯೋಗಿನಮೈಕ್ಷತ॥

ಅಬ್ರವೀದ್ಯೋಗಿನಂ ತಂ ಚ ಕೋ ಭವಾನಿತಿ ಭೂಪತಿಃ।
ಸ ಚಾಪ್ಯೇನಂ ಪ್ರತ್ಯವಾದೀದ್ಯೋಗೀ ಸಂಕಣ್ಣನಾಯಕಮ್॥

---

5 ಆಲವಳ್ಳಿ?–ಇದೂ ಕುತೂಹಲಕರವಾಗಿದೆ.

6 *Vij. Sex-Cent. Com. Vol*, p. 254 ff

7 ಈಗ ಈ ದೇವರಿಗೇ ಪ್ರತ್ಯೇಕವಾದ ಭೂಮಿಗಳಿರುವುದು ಕಂಡುಬರುವುದಿಲ್ಲ.

ಯೋಗಿರೂಪೇಣ ನೃಪತೇ! ವೀರಭದ್ರೋऽಹಮಾಗತಃ।
ಗ್ರಾಮಾತ್ಪುರಃ ಸ್ಥಿತೇ ರಮ್ಯೇ ತಟಾಕೇ ಸುಮಹತ್ತರೇ॥

ಅಹಂ ವಸಾಮಿ ಮಾಂ ನೀತ್ವಾ ತ್ವದ್ದೇಶಾಭ್ಯಂತರೇ ನೃಪ! ।
ಸ್ಥಾಪಯಾನೇನ ತೇ ಭೂಯಃ ಶ್ರೇಯಾಂಸಿ ಸ್ಯುಃ ಪದೇಪದೇ॥

ಏವಂ ಪ್ರಸೇದುಷ್ಟೋ ವೀರಭದ್ರಸ್ಯಾಕರ್ಣಯನ್ ವಚಃ ।
ಸಮುತ್ಥಸ್ಥೌ ತತಃ ಪ್ರಾಪ್ತೇ ಪ್ರಭಾತೇ ಪರಿಶೋಧಯನ್॥

ಮಹಾತಟಾಕಂ ತಸ್ಯಾಂತರ್ವೀರಭದ್ರಮಥಾಗ್ರಹೀತ್।
ತತ ಉದ್ಧೃತ್ಯ ಕಾಸಾರಾದ್ವಾಹಯನ್ನಪಿ ಸೇವಕೈಃ॥

ಸ್ವಂ ಪ್ರಾಪ್ಯ ದೇಶಂ ಕೆಳದೀ ರಾಮೇಶಾಗಾರಸನ್ನಿಧೌ।
ನಿರ್ಮಾಪ್ಯ ಭವನಂ ವೀರಭದ್ರಮಸ್ಥಾಪಯತ್ತತಃ॥

ಹೀಗೆ ಕೆಳದಿ ವೀರಭದ್ರದೇವರನ್ನು ಕುರಿತು ಉಂಟಾದ ದೈವಿಕ ಘಟನೆಗಳನ್ನು ಈ ಸಮಕಾಲೀನ ಗ್ರಂಥಗಳು ಒಂದೇ ರೀತಿಯಲ್ಲಿ ಉಲ್ಲೇಖಿಸಿರುವುದು ಕಂಡುಬರುವುದರಿಂದ ಇಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಯೀಯುವಂತಿಲ್ಲವೆಂಬುದನ್ನು ಅವಲೋಕಿಸಬಹುದಾಗಿದೆ. ಕೆಳದಿ ಶ್ರೀರಾಮೇಶ್ವರನಂತೆ ಈ ಶ್ರೀವೀರಭದ್ರನೂ ಕೆಳದಿ ದೊರೆಗಳ ಆರಾಧಕನಾಗಿರುವುದು ಕಂಡುಬರುತ್ತದೆ.8 ಇಮ್ಮಡಿ ಸೋಮಶೇಖರನಾಯಕ

ಶ್ರೀವೀರಭದ್ರನೆಸೆವಡಿ
ದಾವರೆಯಂ ಪರಮಭಕ್ತಿಯಿಂ ಪೂಜಿತ ತ।
ದ್ದೇವರ ದೇವಂಗವನಿಪ
ದೇವಂ ತಾಂ ಕೆಂಡದರ್ಚನೆಯನರ್ಪಿಸಿದಂ॥

ಎಂಬಂತೆ ಕೆಂಡದರ್ಚನೆಯನ್ನು ಈ ವೀರಭದ್ರದೇವನಿಗೆ ಅರ್ಪಿಸಿದ್ದಾನೆ.

ಇಕ್ಕೇರಿ ಅಘೋರೇಶ್ವರ ದೇವರು

ಮೇಲ್ಕಂಡ ಸರಣಿಯ ಮಾಲೆಯಲ್ಲಿ ಇಕ್ಕೇರಿಯ ಅಘೋರೇಶ್ವರನೂ ಕೆಳದಿ ಅರಸರಿಗೆ ತನ್ನ ಪ್ರಭಾವವನ್ನು ಬೀರಿದ್ದಾನೆ. ಅದೇ ಕೆಳದಿ ನೃಪವಿಜಯದ ಉಲ್ಲೇಖ ಹೀಗೆ ಹೇಳುತ್ತದೆ:

> ......ಮತ್ತಮಾ ಸಂಕಣನಾಯಕಂ ಕಾಶ್ಮೀರಪುರವಾಸಿಯಾದ ಶಾರದಾದೇವಿಯಂ ಸಂದರ್ಶನಂ ಗೆಯ್ದಾ ಕಾಶ್ಮೀರದೇಶದಿಂ ತೆರಳ್ದು ಕುರುಕ್ಷೇತ್ರಮಂ ಸಾರ್ದಲ್ಲಿಂ ತೆರಳ್ದು ಪೈಠಣದೇಶಮಂ ಪೊಂದಿ ತತ್ಪೈಠಣ ದೇಶದೊಳ್ ದ್ವಾತ್ರಿಂಶತ್ಕರಕಮಲ ಶೋಭಿತಮಪ್ಪ ಘೋರಮೂರ್ತಿಯಂ9 ಕಂಡು ಕಾಗದದೊಳ್ತದಾಕಾರಮಂ ಚಿತ್ರಿಸಿ ನಿಮಾಸಿಯುಂ ಬರೆದು ತೆಗೆದುಕೊಂಡೊಡನೆ............

8 ಕೆಳದಿ ನೃಪವಿಜಯ ಪುಟ 61, 62, 87, 134, 168, 176 ಮತ್ತು 192

9 ಈ ಮೂರ್ತಿ ಪೈಠಣದೇಶದಲ್ಲಿ ಈಗಲೂ ಇರುವುದೇ?

……ಪೈಠಣ ದೇಶದೊಳ್ ಕಾಗದದೊಳ್ ಚಿತ್ರಿಸಿ ನಿಮಾನಿಮಿಯಂ ಬರೆದು ತಂದಘೋರ ಮೂರ್ತಿಯಾಕಾರದಿಂ ಶಿಲಾಮಯಮಾದಘೋರಮೂರ್ತಿಯಂ ರಚನೆಗೈಸಿಯನಂತರ ದೊಳಾಗಮೋಕ್ತ ವಿಧಾನದಿಂ

ಚಾರು ಭುಜಬಲವಿದಾರಿತ
ಭೂರಿರಿಪುವ್ರಾತ ಸಂಕಣೋರ್ವಿಪನೆಸೆವಿ।
ಕ್ಕೇರಿಪುರವರದೊಳೊಪ್ಪುವ
ಘೋರೇಶ್ವರನಂ ಪ್ರತಿಷ್ಠೆಯಂ ವಿರಚಿಸಿದಂ॥

ಇಂತಘೋರೇಶ್ವರನಂ ಪ್ರತಿಷ್ಠೆಯುಂ ರಚಿಸಿ ತತ್ಪೂಜಾರ್ಥಮಪರಿಮಿತ ಭೂಸ್ವಾಸ್ಥ್ಯಮುಂ[10] ಧಾರೆಯನೆರೆದು ಮಹಾದ್ಭುತಮಾದ ಶಿಲಾಮಯ ದೇವಸ್ಥಾನಮಂ ನಿರ್ಮಾಣಂಗೈಸಿ ತಟಾಕಾರಾಮ ಪುಷ್ಪವಾಟಿಗಳಂ ರಚನೆಗೈಸಿ…………

ರಾಜಿಸುವಘೋರಮೂರ್ತಿಯ
ಪೂಜೆಯನತ್ಯಂತವಿಭವದಿಂ ವಿರಚಿಸುತುಂ।
ರಾಜಧರ್ಮದೊಳೆ ಸಂಕಣ
ರಾಜಂ ಸಂತಸದೆ ರಾಜ್ಯಮಂ ರಕ್ಷಿಸಿದಂ॥

ಶಿವತತ್ವರತ್ನಾಕರ ಹೀಗೆ ಹೇಳುತ್ತದೆ :

ಗದಾಂ ತ್ರಿಶೂಲಕಂ ಚೈವ ದಧಾನಾಃ ಕ್ರಮಶೋऽಸಿತಾಃ
ದ್ವಾತ್ರಿಂಶದ್ಹಸ್ತಮೂರ್ತೇಸ್ತು ಶಕ್ತಯಶ್ಚ ಪ್ರಕೀರ್ತಿತಾಃ॥
ಏಕವಕ್ತ್ರಂ ಸದಾನಂದಂ ದ್ವಾತ್ರಿಂಶದ್ಭುಜಸಂಯುತಮ್।
ಜಟಾಮಕುಟಸಂಯುಕ್ತಂ ತ್ರಿನೇತ್ರಂ ಚಂದ್ರಶೇಖರಮ್॥
ಅಭಯಂ ಖಡ್ಗ ಶೂಲೇಚ ಚಕ್ರಂ ಡಮರುಕಂ ತಥಾ।
ದಧಾನಮುಷ್ಟಿ ಬಾಣೌ ಚ ಗದಾಂ ಪದ್ಮಂ ಕಪಾಲಕಂ॥
ಜ್ಞಾನಮುದ್ರಾಂ ಕುಂತಹಸ್ತಂ ಅಂಕುಶಂ ಚಾಕ್ಷಮಾಲಿಕಾಂ।
ಖಟ್ವಾಂಗಂ ಪರಶುಂ ಚೈವ ದಧಾನಂ ದಕ್ಷಿಣೈರ್ಭುಜೈಃ॥

---

10 ಈ ಅಘೋರೇಶ್ವರನಿಗೆ ಈಗ ಕೆಳದಿ ಶ್ರೀರಾಮೇಶ್ವರನಿಗೆ ಇರುವಂತೆ ಆದಾಯವೇ ಇರುವುದಿಲ್ಲ. ಹಲವು ಮೂಲಗಳು ಈ ದೇವಾಲಯಕ್ಕೆ ಹೇರಳ ಆಸ್ತಿಯಿತ್ತೆಂಬುದನ್ನು ವ್ಯಕ್ತಪಡಿಸುತ್ತವೆ. ಭವ್ಯ ಐತಿಹಾಸಿಕ ಪರಂಪರೆಯನ್ನು ಹೊಂದಿರುವ ಈ ದೇವಾಲಯಕ್ಕೆ ಹೇರಳ ಆಸ್ತಿ ಇರಬೇಕಾಗಿತ್ತು. ಕ್ರಿ.ಶ. 17ರಲ್ಲಿ ಆಳಿದ ಹಿರಿಯ ವೆಂಕಟಪ್ಪನಾಯಕ ಪ್ರತಿ ಸೋಮವಾರ ಮತ್ತು ಪೂರ್ಣಿಮೆಯಲ್ಲಿ ಸ್ವತಃ ಇಲ್ಲಿಗೆ ಬಂದು ದೇವನ ದರ್ಶನ ಮಾಡುತ್ತಿದ್ದನೆಂದೂ. ಇದನ್ನು ತಾನು ನೋಡಿರುವುದಾಗಿಯೂ ಇಟಲಿದೇಶದ ಪ್ರವಾಸಿ ಬರೆದಿದ್ದಾನೆ. ಈ ದೇವನಿಗೆ ಅರಳಿಕೊಪ್ಪ. ಉದ್ರಿ. ದೊಡ್ಡಬಾಳೆ. ಕೆಸಿನಮನೆ. ಅಣಲೇಕೊಪ್ಪ. ಹೊಸೂರು ಮತ್ತು ಕುಂತಗೋಡು ಎಂಬ ಏಳು ಗ್ರಾಮಗಳು ಉಂಬಳಿಯಿದ್ದುವೆಂದು ಗೊತ್ತಾಗಿದೆ. ಹೀಗೆಯೇ ವಿದೇಶೀ ಪ್ರವಾಸಿ ಉಲ್ಲೇಖಿಸಿದ ಇಕ್ಕೇರಿ ಅಘೋರೇಶ್ವರನ ಭವ್ಯರಥವೂ ಅದರ ಅವಶೇಷವೂ ಏನಾಯಿತೊ? ಇದು ಇತಿಹಾಸಕ್ಕೆ ತುಂಬಲಾಗದ ನಷ್ಟವಾಗಿದೆ. (ಪ್ರವಾಸಿಕಂಡ ಇಂಡಿಯಾ IV Vol, p. 237)

ವರಂ ಚ ಫಲಕಂ ಚೈವ ಟಂಕಂ ಪಾಶಂ ಚ ಮುದ್ಗರಂ।
ನಾಗಮಗ್ನಿಂ ಮೃಗಂ ಘಂಟಾಂ ಧನುಶ್ಚ ಕಟಿಹಸ್ತಕಂ॥
ರತ್ನಂ ಚ ಕುಮುದಂ ಕುಂಭಂ ಖೇಟಕಂ ಪುಸ್ತಕಂ ತಥಾ।
ಅಘೋರಮೂರ್ತಿಂ ನೀಲಾಭಂ ರುಂಡಮಾಲಾ ವಿಭೂಷಿತಮ್॥
ಕಾಲಮುಂಡಸ್ಯ ಶಿರಸಿ ಸ್ಥಿತಂ ಸರ್ವಾಭಯಪ್ರದಮ್।11

ಕೊಲ್ಲೂರಿನ ಮೂಕಾಂಬಾ ದೇವಿ

ಈ ಮೂವರು ದೇವರಲ್ಲದೆ ಆದಿಶಕ್ತಿಯಾದ ಶ್ರೀಕೊಲ್ಲೂರು ಮೂಕಾಂಬಾ ದೇವಿಯೂ ಕೆಳದಿ ಅರಸರ ಕುಲದೇವರ ಸ್ಥಾನದಲ್ಲಿ ಪ್ರಮುಖ ಆರಾಧಕಳಾಗಿದ್ದಾಳೆ12.

ಇಷ್ಟದೈವತಮೂಕಾಂಬಾನಾಮ್ನ್ಯಾಃ ಶಕ್ತ್ಯಾ ಮಹೇಶಿತುಃ।
ದೇವಾನಾಮೇತದಾದೀನಾಮಮಿವರ್ಧ್ಯಚ ಪೂಜನಮ್॥

ಕೇಲದೀಸ್ಥಿತರಾಮೇಶ ವೀರಭದ್ರೇಶಯೋರಪಿ।
ಮೂಕಾಂಬಿಕಾಯಾಶ್ಚ ಪೃಥೂನಾಲಯಾನಪ್ಯಕಾರಯತ್॥

ಎಂಬಂತೆ ಈ ದೇವಿಗೆ ಕೆಳದಿ ಅರಸರು ಭಕ್ತಿಯಿಂದ ನಡೆದುಕೊಂಡು ತಮ್ಮ ಸೇವೆಯನ್ನು ಇತರ ರಾಜರಿಗೆ ಕಡಮೆಯಿಲ್ಲದಂತೆ ಎಸಗಿದ್ದಾರೆ. ಕೆಳದಿ ನೃಪವಿಜಯದಲ್ಲಿ ಮತ್ತು ಶಿವತತ್ವರತ್ನಾಕರದಲ್ಲಿ ಈ ಉಲ್ಲೇಖ ಗಮನಾರ್ಹವಾಗಿ ಕಂಡುಬರುತ್ತವೆ.

ಕೆಳದಿ ದೊರೆಗಳು ಈ ದೇವಿಗೆ ಸಲ್ಲಿಸಿರುವ ಸೇವೆ ಅಪಾರ. ಹಿರಿಯ ವೆಂಕಟಪ್ಪನಾಯಕ ಈ ದೇವಾಲಯವನ್ನು ವಿಸ್ತಾರವಾಗಿ ಶಿಲಾಮಯವನ್ನಾಗಿಸಿದ್ದಾನೆ. ಹಾಗೂ ಇವನ ಅನಂತರವೂ ಆಳಿದ ದೊರೆಗಳು ಈ ದೇವಿಗೆ ವಿವಿಧ ರೀತಿಯಲ್ಲಿ ಮಹತ್ತರ ಸೇವೆ ಸಲ್ಲಿಸಿರುವುದು ಕಂಡುಬರುತ್ತದೆ. ದೇವಾಲಯ ಜೀರ್ಣೋದ್ಧಾರ ಮಾತ್ರವಲ್ಲದೆ ಕೆಳದಿ ನೃಪವಿಜಯದಲ್ಲಿಯೇ ಉಲ್ಲೇಖಿಸಿರುವಂತೆ ಚೆನ್ನಮ್ಮಾಜಿ 'ಕೊಲ್ಲೂರು ಮೂಕಾಂಬಿಕೆಯಮ್ಮನವರ್ಗೆ ಹೇರಳ ಭೂಸ್ವಾಸ್ಥ್ಯಮಂ ಬಿಟ್ಟು ಲೋಪಮಾಗದಂತು ತತ್ತತ್ಪೂಜಾದಿ ವಿಭವಂಗಳಂ ನಡೆಸಿ ಶ್ರೀಮತ್ಕೊಲ್ಲೂರ ಮೂಕಾಂಬಿಕೆಯವರ ಕಟಾಕ್ಷಲಬ್ಧ ಸಂಪೂರ್ಣೈ

---

11 ಇಂತಹ 32 ಕೈಗಳಿರುವ ಕಂಚಿನ (ಪಂಚಲೋಹ) ಮೂರ್ತಿ ಈಗಲೂ ಇಕ್ಕೇರಿಯಲ್ಲಿದೆ. ಕ್ರಿ.ಶ. 17ರಲ್ಲಿ ಇಲ್ಲಿಗೆ ಬಂದಿದ್ದ ಇಟಲಿ ಪ್ರವಾಸಿ ಈ ದೇಗುಲಕ್ಕೆ ಸಂದರ್ಶನವಿತ್ತು ಈ ಮೂರ್ತಿಯನ್ನು ಕಂಡು ಭಕ್ತಿಪರವಶನಾದನಂತೆ. ('ಇಕ್ಕೇರಿ ಅರಸರು,' ಕರ್ನಾಟಕ ವಿಶ್ವವಿದ್ಯಾಲಯ, 1972) ಚಿತ್ರ ಹಯವದನರಾಯರ ಗೆಜೆಟಿಯರ್‌ನಲ್ಲಿ "–The temple has a metal Image of Virabhadra with 32 hands" ಎಂದಿದೆ. ಆದರೆ ಇದು ಚಂದ್ರಶೇಖರನೇ ಹೊರತು ವೀರಭದ್ರನಲ್ಲ. (Vol. V. p. 1303 ff). ಹಾಗೆಯೇ ಶ್ರೀಅಘೋರೇಶ್ವರನ ಪಾಣಿಪೀಠದಲ್ಲಿಯೂ ಶಿವ–ಶಕ್ತಿ ಸ್ವರೂಪದ್ದೆಂದು ಹೇಳಲಾದ 32 ವಿಗ್ರಹಗಳಿವೆ.

12 For the maintenance of the daily offering and worship in the temple of the family deity Mukambika of Kolluru. (N.I. P. 85)

ಶ್ವರ್ಯ ಸಂಪನ್ನಳಾಗಿದ್ದಾಳೆ13. ಕೊಲ್ಲೂರಿನ ಶ್ರೀದೇವಿಯ ಕಂಠದಲ್ಲಿ ಕಂಗೊಳಿಸುವ ವಜ್ರ ಚೆನ್ನಮ್ಮಾಜಿ ಯಿಂದಲೇ ಕೊಡಲ್ಪಟ್ಟಿತೆಂದು ಹೇಳಲಾಗಿದೆ14. ಶಿವಪ್ಪನಾಯಕ ಕೊಲ್ಲೂರು ಮೂಕಾಂಬಿಕಾದೇವಿಗೆ ಅನನ್ಯ ಭಕ್ತಿಯಿಂದ ನಡೆದುಕೊಂಡು ಸೇವೆ ಸಲ್ಲಿಸಿರುವುದು ಹಿರಿಯರ ಐತಿಹಾಸಿಕ ಕಥನಗಳಿಂದ ವ್ಯಕ್ತ ಪಟ್ಟಿದೆ15.

ವೀರಭದ್ರನಾಯಕ ಕೊಲ್ಲೂರು ಶ್ರೀಮೂಕಾಂಬಿಕಾದೇವಿಗೆ ಒಂಬತ್ತು ಗ್ರಾಮಗಳನ್ನು ಈ ದೇವಿಯ ಪೂಜಾದಿ ನಿತ್ಯ ಕೈಂಕರ್ಯಗಳಿಗೆ ಕೊಡುಗೆಯಾಗಿತ್ತಿದ್ದಾನೆ.16. ಹಿರಿಯ ವೆಂಕಟಪ್ಪನಾಯಕನ ಪತ್ನಿ ವೀರಮಾಂಬಾ (ವೀರಮ್ಮ) ಈ ದೇವಿಗೆ ಎರಡು ಕಂಚಿನ ದ್ವಾರಪಾಲಕರ ವಿಗ್ರಹಗಳನ್ನು ಮಾಡಿಸಿ ಶಿವರಾತ್ರಿಯಲ್ಲಿ ಸೇವೆಗೈದು ಸಮರ್ಪಿಸಿದ್ದಾಳೆ17.

ಎರಡನೆಯ ಸೋಮಶೇಖರನಾಯಕ:

ಮೆರೆವ ಸಹಸ್ರ ಸುವಾಸಿನಿ
ಯರಿಗಂ ವರಕಂಚುಕಗಳಂ ನಲಿದಿತ್ತಾ।
ದರಿಸಿ ಮೂಕಾಂಬಿಕೆಗೆ ತ
ದ್ಧರಣಿಪನುನ್ನತ ರಥೋತ್ಸವವನಾಗಿಸಿದಂ॥

ನೆರೆರಂಗಪೂಜೆಯುಂ ಭಾ
ಸುರತರವರ ಲಕ್ಷದೀಪಪೂಜೆಯನನುವಿಂ।

---

13 ಕೆ.ನೃ.ವಿ. (168 ಪು.)

14 ಈಗಲೂ ಈ ವಜ್ರ ಶ್ರೀದೇವಿಯ ಕಂಠದಲ್ಲಿದ್ದು ಇದರ ಬೆಲೆಯನ್ನು ಕಟ್ಟಲು ಸಾಧ್ಯವಿಲ್ಲ ವೆಂದು ಅಭಿಪ್ರಾಯ ಪಡಲಾಗಿದೆ. ಕೆಳದಿ ನೃಪವಿಜಯದಲ್ಲಿನ ಉಲ್ಲೇಖವೊಂದು–

ಪನ್ನಿರ್ಛಾಸಿರಸಂಖ್ಯೆಯ
ಪೊನ್ನುಗಳುಮನಿತ್ತು ಪದಕಕೊಪ್ಪುವ ಧರೆಗ।
ತ್ಯುನ್ನತವಾಗಿಹ ಪಚ್ಚೆಯ
ರನ್ನವನಾ ಬಸವನೃಪತಿ ಸಂಪಾದಿಸಿದಂ॥

ಹೀಗೆ ಹೇಳುತ್ತದೆ. ಹಾಗೂ 2ನೆಯ ಬಸಪ್ಪನಾಯಕನ ಪತ್ನಿ ವೀರಮ್ಮಾಜಿಯೇ ಇದನ್ನು ಕೊಟ್ಟಿರ ಬಹುದೇ? ಈಕೆಗೆ ಚೆನ್ನವೀರಮ್ಮಾಜಿ ಎಂಬುದಾಗಿಯೂ ಹೆಸರುಂಟು. (ಕೆ.ನೃ.ವಿ. ಪುಟ 198). ಇತಿಹಾಸ ದಲ್ಲಿ ಅನೇಕ ಕಡೆಗಳಲ್ಲಿ ಇವಳ ಧಾರ್ಮಿಕ ಸ್ವಭಾವದ ಉಲ್ಲೇಖಗಳು ಕಾಣಸಿಗುತ್ತವೆ.

15 ಇಂತಹ ಕಥನಗಳನ್ನು ಹಳೇನಗರದ ವೃದ್ಧರೂ, ಹಿರಿಯರೂ ಆಗಿದ್ದ ಕೃಷ್ಣ ಉಡುಪರಿಂದ ಸಂಗ್ರಹಿಸಿ. ಅವುಗಳಲ್ಲಿ ಒಂದನ್ನು 1966ನೇ ನವೆಂಬರ್‌ನ 'ಉತ್ಥಾನ'ದಲ್ಲಿನ ನನ್ನ ಲೇಖನದಲ್ಲಿ ಕಾಣ ಬಹುದು.

16 *Annual Report of South Indian Epigraphy, C·P. Nos. 3,4,6 and 6 A of 1927–28*

17 17 ಮಣ 13 ಸೇರು ಮತ್ತು 16 ಮಣ 3,8ಸೇರು ತೂಕವಿರುವ ಈ ಕಲಾತ್ಮಕ ವಿಗ್ರಹ ಗಳು ಈಗಲೂ ಶ್ರೀ ಕೊಲ್ಲೂರಿನ ದೇವಾಲಯದಲ್ಲಿದ್ದು ಸಂಗ್ರಹಯೋಗ್ಯವಾಗಿವೆ. ಇವುಗಳನ್ನು ರಕ್ಷಿಸು ವುದು ಅವಶ್ಯ.

ವಿರಚಿಸಿ ತನ್ಮೂಕಾ ಬೆಯ
ಚರಣಾಬ್ಜವನಧಿಕಭಕ್ತಿಯಿಂದರ್ಚಿಸಿದಂ॥

ಹೀಗೆ ಭಕ್ತಿಯಿಂದ ದೇವಿಯನ್ನು ಅರ್ಚಿಸಿದ್ದಾನೆ.

ಈ ರೀತಿಯಲ್ಲಿ ಕೆಳದಿ ಅರಸರು ಕೆಳದಿ ಶ್ರೀರಾಮೇಶ್ವರ, ಕೆಳದಿ ಶ್ರೀವೀರಭದ್ರ, ಇಕ್ಕೇರಿ ಶ್ರೀ ಶ್ರೀಅಘೋರೇಶ್ವರ ಮತ್ತು ಕೊಲ್ಲೂರಿನ ಶ್ರೀಮೂಕಾಂಬಾದೇವಿಯನ್ನು ತಮ್ಮ ಕುಲದೇವರಾಗಿ ಆರಾಧಿಸಿ ಅನುಗ್ರಹ ಪಡೆದಿದ್ದಾರೆ. ಈ ದೊರೆಗಳು ಈ ಎಲ್ಲ ದೇವರಿಗೂ ಭಿನ್ನಾಭಿಪ್ರಾಯ ಬಾರದಂತೆ ತಮ್ಮ ದೈವಭಕ್ತಿ ಸಲ್ಲಿಸಿದ್ದಾರೆ. ಮತಾಂಧತೆಗೆ ಒಳಗಾಗದೆ ಹಾಗೂ ಅಂಧಶ್ರದ್ಧೆಗೆ ಬಲಿಬೀಳದೆ ಈ ಅರಸರು ಸನಾತನ ಧರ್ಮದ ತಳಹದಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆನ್ನಬಹುದು.

ಒಟ್ಟಿನಲ್ಲಿ ಕೆಳದಿ ಅರಸರು ತಮ್ಮ ದೈವಭಕ್ತಿಯಲ್ಲಿನ ಪರಾಕಾಷ್ಠತೆಯಲ್ಲಿ ತಮ್ಮ ಕುಲದೇವರಿಗೆ ಅಗ್ರಸ್ಥಾನವನ್ನು ಕೊಟ್ಟಿರುವುದು ಕಂಡುಬರುತ್ತವೆ. ಅವುಗಳೆಲ್ಲವನ್ನೂ ವಿಶ್ಲೇಷಿಸಿದಲ್ಲಿ ಒಂದು ಗ್ರಂಥವನ್ನೇ ರಚಿಸುವಷ್ಟು ಸಾಧನಸಾಮಗ್ರಿಗಳು ಉಪಲಬ್ಧವಿವೆ. ಕೆಳದಿ ಶ್ರೀರಾಮೇಶ್ವರನಲ್ಲಿ ಶಿವಪ್ಪನಾಯಕ ಹೊಂದಿದ್ದ ಭಕ್ತಿಯ ಘಟನೆಯೊಂದು ಕೊಡಗಿನ ರಾಜರ ಕಥೆಯಲ್ಲಿ ದೊರಕುತ್ತದೆ18:

ಒಮ್ಮೆ ಕೊಡಗಿನ ರಾಜ ರಾಜಧಾನಿಯಲ್ಲಿ ಶಿವಪ್ಪನಾಯಕನ ಅತಿಥಿಯಾಗಿ ತಂಗಿದ್ದ19. ಶಿವಪ್ಪನಾಯಕ ಅತಿಥಿಯಾದ ಕೊಡಗಿನ ಮುದ್ದುರಾಜನನ್ನು ಕುರಿತು ತನ್ನಿಂದ ಏನಾದರೊಂದು ಪ್ರತಿಫಲವನ್ನು ತೆಗೆದುಕೊಳ್ಳಲು ಒತ್ತಾಯ ಮಾಡಿದ. ಮುದ್ದುರಾಜ ತನಗೆ ಯಾವ ವಿಧವಾದ ಆಸೆಯೂ ಇಲ್ಲವೆಂದೂ. ತನಗೆ ರಾಜ್ಯದಲ್ಲಿ ಎಲ್ಲ ಅನುಕೂಲಗಳೂ ನಾಯಕನಿಂದ ಒದಗಿರುವುದಾಗಿಯೂ ಮಾರುತ್ತರ ವಿತ್ತ. ಶಿವಪ್ಪನಾಯಕನ ಒತ್ತಾಯ ಅಧಿಕವಾಗಲು ಮುದ್ದುರಾಜ ತನಗೆ ಮತ್ತು ರಾಜ್ಯಕ್ಕೆ ಉತ್ತರಾಧಿಕಾರಿಯಾಗಲು ಸಂತಾನವಿಲ್ಲದುದು ಮಾತ್ರ ತನ್ನ ಮನಸ್ಸಿಗೆ ನೆಮ್ಮದಿಯುಂಟಾಗಿಲ್ಲವೆಂದು ಕೆಳದಿ ಅರಸನಿಗೆ ನಿವೇದಿಸಿದ. ಕೂಡಲೇ ಶಿವಪ್ಪನಾಯಕ ತನ್ನ ಮನೆದೇವರಾದ ಕೆಳದಿ ಶ್ರೀರಾಮೇಶ್ವರನನ್ನು ಪ್ರಾರ್ಥಿಸಿಕೊಂಡು. ಚಿನ್ನದ ದೀಪವೊಂದನ್ನು ಮಾಡಿಸಿ. ಅದನ್ನು ಆ ಮುದ್ದುರಾಜನಿಗಿತ್ತು ಇದರ ಜ್ಯೋತಿಯನ್ನು ಒಂದು ವರ್ಷ ಮತ್ತು ಒಂದು ದಿನ ಕಾಪಾಡಿಕೊಂಡು ಬರುವಂತೆ ನಿರೂಪಿಸಿದ. ನಾಯಕನ ಸೂಚನೆಯಂತೆ ಮುದ್ದುರಾಜ ಅದನ್ನು ತನ್ನ ರಾಜಧಾನಿಗೆ ಕೊಂಡೊಯ್ದು ಅದರಂತೆ ಆಚರಿಸಿದ. ಕಾಲಕ್ರಮೇಣ ಕೊಡಗಿನ ರಾಜನಿಗೆ ಗಂಡುಮಗುವೊಂದು ಜನಿಸಿತು.

ಈ ವರ್ತಮಾನವನ್ನು ಕೊಡಗಿನ ರಾಜನಿಂದ ತಿಳಿದ ಶಿವಪ್ಪನಾಯಕ ಪರಮಹರ್ಷಿತನಾಗಿ ಕೆಳದಿ ಶ್ರೀರಾಮೇಶ್ವರನನ್ನು ಭಕ್ತಿಯಿಂದ ಕೊಂಡಾಡುತ್ತ ಕೊಡಗಿನ ರಾಜನಿಂದ ದೇವರಿಗೆ ಹಿಂದಿರುಗಿ ಸಮರ್ಪಿಸಲ್ಪಟ್ಟ ಚಿನ್ನದ ದೀಪವನ್ನು ಪರಿಗ್ರಹಿಸಿ. ದಕ್ಷಿಣಕನ್ನಡದಲ್ಲಿ ಸುಳ್ಯದ ಹತ್ತಿರ ಇರುವ ಹಲವು ಗ್ರಾಮಗಳನ್ನು ಶಿಶುವಿಗೆ ಹಾಲಿಗೋಸ್ಕರ ಉಂಬಳಿಯಾಗಿತ್ತ. ಶಿವಪ್ಪನಾಯಕ ಹಾಲಿಗೋಸ್ಕರ ಬಿಟ್ಟ ಈ ಗ್ರಾಮಗಳಿಗೆ ಅಮೃತಮಾಗಣೆ ಎಂಬುದಾಗಿ ಹೆಸರುಂಟಾಯಿತು. ಕಾಲಾನಂತರ ಇದು ಅಮರಮಾಗಣೆ ಎನಿಸಿಕೊಂಡಿತು.

ಹೀಗೆ ಕೆಳದಿ ಅರಸರ ಮನೆದೇವರಾದ ಅಥವಾ ಕುಲದೇವರಾದ ಶ್ರೀರಾಮೇಶ್ವರ, ಶ್ರೀವೀರಭದ್ರ, ಶ್ರೀಅಘೋರೇಶ್ವರ ಮತ್ತು ಶ್ರೀಕೊಲ್ಲೂರು ಮೂಕಾಂಬಿಕಾದೇವಿಯರು ಕೇವಲ ನಾಯಕರ ಜೀವನ ದಲ್ಲಲ್ಲದೆ ಸಂಸ್ಥಾನದ ಅಸ್ತಿತ್ವದಲ್ಲಿಯೂ ಧಾರ್ಮಿಕ ಮತ್ತು ರಾಜಕೀಯ ಹಾಗೂ ಆಧ್ಯಾತ್ಮಿಕ ಪ್ರವೃತ್ತಿಗೆ ಹಿರಿದಾದ ಪ್ರಭೆಯನ್ನು ಬೀರಿರುವುದು ಕಂಡುಬರುತ್ತದೆ.

---

18 *Mysore State Gezetteer, Coorg District*, p. 58

19 ಕೊಡಗಿನ ರಾಜರು ಕೆಳದಿ ಸಂಸ್ಥಾನಕ್ಕೆ ಅಧೀನರಾಗಿದ್ದರೆಂಬುದಾಗಿ ಇತಿಹಾಸದಲ್ಲಿ ರಾಜೇಂದ್ರ ನಾಮೆ ಹಾಗೂ ಇತರೆಡೆಗಳಲ್ಲಿನ ಉಲ್ಲೇಖಗಳು ಸ್ಪಷ್ಟಪಡಿಸುತ್ತವೆ.

ಕೆಳದಿಯ ಗತಕಾಲದ ವೈಭವವನ್ನು ಇಂದು ಪರಿಚಯ ಮಾಡಿಕೊಡುವ ಅಲ್ಲಿಯ ಐತಿಹಾಸಿಕ ಕೃತಿಗಳಲ್ಲಿ ರಾಮೇಶ್ವರ ದೇವಾಯತನವೇ ಪ್ರಾಚೀನವಾದ್ದು. ಬೂದು ಹಸಿರು ಬಣ್ಣದ ಕಲ್ಲಿಂದಾದ ಈ ಮಧ್ಯ ಪ್ರಮಾಣದ ದೇಗುಲ ದ್ರಾವಿಡ ಮತ್ತು ಹೊಯ್ಸಳ ವಾಸ್ತು ಶೈಲಿಗಳ ಮಿಶ್ರರೂಪದ್ದಾಗಿದ್ದು, ಒಂದು ಚಿಕ್ಕ ಗರ್ಭಗೃಹ, ಪ್ರದಕ್ಷಿಣಾಪಥ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದೆ. ಗುಡಿಯ ಜಗತಿಯ ಹೊರಮೈಯ ಒಂದು ದಿಂಡಿನ ಮೇಲೆ ವಾದ್ಯಗಾರರ, ನರ್ತಕರ ಶಿಲ್ಪಗಳಿವೆ. ಎರಡೂವರೆ ಅಡಿ ಎತ್ತರದ ಮೆರುಗುವ ಶಿಲಾಲಿಂಗವಿರುವ ಗರ್ಭಗೃಹದ ಭಿತ್ತಿಯಲ್ಲಿ ಚತುರಸ್ರಾಕಾರದ ಅರ್ಧಕಂಬಗಳ ಅಲಂಕರಣವೂ ಅವುಗಳ ನಡುವೆ ಕಣ್ಣಪ್ಪ, ಗರುಡ, ಹನುಮಾನ್, ಒಂಟೆ, ಆನೆ, ಯಾಳಿ, ಮಿಥುನಗಳು, ಆನೆಯ ಜೊತೆಗೆ ಹೋರಾಡುತ್ತಿರುವ ಯೋಧ, ಸೋಮಗ್ರಹಣ, ಮದ್ದಳೆಕಾರ, ಯೋಗಾಸನದಲ್ಲಿರುವ ರಾಮೇಶ್ವರ ಇತ್ಯಾದಿ ಅನೇಕ ಶಿಲ್ಪಗಳೂ ಇವೆ. ಚಾವಣಿಯ ಮುಂಚಾಚಿಕೊಂಡಿರುವ ಭಾಗದ ಮಲಗಳ ಮೇಲೆ ವೀರಭದ್ರ, ತಾಂಡವೇಶ್ವರ ಪಾರ್ವತೀ, ಮೋಹಿನೀ, ವೇಣುಗೋಪಾಲ, ಕಾಳಿಂಗಮರ್ದನ, ಭೈರವ ಇತ್ಯಾದಿ ದೇವದೇವತೆಗಳ ಶಿಲ್ಪಗಳಿವೆ. ಗರ್ಭಗೃಹದ ಮೇಲಿನ ಗೋಪುರ ಚತುರಸ್ರಾಕಾರದ್ದು. ನಾಲ್ಕು ಅಂಕಣ ಉದ್ದ ಮತ್ತು ಮೂರು ಅಂಕಣ ಅಗಲವಿರುವ, ಹದಿನೆಂಟು ಕಂಬಗಳಿಂದ ಕೂಡಿದ ಮುಖಮಂಟಪದ ಪಡುವಣ ಮೂಲೆಯ ಎರಡು ಮಾಡಗಳಲ್ಲಿ ಗಣಪತಿ ಹಾಗೂ ಮಹಿಷಾಸುರಮರ್ದಿನಿಯರ ಶಿಲ್ಪಗಳಿವೆ. ದ್ವಾರ ಬಂಧದ ಕಂಬ ತೋಳುಗಳಲ್ಲಿ ಶೈವದ್ವಾರ ಪಾಲಕರಿರುವ ಚಿಕ್ಕ ನವರಂಗ ಮಂಟಪ ಎರಡು ಕಂಬಗಳಿಂದ ಕೂಡಿದೆ. ಬಸವನ ಮೂರ್ತಿಯಿರುವ ಈ ನವರಂಗದಲ್ಲಿ ಶಿವಪಾರ್ವತಿಯರ ಕಂಚಿನ ಪ್ರತಿಮೆಗಳೂ ಇವೆ.

ರಾಮೇಶ್ವರ ದೇವಾಲಯಕ್ಕೆ ಸೇರಿದಂತೆಯೇ ಇರುವ ವೀರಭದ್ರ ದೇವಸ್ಥಾನವನ್ನು ನಿರ್ಮಿಸಿದಾತ ಚೌಡಪ್ಪನಾಯಕನ ತಮ್ಮ ಭದ್ರಪ್ಪನಾಯಕ ಇರಬಹುದು. ದೇವಾಲಯದ ಒಳಮಾಳಿಗೆಯೊಂದರಲ್ಲಿ ಗಂಡಭೇರುಂಡನ ಅದ್ಭುತ ಚಿತ್ರಣವಿದೆ. ಅದು ವಿಜಯನಗರ ಸಮ್ರಾಟ ಅಚ್ಯುತರಾಯನ (1530–1542) ಲಾಂಛನವಾಗಿದ್ದುದ ಕಾರಣ, ಅವನ ಆಳ್ವಿಕೆಯ ಅವಧಿಯಲ್ಲಿ ಭದ್ರಪ್ಪನಾಯಕ ಈ ಮಂದಿರವನ್ನು ಕಟ್ಟಿಸಿರಬೇಕೆಂದು ಊಹಿಸಬಹುದಾಗಿದೆ. ಗಂಡಭೇರುಂಡ ಪಕ್ಷಿ ತನ್ನ ಎರಡು ಕೊಕ್ಕುಗಳ ಪೈಕಿ ಒಂದೊಂದರಲ್ಲೂ ಒಂದೊಂದು ಸಿಂಹವನ್ನು ಕಚ್ಚಿ ಹಿಡಿದಿದೆ. ಒಂದೊಂದು ಸಿಂಹದ ಬಾಯಲ್ಲೂ ಒಂದೊಂದು ಆನೆಯಿದೆ. ಹಾರುವ ಭಂಗಿಯಲ್ಲಿರುವ ಪಕ್ಷಿ ತನ್ನ ಕಾಲುಗಳಿಂದ ಒಂದು ಆನೆಯನ್ನು ಹಿಡಿದುಕೊಂಡಿರುವಂತೆ ಚಿತ್ರಿಸಲಾಗಿದೆ. ಈ ಗುಡಿಯ ಗರ್ಭಗೃಹ ಮತ್ತು ಮುಖಮಂಟಪಗಳು ರಾಮೇಶ್ವರ ದೇವಾಲಯದ ಮಾದರಿಯವೇ ಆಗಿವೆ. ನವರಂಗದ ಮಧ್ಯದಲ್ಲಿ ತಗ್ಗಾದ ಪಾತಾಳಾಂಕಣವಿರುವುದು ಈ ದೇವಾಲಯದ ವೈಶಿಷ್ಟ್ಯ. ಗರ್ಭಗೃಹದ ಭಿತ್ತಿಯಲ್ಲಿಯ 'ವಾಸ್ತು ಪುರುಷ'ನ ಶಿಲ್ಪ ಕುತೂಹಲಕಾರಿಯಾದ್ದು. ಮೇಲಿನ ಗೋಪುರ ರಾಮೇಶ್ವರ ದೇವಾಲಯದ ಶಿಖರದಷ್ಟು ಎತ್ತರದ್ದಲ್ಲ[1].

---

1 ಕನ್ನಡ ವಿಶ್ವಕೋಶ, ಸಂ. 5, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (1972), ಪು. 205–6

ಡಾ. ಎನ್. ಎಸ್. ವೀರಪ್ಪ

ಪ್ರಾಚೀನ ಕರ್ನಾಟಕದಲ್ಲಿ ಉನ್ನತ ಶಿಕ್ಷಣ

ಪ್ರಾಚೀನ ಭಾರತದ ಇತರ ಪ್ರದೇಶಗಳಂತೆ ಕರ್ನಾಟಕದಲ್ಲೂ ಶಿಕ್ಷಣ ಪ್ರಾಥಮಿಕ ಮತ್ತು ಉನ್ನತ– ಈ ಎರಡು ಅಂತಸ್ತುಗಳಲ್ಲಿ ಮಾತ್ರ ವ್ಯವಸ್ಥೆಗೊಂಡಿತ್ತು. ಆಧುನಿಕ ಶಿಕ್ಷಣ ವ್ಯವಸ್ಥೆಯ ಬಹುಮುಖ್ಯ ಅಂತಸ್ತೆನಿಸಿರುವ ಪ್ರೌಢ (ಸೆಕೆಂಡರಿ) ಶಿಕ್ಷಣ ನಿರ್ದಿಷ್ಟ ಅಂತಸ್ತಾಗಿ ರೂಪುಗೊಂಡು, ಸ್ಪಷ್ಟವೂ ಪ್ರತ್ಯೇಕವೂ ಆದ ಅಸ್ತಿತ್ವವನ್ನು ಪಡೆದಿರಲಿಲ್ಲ. ಬಹುಶಃ ಅದು ಉನ್ನತ ಶಿಕ್ಷಣದ ಪೂರ್ವಾರ್ಧದಲ್ಲಿ ಅಂತರ್ಗತವಾಗಿ ಹೋಗಿತ್ತು. ಆದ್ದರಿಂದ ಈ ಲೇಖನದಲ್ಲಿ ಪ್ರಾಥಮಿಕ ಅಥವಾ ಮೂಲಶಿಕ್ಷಣದ ಅನಂತರದ ಶಿಕ್ಷಣವನ್ನು ಉನ್ನತ ಶಿಕ್ಷಣವೆಂದು ಪರಿಗಣಿಸಿ ಪರಿಶೀಲಿಸಿದೆ.

ಉನ್ನತ ಶಿಕ್ಷಣದ ಕಾಲಾವಧಿ

ಪ್ರಾಚೀನ ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಸಾಮಾನ್ಯವಾಗಿ ವೇದ ಮತ್ತು ಸಂಸ್ಕೃತದ ವ್ಯಾಸಂಗವನ್ನೊಳಗೊಂಡಿದ್ದು, ಅದಕ್ಕೆ ಓದುಗಾರಿಕೆ, ಬರವಣಿಗೆ. ಮೂಲವ್ಯಾಕರಣ ಮತ್ತು ಧ್ವನಿಪದ್ಧತಿ—ಇವುಗಳಲ್ಲಿ ತಕ್ಕಷ್ಟು ಪೂರ್ವಭಾವಿ ಶಿಕ್ಷಣ ಅಗತ್ಯವೆನಿಸುತ್ತಿತ್ತು. ವಿದ್ಯಾರಂಭ ಸಂಸ್ಕಾರದೊಡನೆ ಮಕ್ಕಳಿಗೆ ಅವುಗಳ ಶಿಕ್ಷಣ 5 ಅಥವಾ 6ನೆಯ ವಯಸ್ಸಿನಲ್ಲಿ ಆರಂಭವಾಗಿ 9ನೆಯ ವಯಸ್ಸಿನ ವರೆಗೆ ನಡೆಯುತ್ತಿತ್ತು. ವ್ಯಾಕರಣಶಾಸ್ತ್ರದ ವ್ಯವಸ್ಥಿತ ವ್ಯಾಸಂಗದೊಡನೆ ಪ್ರೌಢ ಶಿಕ್ಷಣ ಆರಂಭವಾಗುತ್ತಿತ್ತೆಂದು ಭಾವಿಸಬಹುದಾದರೂ[1] ಅದು ಎಂದು ಮುಗಿಯುತ್ತಿತ್ತೆಂದು ಸೂಚಿಸುವ ನಿರ್ದಿಷ್ಟ ಆಧಾರಗಳಿಲ್ಲ. ಬಹುಶಃ ಗುರುಕುಲ ಶಿಕ್ಷಣಕ್ಕೆ ಹೋಗುವ ಮುನ್ನ ಏರ್ಪಡಿಸುತ್ತಿದ್ದ ಉಪನಯನ ಸಂಸ್ಕಾರದ ವರೆಗೂ ಅದು ಮುಂದುವರಿಯುತ್ತಿತ್ತೆಂದು ತೋರುತ್ತದೆ. ಆದರೆ ಈ ಸಂಸ್ಕಾರ ಬೇರೆ ಬೇರೆ ಯುಗಗಳಲ್ಲಿ, ಬೇರೆ ಬೇರೆ ವರ್ಣಗಳಲ್ಲಿ ಬೇರೆ ಬೇರೆ ವಯಸ್ಸಿನಲ್ಲಿ ನಡೆಯುತ್ತಿತ್ತು. ಆ ಕಾಲ 8ರಿಂದ 16 ವರ್ಷ ವಯಸ್ಸಿನ ವರೆಗೂ ವ್ಯತ್ಯಾಸವಾಗುತ್ತಿತ್ತು.[2] ಪ್ರಾಥಮಿಕ ಶಿಕ್ಷಣದ ಕಾಲಾವಧಿಯನ್ನು 12 ವರ್ಷ ವಯಸ್ಸಿನ ವರೆಗೆ ಕ್ರಮಕ್ರಮವಾಗಿ ವಿಸ್ತರಿಸುತ್ತ ಹೋಗುವ ಪ್ರವೃತ್ತಿಯ ಫಲವಾಗಿ ಈ ವ್ಯತ್ಯಾಸ ಹುಟ್ಟಿಕೊಂಡಿರಬಹುದು. ಈ ಅನುಮೇಯ ಸಾಧುವೆನಿಸುವುದಾದರೆ ಪ್ರಾಥಮಿಕ ಶಿಕ್ಷಣ ಹನ್ನೆರಡನೆಯ ವರ್ಷದ ಸುಮಾರಿನಲ್ಲಿ ಮುಗಿದು ಅನಂತರ ಪ್ರೌಢ ಹಾಗೂ ಉನ್ನತ ಶಿಕ್ಷಣ ಆರಂಭವಾಗುತ್ತಿತ್ತೆಂದು ಭಾವಿಸಬಹುದು.[3] ಗುರುಕುಲದಲ್ಲಿ ಈ ಶಿಕ್ಷಣ ಸಾಮಾನ್ಯವಾಗಿ 21–22 ವರ್ಷ ವಯಸ್ಸಿನವರೆಗೂ ನಡೆಯುತ್ತಿತ್ತು. ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ಪ್ರಾಚೀನ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದನಂತರ 4–5 ವರ್ಷಗಳ ಪ್ರೌಢ ಶಿಕ್ಷಣವೂ 5–6 ವರ್ಷಗಳ ಉನ್ನತ ಶಿಕ್ಷಣವೂ ಏರ್ಪಟ್ಟಿದ್ದು,

1. Dr. A. S. Altekar—*Education in Ancient India*, p. 209
2. *Boudhayana Grihyasuthra*, II, 5, 5
3. Dr. A. S. Alteker—*Education in Ancient India*, p. 17

ವಿಧಿವತ್ತಾದ ನಿಯತಕಾಲಾವಧಿಯ ಪರೀಕ್ಷೆಗಳು ಇಲ್ಲದಿದ್ದದ್ದರಿಂದ ವಿದ್ಯಾರ್ಥಿಗಳು ತಮ್ಮ ಅಗತ್ಯ ಮತ್ತು ಅನುಕೂಲ್ಯಗಳಿಗೆ ಅನುಗುಣವಾಗಿ ಶಿಕ್ಷಣವನ್ನು ಮುಂದುವರಿಸಬಹುದಾದ ಅವಕಾಶವಿತ್ತು. ಯಾವುದಾದರೂ ವಿಶಿಷ್ಟ ವಿಷಯದಲ್ಲಿ ವ್ಯಾಸಂಗ ನಡೆಸತಕ್ಕವರು ಒಂದೆರಡು ವರ್ಷ ಶಿಕ್ಷಣವನ್ನು ಮುಂದುವರಿಸುತ್ತಿದ್ದರು. ಈ ಸಂಪ್ರದಾಯ ನಮ್ಮ ಸಂಸ್ಕೃತ ಕಾಲೇಜುಗಳಲ್ಲಿ (ಪಾಠಶಾಲೆ) ಇಂದಿಗೂ ಆಚರಣೆಯಲ್ಲಿದೆ.

ಉನ್ನತ ಶಿಕ್ಷಣದ ಉದ್ದೇಶ

ಚಾರಿತ್ರ್ಯ ನಿರೂಪಣೆ ವ್ಯಕ್ತಿ ಶಿಕ್ಷಣದ ಮುಖ್ಯೋದ್ದೇಶವೆಂಬ ಭಾವನೆ ಪ್ರಾಚೀನಕಾಲದ ಅತ್ಯಂತ ಪ್ರಚಾರದಲ್ಲಿತ್ತು. ಶಿಕ್ಷಣದಿಂದ ಸಿದ್ಧಿಸುವ ಜ್ಞಾನಾರ್ಜನೆಗೆ ಸಮಾಜದಲ್ಲಿ ಮನ್ನಣೆಯಿದ್ದರೂ ಅದಕ್ಕಿಂತ ಹೆಚ್ಚಿನ ಮನ್ನಣೆ ವ್ಯಕ್ತಿ ಸಾಧಿಸುವ ಶೀಲಸಂಪನ್ನತೆಗೆ ಮೀಸಲಾಗಿತ್ತು. ಮನುವಿನಂಥ ಆಚಾರ ಶೀಲ ಸ್ಮೃತಿಕಾರರು ಮೂರುವೇದಗಳಲ್ಲೂ ಪಾಂಡಿತ್ಯ ಸಾಧಿಸಿರುವ ಅವಗುಣಿಗಿಂತ ಅಷ್ಟಿಷ್ಟು ವೇದಾಧ್ಯಯನಮಾಡಿರುವ ಸದ್ಗುಣಿಯೇ ಹೆಚ್ಚು ಆದರಣೀಯನೆಂದು ಸೂಚಿಸಿ ಮೇಲಿನ ಅಂಶವನ್ನು ಸ್ಪಷ್ಟಪಡಿಸಿರುವನು[4]. ಆಧ್ಯಾತ್ಮಿಕ ಜೀವನಕ್ಕೆ ಪ್ರಾಮುಖ್ಯವಿತ್ತಿದ್ದ ಸಮಾಜ ಅದರ ಸಾಧನೆಗೆ. ಭಾವನೆ ಮತ್ತು ಕ್ರಿಯೆಗಳ ಪಾರಿಶುದ್ಧತೆ ಮುಖ್ಯ ಸಾಧನವೆಂದು ಪರಿಗಣಿಸಿತ್ತು. ಆದ್ದರಿಂದ ಶಿಕ್ಷಣ ಸಾಧಿಸಬೇಕಾಗಿದ್ದ ಉದ್ದೇಶಗಳಲ್ಲಿ ಶೀಲನಿರೂಪಣೆಗೆ ಪ್ರಾಶಸ್ತ್ಯ ಬಂದಿತ್ತು. ಉನ್ನತ ಶಿಕ್ಷಣದ ಕಾಲಾವಧಿಯಲ್ಲಿ ಗುರುಗಳ ನೇತೃತ್ವದಲ್ಲಿ ಬ್ರಹ್ಮಚರ್ಯದ ನಿಷ್ಠಾಜೀವನವನ್ನು ವಿದ್ಯಾರ್ಥಿಗಳು ನಡೆಸಬೇಕಾಗಿತ್ತು. ರಾಮ. ಭೀಮ. ಭೀಷ್ಮ. ಹರಿಶ್ಚಂದ್ರ ಮುಂತಾದ ಉದಾತ್ತ ಪುರಾಣ ಪುರುಷರ ಆದರ್ಶ ಜೀವನವನ್ನು ಅನುಕರಿಸಲು ಯತ್ನಿಸಬೇಕಾಗಿತ್ತು.

ಅನಾದಿಕಾಲದಿಂದ ಪವಿತ್ರವೂ ಧರ್ಮ ಸಂಸ್ಕೃತಿಗಳ ಆಗರವೂ ಆದುದೆಂದು ಭಾವಿಸಿದ್ದ ವೈದಿಕ ಸಾಹಿತ್ಯದ ಸಂರಕ್ಷಣೆ ಶಿಕ್ಷಣದ ಎರಡನೆಯ ಉದ್ದೇಶವಾಗಿತ್ತು. ಬರೆವಣಿಗೆ ಇನ್ನೂ ಅಸ್ತಿತ್ವಕ್ಕೆ ಬಾರದಿದ್ದ ತೀರ ಪ್ರಾಚೀನಕಾಲದಲ್ಲಿ ಆ ಸಾಹಿತ್ಯವನ್ನು ಒಬ್ಬರಿಂದೊಬ್ಬರು ಕಲಿತು ಅದರ ಶುದ್ಧ ಸ್ವರೂಪದಲ್ಲಿ ಮುಂದಿನ ಪೀಳಿಗೆಗೆ ವಹಿಸಿಕೊಡುತ್ತ ಹೋಗುವುದು ಅಗತ್ಯವೆನಿಸಿತ್ತು. ಋಣತ್ರಯಗಳಲ್ಲೊಂದಾದ ಈ ಕಾರ್ಯವನ್ನು ನಿರ್ವಹಿಸುವುದು ಸುಸಂಸ್ಕೃತ ಜನತೆಯ ಕರ್ತವ್ಯವೆಂದು ಭಾವಿಸಲಾಗಿತ್ತು. ಉನ್ನತ ಶಿಕ್ಷಣ ವ್ಯಕ್ತಿಗೆ ಈ ಸಾಮರ್ಥ್ಯವನ್ನು ದೊರಕಿಸುವ ಹೊಣೆಯನ್ನು ಹೊತ್ತಿತ್ತು.

ಬರೆವಣಿಗೆ ಅಸ್ತಿತ್ವಕ್ಕೆ ಬಂದು ಪವಿತ್ರ ಸಾಹಿತ್ಯವನ್ನು ಗ್ರಂಥಗಳಾಗಿ ಬರೆದಿಡುವುದು ಆರಂಭವಾದಂತೆ ಶಿಕ್ಷಣದ ಮೇಲಿನ ಉದ್ದೇಶ ಕ್ರಮಕ್ರಮವಾಗಿ ಹಿಂಬದಿಗೆ ಬೀಳುತ್ತ ಬಂತು. ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವನಿರೂಪಣೆಯ ಉದ್ದೇಶಕ್ಕೆ ಪ್ರಾಧಾನ್ಯ ಬರಹತ್ತಿತು. ವ್ಯಕ್ತಿಯಲ್ಲಿ ಆತ್ಮಗೌರವ, ಆತ್ಮಸಂಯಮ, ಸ್ವಾವಲಂಬನೆ ಮುಂತಾದ ವಿಹಿತಲಕ್ಷಣಗಳನ್ನು ರೂಪಿಸುವ ಕಾರ್ಯಕ್ರಮಗಳು ಶಿಕ್ಷಣದಲ್ಲಿ ಸೇರಿಕೊಂಡುವು. ತತ್ತ್ವಶಾಸ್ತ್ರ. ತರ್ಕ. ಕಾವ್ಯಮೀಮಾಂಸೆ. ಸಾಹಿತ್ಯ ಮುಂತಾದ ವಿಷಯಗಳ ಅಧ್ಯಯನದ ಮೂಲಕ ಉತ್ತಮ ವ್ಯಕ್ತಿತ್ವಕ್ಕೆ ಅಗತ್ಯವೆನಿಸುವ ವಿವೇಚನೆ, ತೀರ್ಮಾನ. ಸಂವೇದನೆ ಮುಂತಾದ ಮನಶ್ಶಕ್ತಿಗಳನ್ನು ಬೆಳೆಸುವ ಯತ್ನ ನಡೆಯುತ್ತಿತ್ತು. ವಿದ್ವತ್ಪರಿಷತ್ತುಗಳಲ್ಲಿ ಏರ್ಪಡುತ್ತಿದ್ದ ಚರ್ಚೆಗಳಲ್ಲಿ ಭಾಗವಹಿಸಿ ವಿಷಯದ ಪರ ಮತ್ತು ವಿರುದ್ಧಾಂಶಗಳನ್ನು ಅರಿತು. ತೂಗಿನೋಡಿ. ತಮ್ಮ ತೀರ್ಮಾನಗಳನ್ನು ರೂಪಿಸುವ ಸ್ವತಂತ್ರಪ್ರವೃತ್ತಿಯ ಬೆಳವಣಿಗೆಗೂ ಅವಕಾಶ ಕಲ್ಪಿಸಲಾಗುತ್ತಿತ್ತು.

ವ್ಯಕ್ತಿಯಲ್ಲಿ ಸಾಮಾಜಿಕ ದಕ್ಷತೆಯನ್ನೂ ಹೊಣೆಗಾರಿಕೆಯನ್ನೂ ಬೆಳೆಸುವುದು ಶಿಕ್ಷಣದ ಮತ್ತೊಂದು ಉದ್ದೇಶವಾಗಿತ್ತು. ಆಗ ಅಪರೂಪವಾಗಿ ಪ್ರತಿಭಾವಂತರು ತಮ್ಮ ಅಭಿರುಚಿಗೊಪ್ಪುವ ವೃತ್ತಿಯನ್ನು ಅನುಸರಿಸುವ ಅವಕಾಶವಿದ್ದರೂ ಬಹುತೇಕ ಕುಟುಂಬಗಳು ಪರಂಪರೆಯಾಗಿ ಬಂದ ಕಸಬುಗಳನ್ನು ಅನುಸರಿಸುತ್ತಿದ್ದುವು. ಆದ್ದರಿಂದ ಶಿಕ್ಷಣ ಅವರವರ ಪೂರ್ವನಿಷ್ಕರ್ಷಿತ ವೃತ್ತಿಗಳಿಗೆ ಸಿದ್ಧತೆ ನೀಡ

---

4. *Manusmrithi*, II, 18

ಬೇಕಾಗಿತ್ತು. ಎಂದರೆ ವ್ಯಕ್ತಿ ತಾನು ಬಾಳುತ್ತಿದ್ದ ಸಮಾಜ ಜೀವನಕ್ಕೆ ತಾನು ಸಲ್ಲಿಸಬೇಕಾದ ಕಾಣಿಕೆಯು ಮತ್ತು ನಿರ್ವಹಿಸಬೇಕಾಗಿದ್ದ ಕರ್ತವ್ಯ ಹೊಣೆಗಾರಿಕೆಗಳ ಬಗ್ಗೆ ಶಿಕ್ಷಣ ಗಮನವೀಯಬೇಕಾಗಿತ್ತು. ಶಿಕ್ಷಣ ಮುಗಿಸಿದ ಸ್ನಾತಕರು ಕೇವಲ ಸ್ವಾರ್ಥ ಜೀವನ ನಡೆಸದೆ, ಬರುವ ಪೀಳಿಗೆಗೆ ಶಿಕ್ಷಣ ಸೌಲಭ್ಯ ವನ್ನು ಕಲ್ಪಿಸಿ ಸಮಾಜದ ಬಗ್ಗೆ ತಮ್ಮ ಕರ್ತವ್ಯವನ್ನು ಅವರು ನಿರ್ವಹಿಸಬೇಕಾಗಿತ್ತು. ಜೊತೆಗೆ ಉದಾರಿ ಗಳೂ ದಾನಿಗಳೂ ಆಗಿದ್ದುಕೊಂಡು ಇತರರಿಗೆ ಉಪಕಾರಿಗಳಾಗಿ ಬಾಳಬೇಕಾಗಿತ್ತು. ಅಂದು ಉನ್ನತ ಶಿಕ್ಷಣ ಮುಗಿಸಿದಾಗ ಏರ್ಪಡುತ್ತಿದ್ದ ಸಮಾವರ್ತನ ಸಮಾರಂಭದಲ್ಲಿ ನೀಡುತ್ತಿದ್ದ ಉಪದೇಶ ವಚನದಲ್ಲಿ ಈ ಅಂಶವನ್ನು ಸ್ಪಷ್ಟಪಡಿಸಲಾಗುತ್ತಿತ್ತು.[5] ಪ್ರತಿವೃತ್ತಿಯೂ ತನ್ನದೇ ಆದ ವೃತ್ತಿನೀತಿಯನ್ನು ರೂಪಿಸಿ ಕೊಂಡು ವೃತ್ತಿನಿರತರು ಅದನ್ನು ಕಟ್ಟುನಿಟ್ಟಾಗಿ ಆಚರಿಸುವಂತೆ ನೋಡಿಕೊಳ್ಳುತ್ತಿತ್ತು. ಶಿಕ್ಷಣದ ಮೇಲೆ ಸರ್ಕಾರದ ನಿಯಂತ್ರಣ ಇಲ್ಲದಿದ್ದಾಗ, ಹಾಗೂ ಸರಕಾರಗಳು ಆಗಾಗ ಬದಲಾಗುತ್ತಿದ್ದಾಗ ಶಿಕ್ಷಣ ತಳೆದಿದ್ದ ಈ ಸಾಮಾಜಿಕ ಉದ್ದೇಶ ಜನಜೀವನದಲ್ಲಿ ಸುಖಶಾಂತಿ ನೆಮ್ಮದಿಗಳು ನೆಲಸುವಂತೆ ಮಾಡಲು ತುಂಬ ಪರಿಣಾಮಕಾರಿಯಾಗಿತ್ತೆನ್ನಬಹುದು.

ಜನಾಂಗದ ಸಂಸ್ಕೃತಿ ಸಂರಕ್ಷಣೆ ಮತ್ತು ಪುರೋಭಿವೃದ್ಧಿ ಶಿಕ್ಷಣ ನಿರ್ವಹಿಸಬೇಕಾಗಿದ್ದ ಮತ್ತೊಂದು ಕರ್ತವ್ಯವಾಗಿತ್ತು. ಪ್ರತಿಯೊಂದು ಜಾತಿಯವರು ತಮ್ಮ ಅನುವಂಶೀಯ ವೃತ್ತಿಯಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣವೀಯುವುದರ ಮೂಲಕ ಹಿಂದಿನ ಪೀಳಿಗೆಗಳು ಶತಮಾನಗಳ ಜೀವನದ ಫಲ ವಾಗಿ ರೂಢಿಸಿಕೊಟ್ಟಿದ್ದ ಸಂಸ್ಕೃತಿ ಸಂಪತ್ತನ್ನು ಎಂದರೆ ಆಯಾ ವೃತ್ತಿಗೆ ಸಂಬಂಧಿಸಿದ ಜ್ಞಾನ, ಕೌಶಲ ಮತ್ತು ವಿಧಾನಗಳನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಗತ ಮಾಡಬೇಕಾಗಿತ್ತು. ಸಾಹಿತ್ಯ, ಕಸಬು, ಕಲೆ ಮುಂತಾದವುಗಳ ಬಗ್ಗೆ ಶಿಕ್ಷಣ ತಳೆದಿದ್ದ ಈ ಉದ್ದೇಶದ ಪರಿಣಾಮವಾಗಿ ಶಿಕ್ಷಣ ವೈಶಾಲ್ಯ ವನ್ನು ಸಾಧಿಸಲಾಗಿದ್ದರೂ ವೈಶಿಷ್ಟ್ಯವನ್ನು ಪೋಷಿಸಿಕೊಂಡು ಬರಲು ಶಕ್ಯವಾಯಿತೆನ್ನಬಹುದು.

ಕ್ರಿ.ಪೂ. ನಾಲ್ಕನೆಯ ಶತಮಾನಕ್ಕೆ ಹಿಂದೆ ಇದ್ದ ಉನ್ನತ ಶಿಕ್ಷಣ ಸೌಲಭ್ಯ

ಕ್ರಿ.ಪೂ. ನಾಲ್ಕನೆಯ ಶತಮಾನಕ್ಕೆ ಹಿಂದೆ ಉನ್ನತ ಶಿಕ್ಷಣ ಕೇವಲ ವೈಯಕ್ತಿಕ ಹೊಣೆಗಾರಿಕೆಯದಾ ಗಿತ್ತು. ಅದನ್ನು ವ್ಯವಸ್ಥಿತ ಸಂಸ್ಥೆಗಳ ನಿಯಂತ್ರಣಕ್ಕೆ ಒಳಪಡಿಸುವ ಯತ್ನ ಅದುತನಕ ನಡೆದಿರಲಿಲ್ಲ. ಸಮಾಜದ ಕೆಲಕೆಲವು ಪಂಗಡಗಳಲ್ಲಿ ಏರ್ಪಟ್ಟಿದ್ದ ಮಂಡಲ ಅಥವಾ ಕೂಟಗಳು ಸಮಾಜದ ಕಟ್ಟು ಪಾಡುಗಳನ್ನೂ ಸಂಪ್ರದಾಯ ಮತ್ತು ಆಚಾರ ವ್ಯವಹಾರಗಳನ್ನೂ ಎಲ್ಲರೂ ಪಾಲಿಸುವಂತೆ ಮಾಡುವ ಕರ್ತವ್ಯವನ್ನು ನಿರ್ವಹಿಸುತ್ತಿದ್ದುವು. ಇವು ಕ್ರಮ ಕ್ರಮವಾಗಿ ವಿದ್ವನ್ಮಂಡಲಿ ಅಥವಾ ಪರಿಷತ್ತು ಗಳಾಗಿಯೂ ಕಾರ್ಯನಿರ್ವಹಿಸಹತ್ತಿದುವು. ಖಾಸಗಿ ಕುಟುಂಬಗಳಲ್ಲಿ ತರಪೇತು ಪಡೆದು ಅಥವಾ ಖಾಸಗಿ ಗುರುಗಳಿಂದ ಶಿಕ್ಷಣ ಪಡೆದು ಪ್ರೌಢಿಮೆ ಸಾಧಿಸಿದ ಅಭ್ಯರ್ಥಿಗಳಿಗೆ ಪದವಿ ಪ್ರಶಸ್ತಿಗಳನ್ನು ನೀಡುವ ಸಂಸ್ಥೆಗಳಾಗಿ ಕೆಲಸ ಮಾಡುತ್ತಿದ್ದುವು. ಆದರೆ ಅವು ಶಿಕ್ಷಣಕ್ಕೆ ಸಾರ್ವತ್ರಿಕ ಸ್ವರೂಪವನ್ನಾಗಲಿ ವ್ಯವಸ್ಥಿತ ಸಂಸ್ಥೆಗಳ ನಿಯಂತ್ರಣವನ್ನಾಗಲಿ ರೂಪಿಸಲಿಲ್ಲ.

ಜೈನ ಮತ್ತು ಬೌದ್ಧ ಶಿಕ್ಷಣ ಪದ್ಧತಿಗಳ ಪ್ರಭಾವ

ಕರ್ನಾಟಕದ ರಾಜಕೀಯ ಇತಿಹಾಸ ಕ್ರಿ.ಪೂ. ಮೂರನೆಯ ಶತಮಾನದಿಂದ ಎಂದರೆ ಸಾತವಾಹನ ಅರಸರ ಆಳ್ವಿಕೆಯಿಂದ ಆರಂಭವಾದರೂ ಅದರ ಶೈಕ್ಷಣಿಕ ಇತಿಹಾಸ ಅದಕ್ಕೂ ಹಿಂದೆ ಹೋಗುತ್ತದೆ. ಮೌರ್ಯ ವಂಶದ ಸಂಸ್ಥಾಪಕನಾದ ಚಂದ್ರಗುಪ್ತ ಮೌರ್ಯ ಕ್ರಿ.ಪೂ. ನಾಲ್ಕನೆಯ ಶತಮಾನದ ಕೊನೆಕೊನೆಗೆ ತನ್ನ ಗುರುವಾದ ಭದ್ರಬಾಹುವಿನೊಡನೆ ಶ್ರವಣಬೆಳಗೊಳಕ್ಕೆ ಆಗಮಿಸಿದನೆಂಬ ವಿಷಯ ವನ್ನು ಸ್ಥಳೀಯ ಶಾಸನಗಳು ತಿಳಿಸುತ್ತವೆ. ಅವರೊಡನೆ ಕರ್ನಾಟಕಕ್ಕೆ ಜೈನಧರ್ಮವೂ ಜೈನ ಸಂಸ್ಥೆಗಳೂ

---

5. *Thaithiriya Upanishad*, I, 2

ಆಗಮಿಸಿದುವು. ಜೈನಧರ್ಮದ ಪ್ರಚಾರಕ್ಕಾಗಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಜೈನ ಬಸದಿಗಳು ಆರಂಭವಾದುವು. ಮೋಕ್ಷಸಾಧನೆಗೆ ನಂಬಿಕೆ, ಭಕ್ತಿ, ಪೂಜೆಪುನಸ್ಕಾರಗಳಂತೆ ಸುಜ್ಞಾನವೂ ಅಗತ್ಯ ಎಂದು ಆ ಧರ್ಮ ಎತ್ತಿ ಹಿಡಿಯಿತು. ಅದನ್ನು ಆಚರಣೆಗೆ ತರಲು ತನ್ನ ಅನುಯಾಯಿಗಳಲ್ಲೂ ಇತರರಲ್ಲೂ ಶಿಕ್ಷಣ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕಾಯಿತು. ಆ ಮೂಲಕ ಶಿಕ್ಷಣಕ್ಕೆ ಧಾರ್ಮಿಕ ಮನ್ನಣೆಯೂ ಪ್ರೋತ್ಸಾಹವೂ ದೊರೆತುವು. ಆದರೂ ಬೌದ್ಧ ಧರ್ಮ ಆಗಮಿಸುವ ವರೆಗೂ ಅದು ವೈಯಕ್ತಿಕ ಉದ್ಯಮವಾಗಿಯೇ ಮುಂದುವರಿಯುತ್ತಿತ್ತು; ಅದನ್ನು ವ್ಯವಸ್ಥಿತ ಸಂಸ್ಥೆಯ ನಿಯಂತ್ರಣಕ್ಕೆ ತರುವ ನಿರ್ದಿಷ್ಟಯತ್ನ ನಡೆದಂತೆ ತೋರುವುದಿಲ್ಲ.

ಚಂದ್ರಗುಪ್ತನ ಮೊಮ್ಮಗನಾದ ಅಶೋಕಮೌರ್ಯ ಬೌದ್ಧ ಧರ್ಮವನ್ನು ಸ್ವೀಕರಿಸಿದ ಅನಂತರ ಆ ಧರ್ಮವನ್ನು ದೇಶ ವಿದೇಶಗಳಲ್ಲಿ ಪ್ರಚಾರ ಮಾಡಲು ತೀವ್ರ ಆಸಕ್ತಿಯಿಂದ ಪ್ರಯತ್ನಿಸಿದ್ದು ಇತಿಹಾಸ ಪ್ರಸಿದ್ಧವಾಗಿದೆ. ಅವನು ಹಾಕಿಸಿದ ಶಾಸನಗಳು ಇಲ್ಲಿನ ಮಾಸ್ಕಿ, ಕೊಪ್ಪಳ, ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗ ರಾಮೇಶ್ವರ—ಈ ಸ್ಥಳಗಳಲ್ಲಿ ದೊರಕಿವೆ. ಸುವರ್ಣಗಿರಿ ಮತ್ತು ಇಸಿಲ ನಗರಗಳು ಅವನ ಪ್ರಾದೇಶಿಕ ರಾಜಧಾನಿಗಳಾಗಿದ್ದ ವಿಷಯ ಅವುಗಳಿಂದ ತಿಳಿದುಬರುತ್ತದೆ. ಕರ್ನಾಟಕದ ಬಹುಭಾಗ ಅವನ ಆಳ್ವಿಕೆಗೆ ಒಳಪಟ್ಟಿತ್ತೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿರುವರು. ಕೆಲವರು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ರಾಜಕೀಯವಾಗಿಯಲ್ಲದಿದ್ದರೂ ಧಾರ್ಮಿಕವಾಗಿಯಾದರೂ ಅವನು ತನ್ನ ಒಡೆತನವನ್ನು ಈ ಪ್ರದೇಶದ ಮೇಲೆ ಹೊಂದಿದ್ದನೆಂಬುದನ್ನು ಮೇಲಿನ ಅವನ ಶಿಲಾಶಾಸನಗಳು ನಿರ್ವಿವಾದವಾಗಿ ಸ್ಪಷ್ಟಪಡಿಸುತ್ತವೆ. ಬ್ರಾಹ್ಮೀ ಲಿಪಿಯ ಪ್ರಾಕೃತ ಭಾಷೆಯಲ್ಲಿ ಬರೆದಿರುವ ಈ ಶಾಸನಗಳನ್ನು ಬೌದ್ಧ ಧರ್ಮದ ಸಿದ್ಧಾಂತಗಳನ್ನು ಜನರಲ್ಲಿ ಪ್ರಚಾರ ಮಾಡುವ ಮೂಲ ಉದ್ದೇಶದಿಂದ ಕೆತ್ತಿಸಿದೆ. ಆ ಸಿದ್ಧಾಂತಗಳನ್ನು ಅರಿತು ಅರ್ಥ ಮಾಡಿಕೊಳ್ಳಬೇಕಾದರೆ ಜನರಿಗೆ ಶಿಕ್ಷಣವೀಯುವುದು ಅಗತ್ಯವೆನಿಸಿತು. ಸಂಸ್ಕೃತಕ್ಕೆ ಬದಲು ಪ್ರಾಕೃತದಲ್ಲಿ ಆ ಶಾಸನಗಳನ್ನು ಬರೆಸಿರುವುದನ್ನು ನೋಡಿದರೆ ಜನತೆಯ ಆಡುಮಾತಿನಲ್ಲಿ ತಮ್ಮ ಸಿದ್ಧಾಂತವನ್ನು ಪ್ರಚಾರ ಮಾಡುವ ಅಗತ್ಯವನ್ನು ಅವನು ಕಂಡುಕೊಂಡಂತೆ ತೋರುತ್ತದೆ. ಹೀಗೆ ಆಗಮಿಸಿದ ಬೌದ್ಧಧರ್ಮದೊಡನೆ ಅಂದು ಉತ್ತರದಲ್ಲಿ ಪ್ರಚಾರದಲ್ಲಿದ್ದ ಸಂಘಾರಾಮಗಳೂ ಕರ್ನಾಟಕಕ್ಕೆ ಆಗಮಿಸಿದುವು. ಅವುಗಳ ನೇತೃತ್ವದಲ್ಲಿ ಬೌದ್ಧ ಬಿಕ್ಷುಗಳ ಹಾಗೂ ಜನತೆಯ ಶಿಕ್ಷಣದ ವ್ಯವಸ್ಥೆ ಆರಂಭವಾಗಿ ಕ್ರಮೇಣ ಆ ಸಂಘಾರಾಮಗಳು ಶಿಕ್ಷಣ ಸಂಸ್ಥೆಗಳ ಸ್ವರೂಪವನ್ನು ತಾಳಿದುವು.

ಅದು ತನಕ ಗುರುಕುಲ, ಆಶ್ರಮ ಮುಂತಾದವುಗಳಲ್ಲಿ ಉನ್ನತ ಶಿಕ್ಷಣ ಗುರುಗಳ ನೇರ ಒಡೆತನದಲ್ಲಿ ವೈಯಕ್ತಿಕ ಉದ್ಯಮವಾಗಿ ನಡೆಯುತ್ತಿತ್ತು. ಅವು ಸಾಮಾನ್ಯವಾಗಿ ಕೆಲವು ವರ್ಣಗಳ ಅಥವಾ ವರ್ಗಗಳ ವಿದ್ಯಾರ್ಥಿಗಳಿಗೆ ಮಾತ್ರ ಶಿಕ್ಷಣವೀಯುತ್ತಿದ್ದುವು. ಬೌದ್ಧ ಸಂಘಾರಾಮಗಳು ಶಿಕ್ಷಣ ಪಡೆಯುವ ಸೌಲಭ್ಯ ಸರ್ವರಿಗೂ ಹುಟ್ಟಿನಿಂದಲೇ ಬಂದ ಹಕ್ಕೆಂದು ಪ್ರಚಾರ ಮಾಡಿ. ಜಾತಿ, ಮತ, ಪಕ್ಷ, ಪಂಗಡ—ಇವಾವುದರ ಭೇದವೂ ಇಲ್ಲದೆ, ಎಲ್ಲರನ್ನೂ ತಮ್ಮ ಸಂಸ್ಥೆಗಳಿಗೆ ಸೇರಿಸಿಕೊಂಡು ಶಿಕ್ಷಣವೀಯಲು ಆರಂಭಿಸಿದುವು. ಆಗ ಉತ್ತರ ಭಾರತದಲ್ಲಿ ಪ್ರಚಾರದಲ್ಲಿದ್ದ ಬೌದ್ಧ ಮಠಗಳ ಮತ್ತು ವಿಹಾರಗಳ ಮಾದರಿಯಲ್ಲಿ ಇಲ್ಲಿಯೂ ಅವರ ಶಿಕ್ಷಣ ಸಂಸ್ಥೆಗಳು ಆರಂಭವಾದುವು. ಇವು ಕರ್ನಾಟಕದಲ್ಲಿ ಸಾರ್ವಜನಿಕ ಶಿಕ್ಷಣಕ್ಕಾಗಿ ಅಸ್ತಿತ್ವಕ್ಕೆ ಬಂದ ಅತ್ಯಂತ ಪ್ರಾಚೀನತಮ ಶಿಕ್ಷಣ ಸಂಸ್ಥೆಗಳೆಂದು ಪರಿಗಣಿತವಾಗಿವೆ. ಧಾರ್ಮಿಕದಂತೆ ಲೌಕಿಕ ಶಿಕ್ಷಣಕ್ಕೂ ಅವಕಾಶಕಲ್ಪಿಸಿಕೊಂಡು ಜನಸಾಮಾನ್ಯರಲ್ಲಿ ಇವು ಆಸಕ್ತಿ ಮೂಡಿಸಿದುವು. ಮಠಗಳಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣಗಳೆರಡಕ್ಕೂ ಅವಕಾಶ ಕಲ್ಪಿಸಿದ್ದರೂ ವಿಹಾರಗಳು ಕೇವಲ ಉನ್ನತ ಶಿಕ್ಷಣಕ್ಕಾಗಿ ಮೀಸಲಾಗಿದ್ದುವು.

ಹೀಗೆ ಜೈನಧರ್ಮದ ಆಗಮನದಿಂದ ಕರ್ನಾಟಕದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವೂ ಮನ್ನಣೆಯೂ ದೊರಕುವಂತಾಯಿತು. ಅನಂತರ ವ್ಯವಸ್ಥಿತ ರೀತಿಯ ಸಾರ್ವಜನಿಕ ಶಿಕ್ಷಣವನ್ನು ಸಂಘಟಿಸಲು ನೆರವಾದ ಕೀರ್ತಿ ಬೌದ್ಧಧರ್ಮಕ್ಕೆ ಸಲ್ಲುತ್ತದೆ. ವಿದ್ಯಾದಾನ ಮಹಾಪುಣ್ಯ ಕಾರ್ಯವೆಂಬ ಅಂಶ ಜನತೆಯಲ್ಲಿ ಪ್ರಚಾರವಾದಂತೆ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ವ್ಯವಸ್ಥೆಗೆ ನೆರವಾಗುವುದು ಹೆಚ್ಚುತ್ತ ಬಂದಿರಬೇಕು. ಕ್ರಿ.ಶ. ಒಂದನೆಯ ಶತಮಾನದ ವೇಳೆಗೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಮಠ

ಗಳೂ ವಿಹಾರಗಳೂ ಆರಂಭವಾಗಿರಬೇಕು. ಆದರೆ ಅವುಗಳ ಬಗ್ಗೆ ನಮಗೆ ಯಾವ ಸಾಕ್ಷ್ಯಾಧಾರಗಳೂ ದೊರೆತಿಲ್ಲ.

ಸಾತವಾಹನ ಅರಸರನಂತರ ಚೂಟಕುಲದರಸರು ಕರ್ನಾಟಕದ ಬನವಾಸಿ ಪ್ರಾಂತ್ಯದಲ್ಲಿ ಆಳುತ್ತಿದ್ದರು. ಅವರು ಶಿಕ್ಷಣ ಪ್ರಚಾರಕ್ಕೆ ಮುಕ್ತಹಸ್ತದಿಂದ ಸಹಾಯ ನೀಡುತ್ತಿದ್ದರು. ಮೂರನೆಯ ಶತಮಾನದಲ್ಲಿ ಆಳುತ್ತಿದ್ದ ಆ ಮನೆತನದ ಚುಟುಕುಲಾನಂದ ಸಾತಕರ್ಣಿಯ ಮಗಳಾದ ಶಿವಸ್ಕಂಧ ನಾಗಶ್ರೀ ಎಂಬ ರಾಜಕುಮಾರಿ ಬನವಾಸಿಯಲ್ಲಿ ಒಂದು ಬೌದ್ಧ ವಿಹಾರವನ್ನು ಸ್ಥಾಪಿಸಿದಳೆಂಬ ಅಂಶವನ್ನು ಅಲ್ಲಿನ ಮಧುಕೇಶ್ವರ ದೇವಾಲಯವಲ್ಲಿರುವ ನಾಗಶಿಲೆಯ ಶಾಸನವೊಂದು ತಿಳಿಸುತ್ತದೆ.[6] ನಮಗೆ ದೊರೆತಿರುವ ಸಾಕ್ಷ್ಯಾಧಾರಗಳ ಪ್ರಕಾರ ಇದು ಕರ್ನಾಟಕದಲ್ಲಿ ರೂಪುಗೊಂಡ ಮೊಟ್ಟ ಮೊದಲನೆಯ ಉನ್ನತ ಶಿಕ್ಷಣ ಸಂಸ್ಥೆ. ಇದಕ್ಕೂ ಹಿಂದೆ ಅಂಥ ಸಂಸ್ಥೆಗಳು ಆರಂಭವಾಗಿರುವುದು ಸಂಭವವಾದರೂ ಆ ಬಗ್ಗೆ ನಮಗೆ ಆಧಾರಗಳು ದೊರೆತಿಲ್ಲ.

ಸಾತವಾಹನರ ಅನಂತರ ಪ್ರಾಮುಖ್ಯಗಳಿಸಿದ ಕದಂಬಕುಲದ ಅರಸರು ಹಿಂದುಗಳಾದರೂ ಜೈನ ಮತ್ತು ಬೌದ್ಧಧರ್ಮಗಳೆರಡಕ್ಕೂ ಪ್ರೋತ್ಸಾಹ ನೀಡುತ್ತಿದ್ದರು. ಆ ವಂಶದ ಮೂಲಪುರುಷನಾದ ಮಯೂರಶರ್ಮ ಸ್ವತಃ ಉನ್ನತ ಶಿಕ್ಷಣದಲ್ಲಿ ಆಸಕ್ತಿ ಹೊಂದಿದ್ದ. ಆ ಮನೆತನದ ಅನಂತರದ ಅರಸುಗಳ ಕಾಲದಲ್ಲಿ ಹಾನಗಲ್ ಮತ್ತು ಪುಲಿಗೆರೆಗಳು ಜೈನ ಅಧ್ಯಯನ ಕೇಂದ್ರಗಳಾಗಿಯೂ ಬನವಾಸಿ ಮತ್ತು ಅಜಂತಗಳು ಬೌದ್ಧ ಅಧ್ಯಯನ ಕೇಂದ್ರಗಳಾಗಿಯೂ ವ್ಯವಸ್ಥೆಗೊಂಡು ಕೀರ್ತಿಗಳಿಸಿದುವು.

ಕ್ರಿ.ಶ. ಆರನೆಯ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದು ಕರ್ನಾಟಕದ ಬಹುಭಾಗವನ್ನು ಆಳುತ್ತಿದ್ದ ಚಾಲುಕ್ಯರ ಕಾಲದಲ್ಲಿ ದೇಶದ ಅನೇಕ ಭಾಗಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ನೂರಾರು ಬೌದ್ಧವಿಹಾರಗಳು ಸ್ಥಾಪನೆಯಾಗಿ ನಡೆಯುತ್ತಿದ್ದುವು. ಕ್ರಿ.ಶ. ಏಳನೆಯ ಶತಮಾನದಲ್ಲಿ ಈ ಭಾಗದಲ್ಲಿ ಸಂಚರಿಸುತ್ತಿದ್ದ ಚೀನೀ ಯಾತ್ರಿಕ ಹೂಯೆನ್‌ತ್ಸಾಂಗ್ ಅಂಥ ಅನೇಕ ವಿಹಾರಗಳನ್ನು ಸಂದರ್ಶಿಸಿ ಸಂತೃಪ್ತಿಪಟ್ಟುಕೊಂಡು, ಜನರು ವಿದ್ಯೆಯಲ್ಲಿ ತುಂಬ ಅಭಿಮಾನವುಳ್ಳವರೆಂದೂ ದೇಶಾದ್ಯಂತ ಹರಡಿದ್ದ ನೂರಾರು ವಿಹಾರಗಳಲ್ಲಿ ಸಹಸ್ರಾರು ಮಂದಿ ಯತಿಗಳೂ ಇತರರೂ ಜ್ಞಾನಾರ್ಜನೆಗಾಗಿ ಜೀವನವನ್ನು ಮುಡಿಪಾಗಿರಿಸಿದ್ದರೆಂದೂ, ವಿದ್ಯಾರ್ಥಿಗಳು ತಾವು ಆರಿಸಿಕೊಂಡ ವಿಷಯವನ್ನನುಸರಿಸಿ ಅಲ್ಲಿ 20, 22, 24 ವರ್ಷ ವಯಸ್ಸಿನವರೆಗೂ ಶಿಕ್ಷಣ ಪಡೆಯುತ್ತಿದ್ದರೆಂದೂ ಉಲ್ಲೇಖಿಸಿರುವನು. ಆಗ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಉನ್ನತ ಶಿಕ್ಷಣಕ್ಕೆ ಪ್ರವೇಶಿಸಿದಂತೆ ವ್ಯಾಕರಣವನ್ನೂ ವೈದ್ಯಶಾಸ್ತ್ರ, ವಿಜ್ಞಾನಶಾಸ್ತ್ರ, ಯಂತ್ರಶಾಸ್ತ್ರ ಮುಂತಾದ ಉಪಯುಕ್ತ ವಿಷಯಗಳನ್ನೂ ಅಧ್ಯಯನ ಮಾಡುತ್ತಿದ್ದರೆಂದೂ ಸೂಚಿಸಿರುವನು.

ವಿವಿಧ ರೀತಿಯ ಉನ್ನತ ಶಿಕ್ಷಣ ಸಂಸ್ಥೆಗಳು

ಬೌದ್ಧ ಶಿಕ್ಷಣ ಪದ್ಧತಿ ಕರ್ನಾಟಕದಲ್ಲಿ ಒಂದಿನಿಂದ ಪ್ರಚಾರದಲ್ಲಿದ್ದ ಉನ್ನತ ಶಿಕ್ಷಣದ ಮೇಲೆ ನೂತನ ಪ್ರಭಾವವನ್ನು ಬೀರಿತು. ವೈಯಕ್ತಿಕವಾಗಿ ನಡೆದುಕೊಂಡು ಬರುತ್ತಿದ್ದ ಗುರುಕುಲ, ಆಶ್ರಮಗಳ ಜೊತೆಗೆ ಈಗ ವ್ಯವಸ್ಥಿತ ರೀತಿಯಲ್ಲಿ ಸಂಘಟಿಸಿದ ಉನ್ನತ ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬರಲಾರಂಭಿಸಿದುವು. ರಾಜಧಾನಿಗಳು, ಪುಣ್ಯಕ್ಷೇತ್ರಗಳು, ದೇವಾಲಯಗಳು—ಇವೇ ಮುಂತಾದ ಕೇಂದ್ರಗಳು ವಿದ್ವಜ್ಜನರನ್ನೂ ವಿದ್ಯಾರ್ಥಿಗಳನ್ನೂ ಆಕರ್ಷಿಸಿದುವು. ಅಲ್ಲಿ ವ್ಯವಸ್ಥಿತ ರೀತಿಯ ಉನ್ನತ ವಿದ್ಯಾಲಯಗಳು ಆರಂಭವಾದುವು. ಮಾನ್ಯಖೇಟ ಕಲ್ಯಾಣಗಳಂಥ ಶ್ರೀಮಂತ ರಾಜಧಾನಿಗಳೂ ಬಳ್ಳಿಗಾಮೆ ದಂಬಳ್‌ಗಳಂಥ ಪುಣ್ಯಕ್ಷೇತ್ರಗಳೂ ಪಂಡಿತರನ್ನು ಆಕರ್ಷಿಸಿ ಕಾಲಕ್ರಮದಲ್ಲಿ ಉನ್ನತ ಶಿಕ್ಷಣದ ಪ್ರಖ್ಯಾತ ಕೇಂದ್ರಗಳಾದುವು. ಮಠಗಳೂ ದೇವಾಲಯಗಳೂ ಉನ್ನತ ಶಿಕ್ಷಣಕ್ಕೆ ವ್ಯವಸ್ಥೆಗೊಳಿಸಲಾರಂಭಿಸಿದುವು.

---

6. A third century inscription on the Nagashila at the Madhukeshwara temple in Banavasi

ಇಂಥ ಸಂಘಟಿತ ಸಂಸ್ಥೆಗಳ ಜೊತೆಗೆ ಅಗ್ರಹಾರ ಬ್ರಹ್ಮಪುರಿಗಳೆಂಬ ಬ್ರಾಹ್ಮಣ ಪಂಡಿತರ ವಸತಿಗಳೂ ಅಸ್ತಿತ್ವಕ್ಕೆ ಬಂದು ತಮ್ಮವೇ ಆದ ರೀತಿಯಲ್ಲಿ ಉನ್ನತ ಶಿಕ್ಷಣದ ಪ್ರಚಾರವನ್ನು ಕೈಕೊಂಡುವು. ಕ್ರಿ.ಶ. 1200ರ ವರೆಗೆ ಆ ರೀತಿ ಅಸ್ತಿತ್ವಕ್ಕೆ ಬಂದು ಉನ್ನತ ಶಿಕ್ಷಣ ಸಂಸ್ಥೆಗಳಾಗಿ ಖ್ಯಾತಿಗಳಿಸಿದ ಪ್ರಮುಖ ಕೇಂದ್ರಗಳನ್ನು ಮುಂದೆ ಪರಿಶೀಲಿಸಿದೆ.

೧ ಘಟಕಗಳು

ಇವು ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಚೀನತಮ ಉನ್ನತ ಶಿಕ್ಷಣ ಸಂಸ್ಥೆಗಳೆಂದು ಪರಿಗಣಿಸುವುದುಂಟು. ಸಂಖ್ಯೆಯಲ್ಲಿ ಅಷ್ಟು ಹೆಚ್ಚಾಗಿರದಿದ್ದರೂ ಇವು ಕದಂಬರ ಕಾಲದಿಂದಲೂ ಪ್ರಚಾರದಲ್ಲಿರುವುದು ಕಂಡು ಬಂದಿದೆ. ಈ ವಂಶದ ಮೂಲಪುರುಷನಾದ ಮಯೂರಶರ್ಮ ಆ ಕಾಲದಲ್ಲಿ ಉತ್ತರ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಬೌದ್ಧ ಶಿಕ್ಷಣ ಸಂಸ್ಥೆಗಳ ಮಾದರಿಯಲ್ಲಿ ರೂಪುಗೊಂಡಿದ್ದ ಕಾಂಚೀಪುರದ ಘಟಿಕವೊಂದರಲ್ಲಿ ಶಿಕ್ಷಣ ಪಡೆದು ಬಂದನೆಂಬ ಅಂಶ ಐತಿಹ್ಯವಿದೆ. ಅವನು ತನ್ನ ರಾಜ್ಯದಲ್ಲೂ ಆ ಮಾದರಿಯ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಿರಬೇಕು.

1. ನಾಗಾಯಿ ಘಟಿಕಾಲಯ: ಪ್ರಾಚೀನ ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿದ್ದ ಈ ಘಟಿಕಾಲಯ ಗುಲ್ಬರ್ಗದ ಬಳಿಯಿರುವ ನಾಗಾಯಿ ಎಂಬ ಸ್ಥಳದಲ್ಲಿ ಏರ್ಪಟ್ಟಿತ್ತು. ಇದಕ್ಕೆ ಸೇರಿದಂತೆ ಎರಡು ಆವರಣಗಳಿದ್ದು ಒಂದೊಂದರಲ್ಲೂ ಅನುಕ್ರಮವಾಗಿ. 257 ಮತ್ತು 400 ಮಂದಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಅವರಲ್ಲಿ ಇನ್ನೂರು ಮಂದಿ ವೇದವನ್ನೂ ಐವತ್ತೆರಡು ಮಂದಿ ಶಾಸ್ತ್ರಗಳನ್ನೂ ವ್ಯಾಸಂಗ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ವೇದವನ್ನು ಬೋಧಿಸಲು ಮೂವರು ಅಧ್ಯಾಪಕರನ್ನೂ ಶಾಸ್ತ್ರಗಳನ್ನು ಬೋಧಿಸಲು ಮೂವರು ಅಧ್ಯಾಪಕರನ್ನೂ ನೇಮಿಸಲಾಗಿತ್ತು. ಭಟ್ಟದರ್ಶನ, ನ್ಯಾಸ, ಪ್ರಭಾಕರ ಮುಂತಾದ ಇತರ ವಿಷಯಗಳ ಬೋಧನೆಗೂ ವ್ಯವಸ್ಥೆ ಮಾಡಲಾಗಿತ್ತು. ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಒಂದು ದೊಡ್ಡ ಗ್ರಂಥಾಲಯವೂ ಅದನ್ನು ನೋಡಿಕೊಳ್ಳಲು ಆರು ಮಂದಿ ಅಧಿಕಾರಿಗಳೂ ಇದ್ದರು. ಅಲ್ಲಿನ ಅಧ್ಯಾಪಕರ ಸಂಭಾವನೆಗೂ ವಿದ್ಯಾರ್ಥಿಗಳ ಜೀವನಕ್ಕೂ ಅಲ್ಲಿಗೆ ಸೇರಿದ್ದ ದೇವಾಲಯದ ಅರ್ಚನೆಗೂ ಅಗತ್ಯವಾಗುವ ವೆಚ್ಚವನ್ನು ನಿರ್ವಹಿಸಲು ಪ್ರತ್ಯೇಕ ಭೂಕೊಡುಗೆಗಳಿದ್ದುವು. ಘಟಿಕಾಲಯದ ಕೆಲಸಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಪರಿಚಾರಕರೂ ಇದ್ದರು. ಅದರ ಆಡಳಿತಕ್ಕಾಗಿ ಮಹಾಜನರ ಒಂದು ಸಮಿತಿ ಏರ್ಪಟ್ಟಿತ್ತು.

2. ಹೆಂಜಾರ ಘಟಿಕಾಲಯ: ಇದು ಮಡಿಕಶಿರದ ಬಳಿಯಿರುವ ಹೆಂಜಾರವೆಂಬ ಸ್ಥಳದಲ್ಲಿ ಏರ್ಪಟ್ಟಿದ್ದು, ನೊಳಂಬರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ರಾಜ್ಯ ಪುನರ್ವಿಂಗಡಣೆಯ ವರೆಗೂ ಈ ಪ್ರದೇಶ ಕರ್ನಾಟಕದ ಭೂಭಾಗವಾಗಿದ್ದು ಈಗ ಆಂಧ್ರ ಪ್ರದೇಶಕ್ಕೆ ಸೇರಿ ಹೋಗಿದೆ. ಈ ಕೇಂದ್ರದ ಪಠ್ಯಕ್ರಮ, ಆಡಳಿತ ವ್ಯವಸ್ಥೆ ಮುಂತಾದವುಗಳ ಬಗ್ಗೆ ಅಷ್ಟಾಗಿ ವಿವರಗಳು ದೊರೆತಿಲ್ಲ. ಸ್ಥಳೀಯ ಶಾಸನವೊಂದರಲ್ಲಿ ಈ ಕೇಂದ್ರವನ್ನು 'ಹೆಂಜಾರಪಟ್ಟಣದ ಮಹಾ ಘಟಿಕಾಲಯ' ಎಂದು ವರ್ಣಿಸಿದೆ.

ಮೇಲಿನ ಎರಡು ವಿದ್ಯಾಕೇಂದ್ರಗಳ ಮಾದರಿಯ ಘಟಿಕಾಲಯಗಳು ಕಾಡಿಯೂರು, ಕುಕ್ಕೂರು, ಮೋರಿಗೆರೆ, ರಾಯಬಾಗ್ ಮುಂತಾದೆಡೆಗಳಲ್ಲೂ ಅಸ್ತಿತ್ವದಲ್ಲಿದ್ದುವು.

ಘಟಿಕಾಲಯದಲ್ಲಿ ಶಿಕ್ಷಣವನ್ನು ಮುಗಿಸಿದವರು ಘಟಿಕ ಸಾಹಸ ಎಂಬ ಪದವಿಯನ್ನು ಪಡೆಯುತ್ತಿದ್ದರು. ಇದನ್ನು ಖ್ಯಾತ ವ್ಯಕ್ತಿಗಳಿಗೂ ಪಂಡಿತರಿಗೂ ಗೌರವ ಪದವಿಯಾಗಿ ನೀಡುವ ಸಂಪ್ರದಾಯವೂ ಇತ್ತು. ಪದವಿ ನೀಡಲು ಅಲ್ಲಿ ಏರ್ಪಡುತ್ತಿದ್ದ ಸಮಾರಂಭಕ್ಕೆ ಘಟಿಕೋತ್ಸವ ಎಂದು ಕರೆಯುತ್ತಿದ್ದಂತೆ ಕಾಣುತ್ತದೆ.

೨ ಅಗ್ರಹಾರಗಳು

ಇವು ಅಧ್ಯಯನ ಮತ್ತು ಬೋಧನೆಯನ್ನು ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡಿದ್ದ ಬ್ರಾಹ್ಮಣ ಪಂಡಿತರ ವಸತಿಗ್ರಾಮಗಳು. ಅವರ ಜೀವನೋಪಾಯಕ್ಕಾಗಿ ಇಡೀ ಗ್ರಾಮವೇ ಅವರಿಗೆ ಬಳುವಳಿ ಯಾಗಿ ದೊರೆತಿರುತ್ತಿತ್ತು. ಅವರಿಗೆ ಗ್ರಾಮವನ್ನು ದತ್ತಿಯಾಗಿ ನೀಡಿರುವ ಬಗ್ಗೆ ಕರ್ನಾಟಕದ ಅನೇಕ ಕಡೆಗಳಲ್ಲಿ ತಾಮ್ರಶಾಸನಗಳು ದೊರೆತಿವೆ. ಹಾಗೆ ದತ್ತಿಯಾಗಿ ಪಡೆದ ಅಲ್ಲಿನ ವಿದ್ವಜ್ಜನರು ಬೋಧನೆಯೇ ಮೊದಲಾದ ಆರು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು. ಹಾಗೆ ಅಸ್ತಿತ್ವಕ್ಕೆ ಬಂದ ಅಗ್ರಹಾರಗಳಲ್ಲಿ ಕೆಲವು ತುಂಬ ಖ್ಯಾತಿಗಳಿಸಿ ಉನ್ನತ ಶಿಕ್ಷಣದ ಮಹಾಕೇಂದ್ರಗಳೆನಿಸಿದ್ದುವು. ಅಲ್ಲಿಗೆ ಬರತಕ್ಕ ವಿದ್ಯಾರ್ಥಿ ಗಳಿಗೆ ವೇದವನ್ನೂ ಸಂಸ್ಕೃತದ ಜ್ಞಾನಶಾಖೆಗಳನ್ನೂ ಬೋಧಿಸಲಾಗುತ್ತಿತ್ತು. ಕರ್ನಾಟಕಕ್ಕೆ ವಿಶಿಷ್ಟ ವೆನಿಸಿರುವ ಈ ಶಿಕ್ಷಣ ಕೇಂದ್ರಗಳಲ್ಲಿ ಪ್ರಮುಖವೆನಿಸಿದ್ದ ಕೆಲವನ್ನು ಮುಂದೆ ವಿವರಿಸಿದೆ:

1. ತಾಳಗುಂದದ ಅಗ್ರಹಾರ: ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಪ್ರಾಚೀನತಮ ಅಗ್ರಹಾರವೆಂದು ಹೆಸರಾಗಿರುವ ಇದನ್ನು ಮಯೂರಶರ್ಮನ ಪೂರ್ವಜನಾದ ಮುಕ್ಕಣ್ಣ ಕದಂಬನು ಸ್ಥಾಪಿಸಿದನೆಂಬ ಕತೆಯುಂಟು. ಶಿಕಾರಿಪುರದ ತಾಲ್ಲೋಕಿನಲ್ಲಿರುವ ಈ ಗ್ರಾಮಕ್ಕೆ ಅವನು ಉತ್ತರ ಭಾರತದ ಅಹಿಚ್ಛತ್ರ ಎಂಬಲ್ಲಿಂದ ಮೂವತ್ತೆರಡು ಬ್ರಾಹ್ಮಣ ಕುಟುಂಬ ಗಳನ್ನು ಕರೆದುತಂದು ಅವರಿಗೆ ಈ ಗ್ರಾಮವನ್ನು ದತ್ತಿ ಹಾಕಿಕೊಟ್ಟನು. ಅವರು ವೇದ, ವೇದಾಂಗ, ಉಪಾಂಗ, ತರ್ಕ, ಸ್ಮೃತಿ, ಮೀಮಾಂಸೆ, ಪುರಾಣ, ನಾಟಕ ಮುಂತಾದ ವಿಷಯಗಳಲ್ಲಿ ಪ್ರಸಿದ್ಧ ವಿದ್ವಾಂಸರೆನಿಸಿದ್ದರು. ಈ ಅಗ್ರಹಾರ ಎಂದಿನಿಂದ ಬೋಧನೆ ಯನ್ನು ನಡೆಸುತ್ತಿತ್ತೆಂಬ ಬಗ್ಗೆ ಉಲ್ಲೇಖಗಳಿಲ್ಲ. ಆದರೆ ಉನ್ನತ ಶಿಕ್ಷಣಕ್ಕೆ ಆ ಗ್ರಾಮ ಗಳಿಸಿದ್ದ ಕೀರ್ತಿ ಮುಂದೆ ಅಲ್ಲಿ ಪ್ರಸಿದ್ಧವೆನಿಸಿದ ದೇಗುಲದ ವಿದ್ಯಾಪೀಠಗಳ ಉದಯಕ್ಕೆ ಅವಕಾಶ ಮಾಡಿಕೊಟ್ಟಿತೆಂದು ಹೇಳಬಹುದು. (ನೋಡಿ–ದೇಗುಲದ ವಿದ್ಯಾಪೀಠಗಳು).

2. ಬಾದಾಮಿ ಅಗ್ರಹಾರ: ಕದಂಬ ವಂಶದ ಮೂಲಪುರುಷರು ತಾಳಗುಂದದ ಅಗ್ರಹಾರವನ್ನು ಆರಂಭಿಸಿದಂತೆ ಚಾಲುಕ್ಯವಂಶದ ಮೊದಲಿಗರು ಬಾದಾಮಿಯ ಅಗ್ರಹಾರ ವನ್ನು ಸ್ಥಾಪಿಸಿದರು. ಸ್ಥಳೀಯ ಶಾಸನವೊಂದರಲ್ಲಿ ಅದೊಂದು ಅಧಿಸ್ಥಾನವಾಗಿತ್ತೆಂಬ ಉಲ್ಲೇಖವಿದ್ದರೂ ಅದರ ವರ್ಣನೆಯಿಂದ ಅದು ಒಂದು ಅಗ್ರಹಾರವಾಗಿತ್ತೆಂಬ ಅಂಶ ಸ್ಪಷ್ಟಪಡುತ್ತದೆ. ಅಲ್ಲಿ ಚತುರ್ದಶ ಶಾಸ್ತ್ರಗಳನ್ನು ಬಲ್ಲ ಪಂಡಿತರಿರುತ್ತಿದ್ದರೆಂಬ ಅಂಶ ವನ್ನೂ ಅದರಲ್ಲಿ ಉಲ್ಲೇಖಿಸಿದೆ. ಇದು ಧಾರ್ಮಿಕ ಶಿಕ್ಷಣದ ಕೇಂದ್ರವೆನಿಸಿದ್ದರೂ ಉನ್ನತ ಲೌಕಿಕ ಶಿಕ್ಷಣಕ್ಕೂ ಅವಕಾಶ ಕಲ್ಪಿಸಿಕೊಂಡಿತ್ತು.

3. ಐಹೊಳೆ (ಆರ್ಯಪುರ): ಚಾಲುಕ್ಯರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಇದು ಮತ್ತೊಂದು ಪ್ರಸಿದ್ಧ ಅಗ್ರಹಾರ. ಕ್ರಿ.ಶ. 8–9ನೆಯ ಶತಮಾನದ ಸ್ಥಳೀಯ ಶಾಸನವೊಂದರ ಪ್ರಕಾರ ಇದನ್ನು ಸೋಮಯಾಜಿಯೆಂಬುವನು ಸ್ಥಾಪಿಸಿದನೆಂದೂ ಅಲ್ಲಿ ಆಗ 500 ಮಂದಿ ಚತುರ್ವೇದಿಗಳಿದ್ದರೆಂದೂ ತಿಳಿದು ಬರುತ್ತದೆ. ಇದು ಉನ್ನತ ಶಿಕ್ಷಣಕ್ಕೆ ತನ್ನ ಖ್ಯಾತಿಯನ್ನು 2–3 ಶತಮಾನಗಳ ತನಕ ಮುಂದುವರಿಸಿಕೊಂಡು ಬಂದಿ ತ್ತೆಂಬ ಅಂಶವನ್ನು 1191ರ ಶಾಸನವೊಂದು ತಿಳಿಸುತ್ತದೆ.

4. ಉಮ್ಮಜಿಗೆ: ಗದುಗಿನ ಬಳಿ ಅನಂತರದ ಚಾಲುಕ್ಯರಿಂದ ಸ್ಥಾಪಿತವಾದ ಒಂದು ಅಗ್ರಹಾರ. ಇಲ್ಲಿನ ಪಂಡಿತರ ಜೀವನೋಪಾಯಕ್ಕೂ ಅವರ ವಸತಿಗೃಹಗಳ ದುರುಸ್ತಿಗೂ ಬೇಕಾಗುವ ವೆಚ್ಚಕ್ಕೆ ಅಗತ್ಯವಾದಷ್ಟು ಆದಾಯ ಬರುತ್ತಿದ್ದ ಭೂ ಕೊಡುಗೆ ಇತ್ತು. ಇಲ್ಲಿನ ಪಂಡಿತರಿಗೆ ಅಕ್ಕರಿಗರೆಂಬ ಹೆಸರೂ ಇತ್ತು. ಅವರು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಬ್ಬರಿಗೂ ಪಾಠ ಹೇಳುತ್ತಿದ್ದರು. ಗಣಿತ, ಖಗೋಳ ಶಾಸ್ತ್ರ, ಛಂದಸ್ಸು, ವ್ಯಾಕರಣ, ಕಾವ್ಯಮೀಮಾಂಸೆ ಮುಂತಾದ ವಿಷಯಗಳು ಅಲ್ಲಿನ ಉನ್ನತ ಶಿಕ್ಷಣದ ಪಾಠ ಪ್ರವಚನಗಳಲ್ಲಿ ಸೇರಿರುತ್ತಿದ್ದುವು.

5. ಡಿಗಾಂವೆ: ಬೆಳಗಾಂ ಜಿಲ್ಲೆಯ ಈ ಅಗ್ರಹಾರವನ್ನು ಕದಂಬರಾಜ, ಶಿವಚಿತ್ತನ ರಾಣಿ (1148-1186) ಸ್ಥಾಪಿಸಿದಳು. ಅವಳು ಭಾರತದ ಬೇರೆ ಬೇರೆ ಭಾಗಗಳಿಂದ ಪಂಡಿತರನ್ನು ಆಹ್ವಾನಿಸಿ ಅವರ ಸಂಭಾವನೆಗೂ ವಿದ್ಯಾರ್ಥಿಗಳ ಶಿಕ್ಷಣಕ್ಕೂ ಬೇಕಾದ ಹಾಗೆ ಭೂಮಿಯನ್ನು ದತ್ತಿಯಾಗಿ ಕೊಟ್ಟಳು. ಅಲ್ಲಿ ವೇದ, ವೇದಾಂಗ, ನ್ಯಾಯ, ಮೀಮಾಂಸೆ, ಸಾಂಖ್ಯ, ವೇದಾಂತ, ಸ್ಮೃತಿ, ಯೋಗ, ಇತಿಹಾಸ, ಪುರಾಣ, ಖಗೋಳ ಶಾಸ್ತ್ರ—ಈ ಶಾಖೆಗಳಲ್ಲಿ ಉನ್ನತ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿನ ಅಧ್ಯಾಪಕರಿಗೆ ಅವರವರ ಪಾಂಡಿತ್ಯಕ್ಕೂ ಪ್ರಾಮುಖ್ಯಕ್ಕೂ ತಕ್ಕಂತೆ ಪ್ರತ್ಯೇಕ ಕೊಡುಗೆ ಭೂಮಿಗಳಿದ್ದುವು.

6. ಕಾಣಿಯೂರು: ರಾಷ್ಟ್ರಕೂಟ ಅರಸನೊಬ್ಬನು ಧಾರವಾಡ ಜಿಲ್ಲೆಯ ಇಂದಿನ ಕಳಸ ಎಂಬ ಊರಿನಲ್ಲಿ ಈ ಅಗ್ರಹಾರವನ್ನು ಸ್ಥಾಪಿಸಿದ್ದನು. ಅಲ್ಲಿನ ಇನ್ನೂರು ಬ್ರಾಹ್ಮಣ ಕುಟುಂಬಗಳಿಗೆ ಇಡೀ ಊರಿನ ಭೂಮಿಯೆಲ್ಲ ದತ್ತಿಯಾಗಿ ದೊರೆತಿತ್ತು. ಅಲ್ಲಿನ ಪಂಡಿತರು, ವೇದ, ಪುರಾಣ, ವ್ಯಾಕರಣ, ನ್ಯಾಯ, ರಾಜ್ಯತಂತ್ರ ಮುಂತಾದ ಜ್ಞಾನಶಾಖೆಗಳಲ್ಲಿ ವಿಶೇಷ ತಜ್ಞರಾಗಿದ್ದರು. ಅವರಲ್ಲಿ ಕೆಲವರು ಸಾಹಿತ್ಯ ರಚನೆಯಲ್ಲೂ ವ್ಯಾಖ್ಯಾನ ನಿರೂಪಣೆಯಲ್ಲೂ ಅದ್ವಿತೀಯರೆನಿಸಿದ್ದರು.7 ಈ ಅಂಶವನ್ನು ಸೂಚಿಸುವ ಶಾಸನವಲ್ಲಿನ ಮೂವತ್ತನೆಯ ಪದ್ಯದ ಪ್ರಕಾರ ಅಗ್ರಹಾರ ಸುತ್ತುವರಿದಿದ್ದ ಒಂದು ಸಂರಕ್ಷಣಾಲಯವಿತ್ತು; ಒಳಗೆ ಒಂದು ಸಭಾಮಂದಿರವೂ ಉಚಿತ ಭೋಜನಾಲಯವೂ ಇದ್ದುವು. ಈ ಅಗ್ರಹಾರಕ್ಕೆ ಮತ್ತಷ್ಟು ಭೂಕೊಡುಗೆಯಿತ್ತಾಗ ಬರೆಸಿದ ಮೇಲಿನ ಶಾಸನ ಕೊಡುಗೆ ಭೂಮಿಯಿಂದ ಬಂದ ಆದಾಯದ ಒಂದು ಭಾಗವನ್ನು ಅಧ್ಯಾಪಕರ ಸಂಭಾವನೆಗೆ ಬಳಸಬೇಕೆಂದೂ ಅಲ್ಲಿ ಬೋಧಿಸುತ್ತಿದ್ದ ಪಠ್ಯಕ್ರಮ ಅರ್ಥಪೂರ್ಣವೂ ಶ್ರೀಮಂತವೂ ಆಗಿತ್ತೆಂದೂ ಸೂಚಿಸುತ್ತದೆ.

7. ಸರ್ವಜ್ಞಪುರ (ಅರಸೀಕೆರೆ): ಹಾಸನ ಜಿಲ್ಲೆಯ ಅರಸೀಕೆರೆಗೆ ಹಿಂದೆ ಸರ್ವಜ್ಞಪುರವೆಂಬ ಹೆಸರಿತ್ತು. ಹೆಸರೇ ಸೂಚಿಸುವಂತೆ ಇದೊಂದು ಅಗ್ರಹಾರವಾಗಿತ್ತು. ಆ ಸ್ಥಳದ ಶಾಸನವೊಂದು8 ಅಲ್ಲಿನ ಶೈಕ್ಷಣಿಕ ಮತ್ತು ಸಾಹಿತ್ಯಾತ್ಮಕ ಚಟುವಟಿಕೆಗಳನ್ನು ವಿವರಿಸುತ್ತ, ಅಲ್ಲಿನ ಬ್ರಾಹ್ಮಣರು ವೇದಶಾಸ್ತ್ರ, ಷಡ್ದರ್ಶನ ಮುಂತಾದವುಗಳ ಅಧ್ಯಯನದಲ್ಲಿ ತೊಡಗಿರುತ್ತಿದ್ದರೆಂದೂ ವೇದಾಧ್ಯಯನದಲ್ಲೊ, ಮಹಾಜ್ಞಾನ ವಿವರಣೆಯಲ್ಲೊ ನಿರತರಾಗಿರುತ್ತಿದ್ದರೆಂದೂ ಸಂತತವಾಗಿ ಚರ್ಚೆ ವಿಚಾರ ವಿನಿಮಯಾದಿಗಳನ್ನು ನಡೆಸುತ್ತಿದ್ದರೆಂದೂ ಸೂಚಿಸುತ್ತದೆ. ಅವರು ಪುರಾಣ ವಾಚನ, ಸ್ಮೃತಿ, ನಾಟಕ, ಕಾವ್ಯ—ಇವುಗಳ ಅರ್ಥವಿವರಣೆ, ಅಧ್ಯಯನ, ಸಾಹಿತ್ಯ, ನೀತಿ, ಧರ್ಮ—ಇವುಗಳ ತತ್ತ್ವಚಿಂತನೆ ಮುಂತಾದವುಗಳಲ್ಲಿ ಮಗ್ನರಾಗಿರುತ್ತಿದ್ದರಲ್ಲದೆ ವಿದ್ಯಾರ್ಥಿಗಳಿಗೆ ತಮ್ಮ ಆಸಕ್ತಿಯ ವಿಷಯಗಳನ್ನು ಬೋಧಿಸುತ್ತಲೂ ಇದ್ದರು.9

ಮೇಲೆ ವಿವರಿಸಿದ ಅಗ್ರಹಾರಗಳಂತೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಇನ್ನೂ ಅನೇಕ ಅಗ್ರಹಾರಗಳು ಅಸ್ತಿತ್ವಕ್ಕೆ ಬಂದು ಬೇರೆ ಬೇರೆ ಕಾಲಾವಧಿಯ ವರೆಗೆ ಉಳಿದುಕೊಂಡಿದ್ದುವು. ಅವುಗಳಲ್ಲಿ ಬಹುಸಂಖ್ಯೆಯವು ಉನ್ನತ ಸಂಸ್ಕೃತ ವ್ಯಾಸಂಗಕ್ಕೆ ಹೆಸರಾಗಿದ್ದುವು. ಅಲ್ಲಿನ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಸರ್ಕಾರವೂ ಸಮಾಜವೂ ಮುಕ್ತಹಸ್ತದಿಂದ ಸಹಾಯ ನೀಡುತ್ತಿದ್ದುವು.

---

7. *Epigraphia Indica*, XIII, p. 317
8. *Epigraphia Carnatica*, V, p. 144
9. Dr. A. S. Altekar—*Education in Ancient India*, p. 296

೩ ಬ್ರಹ್ಮಪುರಿಗಳು

ಘಟಿಕಾಲಯ ಅಗ್ರಹಾರಗಳಂತೆ ಬ್ರಹ್ಮಪುರಿಗಳೂ ಪ್ರಾಚೀನ ಕರ್ನಾಟಕದಲ್ಲಿ ಹೆಸರು ಪಡೆದಿದ್ದ ಉನ್ನತ ಶಿಕ್ಷಣ ಕೇಂದ್ರಗಳೆನಿಸಿದ್ದುವು. ಅಗ್ರಹಾರಗಳು ಪ್ರತ್ಯೇಕವಾಗಿ ಬ್ರಾಹ್ಮಣರ ವಸತಿಗಳಾಗಿದ್ದರೆ ಬ್ರಹ್ಮಪುರಿಗಳು ಬ್ರಾಹ್ಮಣರು ವಾಸಿಸುವ ನಗರದ ಒಂದು ವಿಭಾಗ (extension) ದಂತಿದ್ದುವು. ಇವು ಅಗ್ರಹಾರಗಳಷ್ಟು ಸಂಖ್ಯೆಯಲ್ಲಿ ಅಧಿಕವಾಗಿರದಿದ್ದರೂ ಅವುಗಳಷ್ಟೇ ಉನ್ನತ ಮಟ್ಟದಲ್ಲಿ ಜ್ಞಾನ ಪ್ರಸರಣ ಕಾರ್ಯವನ್ನು ನಿರ್ವಹಿಸುತ್ತಿದ್ದುವು. ಅಂಥ ಒಂದು ಬ್ರಹ್ಮಪುರಿಯನ್ನು ಮುಂದೆ ವಿವರಿಸಿದೆ.

ಬಳ್ಳಿಗಾವೆಯ ಬ್ರಹ್ಮಪುರಿ: ಬಳ್ಳಿಗಾವೆ ಪ್ರಾಚೀನ ಕರ್ನಾಟಕದಲ್ಲಿ ಕ್ರಿಸ್ತಶಕದ ಆರಂಭದಿಂದ ಉನ್ನತ ಶಿಕ್ಷಣಕ್ಕೆ ಮೀಸಲಾಗಿದ್ದ ವಿವಿಧ ಕೇಂದ್ರಗಳನ್ನು ವಿವಿಧ ಕಾಲಗಳಲ್ಲಿ ಹೊಂದಿದ್ದುದು ಕಂಡು ಬರುತ್ತದೆ. ಬನವಾಸಿಯ ಪ್ರಾಂತ್ಯಾಧಿಕಾರಿಯಾಗಿದ್ದ ಕೇಶವದೇವನು ಅಲ್ಲಿ ಒಂದು ಬ್ರಹ್ಮಪುರಿಯನ್ನು ಸ್ಥಾಪಿಸಿ ಅದಕ್ಕೆ ಅಗತ್ಯವಾದ ದತ್ತಿಯನ್ನು ಹಾಕಿಕೊಟ್ಟಿದ್ದನು. ಉನ್ನತ ಶಿಕ್ಷಣಕ್ಕೆ ಮೀಸಲಾಗಿದ್ದ ಆ ಕೇಂದ್ರದಲ್ಲಿ ಪುರಾಣ, ನಾಟಕ, ಸ್ಮೃತಿ, ಕಾವ್ಯ, ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಪಾಂಡಿತ್ಯ ಸಾಧಿಸಿದ್ದ 38 ಮಂದಿ ಅಧ್ಯಾಪಕರಿದ್ದರು. ಅವರು ತಮ್ಮ ವಿಶೇಷ ವಿಷಯವನ್ನು ವಿದ್ಯಾರ್ಥಿಗಳಿಗೆ ಬೋಧಿಸು ತ್ತಿದ್ದರು. ನಗರದ ದಕ್ಷಿಣ ಭಾಗದ ಫಲವತ್ತಾದ ಹೊಲಗದ್ದೆಗಳನ್ನು ಅವರಿಗೆ ದತ್ತಿಯಾಗಿ ಕೊಡ ಲಾಗಿತ್ತು. ಕೇಶವದೇವನು ನಗರದ ಆ ವಲಯದಲ್ಲಿ ಹಲವಾರು ವಿದ್ಯಾಲಯಗಳನ್ನು ಕಟ್ಟಿಸಿ ಪಾಠ ಪ್ರವಚನಗಳಿಗೆ ಅಗತ್ಯವೆನಿಸುವ ಉಪಕರಣಾದಿಗಳಿಂದ ಸಜ್ಜುಗೊಳಿಸಿಕೊಟ್ಟಿದ್ದನು. ಅಧ್ಯಾಪಕರಿಗೆ ಸಜ್ಜುಗೊಳಿಸಿದ ಉಚಿತ ವಾಸದ ಮನೆಗಳನ್ನೂ ಏರ್ಪಡಿಸಿಕೊಟ್ಟಿದ್ದನು. ನಗರದ ಆ ಭಾಗದಲ್ಲಿ ದೇವಾಲಯವೊಂದನ್ನು ಕಟ್ಟಿಸಿಕೊಟ್ಟು, ಆ ವಿದ್ಯಾ ಕೇಂದ್ರಕ್ಕೆ ವೀರಕೇಶವಪುರವೆಂದು ನಾಮಕರಣ ಮಾಡಿದ್ದನು.

ತಲಕಾಡು, ವಿಕ್ರಮಪುರ ಮುಂತಾದ ನಗರಗಳಲ್ಲೂ ಬ್ರಹ್ಮಪುರಿಗಳಿದ್ದುವು. ಆದರೆ ಅವಾವೂ ಉನ್ನತಶಿಕ್ಷಣಕ್ಕೆ ಬಳ್ಳಿಗಾವೆಯಷ್ಟು ಯಶಸ್ಸು ಸಾಧಿಸಿರಲಿಲ್ಲ.

೪ ಸಂಘಾರಾಮಗಳು ಮತ್ತು ಮಠಗಳು

ಕ್ರಿ.ಶ. ಎರಡನೆಯ ಶತಮಾನದ ವೇಳೆಗೆ ಜೈನ ಮತ್ತು ಬೌದ್ಧ ಮತಗಳ ಪ್ರಾಬಲ್ಯದಿಂದ ಹಿಂಬದಿಗೆ ಬದ್ದಿದ್ದ ಹಿಂದೂಧರ್ಮದ ಪುನರುಜ್ಜೀವನ ಆರಂಭವಾಗಿತ್ತು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಹಿಂದೂಮಠಗಳು ಧಾರ್ಮಿಕ ಶಿಕ್ಷಣಕ್ಕಾಗಿ ಪುನಶ್ಚೇತನಗೊಂಡು ಕಾರ್ಯಮುಖವಾದುವು. ಜೈನ ಮತ್ತು ಬೌದ್ಧ ಧರ್ಮಗಳೊಡನೆಯೂ ಶಿಕ್ಷಣ ಸಂಸ್ಥೆಗಳೊಡನೆಯೂ ಸ್ಪರ್ಧಿಸಬೇಕಾಗಿದ್ದ ಆ ಕಾಲದಲ್ಲಿ ಅವು ಧಾರ್ಮಿಕ ಪ್ರಚಾರದ ಜೊತೆಗೆ ಮತಾನುಯಾಯಿಗಳಿಗೂ ಇತರರಿಗೂ ಉನ್ನತ ಶಿಕ್ಷಣದ ವ್ಯವಸ್ಥೆ ಗೊಳಿಸತೊಡಗಿದುವು. ಹಿಂದೂಧರ್ಮದ ತತ್ವಗಳನ್ನೂ ಕಟ್ಟುಕಟ್ಟಳೆಗಳನ್ನೂ ಆಚಾರ ವ್ಯವಹಾರ ಗಳನ್ನೂ ಅನುಷ್ಠಾನಕ್ಕೆ ತಂದು ಪ್ರಚಾರ ಮಾಡಬೇಕಾಗಿದ್ದುದರಿಂದ ಜನಸಾಮಾನ್ಯರಿಗೆ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣಗಳ ಸೌಲಭ್ಯವನ್ನು ಒದಗಿಸುವುದು ಅನಿವಾರ್ಯವೇ ಆಗಿತ್ತು. ಆದ್ದರಿಂದ ಕೆಲವು ಹಿಂದೂ ಮಠಗಳು ಬೌದ್ಧ ವಿಹಾರಗಳ ಮಾದರಿಯಲ್ಲಿ ಉನ್ನತ ಶಿಕ್ಷಣ ಕೇಂದ್ರಗಳಾಗಿ ಕೆಲಸ ಮಾಡ ಹತ್ತಿದುವು. ಕ್ರಿ.ಶ. ಹತ್ತನೆಯ ಶತಮಾನದ ವೇಳೆಗೆ ಅಂಥ ಅನೇಕ ಮಠಗಳಲ್ಲಿ ಉನ್ನತ ಶಿಕ್ಷಣ ಕೇಂದ್ರ ಗಳು ವ್ಯವಸ್ಥೆಗೊಂಡಿದ್ದುವು. ಅವುಗಳಲ್ಲಿ ಪ್ರಸಿದ್ಧಿ ಪಡೆದಿದ್ದ ಕೆಲವು ಮಠಗಳ ಕೇಂದ್ರಗಳನ್ನು ಮುಂದೆ ವಿವರಿಸಿದೆ:

1. ಕೋಡೀಮಠ: ಇದು ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯಕ್ಕೆ ಸೇರಿ ದಂತಿದ್ದು ಹನ್ನೆರಡನೆಯ ಶತಮಾನದಲ್ಲಿ ಖ್ಯಾತಿವೆತ್ತ ಉನ್ನತ ಶಿಕ್ಷಣ ಕೇಂದ್ರವನ್ನು ನಡೆ ಸುತ್ತಿತ್ತು. 1162ರ ಸ್ಥಳೀಯ ಶಾಸನವೊಂದರಲ್ಲಿ ಉಲ್ಲೇಖವಾಗಿರುವಂತೆ, ಜಾತಿ, ಮತ,

ಜನಾಂಗ, ಸಾಮಾಜಿಕ ಅಂತಸ್ತು ಮುಂತಾದ ಯಾವ ಭೇದವೂ ಇಲ್ಲದೆ ಯಾರು ಬೇಕಾದರೂ ಅಲ್ಲಿ ಪ್ರವೇಶಾವಕಾಶ ಪಡೆಯಬಹುದಾಗಿತ್ತು. ಆ ವಿದ್ಯಾಲಯದ ವಿದ್ಯಾರ್ಥಿಗಳ ಊಟ, ವಸತಿ, ಬಟ್ಟೆಬರೆಗಳು–ಇವೆಲ್ಲಕ್ಕೂ ಉಚಿತ ವ್ಯವಸ್ಥೆಯನ್ನು ಮಾಡಲಾಗಿತ್ತು. ಅಲ್ಲಿಗೆ ಖ್ಯಾತಿವೆತ್ತ ಪಂಡಿತರು ಅಧ್ಯಕ್ಷರಾಗಿರುತ್ತಿದ್ದರು. ವ್ಯಾಕರಣ, ವೇದಾಂತ, ನಾಟಕ, ಕಾವ್ಯ, ಸಿದ್ಧಾಂತ, ಶಿವಪದ ಮುಂತಾದ ಕ್ಷೇತ್ರಗಳಲ್ಲಿ ಆಳವಾದ ಪಾಂಡಿತ್ಯ ಸಾಧಿಸಿದ್ದ ವಾಮಶಕ್ತಿಯೆಂಬವರು ಒಂದು ಕಾಲದಲ್ಲಿ ಅದರ ಅಧ್ಯಕ್ಷರಾಗಿದ್ದರು. ಅವರು ವಿದ್ಯಾರ್ಥಿವೃಂದದ ಆಶೋತ್ತರಗಳ ಪ್ರತೀಕದಂತಿದ್ದು ಅವರ ಗೌರವಾಭಿಮಾನಗಳಿಗೆ ಪಾತ್ರರೆನಿಸಿದ್ದರು. ಈ ಸಂಸ್ಥೆಯಲ್ಲಿ ಕುರುಡರು, ಕುಂಟರು ಮತ್ತು ಇತರ ಅಂಗವಿಕಲರೂ ವಿದ್ಯಾರ್ಥಿಗಳಾಗಿದ್ದರು.

2. ನಾಗಾಯಿಮಠ: ಪ್ರಾಚೀನ ಕಾಲದಲ್ಲಿ ಘಟಿಕಾಲಯವೊಂದನ್ನು ಹೊಂದಿದ್ದ ಗುಲ್ಬರ್ಗದ ಬಳಿಯ ಈ ಊರಿನಲ್ಲಿ ಅನಂತರ ಖ್ಯಾತಿವೆತ್ತ ಉನ್ನತ ಶಿಕ್ಷಣ ಕೇಂದ್ರವೊಂದನ್ನು ಸ್ಥಾಪಿಸಿದ ಕೀರ್ತಿ ಅಲ್ಲಿನ ಮಧುಸೂದನ ದೇವಾಲಯಕ್ಕೆ ಸೇರಿದಂತಿದ್ದ ಒಂದು ಮಠಕ್ಕೆ ಸಲ್ಲುತ್ತದೆ. ಈ ವಿದ್ಯಾಕೇಂದ್ರವನ್ನು ಮೂರು ಅಂತಸ್ತಿನ ಭವ್ಯ ಮಂದಿರದಲ್ಲಿ ಸ್ಥಾಪಿಸಲಾಗಿತ್ತು. ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಗಳೆರಡಕ್ಕೂ ವ್ಯವಸ್ಥೆಗೊಳಿಸಿದ್ದ ಈ ವಿದ್ಯಾಮಂದಿರಕ್ಕೆ ವಟುಗಳನ್ನೂ ವಿರಕ್ತರನ್ನೂ ಸೇರಿಸಿಕೊಳ್ಳುವ ಅವಕಾಶ ಕಲ್ಪಿಸಿತ್ತು. ಆ ಭವನದಲ್ಲಿ ಪಾಠದ ಕೊಠಡಿಗಳೂ ಒಂದು ನೃತ್ಯಮಂದಿರವೂ ಇದ್ದುವು. ವಿದ್ಯಾಲಯದ ಆವರಣದಲ್ಲಿ ಒಂದು ಸಭಾಭವನವೂ ಸೇವಕರಿಗಾಗಿ ಪ್ರತ್ಯೇಕ ಕೊಠಡಿಯೂ ಇದ್ದುವು. ಒಬ್ಬ ಪುರಾಣ ಭಟ್ಟರೂ ಸೇರಿ ಮೂವರು ಅಧ್ಯಾಪಕರಿದ್ದರು. ಕಟ್ಟಡವನ್ನು ನೋಡಿಕೊಳ್ಳಲು ನಾಲ್ವರು ಮೇಲ್ವಿಚಾರಕರೂ ಆ ಸಂಸ್ಥೆಗೆ ದತ್ತಿಯಾಗಿ ಕೊಟ್ಟಿದ್ದ ಭೂ ಒಡುವಳಿಯನ್ನು ನೋಡಿಕೊಳ್ಳಲು ಒಬ್ಬ ಪಾರುಪತ್ಯಗಾರರೂ ಇದ್ದರು. ಭೂಮಿಯಿಂದ ಬಂದ ಆದಾಯವನ್ನು ಅಧ್ಯಾಪಕರ ಮತ್ತು ಇತರರ ಸಂಭಾವನೆಗೂ ವಿದ್ಯಾರ್ಥಿಗಳ ಉಚಿತ ಭೋಜನಕ್ಕೂ ಬಳಸಲಾಗುತ್ತಿತ್ತು.

3. ವೀರಶೈವ ಮಠಗಳು: 12–13ನೆಯ ಶತಮಾನಗಳಲ್ಲಿ ಕರ್ನಾಟಕದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯಾಗಿ ವೀರಶೈವ ಭಕ್ತಿಪಂಥ ದೇಶದ ಉದ್ದಗಲಕ್ಕೂ ಹರಡಿತು. ನಗರಗಳಲ್ಲೂ ಗ್ರಾಮಗಳಲ್ಲೂ ಆಗಲೆ ಅಸ್ತಿತ್ವದಲ್ಲಿದ್ದ ಮಠಗಳು ಹೊಸ ಹುರುಪಿನಿಂದ ಕಾರ್ಯಮುಖವಾದುವು. ನೂತನವಾಗಿ ಅನೇಕ ಮಠಗಳೂ ಆರಂಭವಾದುವು. ಮುಖ್ಯವಾಗಿ ಧರ್ಮ ಪ್ರಚಾರಕ್ಕೆ ಹೊರಟಿದ್ದ ಈ ಮಠಗಳು ಮತಪ್ರಚಾರಕರ ಹಾಗೂ ಜನತೆಯ ಶಿಕ್ಷಣಕ್ಕೂ ಅವಕಾಶ ಕಲ್ಪಿಸಿಕೊಂಡುವು. ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳನ್ನು ಕುರಿತು ಚರ್ಚೆ, ವಿಚಾರ ಸಂಕಿರಣ, ಪ್ರವಚನ, ವ್ಯಾಖ್ಯಾನ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಉನ್ನತ ಶಿಕ್ಷಣದ ಕೇಂದ್ರಗಳಾಗಿಯೂ ಕೆಲಸ ಮಾಡುತ್ತಿದ್ದುವು. ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿಕೊಂಡು, ಜೀವನದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಜಿಜ್ಞಾಸೆ ನಡೆಸುವ ಕಾರ್ಯಕ್ರಮಗಳಿಂದ ಜನಸಾಮಾನ್ಯದಲ್ಲಿ ಸಮಕಾಲೀನ ಸಮಸ್ಯೆಗಳಲ್ಲಿ ಆಸಕ್ತಿ ಹೆಚ್ಚಿಸುತ್ತಿದ್ದುವು. ಉನ್ನತ ಶಿಕ್ಷಣಕ್ಕೆ ಅಗತ್ಯವೆನಿಸುವ ಗ್ರಂಥ ರಚನೆಗೂ ಕನ್ನಡ ಭಾಷೆ ಪಳಗುತ್ತಬಂತು. ಜೀವನದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಕನ್ನಡದಲ್ಲಿ ವಿವರಿಸುವ ವಿಶಿಷ್ಟರೀತಿಯ ವಚನಸಾಹಿತ್ಯ ರೂಪುಗೊಂಡು ಅದುತನಕ ಗಹನವಾದ ವಿಷಯಗಳನ್ನು ಸಂಸ್ಕೃತದಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾಸಂಸ್ಥೆಗಳಿಗೆ ಕನ್ನಡದಲ್ಲಿ ಬೋಧಿಸುವ ಮತ್ತು ವ್ಯಾಸಂಗ ಮಾಡುವ ಅವಕಾಶ ಕಲ್ಪನೆಯಾಯಿತು. ಉನ್ನತ ಶಿಕ್ಷಣದಲ್ಲಾದ ಈ ಕ್ರಾಂತಿಗೆ ಕಲಚೂರ್ಯ ಅರಸರ ರಾಜಧಾನಿಯಾದ ಕಲ್ಯಾಣದಲ್ಲಿ ಏರ್ಪಟ್ಟಿದ್ದ ಅನುಭವಗೋಷ್ಠಿ ಮಾರ್ಗದರ್ಶನ ಮಾಡುತ್ತಿತ್ತು.

೫ ದೇವಾಲಯದ ವಿದ್ಯಾಪೀಠಗಳು

ಬೌದ್ಧ ವಿಹಾರಗಳಂತೆ ಹಿಂದೂ ದೇವಾಲಯಗಳೂ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ಜನತೆಯ ಮಾನಸಿಕ ಸಂಸ್ಕರಣಕ್ಕೂ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನಕ್ಕೂ ಅವಕಾಶ ಕಲ್ಪಿಸಿದುವು. ಬೌದ್ಧ ವಿಹಾರಗಳು ಕ್ರಿ.ಶ. 500ರ ಸುಮಾರಿಗೆ ಸಾರ್ವತ್ರಿಕವಾಗಿ ಆ ಕಾರ್ಯವನ್ನು ಆರಂಭಿಸಿದ್ದರೆ ಹಿಂದೂ ದೇವಾಲಯಗಳು ಹತ್ತನೆಯ ಶತಮಾನದ ವೇಳೆಗೆ ಆ ಮುಂಬಿನಲ್ಲಿ ಕಾರ್ಯಮುಖವಾದುವು. ಹಾಗೆ ಆರಂಭವಾದ ದೇವಾಲಯದ ವಿದ್ಯಾಪೀಠಗಳಲ್ಲಿ ಕೆಲವು ಪ್ರಸಿದ್ಧ ಉನ್ನತ ಶಿಕ್ಷಣದ ಕೇಂದ್ರಗಳಾಗಿ ಪರಿಣಮಿಸಿದುವು. ಅವು ಅಧಿಕ ಸಂಖ್ಯೆಯಲ್ಲಿ ಅಸ್ತಿತ್ವದಲ್ಲಿದ್ದುದು ದಕ್ಷಿಣ ಭಾರತದಲ್ಲಿ, ಹಾಗೂ ಕರ್ನಾಟಕದಲ್ಲಿ ಮಾತ್ರ. ಆದ್ದರಿಂದ ಅವನ್ನು ಕರ್ನಾಟಕದ ವಿಶಿಷ್ಟ ರೀತಿಯ ಉನ್ನತ ಶಿಕ್ಷಣ ಸಂಸ್ಥೆಗಳೆಂದು ಇತಿಹಾಸಕಾರರು ಪರಿಗಣಿಸಿರುವರು. ದಕ್ಷಿಣ ಆರ್ಕಾಟು ಜಿಲ್ಲೆಯ ಎಣ್ಣಾಯಿರಮ್, ಚಂಗಲ್ಪೇಟೆ ಜಿಲ್ಲೆಯ ತಿರುವರ್‍ರಿಯೂರ್ ಮತ್ತು ತಿರುಮುಕ್ಕೂಡಲ್, ಗುಂಟೂರು ಜಿಲ್ಲೆಯ ಮಲ್ಕಾಪುರಂ ಮುಂತಾದುವು ದಕ್ಷಿಣ ಭಾರತದ ಕರ್ನಾಟಕೇತರ ಪ್ರದೇಶಗಳಲ್ಲಿ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಪ್ರಮುಖ ದೇವಾಲಯದ ವಿದ್ಯಾಪೀಠಗಳು. ಸಂಖ್ಯೆಯಲ್ಲೂ ವೈವಿಧ್ಯದಲ್ಲೂ ಕರ್ನಾಟಕದಲ್ಲಿ ಅವು ಹೆಚ್ಚಾಗಿದ್ದುವು. ಬಂಗಾಳದಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಟೋಲ್ ಎಂಬ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಇದನ್ನು ಹೋಲಿಸುವುದುಂಟು. ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದಿದ್ದ ಕೆಲವು ದೇವಾಲಯದ ವಿದ್ಯಾಪೀಠಗಳನ್ನು ಮುಂದೆ ವಿವರಿಸಿದೆ.

1. ಸಾಲೊಟ್ಟಿಗೆ ದೇವಾಲಯದ ವಿದ್ಯಾಪೀಠ: ಕ್ರಿ.ಶ. 10–11ನೆಯ ಶತಮಾನಗಳಲ್ಲಿ ಬಿಜಾಪುರ ಜಿಲ್ಲೆಯ ಸಾಲೊಟಗಿಯೆಂಬ ಗ್ರಾಮ ಉನ್ನತ ಶಿಕ್ಷಣಕ್ಕೆ ಹೆಸರಾಗಿತ್ತು. ಆ ಗ್ರಾಮಕ್ಕೆ ಹಿಂದೆ ಪಾವಟ್ಟಿಗೆ ಎಂಬ ಹೆಸರಿತ್ತೆಂದೂ ಅಲ್ಲಿ ಹಿಂದಿನಿಂದ ಒಂದು ಸಂಸ್ಕೃತ ಪಾಠಶಾಲೆ ನಡೆದುಕೊಂಡು ಬರುತ್ತಿತ್ತೆಂದೂ ಆ ಕಾರಣದಿಂದ ಶಾಲೆ ಮತ್ತು ಪಾವಟಿಗೆ ಎಂಬೆರಡು ಪದಗಳನ್ನು ಸಂಯೋಜಿಸಿ, ಸ್ವಲ್ಪ ಮಟ್ಟಿಗೆ ರೂಪಾಂತರಗೊಳಿಸಿ ಸಾಲೊಟಗೆ ಎಂಬ ಹೆಸರನ್ನು ಪ್ರಚಾರಕ್ಕೆ ತಂದಿರಬೇಕೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿರುವರು. ಕ್ರಿ.ಶ. 945ರಲ್ಲಿ ರಾಷ್ಟ್ರಕೂಟ ಅರಸ, ಮುಮ್ಮಡಿ ಕೃಷ್ಣನ ಮಂತ್ರಿಯಾಗಿದ್ದ ನಾರಾಯಣನು ಈ ವಿದ್ಯಾಪೀಠವನ್ನು ಕಟ್ಟಿಸಿದನೆಂದೂ ತ್ರೈಪುರುಷ ದೇವಾಲಯದ ಆಶ್ರಯದಲ್ಲಿ ಅದು ನಡೆಯುತ್ತಿತ್ತೆಂದೂ ಅಲ್ಲಿನ ಶಾಸನವೊಂದು ತಿಳಿಸುತ್ತದೆ.10 ಉನ್ನತ ಶಿಕ್ಷಣಕ್ಕೆ ಪ್ರಸಿದ್ಧಿ ಪಡೆದಿದ್ದ ಈ ಸಂಸ್ಥೆ ನಾಡಿನ ಎಲ್ಲ ಕಡೆಯಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿತ್ತು. ಅಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳಿದ್ದರೆಂಬ ಬಗ್ಗೆ ಆ ಶಾಸನದಲ್ಲಿ ಉಲ್ಲೇಖವಿಲ್ಲದಿದ್ದರೂ ಅವರ ವಾಸಕ್ಕಾಗಿ 27 ಮನೆಗಳು ಮೀಸಲಾಗಿದ್ದುವೆಂದು ಸೂಚಿಸಿದೆ. ಆ ಮನೆಗಳ ದೀಪದ ವ್ಯವಸ್ಥೆಗೆಂದು 60 ಎಕರೆ ಭೂಮಿಯೂ ಮುಖ್ಯ ಅಧ್ಯಾಪಕರಿಗೆ ಸಂಭಾವನೆ ನೀಡಲು 250 ಎಕರೆ ಭೂಮಿಯೂ ಕೊಡುಗೆಯಿತ್ತೆಂದೂ ತಿಳಿದು ಬರುತ್ತದೆ.

ತಮ್ಮ ವಿದ್ಯಾಪೀಠದ ಬಗ್ಗೆ ಆ ಊರಿನ ಜನರು ತುಂಬ ಅಭಿಮಾನವನ್ನು ತಳೆದಿದ್ದರು. ಹಬ್ಬ ಹುಣ್ಣಿಮೆಗಳಲ್ಲೂ ಶುಭದಿನಗಳಲ್ಲೂ ಅವರು ಅಧ್ಯಾಪಕರನ್ನೂ ವಿದ್ಯಾರ್ಥಿಗಳನ್ನೂ ಭೋಜನಕ್ಕೆ ಆಹ್ವಾನಿಸುತ್ತಿದ್ದರು. ವಿದ್ಯಾಪೀಠಕ್ಕೆ ವಿವಾಹ ಸಮಯದಲ್ಲಿ 5 ಹಣವನ್ನೂ ಉಪನಯನ ಕಾಲದಲ್ಲಿ $2\frac{1}{2}$ ಹಣವನ್ನೂ ಚೌಲದ ಕಾಲದಲ್ಲಿ $1\frac{1}{4}$ ಹಣವನ್ನೂ ಕಾಣಿಕೆಯಾಗಿ ಸಲ್ಲಿಸಬೇಕೆಂಬ ಕಟ್ಟಳೆ ಆಚರಣೆಯಲ್ಲಿತ್ತು. ಮಂತ್ರಿ, ನಾರಾಯಣ ಪ್ರಥಮದಲ್ಲಿ ಕಟ್ಟಿಸಿಕೊಟ್ಟಿದ್ದ ಕಟ್ಟಡ ಕುಸಿದು ಬಿದ್ದಾಗ ಸ್ಥಳೀಯ ಮುಖಂಡರು ಮತ್ತೆ ಕಟ್ಟಡವನ್ನು ಕಟ್ಟಿಸಿಕೊಟ್ಟರೆಂದು ಆ ಸ್ಥಳದ ಮತ್ತೊಂದು ಶಾಸನ ತಿಳಿಸುತ್ತದೆ.11

---

10. *Epigraphia Indica*, IV, p. 60
11. *Epigraphia Indica*, IV, p. 144

2. ಹರಿಹರೇಶ್ವರ ದೇವಾಲಯದ ವಿದ್ಯಾಪೀಠ: ಹರಿಹರದ ಹರಿಹರೇಶ್ವರ ದೇವಾಲಯದ ಆಶ್ರಯದಲ್ಲಿ ಈ ಉನ್ನತ ಶಿಕ್ಷಣ ಕೇಂದ್ರ ವ್ಯವಸ್ಥೆಗೊಂಡಿತ್ತು. ಅಲ್ಲಿ ಋಗ್ವೇದ, ಯಜುರ್ವೇದ, ವ್ಯಾಕರಣ, ಮೀಮಾಂಸೆ ಮುಂತಾದ ವಿಷಯಗಳನ್ನು ಬೋಧಿಸುತ್ತಿದ್ದರು. ಆಯಾ ವಿಷಯವನ್ನು ಆ ವಿಷಯದಲ್ಲಿ ಪರಿಣತರಾದವರು ಬೋಧಿಸುತ್ತಿದ್ದರು. ಈ ವಿದ್ಯಾಪೀಠದಲ್ಲಿ ಪ್ರಾಥಮಿಕ ಶಿಕ್ಷಣಕ್ಕೂ ಅವಕಾಶವಿತ್ತು. ಆದರೆ ಅದಕ್ಕಾಗಿ ಪ್ರತ್ಯೇಕ ಅಧ್ಯಾಪಕವರ್ಗವಿತ್ತು.

3. ತಾಳಗುಂದದ ಪ್ರಣವೇಶ್ವರ ದೇವಾಲಯದ ವಿದ್ಯಾಪೀಠ: ಹನ್ನೆರಡನೆಯ ಶತಮಾನದ ಮಧ್ಯಕಾಲದಲ್ಲಿ ಶಿಕಾರಿಪುರದ ಬಳಿಯ ತಾಳಗುಂದದಲ್ಲಿರುವ ಪ್ರಣವೇಶ್ವರ ದೇವಾಲಯದಲ್ಲಿ ಚಿಕ್ಕದಾದರೂ ಪ್ರಸಿದ್ಧಿ ಪಡೆದಿದ್ದ ಒಂದು ವಿದ್ಯಾಪೀಠವಿತ್ತು. 48 ಮಂದಿ ವಿದ್ಯಾರ್ಥಿಗಳಿದ್ದ ಈ ಉನ್ನತ ಶಿಕ್ಷಣ ಕೇಂದ್ರದ ಪಠ್ಯಕ್ರಮದಲ್ಲಿ ಯಜುರ್ವೇದ, ಸಾಮವೇದ, ಪ್ರಭಾಕರ, ಮೀಮಾಂಸೆ, ವೇದಾಂತ, ಭಾಷಾಶಾಸ್ತ್ರ, ಕನ್ನಡ ಮುಂತಾದ ವಿಷಯಗಳು ಸೇರಿದ್ದುವು.[12] ಪ್ರತಿಯೊಬ್ಬ ಅಧ್ಯಾಪಕರೂ ಎಂಟು ಮಂದಿ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದರು. ಅವರು ತಾವು ಬೋಧಿಸುವ ವಿಷಯದಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದಿರುತ್ತಿದ್ದರು. ದೇವಾಲಯಕ್ಕೆ ಬರುತ್ತಿದ್ದ ಆದಾಯವನ್ನು ಅಧ್ಯಾಪಕರ ಸಂಭಾವನೆಗೂ ವಿದ್ಯಾರ್ಥಿಗಳ ಊಟಕ್ಕೂ ವಿನಿಯೋಗಿಸಲಾಗುತ್ತಿತ್ತು. ಭೋಜನ ಮಂದಿರದಲ್ಲಿ ಇಬ್ಬರು ಅಡಿಗೆಯ ಭಟ್ಟರಿದ್ದರು. ಈ ವಿದ್ಯಾಲಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೂ ಅವಕಾಶವಿತ್ತು.

4. ಮನಗೋಳಿ ವ್ಯಾಕರಣ ವಿದ್ಯಾಪೀಠ: ಬೆಳಗಾಂ ಜಿಲ್ಲೆಯ ಮನಗೋಳಿಯೆಂಬ ಸ್ಥಳದ ಒಂದು ದೇವಾಲಯ ವ್ಯಾಕರಣ ಪಾಠಶಾಲೆಯನ್ನು ನಡೆಸುತ್ತಿತ್ತು. ಹನ್ನೆರಡನೆಯ ಶತಮಾನದಲ್ಲಿ ಖ್ಯಾತಿಗಳಿಸಿದ್ದ ಈ ವಿದ್ಯಾಲಯ ಕೌಮಾರ್ಯ ವ್ಯಾಕರಣದ ಬೋಧನೆಗೆ ನಾಡಿನಲ್ಲೆಲ್ಲ ಹೆಸರು ಪಡೆದಿತ್ತು. ಅಲ್ಲಿನ ಅಧ್ಯಾಪಕರ ಸಂಭಾವನೆಗಾಗಿ 20 ಎಕರೆ ಭೂಮಿಯನ್ನು ನೀಡಲಾಗಿತ್ತು.[13]

5. ದಕ್ಷಿಣೇಶ್ವರ ದೇವಾಲಯದ ವಿದ್ಯಾಪೀಠ: ಬೆಳಗಾವಿಯ ದಕ್ಷಿಣೇಶ್ವರ ದೇವಾಲಯ ಹನ್ನೆರಡನೆಯ ಶತಮಾನದ ಕೊನೆಯ ಪಾದದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ನಡೆಸುತ್ತಿತ್ತು. ಸಂಸ್ಕೃತ ಜ್ಞಾನಶಾಖೆಗಳಲ್ಲಿ ವಿಶೇಷ ಪಾಂಡಿತ್ಯ ಸಾಧಿಸಿದ್ದ ಅಧ್ಯಾಪಕರು ಪಾಠ ಮಾಡುತ್ತಿದ್ದರು. ಅಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಭೋಜನಕ್ಕೂ ವಸತಿಗೂ ವ್ಯವಸ್ಥೆ ಮಾಡಿತ್ತು.

6. ಭುಜವೇಶ್ವರ ದೇವಾಲಯದ ವಿದ್ಯಾಪೀಠ: ಧಾರವಾಡ ಜಿಲ್ಲೆಯ ಹೆಬ್ಬಾಳಿನ ಭುಜವೇಶ್ವರ ದೇವಾಲಯಕ್ಕೆ ಸೇರಿದಂತೆ ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಉನ್ನತ ಶಿಕ್ಷಣ ಕೇಂದ್ರವೊಂದು ಏರ್ಪಟ್ಟು ಪ್ರವರ್ಧಮಾನ ಸ್ಥಿತಿಗೆ ಬಂದಿತ್ತು. ಈ ಸಂಸ್ಥೆಗೆ ದತ್ತಿಯಾಗಿ ದೊರೆತಿದ್ದ 200 ಎಕರೆ ಭೂಮಿಯಿಂದ ಬರುತ್ತಿದ್ದ ಆದಾಯವನ್ನು ಅಧ್ಯಾಪಕರ ಸಂಭಾವನೆಗೂ ವಿದ್ಯಾರ್ಥಿಗಳ ಊಟ ವಸತಿಗಳಿಗೂ ವಿನಿಯೋಗಿಸಲಾಗುತ್ತಿತ್ತು. ಈ ವಿವರಗಳ ಉಲ್ಲೇಖವನ್ನೊಳಗೊಂಡ ಕ್ರಿ.ಶ. 975ರ ಸ್ಥಳೀಯ ಶಾಸನವೊಂದು[14] ಬೆಳಕಿಗೆ ಬಂದಿದೆ. ಆದರೆ ಅದರಲ್ಲಿ ಅಲ್ಲಿದ್ದ ಅಧ್ಯಾಪಕರ ಸಂಖ್ಯೆ, ವಿದ್ಯಾರ್ಥಿಗಳ ಸಂಖ್ಯೆ, ಅನುಸರಿಸುತ್ತಿದ್ದ ಪಠ್ಯಕ್ರಮ ಮುಂತಾದ ವಿಷಯಗಳ ಬಗ್ಗೆ

---

12. *Epigraphia Carnatica*, VII, Shikaripur No. 185
13. *Epigraphia Indica*, V, p. 22
14. *Epigraphia Indica*, IV, p. 355

ಯಾವ ವಿವರಗಳೂ ಇಲ್ಲ. ಆ ವಿದ್ಯಾಲಯಕ್ಕೆ ನೀಡಿದ್ದ ವಿಸ್ತಾರವಾದ ಭೂಕೊಡುಗೆಯನ್ನು ಆಧಾರ ಮಾಡಿಕೊಳ್ಳುವುದಾದರೆ ಅಲ್ಲಿ ಹತ್ತಾರು ಮಂದಿ ಅಧ್ಯಾಪಕರೂ ನೂರಾರು ಮಂದಿ ವಿದ್ಯಾರ್ಥಿಗಳೂ ಇದ್ದಿರಬೇಕೆಂದು ಊಹಿಸಬಹುದು.

7. ಜಟಿಂಗ ರಾಮೇಶ್ವರದ ವಿದ್ಯಾಪೀಠ: ಚಿತ್ರದುರ್ಗ ಜಿಲ್ಲೆಯ ಗಿರಿಶಿಖರ ವೊಂದರ ಮೇಲೆ ನಿರ್ಮಿತವಾಗಿರುವ ಜಟಿಂಗ ರಾಮೇಶ್ವರ ದೇವಾಲಯಕ್ಕೆ ಸೇರಿದಂತೆ ಹನ್ನೊಂದನೆಯ ಶತಮಾನದಲ್ಲಿ ಉನ್ನತ ಶಿಕ್ಷಣ ಕೇಂದ್ರ ಏರ್ಪಟ್ಟಿತ್ತು. ವಿದ್ಯಾರ್ಥಿಗಳ ಊಟ ವಸತಿಗಳಿಗೂ ಬೋಧನೆಯ ವ್ಯವಸ್ಥೆಗೂ ಅಗತ್ಯವಾಗುವ ವೆಚ್ಚಕ್ಕಾಗಿ 1064ರಲ್ಲಿ ದತ್ತಿ ನೀಡಿರುವ ಅಂಶವನ್ನು ಅಲ್ಲಿನ ಶಾಸನವೊಂದರಲ್ಲಿ15 ಉಲ್ಲೇಖಿಸಿದೆ.

8. ಬಿಜಾಪುರದ ಮೀಮಾಂಸೆ ವಿದ್ಯಾಪೀಠ: ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ಇಲ್ಲಿನ ದೇವಾಲಯವೊಂದರಲ್ಲಿ ಯೋಗೀಶ್ವರ ಪಂಡಿತರೆಂಬುವರು ಈ ಶಿಕ್ಷಣ ಕೇಂದ್ರವನ್ನು ನಡೆಸುತ್ತಿದ್ದರು. ಆ ವಿದ್ಯಾಲಯಕ್ಕೆ 1200 ಎಕರೆ ಭೂಮಿಯನ್ನು ಕೊಡುಗೆಯಾಗಿ ಕೊಟ್ಟಿರುವ ಅಂಶವನ್ನು 1075ರ ಸ್ಥಳೀಯ ಶಾಸನವೊಂದರಲ್ಲಿ ಉಲ್ಲೇಖಿಸಿದೆ.16 ಅದರಿಂದ ಬಂದ ಆದಾಯವನ್ನು ಅಧ್ಯಾಪಕರ ಸಂಭಾವನೆಗೂ ವಿದ್ಯಾರ್ಥಿಗಳ ಮತ್ತು ಅಲ್ಲಿದ್ದ ವಿರಕ್ತರ ಊಟ, ವಸತಿ, ಬಟ್ಟೆಬರೆಗಳಿಗೂ ವಿನಿಯೋಗಿಸಲಾಗುತ್ತಿತ್ತು.

9. ಕೂಡಲಸಂಗಮ ದೇವಾಲಯದ ವಿದ್ಯಾಪೀಠ: ಬಿಜಾಪುರ ಜಿಲ್ಲೆಯ ಮಲಪ್ರಭಾ ತೀರದ ದೇವಾಲಯದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಖ್ಯಾತಿವೆತ್ತ ಒಂದು ವಿದ್ಯಾಸಂಸ್ಥೆಯಿತ್ತು. ಜಾತವೇದ ಮುನಿಗಳು ಅದರ ಅಧ್ಯಕ್ಷರಾಗಿದ್ದರು. ಬಸವಣ್ಣ, ಚನ್ನಬಸವಣ್ಣ, ಅಕ್ಕನಾಗಮ್ಮ, ಮುಂತಾದ ಪ್ರಸಿದ್ಧ ವ್ಯಕ್ತಿಗಳು ಅಲ್ಲಿ ವಿದ್ಯಾರ್ಥಿಗಳಾಗಿದ್ದರು.17

ಮೇಲೆ ವಿವರಿಸಿರುವ ದೇವಾಲಯದ ವಿದ್ಯಾಪೀಠಗಳು ಕರ್ನಾಟಕದಲ್ಲಿ ಖ್ಯಾತಿ ಪಡೆದಿದ್ದ ಕೆಲವು ಕೇಂದ್ರಗಳು ಮಾತ್ರ. ಅವುಗಳಂತೆ ಇತರ ಸಂಸ್ಥೆಗಳೂ ಇದ್ದಿರಬಹುದಾದರೂ ಅವುಗಳ ಬಗ್ಗೆ ಸ್ಪಷ್ಟ ವಿವರಗಳು ದೊರಕಿಲ್ಲ. ಹತ್ತನೆಯ ಶತಮಾನದಲ್ಲಿ ಆರಂಭವಾದ ಉನ್ನತ ಶಿಕ್ಷಣ ಸಂಸ್ಥೆಗಳು ಹೊಯ್ಸಳರ ಕಾಲದಲ್ಲೂ ಅಭಿವೃದ್ಧಿ ಸ್ಥಿತಿಯಲ್ಲಿದ್ದು, ತಮ್ಮ ಶಿಕ್ಷಣಕಾರ್ಯವನ್ನು ಮುಂದುವರಿಸಿಕೊಂಡು ಬಂದುವು. ಆ ಕಾಲದಲ್ಲಿ ಮಡಿಕಸಿರಾ ತಾಲ್ಲೋಕಿನ ನೊಣಂಬೇಶ್ವರ ದೇವಾಲಯದ ವಿದ್ಯಾಪೀಠ ಉಚ್ಛ್ರಾಯ ಸ್ಥಿತಿಗೇರಿ ವಿಶೇಷ ಖ್ಯಾತಿಗಳಿಸಿತ್ತು. ಶಿವಮೊಗ್ಗ ಜಿಲ್ಲೆಯಲ್ಲಿ ಕೆಳ್ಳಂಗೆರೆ ಮುಂತಾದ ನೂತನ ಕೇಂದ್ರಗಳೂ ಅಸ್ತಿತ್ವಕ್ಕೆ ಬಂದಿದ್ದುವು. ಬಳ್ಳಿಗಾವೆಯಲ್ಲಿ ಶಿವ, ವಿಷ್ಣು, ಬ್ರಹ್ಮ, ಜಿನ, ಬುದ್ಧ– ಈ ಐದು ದೇವತೆಗಳಿಗೆ ಸಮರ್ಪಿತವಾದ ಐದು ಮಠಗಳೂ ಅನೇಕ ಬ್ರಹ್ಮಪುರಿಗಳೂ ವಿಹಾರಗಳೂ ಅಸ್ತಿತ್ವಕ್ಕೆ ಬಂದು ಶಿಕ್ಷಣ ಪ್ರಸಾರ ಮಾಡುತ್ತಿದ್ದುವು.18 ಜೈನಮತದ ಪ್ರಭಾವ ಅಂದಿಗಾಗಲೆ ಕುಂದುತ್ತ ಬರುತ್ತಿದ್ದರೂ ಹೊಯ್ಸಳರ ಆಳ್ವಿಕೆಯ ಕೊನೆಯ ವರೆಗೂ ಆ ಮತದ ಶಿಕ್ಷಣ ಸಂಸ್ಥೆಗಳು ತಮ್ಮ ಶಿಕ್ಷಣ ಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಿದ್ದುವು. ಹೊಯ್ಸಳ ಅರಸರು ಓಂದೂ ಮತ್ತು ಜೈನ ಶಿಕ್ಷಣ ಸಂಸ್ಥೆಗಳೆರಡಕ್ಕೂ ಪ್ರೋತ್ಸಾಹ ನೀಡುತ್ತಿದ್ದರು. ಈ ಕಾಲದ ಬಹುತೇಕ ಉನ್ನತ ಶಿಕ್ಷಣ ಸಂಸ್ಥೆಗಳು ಜಾತಿಮತಗಳ ಭೇದವಿಲ್ಲದೆ ಎಲ್ಲರಿಗೂ ಪ್ರವೇಶಾವಕಾಶ ನೀಡುತ್ತಿದ್ದುದು ಒಂದು ವಿಶೇಷ ಲಕ್ಷಣವಾಗಿತ್ತು. ಉನ್ನತ ಶಿಕ್ಷಣಕ್ಕೆ ನಾಡಿನಲ್ಲಿ ಪ್ರೋತ್ಸಾಹವಿದ್ದುದನ್ನು ಕಂಡ ಜನತೆ ಜೀವನದಲ್ಲಿ

---

15. *Epigraphia Indica*, IV, p. 214
16. *Indian Antiquary*, X, pp. 129-31
17. ಕನ್ನಡ ವಿಶ್ವಕೋಶ, ಸಂ. IV, ಪು. 936
18. A Balligave Inscription of 1129 A.D.

ಅದರ ಪ್ರಾಮುಖ್ಯವನ್ನು ಮನಗಂಡುಕೊಂಡಿದ್ದರು. ತಮ್ಮ ಮಕ್ಕಳೂ ಅಂಥ ಶಿಕ್ಷಣವನ್ನು ಪಡೆದು ಜೀವನದಲ್ಲಿ ಮುನ್ನಡೆ ಸಾಧಿಸಬೇಕೆಂಬ ಆಕಾಂಕ್ಷೆಯನ್ನು ತಳೆಯುತ್ತ ಬಂದರು. ನಗರಗಳಂತೆ ಗ್ರಾಮಾಂತರ ಪ್ರದೇಶದಲ್ಲೂ ಪ್ರಾಥಮಿಕ ಶಿಕ್ಷಣಕ್ಕಾಗಿ ಪಾಠಶಾಲೆಗಳು ಆರಂಭವಾಗತೊಡಗಿದುವು. ಸಾರ್ವತ್ರಿಕ ಮೂಲಶಿಕ್ಷಣದ ಪ್ರಚಾರಕ್ಕೆ ಕರ್ನಾಟಕದಲ್ಲಿ ಅಂದಿನಿಂದಲೇ ತಳಹದಿ ರೂಪುಗೊಳ್ಳುತ್ತ ಬಂತೆಂದು ಹೇಳಬಹುದು. ಬೌದ್ಧಮತದ ಪ್ರಭಾವವೂ ಕುಂದುತ್ತ ಬರುತ್ತಿದ್ದರೂ ಆ ಮತದ ಶಿಕ್ಷಣ ಸಂಸ್ಥೆಗಳು ಹನ್ನೊಂದನೆಯ ಶತಮಾನದ ಕೊನೆಯ ವರೆಗೂ ತಮ್ಮ ಶಿಕ್ಷಣ ಸೇವೆಯನ್ನು ಮುಂದುವರಿಸಿಕೊಂಡು ಬಂದುವು. ಧಾರವಾಡ ಜಿಲ್ಲೆಯ ಡಂಬಳ್ ಎಂಬಲ್ಲಿ ದೊರೆತಿರುವ ಕ್ರಿ.ಶ. 1095ರ ಒಂದು ಶಾಸನದಲ್ಲಿ ಹದಿನಾರು ಮಂದಿ ವರ್ತಕರು ಅಲ್ಲಿ ಒಂದು ವಿಹಾರವನ್ನೂ ಬೌದ್ಧ ದೇವಾಲಯವನ್ನೂ ಕಟ್ಟಿಸಿದರೆಂಬ ಉಲ್ಲೇಖವಿದೆ. ಇದೇ ಕರ್ನಾಟಕದಲ್ಲಿ ನಿರ್ಮಾಣವಾದ ಕೊನೆಯ ವಿಹಾರವೆಂದು ತೋರುತ್ತದೆ.

ಪಠ್ಯಕ್ರಮ

ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಸಾಮಾನ್ಯವಾಗಿ, ವ್ಯಾಕರಣ, ಪುರಾಣ, ವೇದ, ಆಗಮ, ಕಾವ್ಯ, ನಾಟಕ—ಇವು ಸೇರಿರುತ್ತಿದ್ದುವು. ಆದರೆ ಒಂದೊಂದು ಕೇಂದ್ರವೂ ತನ್ನದೇ ಆದ ವಿಶೇಷ ವಿಷಯಗಳ ಬೋಧನೆಗೆ ಅವಕಾಶ ಕಲ್ಪಿಸಿಕೊಂಡಿತ್ತು. ಕೋಡಿಮಠದಲ್ಲಿ ಷಡ್ದರ್ಶನಗಳೂ, ಲಾಕುಲಗಳೂ ಯೋಗಸೂತ್ರಗಳೂ ಬೌದ್ಧದರ್ಶನಗಳೂ ವಿಶೇಷ ಅಧ್ಯಯನ ವಿಷಯಗಳಾಗಿದ್ದುವು. ಕುಪ್ಪತ್ತೂರು ಮಠ ವಾತ್ಸ್ಯಾಯನನ ಕಾಮಶಾಸ್ತ್ರದ ಬೋಧನೆಯಲ್ಲಿ ವಿಶೇಷ ಖ್ಯಾತಿ ಗಳಿಸಿತ್ತು. ಸರ್ವಜ್ಞಪುರದ ಬ್ರಹ್ಮಪುರಿ ಭಾಷಾಶಾಸ್ತ್ರದ ಬೋಧನೆಗೆ ಹೆಸರು ಪಡೆದಿತ್ತು. ಉಮ್ಮಚಿಗೆಯ ಅಗ್ರಹಾರ ವ್ಯಾಕರಣ, ಛಂದಸ್ಸು, ಕಾವ್ಯರಚನೆ—ಇವುಗಳ ಶಿಕ್ಷಣಕ್ಕೆ ವಿಶಿಷ್ಟ ಸಂಸ್ಥೆಯೆನಿಸಿತ್ತು. ನಾಗಾಯಿಮಠ ಮನುಧರ್ಮಶಾಸ್ತ್ರ, ಶುಕ್ರಶಾಸ್ತ್ರ ಮತ್ತು ವ್ಯಾಸರ ಕೃತಿಗಳ ಬೋಧನೆಯಲ್ಲಿ ಖ್ಯಾತಿಗಳಿಸಿತ್ತು.

ವೃತ್ತಿ ಶಿಕ್ಷಣ

ಪ್ರಾಚೀನ ಕರ್ನಾಟಕದಲ್ಲಿ ವೃತ್ತಿ ಶಿಕ್ಷಣಕ್ಕಿದ್ದ ಸೌಲಭ್ಯದ ಬಗ್ಗೆ ಅಷ್ಟಾಗಿ ವಿವರಗಳು ದೊರಕಿಲ್ಲ. ಸ್ಮೃತಿಗಳೂ, ಸಾಹಿತ್ಯಕೃತಿಗಳೂ ವಿದೇಶೀ ಪ್ರವಾಸಿಗಳ ವರದಿಗಳೂ ಮುಖ್ಯವಾಗಿ ಸಾಂಸ್ಕೃತಿಕ ಶಿಕ್ಷಣವನ್ನು ಕುರಿತು ವಿವರಿಸಿವೆ. ಸಮಾಜದ ಅವಶ್ಯಕತೆಗಳನ್ನು ಪೂರೈಸುವ ವೃತ್ತಿಗಳಲ್ಲಿ ತೊಡಗಿದ್ದವರಲ್ಲಿ ಬಹುತೇಕ ಮಂದಿ ಬ್ರಾಹ್ಮಣೇತರರಾಗಿದ್ದರು. ಅವರಲ್ಲಿ ಕ್ಷತ್ರಿಯರೂ ವೈಶ್ಯರೂ ಅಧಿಕ ಸಂಖ್ಯೆಯಲ್ಲಿರುತ್ತಿದ್ದರು. ವೈದ್ಯವೃತ್ತಿಯಂಥ ಜನಹಿತ ವೃತ್ತಿಗಳನ್ನು ಎಲ್ಲ ಮತದವರೂ ಅನುಸರಿಸುತ್ತಿದ್ದರು.ಬ್ರಾಹ್ಮಣರಲ್ಲಿ ಕೆಲವರು ಇತರ ಉಪಯುಕ್ತ ಕಸಬು ಕಲೆಗಳನ್ನೂ ಕುಶಲವೃತ್ತಿಗಳನ್ನೂ ಅನುಸರಿಸುತ್ತಿದ್ದರು. ಕ್ರಿ.ಶ. ಎರಡನೆಯ ಶತಮಾನದ ವೇಳೆಗೆ ಜಾತಿ ಪದ್ಧತಿ ಬಿಗಿಗೊಂಡು ವೃತ್ತಿಗಳಿಗೂ ಜಾತಿಗಳಿಗೂ ಸಂಬಂಧ ಕಲ್ಪನೆಯಾದಂತೆ ವೃತ್ತಿಗಳನ್ನು ವಂಶಪಾರಂಪರ್ಯವಾಗಿ ಅನುಸರಿಸುವ ಸಂಪ್ರದಾಯ ದೃಢಗೊಳ್ಳುತ್ತ ಬಂತು. ಕಿರಿಯರು ಕುಟುಂಬದ ಹಿರಿಯರಿಂದ ಮನೆತನದ ವೃತ್ತಿಯನ್ನು ಕಲಿಯುವುದು ಅನಿವಾರ್ಯವಾಯಿತು. ಹಾಗೂ ಹಿರಿಯರ ಜೊತೆಯಲ್ಲಿ ವೃತ್ತಿಯಲ್ಲಿ ತೊಡಗಿ ತಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳುವ ಅವಕಾಶವೂ ಇತ್ತು. ಕ್ರಿ.ಶ. ಎಂಟನೆಯ ಶತಮಾನದ ವೇಳೆಗೆ ಲಲಿತ ಕಲೆಗಳೂ ಉಪಯುಕ್ತ, ಹಾಗೂ ಔದ್ಯೋಗಿಕ ಕಲೆಗಳೂ ವಿವಿಧ ಶಿಲ್ಪಗಳೂ ಉನ್ನತ ಮಟ್ಟವನ್ನು ಮುಟ್ಟಿದ್ದುವು. ವೈದ್ಯ, ವಾಸ್ತುಶಿಲ್ಪ, ಗಣಿಕೈಗಾರಿಕೆ, ಲೋಹವಿದ್ಯೆ, ನೌಕಾನಿರ್ಮಾಣ ಮುಂತಾದ ವೃತ್ತಿಗಳಲ್ಲಿ ನಾಡು ಗಣನೀಯವಾಗಿ ಮುನ್ನಡೆ ಸಾಧಿಸಿತ್ತು. ಆದರೂ ವೈದ್ಯವಿದ್ಯೆಯನ್ನುಳಿದು ಮಿಕ್ಕ ವೃತ್ತಿಗಳಿಗೆ ವ್ಯವಸ್ಥಿತ ಶಿಕ್ಷಣವನ್ನು ನೀಡುತ್ತಿದ್ದ ಸಂಸ್ಥೆಗಳ ಬಗ್ಗೆ ಕ್ರಿ.ಶ. ಹತ್ತನೆಯ ಶತಮಾನದ ವರೆಗೂ ಯಾವ ಆಧಾರಗಳೂ ದೊರೆತಿಲ್ಲ. ಆ ಕಾಲದ ಬೌದ್ಧ ಸಂಘಾರಾಮಗಳು ವೈದ್ಯಶಾಸ್ತ್ರ, ಯಂತ್ರಶಾಸ್ತ್ರ ಮುಂತಾದ ಉಪಯುಕ್ತ ವೃತ್ತಿಗಳನ್ನು ಬೋಧಿಸುತ್ತಿದ್ದುವು. ಅವುಗಳ ಮೇಲ್ಪಂಕ್ತಿಯನ್ನು ದೇವಾಲಯದ ವಿದ್ಯಾಪೀಠಗಳೂ ಅನುಕರಿಸಿರುವುದು ಸಾಧ್ಯ. ಮುಖ್ಯವಾಗಿ ವೈದ್ಯವಿದ್ಯೆಯನ್ನು ಬೋಧಿಸುವುದರಲ್ಲಿ ಅವು ಹೆಚ್ಚಿನ ಆಸಕ್ತಿ ತೋರಿ

ರುವುದು ಕಂಡು ಬರುತ್ತದೆ. ಆದ್ದರಿಂದಲೆ ಆ ಸುಮಾರಿನಲ್ಲಿ ಸಂಸ್ಕೃತದಲ್ಲೂ ಕನ್ನಡದಲ್ಲೂ ಅನೇಕ ವೈದ್ಯಶಾಸ್ತ್ರದ ಗ್ರಂಥಗಳು ರಚನೆಯಾಗಿರುವುದು. ಸಾತವಾಹನರ ಕಾಲದಲ್ಲಿದ್ದ, ರಸರತ್ನಾಕರ ಮತ್ತು ಲೋಹಶಾಸ್ತ್ರಗಳ ಕರ್ತೃವಾದ ನಾಗಾರ್ಜುನನು ಶ್ರೀಶೈಲ ಶಿಖರದ ಮೇಲೆ ಸಂಶೋಧನೆಯ ಪ್ರಯೋಗಾಲಯವೊಂದನ್ನು ಸ್ಥಾಪಿಸಿದ್ದನೆಂದು ತಿಳಿದು ಬರುತ್ತದೆ. ಅಲ್ಲಿ ಹಲವಾರು ವಿದ್ಯಾರ್ಥಿಗಳೂ ಇದ್ದು, ಶಿಕ್ಷಣ ಪಡೆಯುತ್ತಿದ್ದುದು ಸಂಭವವೆನಿಸುತ್ತದೆ. ಬನ್ನೂರಿನ ಗಂಗರಾಜ ಶ್ರೀಪುರುಷನ ಮಗನಾದ ಸೈಗೊಟ್ಟ ಶಿವಮಾರನು (ಕ್ರಿ.ಶ. 800) ಗಜಾಷ್ಟಕವೆಂಬ ಪಶುವೈದ್ಯವನ್ನು ಕುರಿತ ಗ್ರಂಥವನ್ನು ರಚಿಸಿರುವನು. ಇದು ಕನ್ನಡ ಭಾಷೆಯಲ್ಲಿ ರಚನೆಯಾಗಿರುವ ಮೊಟ್ಟಮೊದಲ ವೈಜ್ಞಾನಿಕ ಗ್ರಂಥವೆಂದು ಪರಿಗಣಿತವಾಗಿದೆ. ನೃಪತುಂಗನ ಕಾಲದ ಪ್ರಸಿದ್ಧ ಜೈನಲೇಖಕ ಉಗ್ರಾದಿತ್ಯ ಜೈನವೈದ್ಯ ಕಲ್ಯಾಣಕಾರಕ ಎಂಬ ಮತ್ತೊಂದು ವೈದ್ಯಶಾಸ್ತ್ರ ಕೃತಿಯನ್ನು ರಚಿಸಿರುವನು. ಚಂದ್ರರಾಜನ ಮದನ ತಿಲಕ (ಕ್ರಿ.ಶ. 1079), ಕೀರ್ತಿವರ್ಮನ ಗೋವೈದ್ಯ (ಕ್ರಿ.ಶ. 1125), ಸೋಮನಾಥನ ಕರ್ನಾಟಕ ಕಲ್ಯಾಣಕಾರಕ (ಕ್ರಿ.ಶ. 1150), ದೇವೇಂದ್ರ ಮುನಿಯ ಬಾಲಗ್ರಹ ಚಿಕಿತ್ಸೆ (ಕ್ರಿ.ಶ. 1200)–ಇವು ಆ ಕಾಲಾವಧಿಯಲ್ಲಿ ರಚನೆಯಾದ ಹಲವು ಪ್ರಮುಖ ವೈದ್ಯಕೀಯ ಗ್ರಂಥಗಳು. ದೇವಾಲಯದ ವಿದ್ಯಾಪೀಠಗಳಲ್ಲೂ ಇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಇವನ್ನು ಪಠ್ಯಗ್ರಂಥಗಳಾಗಿ ಬಳಸುತ್ತಿದ್ದರು.

ದೇಶದಲ್ಲಿ ಆಗಾಗ ಕದನಗಳು ನಡೆಯುತ್ತಿದ್ದುದರಿಂದ ಆಳರಸರು ಯುದ್ಧ ಕಾರ್ಯಾಚರಣೆಗೆ ಸಂಬಂಧಿಸಿದ ಸೇನಾಶಿಕ್ಷಣ, ಮರಗೆಲಸ, ಲೋಹದ ಕೆಲಸ ಮುಂತಾದ ವೃತ್ತಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಪ್ರತಿಗ್ರಾಮದಲ್ಲೂ ಯುವಜನಕ್ಕೆ ಸೈನಿಕ ಶಿಕ್ಷಣವೀಯಲು ಕೆಲವು ಅನುವಂಶೀಯ ಕುಟುಂಬಗಳಿದ್ದುವು. ವೃತ್ತಿಗಳು ಅನುವಂಶೀಯವಾಗಿದ್ದುದರಿಂದ ಇತರ ವೃತ್ತಿಗಳಿಗೂ ಆಯಾ ಕುಟುಂಬದ ಹಿರಿಯರು ತಮ್ಮ ಮಕ್ಕಳಿಗೂ ಬಂಧುಗಳ ಮಕ್ಕಳಿಗೂ ಮನೆಯಲ್ಲೊ, ಕಾರ್ಯಕ್ಷೇತ್ರದಲ್ಲೊ ಶಿಕ್ಷಣವೀಯುತ್ತಿದ್ದರು. ಕದಂಬರ ಕಾಲದಲ್ಲೂ ಅನಂತರವೂ ನಾಡಿನಲ್ಲಿ ಭವ್ಯದೇವಾಲಯಗಳು ನಿರ್ಮಾಣವಾಗಿವೆ. ಅದಕ್ಕೆ ಕಾರಣರಾದ ಕುಶಲ ಶಿಲ್ಪಿಗಳಿಗೆ ಹಿರಿಯ ಕಲಾವಿದರು ಶಿಕ್ಷಣವೀಯುತ್ತಿದ್ದ ಅನುವಂಶೀಯ ಪದ್ಧತಿಯನ್ನು ಉಮೇದುವಾರಿ ಶಿಕ್ಷಣ ಪದ್ಧತಿಗೆ ಹೋಲಿಸಬಹುದು. ಶಿಲ್ಪಕಲೆಗೆ ಸಂಬಂಧಿಸಿದ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆ, ವರ್ಣಕಲೆ, ಯೋಜನೆ (ನಕಾಸೆ), ಗಣಿತಶಾಸ್ತ್ರ, ಪುರಾಣ ಮುಂತಾದ ಸಂಬಂಧಿಸಿದ ವಿಷಯಗಳಲ್ಲೂ ಶಿಕ್ಷಣ ಅಂಥ ಉಮೇದುವಾರಿ ಪದ್ಧತಿಯಿಂದಲೆ ದೊರಕುತ್ತಿದ್ದಿರಬೇಕು. ಕೆಲಸ ನಡೆಯುತ್ತಿದ್ದಾಗ ಗುರುಗಳೊಡನೆ ಕೆಲಸ ಮಾಡುತ್ತಿದ್ದ ಶಿಷ್ಯರೂ ಕ್ರಮಕ್ರಮವಾಗಿ ಆ ವಿದ್ಯೆಯನ್ನು ಕಲಿತು, ಅನಂತರ ಸ್ವತಂತ್ರವಾಗಿ ವೃತ್ತಿ ನಿರತರಾಗುತ್ತಿದ್ದ ಪದ್ಧತಿಯೂ ಇತ್ತು.

ಸಂಗೀತ, ನೃತ್ಯ, ಚಿತ್ರಲೇಖನ ಮುಂತಾದ ಲಲಿತಕಲೆಗಳ ಶಿಕ್ಷಣಕ್ಕಾಗಿ ರಾಜರೂ ಶ್ರೀಮಂತರೂ ತಮ್ಮ ಮನೆಗಳಲ್ಲಿ ಅನುವಂಶೀಯ ಕಲಾವಿದರನ್ನು ನೇಮಿಸಿಕೊಂಡು ಶಿಕ್ಷಣ ಏರ್ಪಡಿಸಿಕೊಳ್ಳುವ ಪದ್ಧತಿಯಿತ್ತು. ವಿದ್ಯಾಪೀಠಗಳಲ್ಲಿ ವೈದ್ಯವಿದ್ಯೆಯ ಶಿಕ್ಷಣವನ್ನು ವ್ಯವಸ್ಥೆಗೊಳಿಸುವ ಮುಂಚೆ ಅದನ್ನೂ ಅನುವಂಶೀಯ ಪದ್ಧತಿಯಲ್ಲೆ ಕಲಿಯುತ್ತಿದ್ದರು. ವಿದ್ಯಾಪೀಠಗಳು ವೈದ್ಯ ವಿದ್ಯೆಯ ಶಿಕ್ಷಣವನ್ನು ಆರಂಭಿಸಿದ ಮೇಲೆ ಅದರ ಜೊತೆಯಲ್ಲೇ ಅನುವಂಶೀಯ ಶಿಕ್ಷಣ ಪದ್ಧತಿಯೂ ಮುಂದುವರಿದುಕೊಂಡೇ ಬಂತು. ಕೆಲವು ಉದ್ಯೋಗ ಸಂಸ್ಥೆಗಳು ತಮ್ಮ ಉದ್ಯೋಗಿಗಳಿಗೆ ಸಂಬಂಧಿಸಿದ ಶಿಕ್ಷಣವೀಯಲು ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದುವು.

ಮಹಿಳೆಯರ ಉನ್ನತ ಶಿಕ್ಷಣ

ಮಹಿಳೆಯರ ಉನ್ನತ ಶಿಕ್ಷಣಕ್ಕೆ ಮೀಸಲಾಗಿದ್ದ ಶಿಕ್ಷಣ ಸಂಸ್ಥೆಗಳು ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ಕಂಡುಬರುವುದಿಲ್ಲ; ಮಹಿಳೆಯರಿಗೆ ಪ್ರವೇಶಾವಕಾಶ ಕಲ್ಪಿಸಿದ್ದ ಸಂಸ್ಥೆಗಳೂ ಅಷ್ಟಾಗಿ ಕಂಡು ಬರುವುದಿಲ್ಲ. ಅನುಭವ ಮಂಟಪ, ಕೂಡಲಸಂಗಮದ ವಿದ್ಯಾಪೀಠ, ಬೌದ್ಧ ವಿಹಾರ ಮುಂತಾದ ಕೆಲವು ಸಂಸ್ಥೆಗಳಲ್ಲಿ ಆ ಸೌಲಭ್ಯವಿದ್ದುದು ಕಂಡುಬರುತ್ತದೆ. ಮಹಿಳೆಯರಿಗೆ ಉನ್ನತ ಶಿಕ್ಷಣ ಸೌಲಭ್ಯ ಇಷ್ಟು ಸೀಮಿತವಾಗಿದ್ದರೂ ಆಡಳಿತ, ತತ್ವಶಾಸ್ತ್ರ, ಸಾಹಿತ್ಯ ರಚನೆ, ಲಲಿತಕಲೆ ಮುಂತಾದ ಕ್ಷೇತ್ರಗಳಲ್ಲಿ

ಮಹಿಳೆಯರು ನೈಪುಣ್ಯ ಪ್ರದರ್ಶಿಸಿರುವ ನಿದರ್ಶನಗಳು ಇತಿಹಾಸದಲ್ಲಿ ಬೇಕಾದ ಹಾಗೆ ಸಿಕ್ಕುತ್ತವೆ. ಅಂಥವರು ಬಹುಮಟ್ಟಿಗೆ ಅರಸುಮನೆತನಗಳಿಗೊ ಶ್ರೀಮಂತ ಕುಟುಂಬಗಳಿಗೊ ಸೇರಿದ್ದವರು. ಸ್ಮೃತಿ ಮತ್ತು ಪುರಾಣಗಳ (ಕ್ರಿ.ಪೂ. 200–1200) ಕಾಲಕ್ಕೆ ಹಿಂದೆ ಅವರ ಭಾಗಕ್ಕಿದ್ದ ಉಪನಯನ ಸಂಸ್ಕಾರವೂ ತಪ್ಪಿ ಹೋಗಿ ಬಾಲ್ಯವಿವಾಹ ಆಚರಣೆಗೆ ಬಂದದ್ದರಿಂದ ಪ್ರಾಥಮಿಕ ಶಿಕ್ಷಣ ಪಡೆಯುವುದಕ್ಕೂ ಅವಕಾಶವಿಲ್ಲದಂತಾಗಿತ್ತು.[19] ಆದ್ದರಿಂದ ಮಹಿಳೆಯರಿಗೆ ಉನ್ನತ ಶಿಕ್ಷಣ ದೊರಕುವ ಸಂಭವವೇ ಇಲ್ಲವಾಗಿತ್ತು. ಎಲ್ಲೋ ಕೆಲವು ಶ್ರೀಮಂತ ಕುಟುಂಬಗಳೂ ಅರಸುಮನೆತನಗಳೂ ತಮ್ಮ ಹೆಣ್ಣು ಮಕ್ಕಳಿಗೆ ವಿವಾಹಾನಂತರವೂ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದುವು. ಆ ಶಿಕ್ಷಣ ಮುಖ್ಯವಾಗಿ ಸಾಹಿತ್ಯ ಮತ್ತು ಲಲಿತಕಲೆಗಳ ಅಭ್ಯಾಸದ ರೂಪದಲ್ಲಿರುತ್ತಿತ್ತು. ವಾತ್ಸ್ಯಾಯನನು ಸುಸಂಸ್ಕೃತ ಮಹಿಳೆಯರು ಕಲಿತಿರಬೇಕಾದ ಕೆಲವು ಕಲೆಗಳನ್ನು ಪಟ್ಟಿಮಾಡಿರುವನು. ಹಾಡುಗಾರಿಕೆ, ವಾದ್ಯ ಸಂಗೀತ, ನೃತ್ಯ, ಹೂಮಾಲೆ ಕಟ್ಟುವಿಕೆ, ವರ್ಣಕಲೆ, ಗೃಹಾಲಂಕರಣ, ಅಂಗರಾಗಾದಿ ವೈಯಕ್ತಿಕ ಅಲಂಕರಣ ಮುಂತಾದುವು ಅದರಲ್ಲಿ ಸೇರಿವೆ.[20] ಆ ಕಲೆಗಳಲ್ಲಿ ವಿಶೇಷ ಶಿಕ್ಷಣಕ್ಕಾಗಿ ಅಧ್ಯಾಪಕರನ್ನು ನೇಮಿಸಿಕೊಳ್ಳುವುದು ಶ್ರೀಮಂತ ಕುಟುಂಬಗಳಲ್ಲೂ ಅರಮನೆಗಳಲ್ಲೂ ಆಚರಣೆಯಲ್ಲಿತ್ತು. ಆ ಅಧ್ಯಾಪಕರು ಬಹುಮಟ್ಟಿಗೆ ಅನುವಂಶೀಯ ಕುಟುಂಬಗಳವರಾಗಿರುತ್ತಿದ್ದರು. ದೇವದಾಸಿ ಕುಟುಂಬದ ಮಹಿಳೆಯರು ಹಾಡುಗಾರಿಕೆ, ವಾದ್ಯ ಸಂಗೀತ, ನೃತ್ಯ, ಅಭಿನಯ ಮುಂತಾದ ಲಲಿತಕಲೆಗಳಲ್ಲಿ ವಿಶೇಷ ನೈಪುಣ್ಯ ಪಡೆದಿರುತ್ತಿದ್ದರು. ಅವರಿಗೆ ಅವರವರ ಕುಟುಂಬದಲ್ಲೆ ವೃತ್ತಿ ಶಿಕ್ಷಣ ದೊರಕುತ್ತಿತ್ತು. ರಾಜಾಸ್ಥಾನಗಳಲ್ಲೂ ದೇವಸ್ಥಾನ ಮತ್ತು ಮಠಗಳಲ್ಲೂ ಅವರಿಗೆ ಮಾನ್ಯತೆಯಿದ್ದುದರಿಂದ ಆ ಕಲೆಗಳ ವ್ಯಾಸಂಗಕ್ಕೆ ಪ್ರೋತ್ಸಾಹ ದೊರಕುತ್ತಿತ್ತು. ಅರಸರ ಮತ್ತು ಮಾಂಡಲೀಕರ ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿಗೆ ಲಲಿತ ಕಲೆಗಳ ಜೊತೆಗೆ ಆಡಳಿತ ಮತ್ತು ಯುದ್ಧ ಕಾರ್ಯಾಚರಣೆಗಳಲ್ಲೂ ಶಿಕ್ಷಣ ದೊರಕುತ್ತಿತ್ತು. ಕ್ರಿ.ಶ. ಏಳನೆಯ ಶತಮಾನದಲ್ಲಿ ಬಾದಾಮಿ ಚಾಲುಕ್ಯ ವಂಶದ ಮೊದಲನೆಯ ವಿಕ್ರಮಾದಿತ್ಯನ ಹಿರಿಯಣ್ಣನ ಪಟ್ಟದ ರಾಣಿ, ವಿಜಯ ಭಟ್ಟಾರಿಕೆ ರಾಜ್ಯಪಾಲಿಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಳು.[21] ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮಹಿಳೆಯರನೇಕರು ರಾಜ್ಯಪಾಲಿಕೆಯರಾಗಿದ್ದರು. ಕ್ರಿ.ಶ. 1053ರಲ್ಲಿ ಸೋಮೇಶ್ವರನ ಮಡದಿ ಮೈಲಾದೇವಿಯು ಬನವಾಸಿ ಪ್ರಾಂತ್ಯವನ್ನು ಆಳುತ್ತಿದ್ದಳು.[22] ಮೂರನೆಯ ಜಯಸಿಂಹನ ಸೋದರಿ, ಅಕ್ಕಾದೇವಿಯು ಕ್ರಿ.ಶ. 1022ರಲ್ಲಿ ಕಿಸ್ಸುಕಾಡು 70ರ ತಹಸೀಲನ್ನು ಆಳುತ್ತಿದ್ದಳು. ವಿಜಯಾದಿತ್ಯನ ಹಿರಿಯ ಸೋದರಿ, ಕುಂಕುಮದೇವಿಯು ಕ್ರಿ.ಶ. 1077ರಲ್ಲಿ ಪುರಿಗೆರೆ 300ರ ಆಡಳಿತ ನಡೆಸುತ್ತಿದ್ದಳು.[23] ಆರನೆಯ ವಿಕ್ರಮಾದಿತ್ಯನ ಜ್ಯೇಷ್ಠಪತ್ನಿ, ಲಕ್ಷ್ಮೀದೇವಿ ಕ್ರಿ.ಶ. 1095ರಲ್ಲಿ ಹದಿನೆಂಟು ಅಗ್ರಹಾರಗಳ ಆಡಳಿತ ನಿರ್ವಹಿಸುತ್ತಿದ್ದಳು. ಅವರಿಗೆಲ್ಲ ಆಡಳಿತ ನಿರ್ವಹಣೆಯಲ್ಲೂ ತುರ್ತು ಪರಿಸ್ಥಿತಿಯಲ್ಲಿ ನಡೆದುಕೊಳ್ಳಬೇಕಾದ ವಿಧಾನಗಳಲ್ಲೂ ಸೈನಿಕ ಕಾರ್ಯಾಚರಣೆಯಲ್ಲೂ ಅಗತ್ಯವೆನಿಸುವ ಜ್ಞಾನ ಮತ್ತು ಅನುಭವಗಳಲ್ಲಿ ಶಿಕ್ಷಣ ದೊರೆತಿದ್ದಿರಬೇಕು. ಸಾಮಾನ್ಯ ಕ್ಷತ್ರಿಯ ಮಹಿಳೆಯರಿಗೂ ಸೈನಿಕ ಶಿಕ್ಷಣ ದೊರಕುತ್ತಿತ್ತು. ವೈಶ್ಯ ಕುಟುಂಬಗಳ ಹೆಣ್ಣು ಮಕ್ಕಳಿಗೆ ವ್ಯಾಪಾರೋದ್ಯಮಗಳಲ್ಲಿ ಶಿಕ್ಷಣ ದೊರಕುತ್ತಿತ್ತು. ಕರ್ನಾಟಕದ ಗ್ರಾಮಾಂತರ ಪ್ರದೇಶದ ಮಹಿಳೆಯರನೇಕರು ತಮ್ಮ ಮನೆಮಠಗಳನ್ನೂ ದನಕರುಗಳನ್ನೂ ರಕ್ಷಿಸಲು ದಕ್ಷತೆಯಿಂದ, ಸ್ವಾಭಿಮಾನದಿಂದ, ಶೌರ್ಯದಿಂದ ಹೋರಾಡಿದ ಪ್ರಸಂಗಗಳು ಹೇರಳವಾಗಿವೆ. ಕ್ರಿ.ಶ. 1041ರಲ್ಲಿ ಸಿದ್ಧನಹಳ್ಳಿಯ ಸಾಹಸಿ ಮಹಿಳೆಯೊಬ್ಬಳು ಆ ಊರಿನಲ್ಲಿ ನಡೆದ ಕದನವೊಂದರಲ್ಲಿ ಕಾದಿ ಮಡಿದ ಪ್ರಸಂಗವನ್ನು ಸ್ಥಳೀಯ ಶಾಸನ

---

19. *Yagnavalkya Smrithi*, I, 13
20. *Vathsyayana Kamashastra*, I, 3, 16
21. *Indian Antiquary*, VII, p. 163
22. *Indian Antiquary*, IX, p. 274
23. *Indian Antiquary*, XVIII, p. 37

ವೊಂದರಲ್ಲಿ ಬರೆದಿದೆ.[24] ಕ್ರಿ.ಶ. 1264ರಲ್ಲಿ ತನ್ನ ಗ್ರಾಮದ ಗೋವುಗಳನ್ನು ಪರಊರಿನವರಿಂದ ಬಿಡಿಸಿಕೊಂಡ ಶೂರಮಹಿಳೆಯೊಬ್ಬಳ ಕಥೆಯುಂಟು.[25] ಶಿಕಾರಿಪುರದ ಬಳಿ ತನ್ನ ತಂದೆಯ ಸೇಡು ತೀರಿಸಿಕೊಳ್ಳಲು ಶತ್ರುಗಳೊಡನೆ ವೀರಾವೇಶದಿಂದ ಕಾದಾಡಿ ಮಡಿದ ಹರಿಯಕ್ಕನೆಂಬ ಮಹಿಳೆಯೊಬ್ಬಳ ಸಾಹಸದ ಕುರುಹಿಗಾಗಿ ಇರಿಸಿದ ಶಾಸನ ಫಲಕವೊಂದು ಈಚೆಗೆ ಬೆಳಕಿಗೆ ಬಂದಿದೆ.[26] ತನ್ನ ಒಡೆಯ, ರಾಷ್ಟ್ರಕೂಟ ಅರಸನ ಪರವಾಗಿ ಕಾದಾಡಿ, ರಣರಂಗದಲ್ಲಿ ಮಡಿದ ತನ್ನ ಪತಿ ನೆಲಗವುಂಡನ ಆಡಳಿತ ಕಾರ್ಯವನ್ನು ಜಕ್ಕಿಯಬ್ಬೆ ವಹಿಸಿಕೊಂಡ ವಿಷಯ ಇತಿಹಾಸ ಪ್ರಸಿದ್ಧವಾಗಿದೆ. ಕಲಚೂರ್ಯವಂಶದ ಸೋವಿದೇವನ ಮಡದಿ, ಸೋವಿಲದೇವಿ ವಿದ್ವಜ್ಜನರ ಸಮ್ಮುಖದಲ್ಲಿ ನೃತ್ಯಾಭಿನಯ ಮಾಡಬಲ್ಲವಳಾಗಿದ್ದಳು. ಚೋಳರಾಜನೊಬ್ಬನ ರಾಣಿ, ಲಕ್ಷ್ಮೀದೇವಿ ರಾಜ್ಯಾಡಳಿತದಲ್ಲಿ ತನ್ನ ಪತಿಗೆ ದಕ್ಷತೆಯಿಂದ ನೆರವಾಗುತ್ತಿದ್ದಳು; ಜೊತೆಗೆ ಅವಳು ಸಾಹಿತ್ಯ, ಚಿತ್ರಕಲೆ, ನಾಟಕ, ಕಾವ್ಯರಚನೆ—ಈ ಕ್ಷೇತ್ರಗಳಲ್ಲೂ ಪರಿಣತಿ ಸಾಧಿಸಿದ್ದಳು. ಮಹಿಳೆಯರಲ್ಲಿ ಶಾಸನ ಲೇಖಕರೂ ಇದ್ದರೆಂಬ ಅಂಶ ಈಚೆಗೆ ತಿಳಿದು ಬಂದಿದೆ. ಹೊಯ್ಸಳರ ಕಾಲವಲ್ಲಿ ಕಂತಿ, ಮಹದೇವಿಯಕ್ಕ, ಮುಕ್ತಾಯಕ್ಕ ಮುಂತಾದ ಖ್ಯಾತಿವೆತ್ತ ಸಾಹಿತಿಗಳು ಅನೇಕರಿದ್ದರು. ಈ ಎಲ್ಲ ನಿದರ್ಶನಗಳು ಆ ಕಾಲದ ಕೆಲವು ಕುಟುಂಬಗಳಲ್ಲಾದರೂ ಮಹಿಳೆಯರಿಗೆ ವೈಯಕ್ತಿಕವಾದರೂ ವೈವಿಧ್ಯಮಯವೆನ್ನಬಹುದಾದ ಉನ್ನತ ಶಿಕ್ಷಣದ ಸೌಲಭ್ಯವಿತ್ತೆಂದು ಸೂಚಿಸುತ್ತವೆ. ಆದರೆ ಆ ಸೌಲಭ್ಯ ನಾಡಿನ ಮಿಕ್ಕ ಲಕ್ಷಾಂತರ ಮಹಿಳೆಯರ ಪಾಲಿಗೆ ಇಲ್ಲವಾಗಿತ್ತು.

ಶಿಕ್ಷಣ ಮಾಧ್ಯಮ

ಹಿಂದೂ ಧರ್ಮದ ಪುನರುಜ್ಜೀವನದ ಫಲವಾಗಿ ಕ್ರಿ.ಶ. ಎರಡನೆಯ ಶತಮಾನದಿಂದ ಮತ್ತೆ ಸಂಸ್ಕೃತ ಜನಜೀವನದಲ್ಲೂ ಶಿಕ್ಷಣ ಕ್ಷೇತ್ರದಲ್ಲೂ ಪ್ರಾಮುಖ್ಯಕ್ಕೆ ಬಂತು. ಪ್ರಾದೇಶಿಕ (ಪ್ರಾಕೃತ) ಭಾಷಾಮಾಧ್ಯಮವನ್ನು ಎತ್ತಿ ಹಿಡಿದು ಪ್ರಚಾರಕ್ಕೆ ತಂದಿದ್ದ ಜೈನ ಮತ್ತು ಬೌದ್ಧ ಸಂಸ್ಥೆಗಳೂ ಸಂಸ್ಕೃತ ಮಾಧ್ಯಮವನ್ನು ಬಳಸಲಾರಂಭಿಸಿದುವು. ಕ್ರಿ.ಶ. ನಾಲ್ಕನೆಯ ಶತಮಾನದನಂತರ ಪ್ರಾಕೃತದಲ್ಲಿ ಬರೆದ ಯಾವ ಶಾಸನವೂ ದೊರೆತಿಲ್ಲ. ಆ ಸುಮಾರಿನಲ್ಲಿ ಸಾತವಾಹನ ಅರಸರು ಮತ್ತೆ ಪ್ರಾಕೃತಕ್ಕೆ ಪ್ರಾಮುಖ್ಯವಿತ್ತು ಅದನ್ನು ಆಡಳಿತದಲ್ಲೂ ಶಿಕ್ಷಣ ಕ್ಷೇತ್ರದಲ್ಲೂ ವ್ಯವಹಾರ ಮಾಧ್ಯಮವಾಗಿ ಬಳಕೆಗೆ ತಂದರು. ಆದರೆ ಆ ಮನೆತನದ ಅನಂತರದ ಅರಸರು ಮತ್ತೆ ಸಂಸ್ಕೃತಕ್ಕೆ ಮನ್ನಣೆಯಿತ್ತರು. ಕರ್ನಾಟಕದ ಎಲ್ಲೆಡೆಗಳಲ್ಲೂ ಪ್ರಾಥಮಿಕ ಹಂತದಲ್ಲೂ ಸಂಸ್ಕೃತ ವ್ಯಾಕರಣದ ಬೋಧನೆ ಆರಂಭವಾಯಿತು. ಅನಂತರ ಹಲವು ಶತಮಾನಗಳ ಕಾಲ ಪ್ರಾಕೃತವಾಗಲಿ ಕನ್ನಡವಾಗಲಿ ಆಡಳಿತ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಮನ್ನಣೆ ಗಳಿಸಲಿಲ್ಲ. ಇದರಿಂದ ಜನಸಾಮಾನ್ಯರಲ್ಲಿ ಜ್ಞಾನ ಪ್ರಸಾರಕ್ಕೆ ಅಡ್ಡಿಯಾದುದಲ್ಲದೆ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಪುರೋಭಿವೃದ್ಧಿಗೂ ಅಡಚಣೆಯಾಯಿತು. ಸಾತವಾಹನರ ಅನಂತರ ಬಂದ ಚಾಲುಕ್ಯ ಮತ್ತು ಇತರ ರಾಜಮನೆತನಗಳ ಕಾಲದಲ್ಲಿ ಮಾತ್ರ ಕನ್ನಡಕ್ಕೆ ರಾಜಮನ್ನಣೆ ದೊರಕಿತು. ಅನಂತರವೇ ಪ್ರಾಥಮಿಕ ಶಾಲೆಯಲ್ಲಿ ಕನ್ನಡವನ್ನು ಓದುವುದಕ್ಕೂ ಬರೆಯುವುದಕ್ಕೂ ಕಲಿಸುವುದಕ್ಕೆ ಪ್ರಾಶಸ್ತ್ಯ ಬಂದದ್ದು. ಆಡಳಿತಗಾರರೂ ವ್ಯಾಪಾರಸ್ಥರೂ ತಮ್ಮ ಸುತ್ತಣ ಜನತೆಯೊಡನೆ ಕನ್ನಡದಲ್ಲಿ ವ್ಯವಹರಿಸಬೇಕಾಗಿ ಬಂದ ಅಗತ್ಯವನ್ನು ಕಂಡುಕೊಂಡು ತಮ್ಮ ತಮ್ಮ ಉದ್ಯೋಗ ಕ್ಷೇತ್ರಗಳಲ್ಲಿ ಕನ್ನಡ ಭಾಷೆಯ ಮಾಧ್ಯಮವನ್ನು ಬಳಕೆಗೆ ತಂದರು. ಅದೇ ಕಾರಣದಿಂದ ಪ್ರಾಥಮಿಕ ಶಾಲೆಯಲ್ಲಿ ಅಂಕಗಣಿತ, ಲೆಕ್ಕಾಚಾರ, ಪತ್ರಲೇಖನ ಮುಂತಾದ ಉಪಯುಕ್ತ ವಿಷಯಗಳ ಬೋಧನೆಗೆ ಕನ್ನಡ ಮಾಧ್ಯಮ ಬಳಕೆಗೆ ಬಂತು. ದೇಶಾದ್ಯಂತ ವಿದ್ಯಾರಂಗದಲ್ಲಿ ಮಾತೃಭಾಷೆಗೆ ಪ್ರಾಧಾನ್ಯ ಬರಹತ್ತಿತು. ಜೈನರೂ ಬೌದ್ಧರೂ ತಮ್ಮ ಧರ್ಮ ಪ್ರಚಾರಕ್ಕೆ ಕನ್ನಡವನ್ನು ಬಳಸಲಾರಂಭಿಸಿದರು. ಉನ್ನತ ಶಿಕ್ಷಣದ ಮಟ್ಟದಲ್ಲಿ ಕನ್ನಡದ ಬಳಕೆ

24. *Annual Report of South Indian Epigraphy*, 1911
25. *Epigraphia Carnatica*, I, No. 75
26. *Epigraphia Carnatica*, VII, Shikaripur No. 12

ಆರಂಭವಾಗಿ ಹತ್ತನೆಯ ಶತಮಾನದ ವೇಳೆಗೆ ಕನ್ನಡದಲ್ಲಿ ಗ್ರಂಥರಚನೆಗೆ ಪ್ರೋತ್ಸಾಹ ದೊರಕಿತು. ರಾಷ್ಟ್ರಕೂಟರ ಆಳಿಕೆ ಕನ್ನಡದ ಅಭ್ಯುದಯಕಾಲವೆಂದು ಹೆಸರಾಗಿದೆ. ಆ ವಂಶದ ಅರಸನಾದ ನೃಪತುಂಗನು ರಚಿಸಿದ ಕವಿರಾಜಮಾರ್ಗವೆಂಬ ಲಾಕ್ಷಣಿಕ ಗ್ರಂಥವೆ ನಮಗೆ ದೊರೆತಿರುವ ಮೊದಲ ಕನ್ನಡ ಗ್ರಂಥ. ಆ ಕಾಲದಲ್ಲಿ ಪಂಪರನ್ನಾದಿಗಳು ಕನ್ನಡದ ಮೊದಲ ಮಹಾಕಾವ್ಯಗಳನ್ನು ರಚಿಸಿದರು. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ ಅಧ್ಯಯನ ವಿಷಯವಾಗಿ ಪಠ್ಯಕ್ರಮದಲ್ಲಿ ಸೇರಿದ್ದು ಹನ್ನೆರಡನೆಯ ಶತಮಾನದಲ್ಲಿ.[27] ಅದೇ ಕಾಲದಲ್ಲಿ ನರಸೀಪುರದ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಿ ಬಳಕೆಯಲ್ಲಿತ್ತು. ಆದರೆ ಕನ್ನಡ ಮಾಧ್ಯಮ ಆ ಹಂತದ ಶಿಕ್ಷಣಕ್ಕೆ ಹದಿಮೂರನೆಯ ಶತಮಾನದ ವರೆಗೆ ವ್ಯಾಪಕವಾಗಿ ಬಳಕೆಗೆ ಬರಲಿಲ್ಲ. ಆದರೂ ಬಾದಾಮಿ ಚಾಲುಕ್ಯರ ಕಾಲದಿಂದಲೇ ಅದನ್ನು ಶಿಕ್ಷಣ ಮಾಧ್ಯಮವನ್ನಾಗಿ ಪ್ರಚಾರಕ್ಕೆ ತರುವ ಯತ್ನ ಸಂತತವಾಗಿ ನಡೆದು ಬರುತ್ತಿತ್ತು.

ಉನ್ನತ ಶಿಕ್ಷಣದ ಬಗ್ಗೆ ಅಭಿಮಾನ

ಪ್ರಾಚೀನಕಾಲದ ಆದ್ಯಂತವೂ ಜನರು ಶಿಕ್ಷಣದಲ್ಲಿ ಆಸಕ್ತಿ ತಳೆದಿದ್ದುದು ಕಂಡುಬರುತ್ತದೆ. ಉನ್ನತ ಶಿಕ್ಷಣ ಪ್ರಚಾರಕ್ಕಾಗಿ ಶ್ರೀಮಂತರೂ ರಾಜಮಹಾರಾಜರೂ ದಾನದತ್ತಿಗಳನ್ನು ಏಕಪ್ರಕಾರವಾಗಿ ಕೊಟ್ಟು ಪ್ರೋತ್ಸಾಹಿಸುತ್ತ ಬಂದಿದ್ದಾರೆ. ಆದರೆ ಆ ಬಗ್ಗೆ ಲಿಖಿತ ಸಾಕ್ಷ್ಯಾಧಾರಗಳು ದೊರೆತಿರುವುದು ಹತ್ತನೆಯ ಶತಮಾನದಿಂದೀಚೆಗೆ. ರಾಷ್ಟ್ರಕೂಟ ಅರಸ ಮುಮ್ಮಡಿ ಕೃಷ್ಣನ ಸಚಿವ ನಾರಾಯಣನು ಉನ್ನತ ಶಿಕ್ಷಣದ ವ್ಯವಸ್ಥೆಯಲ್ಲಿ ವಿಶೇಷ ಆಸಕ್ತಿ ತಳೆದಿದ್ದನು. ಅವನು ಸಾಲೊಟಗಿಯಲ್ಲಿ ಕ್ರಿ.ಶ. 945 ರಲ್ಲಿ ಒಂದು ವಿದ್ಯಾಮಂದಿರವನ್ನು ಕಟ್ಟಿಸಿಕೊಟ್ಟು ಉನ್ನತ ಶಿಕ್ಷಣಕ್ಕೆ ವ್ಯವಸ್ಥೆಗೊಳಿಸಿದನೆಂಬ ಅಂಶವನ್ನು ಸ್ಥಳೀಯ ಶಾಸನವೊಂದು ಸೂಚಿಸುತ್ತದೆ.[28] ಆ ವಿದ್ಯಾಲಯವನ್ನು ನಡೆಸಿಕೊಂಡು ಬರಲು ಆ ಊರಿನವರು ವಿಸ್ತಾರವಾದ ಭೂಮಿಯನ್ನು ದತ್ತಿಯಾಗಿ ಕೊಟ್ಟರು. ಬಿಜಾಪುರ ಜಿಲ್ಲೆಯ ಮೇತುಂಗಿಯಲ್ಲಿ ಪೊಯ್ಸಳ ಅರಸನ ಮಂತ್ರಿ ಪೆರುಮಾಳನು ಒಂದು ವಿದ್ಯಾಲಯವನ್ನು ಸ್ಥಾಪಿಸಿ, ಅಲ್ಲಿ ವೇದ, ಶಾಸ್ತ್ರ, ಕನ್ನಡ, ಮರಾಠಿ, ಸಂಸ್ಕೃತ ಮುಂತಾದ ವಿಷಯಗಳ ಬೋಧನೆಗೆ ವ್ಯವಸ್ಥೆಗೊಳಿಸಿದ್ದನು. ಬೆಳಗಾಂ ಜಿಲ್ಲೆಯ ಸೊರತೂರು ಗ್ರಾಮದ ವರ್ತಕನೊಬ್ಬನು ಅಲ್ಲಿನ ಜನತೆಯ ಉನ್ನತ ಶಿಕ್ಷಣ ವ್ಯವಸ್ಥೆಗಾಗಿ 50 ಎಕರೆ ಭೂಮಿಯನ್ನು ದಾನ ಕೊಟ್ಟಿದ್ದನು. ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಧಾರವಾಡದ ಶ್ರೀಮಂತ ವಾಣಿಜ್ಯ ಸಂಸ್ಥೆಯೊಂದು ತನ್ನ ಉದ್ಯೋಗಿಗಳ ಮುನ್ನಡೆಯ ಶಿಕ್ಷಣಕ್ಕಾಗಿ (ಫರ್ದರ್ ಎಜ್ಯುಕೇಷನ್) ತನ್ನ ವೆಚ್ಚದಿಂದ ಸಂಸ್ಥೆಯೊಂದನ್ನು ನಡೆಸುತ್ತಿತ್ತು. ಅದೇ ಜಿಲ್ಲೆಯ ಹಡಲೆ ಗ್ರಾಮಸ್ಥನೊಬ್ಬನು ವಿದ್ಯಾರ್ಥಿಗಳ ಊಟದ ವ್ಯವಸ್ಥೆಗಾಗಿ 30 ಎಕರೆ ಭೂಮಿಯನ್ನು ದಾನವಾಗಿ ಕೊಟ್ಟನು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಅವುಗಳ ಪ್ರರೋಹವೃದ್ಧಿಯಲ್ಲೂ ಅಭಿಮಾನ ಆಸಕ್ತಿ ತೋರಿದ ಇಂಥ ಅನೇಕ ನಿದರ್ಶನಗಳನ್ನು ಕಾಣಬಹುದು.

ಇನ್ನೂ ಮುದ್ರಣ ಕಲೆ ಪ್ರಚಾರಕ್ಕೆ ಬಾರದಿರುವಾಗ ಗ್ರಂಥಗಳನ್ನು ಕೈಯಲ್ಲಿ ಬರೆದುಕೊಳ್ಳಬೇಕಾಗಿತ್ತು. ಶಿಕ್ಷಣ ಸಂಸ್ಥೆಗಳಿಗೆ ಗ್ರಂಥಗಳ ಅಗತ್ಯವನ್ನೂ ಪ್ರಾಮುಖ್ಯವನ್ನೂ ಅರಿತುಕೊಂಡಿದ್ದ ಸಮಾಜ ಗ್ರಂಥದಾನ ಪವಿತ್ರಕಾರ್ಯವೆಂಬ ಭಾವನೆಯನ್ನು ಪ್ರಚಾರಕ್ಕೆ ತಂದಿತ್ತು. ಗ್ರಂಥಗಳನ್ನು ಬರೆಯಿಸಿ ಶಿಕ್ಷಣ ಸಂಸ್ಥೆಗಳಿಗೆ ದಾನವಾಗಿ ಕೊಡುವ ಸಂಪ್ರದಾಯ ಕರ್ನಾಟಕದ ಆದ್ಯಂತ ಅಸ್ತಿತ್ವದಲ್ಲಿತ್ತು. ಇದರಿಂದ ಉನ್ನತ ಸಂಸ್ಥೆಗಳು ವ್ಯಾಸಂಗಕ್ಕೆ ಬೇಕಾದ ಗ್ರಂಥಗಳನ್ನು ಒದಗಿಸಿಕೊಳ್ಳುತ್ತಿದ್ದುವು.

---

27 *Epigraphia Carnatica*, VII, Shikaripur No. 185

28. *Epigraphia Indica*, IV, p. 64

ಬಡವಿದ್ಯಾರ್ಥಿಗಳಿಗೆ ಅನ್ನದಾನ ಮಾಡುವ ಕಾರ್ಯದಲ್ಲಿ ಜನರು ಆಸಕ್ತಿ ತೋರುತ್ತಿದ್ದರು. ಶ್ರೀಮಂತರು ಅವರಿಗೆ ಉಚಿತ ಊಟ ವಸತಿಗಳ ವಿದ್ಯಾರ್ಥಿ ನಿಲಯಗಳನ್ನು ಏರ್ಪಡಿಸುತ್ತಿದ್ದರು. ಬಡವರೂ ತಮ್ಮ ಶಕ್ತ್ಯಾನುಸಾರ ವಿದ್ಯಾರ್ಥಿಗಳಿಗೆ ಅನ್ನದಾನಮಾಡುತ್ತಿದ್ದರು. ಕೆಲವರು ಒಬ್ಬಿಬ್ಬರು ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲೆ ಊಟಕ್ಕೆ ಹಾಕುತ್ತಿದ್ದರು. ಇನ್ನು ಕೆಲವರು ಕೆಲವು ವಿದ್ಯಾರ್ಥಿಗಳಿಗೆ ವಾರಕ್ಕೊಮ್ಮೆ ಊಟ ಹಾಕುತ್ತಿದ್ದರು. ತೀರ ಬಡವರು ಭಿಕ್ಷಾನ್ನವನ್ನಾದರೂ ನೀಡುತ್ತಿದ್ದರು. ಹಬ್ಬ ಹುಣ್ಣಿಮೆಗಳಲ್ಲಿ ಅಧ್ಯಾಪಕರನ್ನೂ ವಿದ್ಯಾರ್ಥಿಗಳನ್ನೂ ಊಟಕ್ಕೆ ಆಹ್ವಾನಿಸುತ್ತಿದ್ದರು. ಕೊಳಗಳ್ಳಿ, ಮನಗೋಳಿ, ನೀಲಮಂಗಲ, ನೇಸರ್ಗಿ, ಬಾಗೇವಾಡಿ, ಬೆಳಗಾಂ, ಡಂಬಳ್, ಗದಗ್, ಬೇಪಟ್ಟಿ ಮುಂತಾದೆಡೆಗಳಲ್ಲಿ ವಿದ್ಯಾರ್ಥಿಗಳಿಗೆ ಅನ್ನಸತ್ರಗಳನ್ನು ಹಾಕಿಸಿದ್ದ ಬಗ್ಗೆ ಶಾಸನಗಳ ಉಲ್ಲೇಖಗಳು ದೊರೆತಿವೆ.

ಶಿಕ್ಷಣ ಇನ್ನೂ ಸರ್ಕಾರದ ಹೊಣೆಗಾರಿಕೆಗೆ ಬಾರದಿದ್ದರೂ ರಾಜರೂ ಮಂಡಲೀಕರೂ ಉನ್ನತ ಶಿಕ್ಷಣಕ್ಕೆ ನಿರಂತರ ಪ್ರೋತ್ಸಾಹ ನೀಡುತ್ತಿದ್ದರು. ಸಾತವಾಹನ ಅರಸರು ಉನ್ನತ ಶಿಕ್ಷಣಕ್ಕೆ ನೀಡಿದ ಪ್ರೋತ್ಸಾಹ ಅನಂತರ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ರಾಜಮನೆತನಗಳಿಗೆ ಮೇಲ್ಪಂಕ್ತಿಯಾಗಿ ಪರಿಣಮಿಸಿತು. ಶಿಕ್ಷಣ ಸಂಸ್ಥೆಗಳಿಗೂ ವಿದ್ವಜ್ಜನರಿಗೂ ರಾಜರೂ ಮಂತ್ರಿಗಳೂ ಭೂಮಿಯನ್ನು ದಾನವಾಗಿ ಕೊಟ್ಟ ಪ್ರಸಂಗಗಳು ಶಾಸನಗಳಲ್ಲಿ ಉಕ್ತವಾಗಿವೆ. ಅಧ್ಯಾಪಕರೂ ವಿದ್ಯಾರ್ಥಿಗಳೂ ರಾಜ್ಯದ ಸುಂಕ ಸಾರಿಗೆಗಳಿಂದ ವಿನಾಯತಿ ಪಡೆಯುತ್ತಿದ್ದರು. ವಿದ್ಯಾಸಂಸ್ಥೆಗಳ ಮತ್ತು ವಿದ್ವಜ್ಜನರ ರಕ್ಷಣೆಗೂ ಸರ್ಕಾರ ತಕ್ಕ ವ್ಯವಸ್ಥೆ ಮಾಡುತ್ತಿತ್ತು.

ಉಪಸಂಹಾರ

ಹದಿಮೂರನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಮುಸಲ್ಮಾನರ ಆಳ್ವಿಕೆ ಆರಂಭವಾದಂತೆ ಇಲ್ಲಿನ ಉನ್ನತ ಶಿಕ್ಷಣದ ಮೇಲೆ ತೀರ ಅಹಿತ ಪರಿಣಾಮವುಂಟಾಯಿತು. ಅದಕ್ಕೆ ಆಶ್ರಯ ಸ್ಥಾನವಾಗಿದ್ದ ಮಠಗಳೂ ದೇವಾಲಯಗಳೂ ಅವರ ದಾಳಿಗೆ ಸಿಕ್ಕಿ ಹಾಳಾದುವು. ದಾಳಿಗೆ ಸಿಕ್ಕದೆ ಉಳಿದುಕೊಂಡ ಹಲಕೆಲವು ಅಗತ್ಯವಾದ ರಕ್ಷಣೆ ಮತ್ತು ಪ್ರೋತ್ಸಾಹಗಳಿಲ್ಲದೆ ತಮ್ಮ ಕಾರ್ಯವನ್ನು ನಿರ್ವಹಿಸಲಾರದಾದುವು. ಮುಸಲ್ಮಾನ ಅರಸರು ನೂತನವಾಗಿ ಮದ್ರಸಾಗಳೆಂಬ ಉನ್ನತ ಶಿಕ್ಷಣ ಸಂಸ್ಥೆಗಳನ್ನೇನೊ ಆರಂಭಿಸಿದರು. ಆದರೆ ಅವು ಕೇವಲ ಮುಸಲ್ಮಾನ ಮತದವರಿಗೆ ಮಾತ್ರ. ಹಿಂದೂ ಪದ್ಧತಿಯ ಉನ್ನತ ಶಿಕ್ಷಣಕ್ಕೆ ಅವರು ಯಾವ ಪ್ರೋತ್ಸಾಹವನ್ನೂ ನೀಡಲಿಲ್ಲ. ಅದು ತನಕ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ದೊರಕುತ್ತಿದ್ದ ರಾಜಮಹಾರಾಜರ ಪ್ರೋತ್ಸಾಹ ಇಲ್ಲವಾಯಿತು. ಸರ್ಕಾರದ ಉದ್ಯೋಗಗಳಿಗೆ ಹಿಂದುಗಳನ್ನು ನೇಮಿಸುವುದು ಕಡಿಮೆಯಾಗಿ ಉನ್ನತ ಶಿಕ್ಷಣದಲ್ಲಿ ಜನರಿಗೆ ಆಸಕ್ತಿ ಕುಂದುತ್ತ ಬಂತು. ಕ್ರಿ.ಪೂ. ಮೂರನೆಯ ಶತಮಾನದಿಂದ ಅಭಿವೃದ್ಧಿ ಸಾಧಿಸುತ್ತ ಬಂದ ಭಾರತೀಯ ಉನ್ನತ ಶಿಕ್ಷಣ ಇತರ ಪ್ರಾಂತ್ಯಗಳಂತೆ ಕರ್ನಾಟಕದಲ್ಲೂ ಭಯಂಕರ ಆಘಾತಕ್ಕೀಡಾಯಿತು. ಅನಂತರ ಬ್ರಿಟಿಷರ ಆಳ್ವಿಕೆ ಆರಂಭವಾಗುವ ವರೆಗಿನ ಆರು ಶತಮಾನಗಳ ಅವನತಿಯ ಸ್ಥಿತಿಯಿಂದ ಅದು ಮತ್ತೆ ಚೇತರಿಸಿಕೊಂಡು ಅಸ್ತಿತ್ವಕ್ಕೆ ಬರಲಾರದಾದುದು ನಾಡಿನ ಒಂದು ದುರದೃಷ್ಟವೆಂದೇ ಭಾವಿಸಬೇಕು.

ಅನುವಾದ : ಎಂ. ಜಯಂತಿಬಾಯಿ

ಪುರಾತನ ವಿದ್ಯಾಪದ್ಧತಿಯು ಹೃದಯ ಸಂಸ್ಕಾರ, ಬುದ್ಧಿ ವೈಶಾಲ್ಯ, ವಿವೇಕ, ಸ್ಥೈರ್ಯ, ಸಹನೆ ಮುಂತಾದ ಲೋಕೋತ್ತರ ಗುಣಗಳಿಗೆ ಮಹತ್ತ್ವ ನೀಡಿದ್ದಿತೇ ಹೊರತು, ಕೇವಲ ಶಕ್ತಿ ದಂಭಾಚರಣೆಯು ವ್ಯಕ್ತಿತ್ವ ಸಾಧನೆಗಲ್ಲ. ಆರಂಭ ಶಿಕ್ಷಣದಲ್ಲಿ ಲಿಪಿಜ್ಞಾನ, ವ್ಯಾಕರಣ, ನಿರುಕ್ತ, ಗಣಿತ, ಯಾಂತ್ರಿಕ ಕಲೆಗಳು, ಜ್ಯೋತಿಷ, ಛಂದಸ್ಸು, ತರ್ಕಾದಿ ಲೌಕಿಕ ವಿದ್ಯೆಗಳೂ ಆಧ್ಯಾತ್ಮಿಕ ಸಿದ್ಧಿದಾಯಕವಾದ ಧಾರ್ಮಿಕ ಶಿಕ್ಷಣಗಳೂ ಅಡಕವಾಗಿದ್ದುವು. ರಾಜಕುಮಾರರು ನಾನಾ ಜ್ಞಾನಶಾಖೆಗಳಲ್ಲಿ ಪಾರಂಗತರಾಗುವಂತೆ ಅವರ ಶಿಕ್ಷಣ ಕ್ರಮವು ನೇರ್ಪಟ್ಟಿದ್ದಿತು. ರಾಜನೀತಿ, ವ್ಯಾಕರಣ, ಕಾವ್ಯ, ಇತಿಹಾಸ, ಧರ್ಮಶಾಸ್ತ್ರ, ಅರ್ಥಶಾಸ್ತ್ರಗಳೂ ಯುದ್ಧ ವಿದ್ಯೆಯೂ ಅವರ ಶಿಕ್ಷಣದಲ್ಲಿ ಸೇರಿದ್ದುವು. ನೀತಿಮಾರ್ಗನ ಮಗನಾದ ನರಸಿಂಹದೇವನು ರಾಜನೀತಿ, ಗಣಿತಶಾಸ್ತ್ರ, ಧನುರ್ವಿದ್ಯೆ, ವ್ಯಾಕರಣ, ವೈದ್ಯ, ಭರತಶಾಸ್ತ್ರ, ಕಾವ್ಯ, ಇತಿಹಾಸ, ನೃತ್ಯ, ಸಂಗೀತಗಳಲ್ಲಿ ಕೃತಪರಿಶ್ರಮನಾಗಿದ್ದನಂತೆ. ಶುದ್ಧ ಚಾರಿತ್ರದ ಮುಖ್ಯ ಲಕ್ಷಣಗಳಾದ ವಿನಯ, ಬ್ರಹ್ಮಚರ್ಯ, ಧೈರ್ಯಗಳು ಅರಸರಲ್ಲಿ ಮನೆಮಾಡಿಕೊಂಡಿರಬೇಕೆಂದು ಅಂದಿನ ಅಪೇಕ್ಷೆಯಾಗಿದ್ದಿತು. ಮಾನವ ವ್ಯಾಪಾರಗಳನ್ನೂ ಸಾಮಾಜಿಕ ರೀತಿನೀತಿಗಳನ್ನೂ ರಾಜ್ಯ ವ್ಯವಹಾರಗಳನ್ನೂ ಅರಿತುಕೊಳ್ಳಲು ನೆರವಾಗುವಂತಹ ಸಕಲ ಕಲಾ ಶಾಸ್ತ್ರಗಳಲ್ಲೂ ಸಾಕಷ್ಟು ಪರಿಣತಿ ಇಲ್ಲದೆ ಹೋದರೆ, ರಾಜಕುಮಾರರು ರಾಜ್ಯಭರಣ ಕಾರ್ಯದಲ್ಲಿ ಕೃತಕೃತ್ಯರಾಗುವಂತಿಲ್ಲ. ಈ ಕಾರಣದಿಂದ ಅವರ ವಿದ್ಯಾಕ್ರಮವು ಅಷ್ಟೊಂದು ಸಾಕಲ್ಯವಾಗಿಯೂ ಕಠಿಣವಾಗಿಯೂ ರೂಪಿತವಾಗಿದ್ದಿತು. ಸಂಗೀತ ನೃತ್ಯ ಕಲೆಗಳಲ್ಲೂ ಅವರು ಪರಿಶ್ರಮ ಪಡೆಯಬೇಕಾಗಿದ್ದಿತು. ರಾಜಕುಮಾರಿಯರೂ ತಮ್ಮ ಸಂಗೀತ ನೃತ್ಯಕಲಾ ಪರಿಣತಿಯಿಂದ ಆಸ್ಥಾನ ಸಭಾಸದರ ಮನಸ್ಸಂತೋಷಪಡಿಸುತ್ತಿದ್ದರು. ಇದರಿಂದ ಅವರ ಸ್ಥಾನ ಗೌರವಕ್ಕೆ ಚ್ಯುತಿಬರುವ ಭೀತಿಯೇನೂ ಇರಲಿಲ್ಲ.

ಮೇಲೆ ಹೇಳಿದಂತೆ ಪುರಾತನ ವಿದ್ಯಾಪದ್ಧತಿಯು ಲೌಕಿಕ ಪಾರಮಾರ್ಥಿಕ ವಿಷಯಗಳಿಂದಲೂ ವೃತ್ತಿವಿಷಯಗಳಿಂದಲೂ ಕೂಡಿದ ಸಂಮಿಶ್ರ ವಿದ್ಯಾಕ್ರಮವಾಗಿತ್ತು–ಬೌದ್ಧಿಕ ಪ್ರಗತಿಗೂ ಕಾಯಕ ನೈಪುಣ್ಯಸಿದ್ಧಿಗೂ ಸಾಧಕವಾಗುವಂತಿತ್ತು. ರಾಜವಂಶೀಯ ಛಾತ್ರರು ಸಾಂಸ್ಕೃತಿಕ ಶಿಕ್ಷಣವನ್ನೇ ಹೆಚ್ಚಾಗಿ ಬಯಸುತ್ತಿದ್ದರು. ಮಧ್ಯಮವರ್ಗದ ವಿದ್ಯಾರ್ಥಿಗಳು ಲೋಹಕರ್ಮ, ದಾರುಕರ್ಮ, ಶಿಲ್ಪ ವಿದ್ಯಾದಿಗಳನ್ನು ಅಪೇಕ್ಷಿಸುತ್ತಿದ್ದರು. ಹೀಗಿದ್ದರೂ, ಸಾಂಸ್ಕೃತಿಕ ಶಿಕ್ಷಣವು ಯಾವ ಒಂದು ನಿರ್ದಿಷ್ಟ ಸಮಾಜದ ಏಕಾಯತ್ತತೆಗೆ ಸೇರಿದ್ದಿತೆಂದು ಹೇಳುವಂತಿಲ್ಲ. ಪ್ರಜಾಕೋಟಿ ಸಮಸ್ತವೂ ಜ್ಞಾನಾಕಾಂಕ್ಷಿಯಾಗಿದ್ದಿತು. ಪ್ರತಿಯೊಬ್ಬರಿಗೂ ಅವರವರು ಬಯಸಿದ ಶಿಕ್ಷಣವು ಉಚಿತವಾಗಿ ಲಭಿಸುತ್ತಿದ್ದಿತು.[1]

—**ಡಾ. ಎಂ. ವಿ. ಕೃಷ್ಣರಾವ್**
ಎಂ. ಕೇಶವ ಭಟ್ಟ

---

1 ಕರ್ನಾಟಕದ ಇತಿಹಾಸ ದರ್ಶನ, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು, 1970, ಪು. 949

ವಿಲ್ಯಂ ಮೂಡ್ತ

ಭಾಷಾ ಪ್ರಯೋಗಶಾಲೆ

ಅನ್ಯಭಾಷಾ ಅಧ್ಯಾಪನದಲ್ಲಿ ಹಲವು ರೀತಿಯ ಸಲಕರಣೆಗಳನ್ನು ಬಳಸಬೇಕಾಗುತ್ತದೆ. ಭಾಷಾರಚನೆಗಳನ್ನು ರೂಢೀಕರಿಸಲು ಆಧುನಿಕ ಕಾಲದಲ್ಲಿ ಚಿತ್ರಗಳು, ಹೊಳಪು ಬಿಲ್ಲೆಗಳು, ನಕಾಶೆಗಳು, ಜಾರುಫಲಕಗಳು, ಧ್ವನಿತಟ್ಟೆಗಳು, ಧ್ವನಿಪಟ್ಟೆಗಳು, ಚಲನಚಿತ್ರ ಪಟಲಗಳು ಮೊದಲಾದ ಸಲಕರಣೆಗಳನ್ನು ಬಳಸುವುದು ಸಾಮಾನ್ಯವಾಗಿದೆ. ಆದರೆ ಇವುಗಳಿಗೆಲ್ಲಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾದ ಸಲಕರಣೆಯೆಂದರೆ ಭಾಷಾ ಪ್ರಯೋಗಶಾಲೆ.

ಧ್ವನಿಯಂತ್ರೋಪಕರಣಗಳ ಸಹಾಯದಿಂದ ವಿದ್ಯಾರ್ಥಿಗಳಿಗೆ ಭಾಷಾರೂಢೀಕರಣ ಮಾಡಿಕೊಳ್ಳಲು ಯೋಗ್ಯವಾದ, ಪ್ರತ್ಯೇಕವಾಗಿ ಇಡಲಾದ ಕೋಣೆಯೇ ಭಾಷಾ ಪ್ರಯೋಗಶಾಲೆ. ಏಕೈಕ ಧ್ವನಿಸಂಗ್ರಹ ಯಂತ್ರವಿರುವ ಪ್ರತ್ಯೇಕವಾದ ಕೋಣೆಯೊಂದನ್ನು ವಿದ್ಯಾರ್ಥಿಗಳಿಗೆ ಭಾಷಾರೂಢೀಕರಣಕ್ಕೋಸ್ಕರ ಮೀಸಲಾಗಿಟ್ಟರೆ ಅದೂ ಒಂದು ಭಾಷಾ ಪ್ರಯೋಗಶಾಲೆಯೇ ಸರಿ. ಹೆಚ್ಚಾಗಿ ಭಾಷಾ ಪ್ರಯೋಗಶಾಲೆಯಲ್ಲಿ ಹಲವಾರು ಧ್ವನಿ ಅಭೇದ್ಯ ಕೋಣೆಗಳಿದ್ದು ಪ್ರತಿಯೊಂದರಲ್ಲಿ ಒಂದೊಂದು ಧ್ವನಿ ಸಂಗ್ರಹ ಯಂತ್ರ ಇರುತ್ತದೆ. ಕೆಲವೆಡೆ ಶ್ರವಣಗೃಹ ಮಾತ್ರ ಇರುವುದುಂಟು.

ಅನುಕರಣೆಗೋಸ್ಕರ ಅನ್ಯಭಾಷೆಯ ಉತ್ತಮೋತ್ತಮ ಮಾದರಿಗಳನ್ನು ಒದಗಿಸಿಕೊಡುವುದು ಅಲ್ಲದೆ ಅವುಗಳನ್ನು ಸಂದರ್ಭಕ್ಕನುಸಾರವಾಗಿ ಉಪಯೋಗಿಸಿಕೊಳ್ಳುವ ಸಾಧ್ಯತೆಯನ್ನು ಕಲ್ಪಿಸಿಕೊಡುವುದೇ ಭಾಷಾ ಪ್ರಯೋಗಶಾಲೆಯ ಹೆಗ್ಗುರಿ. ಶಿಕ್ಷಕನಿಗೆ ಕಲಿಸುವ ಭಾಷೆ ಸ್ವಭಾಷೆಯಾಗದೆ ಇದ್ದರೆ ಆ ಭಾಷೆಯನ್ನು ಕಲಿಸುವಲ್ಲಿ ಭಾಷಾ ಪ್ರಯೋಗಶಾಲೆಯ ಉಪಯೋಗ ಅತ್ಯಂತ ಮಹತ್ವದ್ದು. ಅಲ್ಲದೆ, ಒಂದೇ ಭಾಷೆಯನ್ನು ಹಲವಾರು ಪ್ರದೇಶಗಳಲ್ಲಿ ಬೇರೆಬೇರೆ ಸಮಾಜದವರು ಹೇಗೆ ಆಡುತ್ತಾರೆಂಬುದನ್ನು ತೋರಿಸುವುದಕ್ಕೂ ಭಾಷಾ ಪ್ರಯೋಗಶಾಲೆ ಬಹು ಅನುಕೂಲಕರವಾಗಿದೆ.

ಶ್ರವಣ–ಮೌಖಿಕ ಅಭ್ಯಾಸಗಳ ಪುನರಾವರ್ತನೆಗಳಿಗೆ ಭಾಷಾ ಪ್ರಯೋಗಶಾಲೆ ಬಹಳ ಉಪಯುಕ್ತ ಸಾಧನ. ಪ್ರತಿಯೊಬ್ಬ ವಿದ್ಯಾರ್ಥಿ ತನಗೆ ಅವಶ್ಯವಾದ ಭಾಗವನ್ನಾರಿಸಿಕೊಂಡು ಅಭ್ಯಾಸ ಸಾಗಿಸಲು ಇಲ್ಲಿ ಅನುಕೂಲವಿದೆ. ಅಭ್ಯಾಸ ಸಾಗುತ್ತಿರುವ ವೇಳೆಯಲ್ಲಿ ಅದನ್ನು ಸಂಗ್ರಹಿಸಿಕೊಂಡು ಪರಿಶೀಲಿಸಿ ತಿದ್ದುವ ಕಾರ್ಯವನ್ನು ಉಪಾಧ್ಯಾಯನಾದವನು ಕೈಕೊಳ್ಳಬಹುದು. ಅಂತೆಯೇ ವೈಯಕ್ತಿಕ ಹಾಗೂ ಸಾಂಘಿಕ ಉಚ್ಚಾರ ಅಭ್ಯಾಸಗಳಿಗೂ, ತಿದ್ದುವಿಕೆಗಳಿಗೂ, ಪರೀಕ್ಷೆಗಳಿಗೂ ಈ ಸಾಧನ ಅತ್ಯಂತ ಸಹಾಯಕಾರಿ.

ಭಾಷಾಪ್ರಯೋಗಶಾಲೆಯಲ್ಲಿ ಉಪಯೋಗಿಸುವಂತಹ ಕಚ್ಚಾ ವಸ್ತುಗಳು ಸುಲಭದರದಲ್ಲಿ ಸಿಗುವಂತಿಲ್ಲ. ಅವುಗಳ ಸದುಪಯೋಗ ಮಾಡಿಕೊಳ್ಳಲು ಬೇಕಾದ ಶ್ರಮ ಅಷ್ಟಿಷ್ಟಲ್ಲ. ಈ ಕಾರಣಗಳಿಂದಾಗಿ ಈ ಪ್ರಯೋಗಶಾಲೆಯನ್ನು ವ್ಯರ್ಥವಾಗಿ ಬಳಸಬಾರದು. ಭಾಷಾ ಅಧ್ಯಾಪನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಲು, ರೂಢೀಕರಣ ನಡೆಯಿಸಲು, ಪುನರಾವರ್ತನೆ ಮೊದಲಾದ ಅಗತ್ಯವಾದ ಕೆಲವೇ ಕೆಲವು ವಿಷಯಗಳಿಗೆ ಮಾತ್ರ ಅದನ್ನು ಸೀಮಿತಗೊಳಿಸಬೇಕು.

ಭಾಷಾ ಪ್ರಯೋಗಶಾಲೆಯಲ್ಲಿ ಬಳಸುವ ಸಾಮಗ್ರಿ ಸ್ಫುಟವಾಗಿಯೂ ಶ್ರೇಣಿಗಳಲ್ಲಿ ವ್ಯಕ್ತವಾಗಿಯೂ ಉದ್ದೇಶ ಸಾಧಕವಾಗಿಯೂ ಭಾಷಾವಿಜ್ಞಾನದ ಆಧಾರದ ಮೇಲೆ ಸ್ಥಾಪಿತವಾಗಿಯೂ ಮನಶ್ಶಾಸ್ತ್ರೀಯ ನಿಯಮಗಳಿಗನುಗುಣವಾಗಿಯೂ ಇರಬೇಕು. ಕಾರಣ, ಧ್ವನಿಸಂಗ್ರಹ ರೂಪದಲ್ಲಿ ತಯಾರಿಸಿದ ಎಲ್ಲ ಸಾಮಗ್ರಿ ಭಾಷಾ ಅಧ್ಯಾಪನ ದೃಷ್ಟಿಯಿಂದ ಉಪಯುಕ್ತವಾಗಬೇಕಾಗಿಲ್ಲ. ಉಪಯುಕ್ತ ಸಾಮಗ್ರಿಯನ್ನು ತಯಾರಿಸುವಲ್ಲಿ ಅಧ್ಯಾಪಕನ ಶ್ರಮ ವಿಶೇಷವಾಗಿದೆ.

ಭಾಷಾ ಪ್ರಯೋಗಶಾಲಾ ಸಾಮಗ್ರಿಯನ್ನು ತಯಾರಿಸುವಲ್ಲಿ ಗಮನದಲ್ಲಿಡಬೇಕಾದ ಮುಖ್ಯಾಂಶಗಳು ಇವು: 1 ಸೂಕ್ತ ಸಮಸ್ಯೆಯ ನಿರ್ಣಯ, 2 ಅನುಗುಣ ರೂಢಿಯ ಆಯ್ಕೆ, 3 ಧ್ವನಿಪಟ್ಟಿಯ ಮೂಲ ಪ್ರತಿಯ ಸಿದ್ಧತೆ, 4 ಧ್ವನಿಪಟ್ಟಿಯ ತಯಾರಿಕೆ, 5 ಪರಿಶೀಲನೆ ಹಾಗೂ ಮೌಲ್ಯಮಾಪನೆ

ಸೂಕ್ತ ಸಮಸ್ಯೆಯ ನಿರ್ಣಯ

ಭಾಷಾ ಪ್ರಯೋಗಶಾಲೆಯಲ್ಲಿ ಒಂದು ರೂಢೀಕರಣ ನಡೆಯಿಸುವಲ್ಲಿ ಯಾವ ಸಮಸ್ಯೆಯನ್ನು ನೀಗಿಸಿಕೊಳ್ಳಬೇಕು ಎಂಬುದನ್ನು ಆರಂಭದಲ್ಲಿಯೇ ಗೊತ್ತು ಮಾಡಿಕೊಳ್ಳಬೇಕು. ಸಮಸ್ಯೆಗಳು ಹಲವಾರು ಇರಬಹುದು: ಸಂಭಾಷಣೆಯ ಕಂಠಪಾಠ, ಧ್ವನಿಯ ಗ್ರಹಣ ಅಥವಾ ಉತ್ಪಾದನೆ, ಧ್ವನಿಗಳೊಳಗಣ ವೈವಿಧ್ಯ, ವ್ಯಾಕರಣ ಮಾದರಿಯೊಂದರ ಮೇಲೆ ಪ್ರಭುತ್ವ ಗಳಿಸುವಿಕೆ, ಪದ ಪ್ರಯೋಗ, ಸಾಂಸ್ಕೃತಿಕ ಅರ್ಥ, ಓದುವಿಕೆ ಇತ್ಯಾದಿ.

ಅನುಗುಣ ರೂಢಿಯ ಆಯ್ಕೆ

ನಿವಾರಿಸಬೇಕಾದ ಸಮಸ್ಯೆಗೆ ಅನುಗುಣವಾಗಿ ರೂಢಿಯನ್ನು ಆರಿಸಬೇಕಾಗುತ್ತದೆ. ರೂಢಿಯಲ್ಲಿ ಮುಖ್ಯವಾಗಿ ಉತ್ತರಸಹಿತ ಮಾದರಿ ಮತ್ತು ಉತ್ತರರಹಿತ ಮಾದರಿಗಳೆಂದು ಎರಡು ವಿಧ. ಉತ್ತರಸಹಿತ ಮಾದರಿಯಲ್ಲಿ ವಿದ್ಯಾರ್ಥಿಗೆ ಸೂಚನೆಗಳನ್ನೊಳಗೊಂಡ ಮಾದರಿಯನ್ನು ಕೊಟ್ಟು ಸರಿಯಾದ ಉತ್ತರವನ್ನು ತಿಳಿಸುವ ಮೊದಲೇ ಅವನಿಂದ ಉತ್ತರ ಕೇಳಲಾಗುತ್ತದೆ. ಈ ಪದ್ಧತಿ ಉತ್ತರಗಳನ್ನು ಪಡೆಯುವಲ್ಲಿ ಸಮರ್ಥವಾಗಿದೆಯಲ್ಲದೆ ಅಧ್ಯಯನ ತ್ವರಿತಗತಿಯಲ್ಲಿ ಸಾಗುವಂತೆ ಮಾಡುತ್ತದೆ.

ಉತ್ತರ ರಹಿತ ಮಾದರಿಯಲ್ಲಿ ಎರಡು ರೀತಿ: ಒಂದು, ವಿರಾಮ–ಸಹಿತ ಮಾದರಿ, ಇನ್ನೊಂದು ವಿರಾಮರಹಿತ ಮಾದರಿ. ಮೊದಲನೆಯದರಲ್ಲಿ ಉತ್ತರವನ್ನೀಯಲು ವಿದ್ಯಾರ್ಥಿಗೆ ಕಾಲಾವಕಾಶವಿದೆ; ಆದರೆ, ಸರಿಯಾದ ಉತ್ತರ ಅಲ್ಲಿ ಸೂಚಿಸಲಾಗುವುದಿಲ್ಲ. ಎರಡನೆಯದರಲ್ಲಿ ಉತ್ತರವನ್ನೀಯಲು ವಿದ್ಯಾರ್ಥಿಗೆ ಕಾಲಾವಕಾಶವೂ ಇಲ್ಲ; ಸರಿಯಾದ ಉತ್ತರವನ್ನು ಅಲ್ಲಿ ಸೂಚಿಸುವುದೂ ಇಲ್ಲ. ವಿದ್ಯಾರ್ಥಿಗೆ ಕೇಳುವ ಅವಕಾಶವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಧ್ವನಿಪಟ್ಟಿಯ ಮೂಲಪ್ರತಿಯ ಸಿದ್ಧತೆ

ಧ್ವನಿಪಟ್ಟಿಯ ಮೂಲಪ್ರತಿಯನ್ನು ಸಿದ್ಧಪಡಿಸುವಲ್ಲಿ ಆ ಪಟ್ಟಿಯ ಬಳಕೆಯ ಕ್ಷೇತ್ರವನ್ನೂ ಗುರಿಯನ್ನೂ ಗಮನಿಸತಕ್ಕದ್ದು. ಧ್ವನಿಪಟ್ಟಿಯಲ್ಲಿ ಈ ಕೆಳಗಿನ ಪಂಚ ಅಂಶಗಳು ಇರಬೇಕು: 1 ಪ್ರಯೋಗಶಾಲೆಯ ಉದ್ಯೋಗೀ ಸಿಬ್ಬಂದಿಗೆ ಪಟ್ಟಿಗಳ ವರ್ಗೀಕರಣ ಮತ್ತು ಸಂಬಂಧ ನಿರ್ದೇಶನಕ್ಕೆ ಬೇಕಾಗಿರುವ ವಿಷಯಗಳು, 2 ವಿದ್ಯಾರ್ಥಿಗಳಿಗೆ ಬೇಕಾಗಿರುವ ಮಾಹಿತಿ, 3 ಧ್ವನಿ ಸಂಗ್ರಹಕಾರನಿಗೆ ಸೂಚನೆಗಳು, 4 ಉದಾಹರಣೆಗಳು, 5 ರೂಢಿಯ ಮಾದರಿ. ಇಷ್ಟೇ ಅಲ್ಲದೆ ಪಟ್ಟಿಯ ಅಥವಾ ರೂಢಿಯ ಮಾದರಿಯ ಆದಿ ಹಾಗೂ ಅಂತ್ಯಗಳನ್ನು ಸೂಚಿಸಲು 'ಪಟ್ಟಿಯ ಆದಿ' ಮತ್ತು 'ಪಟ್ಟಿಯ ಅಂತ್ಯ'—ಇಂತಹ ಸೂಚನಾಪದಗಳಿರುವುದು ಅನುಕೂಲಕರ.

ಕನ್ನಡಿಗನಿಗೆ ಇಂಗ್ಲಿಷ್ ಸಂಭಾಷಣೆಯನ್ನು ಕಲಿಯಲು ತಯಾರಿಸಿದ ರೂಢೀಕರಣ ಮಾದರಿಯ ಧ್ವನಿ ಪಟ್ಟಿಯ ಮೂಲಪ್ರತಿಗೆ ಕೆಳಗೆ ಒಂದು ಉದಾಹರಣೆ ಕೊಡಲಾಗಿದೆ:

ವರ್ಗೀಕರಣ ಮತ್ತು ಸಂಬಂಧ ನಿರ್ದೇಶನ ಮಾಹಿತಿ

ವಿಷಯ: ಪ್ರಾದೇಶಿಕ ಇಂಗ್ಲಿಷ್. ದಿನಾಂಕ 1–1–74
ವಸ್ತು: ಸಂಭಾಷಣೆ–5
ಪಾಠ ನಿರ್ದೇಶನ: ಪ್ರಾಯೋಗಿಕ ಇಂಗ್ಲಿಷ್ ವಿಷಯ ಸಂಗ್ರಹ:5
ಧ್ವನಿ ಸಂಗ್ರಹಕಾರ: ಶ್ರೀಮತಿ ಸೆಲೀನಾ
ಧ್ವನಿಗಳು: ಅಧ್ಯಾಪಕಿ: ಶ್ರೀಮತಿ ಸೆಲೀನಾ. ವಿದ್ಯಾರ್ಥಿನಿ: ಶೀಲಾ

ಅಧ್ಯಾಪಕಿ: ಪಟ್ಟಿಯ ಆದಿ
[ಅಲ್ಪಾವಧಿಯ ವಿರಾಮ]

ಪಾಠಸಂಖ್ಯೆ: ಇಂಗ್ಲಿಷ್ ಸಂಭಾಷಣೆ–5
ಸೂಚನೆ: Listen to the dialogue. Be attentive.
ಉದಾಹರಣೆ: ಅಧ್ಯಾಪಕಿ: What is her name?
ಶೀಲಾ: Her name is Teresa Sheela.
ಅಧ್ಯಾಪಕಿ: Her name is Teresa Sheela [ಬೆಂಬಲ]
ಶೀಲಾ: Her name is Teresa Sheela.
ಅಧ್ಯಾಪಕಿ: Who is she?
ಶೀಲಾ: She is a student of Linguistics.
ಅಧ್ಯಾಪಕಿ: She is a student of Linguistics. [ಬೆಂಬಲ]
ಶೀಲಾ: She is a student of Linguistics.
ರೂಢಿ: ಅಧ್ಯಾಪಕಿ: Answer.
ಅಧ್ಯಾಪಕಿ: What is her name?
[ವಿರಾಮ–ವಿದ್ಯಾರ್ಥಿನಿ: Her name is Teresa Sheela]
ಅಧ್ಯಾಪಕಿ Her name is Teresa Sheela. [ಬೆಂಬಲ]
[ವಿರಾಮ–ವಿದ್ಯಾರ್ಥಿನಿ: Her name is Teresa Sheela.]
ಅಧ್ಯಾಪಕಿ: Who is she?
[ವಿರಾಮ–ವಿದ್ಯಾರ್ಥಿನಿ: She is a student of Linguistics.]
ಅಧ್ಯಾಪಕಿ: She is a student of Linguistics. [ಬೆಂಬಲ]
[ವಿರಾಮ–ವಿದ್ಯಾರ್ಥಿನಿ: She is a student of Linguistics.]

ಮೇಲಿನ ರೂಢಿಯ ಅಭ್ಯಾಸ ನಡೆದ ಮೇಲೆ ವಿದ್ಯಾರ್ಥಿ ಪ್ರಶ್ನೆ ಕೇಳುವಂತೆ ಮಾಡಬೇಕು; ಅಥವಾ ಆತನೇ ಪ್ರಶ್ನೆ ಕೇಳಿ ಉತ್ತರಿಸುವಂತೆ ಮಾಡಬೇಕು. ಒಟ್ಟಿನಲ್ಲಿ ಮೇಲಿನ ರೂಢಿ ಆತನಿಗೆ ಕರಗತ ವಾಗಬೇಕು.

ಧ್ವನಿಪಟ್ಟಿ ತಯಾರಿಕೆ

ಧ್ವನಿಪಟ್ಟಿಯಲ್ಲಿ ಧ್ವನಿ ಸಂಗ್ರಹಿಸಿ ಇಡುವುದೇ ಧ್ವನಿಪಟ್ಟಿ ತಯಾರಿಕೆ. ಧ್ವನಿ ಸಂಗ್ರಹ ಮಾಡುವ ಮುನ್ನ ಧ್ವನಿಪಟ್ಟಿಯ ಮೂಲಪ್ರತಿಯನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ಆಗ ಧ್ವನಿ ಸಂಗ್ರಹ ಮಾಡುವ ಕಾಲದಲ್ಲಿ ಮೂಲಪ್ರತಿಯನ್ನು ನಿರರ್ಗಳವಾಗಿ ಓದಲು ಅನುಕೂಲವಾಗುತ್ತದೆ. ಓದುಗ ತನ್ನ ದೇಹವನ್ನು ಬಿಗಿಯಾಗಿಡದೆ ಯಾವ ತರಹದ ಕೃತ್ರಿಮತೆಗೂ ಅವಕಾಶ ಕೊಡದೆ ಸಹಜವಾಗಿ ಓದಬೇಕು. ಬಿಗು ತೋರಿಸಿದರೆ ಅದು ಸ್ವರದಲ್ಲಿ ವ್ಯಕ್ತವಾಗಿ ವಿದ್ಯಾರ್ಥಿಗಳಿಗೆ ಕೇಳುವಲ್ಲಿ ಆಯಾಸದಾಯಕವಾಗುವುದು. ಆದುದರಿಂದ ಸ್ಫೂರ್ತಿಯಿಂದ, ಸಹಜಗತಿಯಲ್ಲಿ ಧ್ವನಿ ಸಂಗ್ರಾಹಕದ ಮುಂದೆ ಓದತಕ್ಕದ್ದು.

ಧ್ವನಿ ಸಂಗ್ರಹದ ಕಾಲ ಅಭ್ಯಾಸಕ್ಕಿರುವ ವೇಳೆಯ ಅರ್ಧದಷ್ಟಿರಬೇಕು. ಆಗ ಅಭ್ಯಾಸ ಮಾಡುವ ಸಮಯದಲ್ಲಿ ಧ್ವನಿಪಟ್ಟಿಯನ್ನು ಎರಡು ಸಲ ಬಳಸಲು ಸಾಧ್ಯವಾಗುತ್ತದೆ. ಧ್ವನಿಪಟ್ಟಿಯಲ್ಲಿ ಒಂದೇ

ಸ್ವರದ ಬದಲು ಹಲವು ಸ್ವರಗಳು ಇದ್ದರೆ ಶ್ರಾವಕರಿಗೆ ಕೇಳುವುದಕ್ಕೆ ಅನುಕೂಲಕಾರಿಯಾಗುತ್ತದೆ. ಕೊಡುವ ವಿವರಣೆಗಳು ಚಿಕ್ಕವಾಗಿ ಚೊಕ್ಕವಾಗಿರಬೇಕು; ಅಲ್ಲದೆ, ಸೂಕ್ತ ಉದಾಹರಣೆಗಳನ್ನು ಸಕಾಲದಲ್ಲಿ ಕೊಡಬೇಕು.

ವಿದ್ಯಾರ್ಥಿಗಳಿಗಾಗಿ ಪಟ್ಟಿಯಲ್ಲಿ ಕೊಡುವ ವಿರಾಮ ಅತಿ ದೀರ್ಘವಾಗಲಿ ಅಥವಾ ಅತ್ಯಲ್ಪಾವಧಿಯದಾಗಲಿ ಆಗಬಾರದು. ಉತ್ತರವನ್ನು ಎರಡಾವರ್ತಿ ಹೇಳಲು ಸಾಕಾಗುವಷ್ಟು ಅವಕಾಶವನ್ನಿತ್ತರೆ ಸಾಕು. ಧ್ವನಿಸಂಗ್ರಹ ಕಾಲದಲ್ಲಿ ಮಾತನ್ನು ಒಮ್ಮೆ ಗಟ್ಟಿಯಾಗಿ ಇನ್ನೊಮ್ಮೆ ಮೃದುವಾಗಿ ಉಚ್ಚರಿಸದೆ ಏಕರೀತಿಯಲ್ಲಿ ಅದು ಸಾಗುವಂತೆ ಮಾಡಬೇಕು. ಸೂಕ್ಷ್ಮಧ್ವನಿವರ್ಧಕ ಹಾಗೂ ಓದುಗನ ನಡುವಿನ ಅಂತರವನ್ನು ಬದಲಾಯಿಸಬಾರದು. ಮಾತಾಡುವಾಗ ಧ್ವನಿಗಾತ್ರ ಸಾಕಷ್ಟು ಇಲ್ಲದಿದ್ದರೆ ಧ್ವನಿಸಂಗ್ರಹ ಯಂತ್ರ ಅದನ್ನು ಹೆಚ್ಚಿಸಬೇಕಾಗುತ್ತದೆ. ಆಗ ಅಕ್ಕಪಕ್ಕದ ಧ್ವನಿಗಳು ಸಂಗ್ರಹವಾಗಬಹುದು! ಆದ್ದರಿಂದ ಸರಿಯಾದ ಗಾತ್ರದಿಂದ ಕೂಡಿದ ಧ್ವನಿಯಲ್ಲಿ ಮಾತಾಡಬೇಕು. ಪುಟಗಳನ್ನು ತಿರುಗಿಸುವಾಗ ಸದ್ದು ಮಾಡಬಾರದು; ಮಾಡಿದರೆ, ಅದೂ ಸಂಗ್ರಹವಾಗಬಹುದು.

ಸೂಕ್ಷ್ಮ ಧ್ವನಿವರ್ಧಕ ಯಂತ್ರವನ್ನು ಬಾಯಿಯ ಎದುರಿಗಿಟ್ಟುಕೊಂಡು ಮಾತಾಡಿದರೆ ಊಷ್ಮಗಳ ಉಚ್ಚಾರ ಇತ್ಯಾದಿ ಕೇಳುವಾತನಿಗೆ ಕರ್ಕಶವಾಗುವುವು. ಆದ್ದರಿಂದ ಅದನ್ನು ಮುಖದ ಬದಿಗಿಟ್ಟು ಮಾತಾಡಬೇಕು. ಇಷ್ಟೆಲ್ಲ ಜಾಗರೂಕತೆ ವಹಿಸಿಕೊಂಡರೂ ಒಮ್ಮೆಲೇ ಧ್ವನಿಸಂಗ್ರಹ ಯಶಸ್ವಿಯಾಗಲಾರದು. ಅದು ಕಾಲಕ್ರಮೇಣ ಅಭ್ಯಾಸಬಲದಿಂದ ಸುಲಭವಾಗುತ್ತದೆಂದು ಮರೆಯಬಾರದು.

ಪರಿಶೀಲನೆ ಹಾಗೂ ಮೌಲ್ಯಮಾಪನೆ

ಧ್ವನಿ ಸಂಗ್ರಹ ಮಾಡುತ್ತಿರುವಾಗ ಕಾರಣಾಂತರಗಳಿಂದ ಧ್ವನಿ ಸಂಗ್ರಹವಾಗದಿರಬಹುದು; ವಿರಾಮ ಅವಧಿಯನ್ನು ಹೆಚ್ಚು ಕಡಿಮೆ ಮಾಡಬೇಕಾಗಬಹುದು; ಹೊರಗಿನ ಗದ್ದಲ ಸಂಗ್ರಹವಾಗಿರಬಹುದು. ಕಾರಣ ಸಂಗ್ರಹಿತ ಧ್ವನಿಯನ್ನು ಪುನಃ ಕೇಳಿ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಸರಿಪಡಿಸಬೇಕಾಗುತ್ತದೆ.

ಧ್ವನಿಪಟ್ಟಿಗಳನ್ನು ತಯಾರಿಸಿದ ಬಳಿಕ ಅವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಬೇಕು. ತಯಾರಿಸಿದ ರೂಢಿಯ ಗತಿ, ರಚನೆಯ ಸರಳತೆ ಅಥವಾ ಕ್ಲಿಷ್ಟತೆ, ಕಾಲಾವಧಿಯ ಪರಿಮಿತಿ ಮುಂತಾದ ವಿಷಯಗಳನ್ನು ಗಮನದಲ್ಲಿಟ್ಟು ಧ್ವನಿಪಟ್ಟಿಯ ಮೌಲ್ಯಮಾಪನ ಮಾಡಬೇಕಾಗುತ್ತದೆ. ಹೀಗೆ ಅಧ್ಯಾಪನ ಅಧ್ಯಯನಗಳ ದೃಷ್ಟಿಯಿಂದ ಅದನ್ನು ಪರೀಕ್ಷಿಸಿದ ಬಳಿಕ ಯೋಗ್ಯಧ್ವನಿಪಟ್ಟಿಯನ್ನು ಧ್ವನಿಪಟ್ಟಾಲಯದಲ್ಲಿ ಇಡಬಹುದು.

ಪ್ರಯೋಗಶಾಲೆಯಲ್ಲಿ ವಿದ್ಯಾರ್ಥಿಚಟುವಟಿಕೆಗಳು

ಪ್ರಯೋಗಸಾಲೆಯಲ್ಲಿ ವಿದ್ಯಾರ್ಥಿ ಕೇವಲ ಶ್ರಾವಕನಾಗಿ ಕುಳಿತುಕೊಂಡಿರಬಹುದು; ಅಥವಾ ಪಾಠವನ್ನು ಕೇಳುತ್ತಿರುವಾಗ ಬೇರೆ ವಿಷಯದಲ್ಲಿ (ಬರೆಯುವುದು, ಮೌನದಲ್ಲಿ ಓದುವುದು...) ಮಗ್ನನಾಗಿರಬಹುದು. ಅಥವಾ ಕೇಳುತ್ತಿರುವಾಗ ಸಮಂಜಸವಾದ ಪ್ರಶ್ನೆಗಳನ್ನು ಕೇಳಬಹುದು; ಅಥವಾ ಕೇಳುತ್ತಿರುವಾಗಲೇ ಆ ವಿಷಯವನ್ನು ಇನ್ನೊಂದು ಧ್ವನಿಪಟ್ಟಿಯಲ್ಲಿ ಸಂಗ್ರಹ ಮಾಡಿಕೊಳ್ಳಬಹುದು. ಹೀಗೆ ಅನೇಕ ರೀತಿಯ ಚಟುವಟಿಕೆಗಳು ಪ್ರಯೋಗಸಾಲೆಯಲ್ಲಿ ನಡೆಯಬಹುದು. ಇವೆಲ್ಲ ವಿದ್ಯಾರ್ಥಿಯ ಉದ್ದೇಶ, ಆಸಕ್ತಿ, ಅರಿಸಿದ ರೂಢಿಗಳು, ದೊರಕುವ ಉಪಕರಣಗಳು—ಇವುಗಳನ್ನು ಹೊಂದಿಕೊಂಡಿವೆ.

ಪಾಠವನ್ನು ಕೇವಲ ಕೇಳಬೇಕಾದರೆ ನಿಷ್ಕ್ರಿಯಾಶ್ರವಣೋಪಕರಣವಿದ್ದರೆ ಸಾಕು. ಇದರ ಸಹಾಯದಿಂದ ವಿದ್ಯಾರ್ಥಿ ಕೇಳುತ್ತಿರುವಾಗ ಅವನ್ನು ಬರೆದಿಡಲು ಆತನಿಗೆ ಸಾಧ್ಯವಾಗುತ್ತದೆ; ಆದರೆ, ಪ್ರತ್ಯುತ್ತರಗಳನ್ನು ಕೊಟ್ಟು ಕ್ರಿಯಾತ್ಮಕವಾಗಿ ಭಾಗವಹಿಸುವುದು ಆಗದು. ಕಿವಿಯ ಮೇಲೆ ಕರ್ಣವಾಣಿ ಫಲಕ ಅಂಟಿಕೊಂಡಿರುವುದರಿಂದ ತನ್ನ ಸ್ವರವನ್ನು ಕೇಳಲು ಅಡಚಣೆಯಾಗುತ್ತದೆ. ಕಾರಣ ಕ್ರಿಯಾತ್ಮಕ ಶ್ರವಣೋಪಕರಣವನ್ನು ವಿದ್ಯಾರ್ಥಿಗಳಿಗೆ ಒದಗಿಸಿಕೊಡುವುದು ಅತ್ಯುತ್ತಮ.

ಕ್ರಿಯಾತ್ಮಕ ಶ್ರವಣ ಪ್ರಯೋಗಸಾಲೆಯಲ್ಲಿ ಪ್ರತಿ ವಿದ್ಯಾರ್ಥಿಗೂ ಒಂದು ಸೂಕ್ಷ್ಮ ಧ್ವನಿವರ್ಧಕ ಯಂತ್ರ ಅದಕ್ಕೆ ಜೊತೆಯಾಗಿ (ಸೂಕ್ಷ್ಮ ಧ್ವನಿವರ್ಧಕದಿಂದ ಬರುವ ಸಂಜ್ಞೆಗಳನ್ನು ವಿಸ್ತರಿಸುವುದಕ್ಕೆ) ಒಂದು ಮುಂಬರಿವರ್ಧಕವೂ ಇರುತ್ತದೆ. ಸೂಕ್ಷ್ಮಧ್ವನಿವರ್ಧಕ ಯಂತ್ರದ ಮೂಲಕ ವಿದ್ಯಾರ್ಥಿಯ

ಧ್ವನಿ ಆಯ್ದುಕೊಳ್ಳಲಾಗಿ ಕರ್ಣವಾಣಿಯ ಮೂಲಕ ಅದನ್ನು ಆತನ ಕಿವಿಗೆ ಕಳುಹಿಸಿಕೊಡಲಾಗುತ್ತದೆ. ಇದರಿಂದಾಗಿ ತನ್ನ ಪ್ರತ್ಯುತ್ತರಗಳನ್ನು ಕೇಳಲು ಆತನಿಗೆ ಅನುಕೂಲವಾಗುತ್ತದೆ.

ಚಾಚು ಪೀಠದಿಂದ ವಿದ್ಯಾರ್ಥಿಗಳ ಪ್ರತ್ಯುತ್ತರಗಳಿಗೆ ತಕ್ಕುದಾದ ಸೂಚನೆಗಳನ್ನು ಕೊಡಲು ಅನುಕೂಲವಾಗುವಂತೆಯೂ ಕರ್ಣವಾಣಿಯ ಮೂಲಕ ವಿದ್ಯಾರ್ಥಿಗಳೊಡನೆ ಸಂಪರ್ಕವನ್ನಿಡಲು ಸಾಧ್ಯವಾಗುವಂತೆಯೂ ತಂತಿ ಸಂಬಂಧ ನಿರ್ಮಾಣ ಮಾಡಲು ಕ್ರಿಯಾತ್ಮಕ ಶ್ರವಣ ಪ್ರಯೋಗಶಾಲೆಯಲ್ಲಿ ಅನುಕೂಲತೆ ಇದೆ. ಇಂತಹ ಪ್ರಯೋಗಶಾಲೆಯಲ್ಲಿ ವಿದ್ಯಾರ್ಥಿಗೆ ಯಾವ ತರಹದ ರೂಢಿಯ ಅಭ್ಯಾಸ ಮಾಡಲೂ ಅನುಕೂಲವಾಗುತ್ತದೆ. ರೂಢಿಗಳನ್ನು ತನಗೆ ಅನುಕೂಲವಾದ ವೇಗದಲ್ಲಿ ಅಭ್ಯಾಸ ಮಾಡಲು, ಕ್ಲಿಷ್ಟ ಭಾಗಗಳನ್ನು ಪುನರಾವರ್ತಿಸಲು, ಅತಿ ಸರಳ ಭಾಗಗಳನ್ನು ಬಿಟ್ಟುಬಿಡಲು ವಿದ್ಯಾರ್ಥಿಗೆ ತನ್ನ ಪ್ರಯೋಗ ಶಾಲಾ ಕೋಣೆಯಲ್ಲಿ ಧ್ವನಿ ಸಂಗ್ರಾಹಕ ಬೇಕಾಗುವುದು. ತನ್ನ ಮಾತುಗಳನ್ನು ಸಂಗ್ರಹಿಸಲೂ ಇದರಿಂದ ಸಾಧ್ಯವಾಗಬೇಕು. ಕಾರಣ ದ್ವಿದ್ವಾರಾ-ಧ್ವನಿ ಸಂಗ್ರಾಹಕ ಆತನಿಗೆ ಅನೇಕ ರೀತಿಯಲ್ಲಿ ಪ್ರಯೋಜನಕಾರಿಯಾಗುತ್ತದೆ. ಉದಾಹರಣೆಗೆ ಅಧ್ಯಾಪಕ ಕ-ದ್ವಾರದಲ್ಲಿದ್ದರೆ ವಿದ್ಯಾರ್ಥಿ ಆತನನ್ನು ಕೇಳಿ ಖ-ದ್ವಾರದಲ್ಲಿ ತನ್ನ ಪ್ರತ್ಯುತ್ತರಗಳನ್ನು ಸಂಗ್ರಹಿಸಬಹುದು. ಆಮೇಲೆ ಕ- ಮತ್ತು ಖ-ದ್ವಾರಗಳೆರಡನ್ನೂ ನುಡಿಯಿಸಿ ತನ್ನ ಉತ್ತರಗಳನ್ನು ಅಧ್ಯಾಪಕರಿತ್ತ ಉತ್ತರಗಳೊಡನೆ ಹೋಲಿಸಿ ಖ-ದಲ್ಲಿಯ ತಪ್ಪುಗಳನ್ನು ತಿದ್ದಿಕೊಂಡು ಖ-ದ ಹೊಸ ಪ್ರತಿಯನ್ನು ಮಾಡಿಕೊಳ್ಳಬಹುದು.

ಭಾಷಾ ಪ್ರಯೋಗಶಾಲೆಯ ಯೋಜನೆ

ಭಾಷಾ ಪ್ರಯೋಗ ಶಾಲೆಯಲ್ಲಿ ಕರ್ಣವಾಣಿ, ಸೂಕ್ಷ್ಮ ಧ್ವನಿವರ್ಧಕ, ಮುಂಬರಿ ವರ್ಧಕಗಳು, ಧ್ವನಿ ಸಂಗ್ರಾಹಕಗಳು, ಕೋಣೆಗಳು, ಚಾಚುಪೀಠ, ಮುನ್ಸೂಚಕ ವ್ಯವಸ್ಥೆ, ನಿಯಂತ್ರಕ ಸ್ವಿಚ್ಚು, ಧ್ವನಿಪಟ್ಟಿಯ ನಕಲು ಪ್ರತಿ ಸೌಲಭ್ಯಗಳು, ಧ್ವನಿಸಂಗ್ರಹಶಾಲೆ, ಧ್ವನಿ ಪಟ್ಟಾಲಯ, ವಿದ್ಯುತ್ತು ಸರಬರಾಯಿ ಮತ್ತು ಧ್ವನಿ ನಿಯಾಮಕ ಸ್ಥಿತಿ ಇರಬೇಕು. ಸರಿಯಾದ ಬೆಳಕು, ಹವೆ, ಉಷ್ಣಗಳ ಜೊತೆಯಲ್ಲಿ ಸರಳತೆ ಎಲ್ಲೆಲ್ಲೂ ಎದ್ದು ಕಾಣಬೇಕು.

ಭಾಷಾ ಪ್ರಯೋಗಶಾಲೆಯ ಉದ್ದೇಶವನ್ನು ಅವಲಂಬಿಸಿ ಉಪಕರಣಗಳ ಪೂರೈಕೆಯನ್ನು ಮಾಡಬೇಕಾಗುತ್ತದೆ. ಪಾಠಗಳನ್ನು ಚಾಚು ಪೀಠದಿಂದಲೇ ನುಡಿಯಿಸುವುದಾದರೆ ಪ್ರತಿ ಕೋಣೆಯಲ್ಲಿ ಧ್ವನಿ ಸಂಗ್ರಾಹಕಗಳು ಇರಬೇಕಾಗಿಲ್ಲ; ನಿಸ್ತಂತುವಾರ್ತಾ ಪ್ರಸರಣ ಮಾದರಿಯ ಭಾಷಾ ಪ್ರಯೋಗಶಾಲೆ ಸಾಕು. ಪ್ರತಿಯೊಬ್ಬ ವಿದ್ಯಾರ್ಥಿಗೆ ತಾನು ಆರಿಸಿದ ಪಾಠ ಮಾತ್ರ ಬೇಕಾದರೆ ವಾಚನಾಲಯ ಮಾದರಿಯ ಪ್ರಯೋಗಶಾಲೆ ಇರಬೇಕಾಗುತ್ತದೆ.

ನಿಸ್ತಂತುವಾರ್ತಾ ಪ್ರಸರಣ ಮಾದರಿಯ ಪ್ರಯೋಗಶಾಲೆಯಲ್ಲಿ ಕರ್ಣವಾಣಿ, ಸೂಕ್ಷ್ಮ ಧ್ವನಿ ವರ್ಧಕ, ಮುಂಬರಿ ವರ್ಧಕಗಳು ಪ್ರತಿಯೊಂದು ಕೋಣೆಯಲ್ಲಿಯೂ ಇರಬೇಕು. ಚಾಚುಪೀಠದಿಂದ ಏಕ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ಪಾಠಬೋಧನೆ ನಡೆಯಬೇಕಾದರೆ ವಿದ್ಯಾರ್ಥಿಗೆ ಬೇಕಾದ ಪಾಠವನ್ನು ಆರಿಸಿಕೊಳ್ಳಲು ಅನುಕೂಲವಾಗುವಂತೆ ವಿಶಿಷ್ಟ ತರಂಗಗ್ರಾಹಕ ಸ್ವಿಚ್ಚು ಪ್ರತಿ ಕೋಣೆಯಲ್ಲಿ ಇರಬೇಕಾಗುತ್ತದೆ. ಘನ ನಿಯಾಮಕ ಇದ್ದರೆ ಪಾಠದ ಘನವನ್ನೂ ತಾನು ಕೊಡುವ ಉತ್ತರದ ಘನವನ್ನೂ ಕರ್ಣವಾಣಿಗಳಿಗೆ ಕಳುಹಿಸಲು ಅನುಕೂಲವಾಗುತ್ತದೆ.

ವಾಚನಾಲಯ ಮಾದರಿಯ ಪ್ರಯೋಗಶಾಲೆಯಲ್ಲಿ ಪ್ರತಿಕೋಣೆಯಲ್ಲಿ ಧ್ವನಿ ಸಂಗ್ರಾಹಕ ಇರುತ್ತದೆ. ಈ ಧ್ವನಿ ಸಂಗ್ರಾಹಕದಲ್ಲಿ ತನಗೆ ಅವಶ್ಯವಾಗಿರುವ ಯಾವುದಾದರೊಂದು ಪಟ್ಟಿಯನ್ನು ತನಗೆ ಬೇಕಾಗುವಷ್ಟು ಕಾಲಾವಧಿಯಲ್ಲಿ ನುಡಿಯಿಸಿಕೊಳ್ಳಬಹುದು.

ಹೆಚ್ಚಾಗಿ ಭಾಷಾ ಪ್ರಯೋಗಶಾಲೆಯಲ್ಲಿ ಎರಡೂ ಮಾದರಿಗಳಿರುತ್ತವೆ. ಚಾಚುಪೀಠದಿಂದ ಉಪಾಧ್ಯಾಯನಿಗೆ ಯಾವ ಕೋಣೆಯೊಡನೆಯೂ ಸಂಪರ್ಕವನ್ನಿಡಲು ಸಾಧ್ಯವಾಗುವಂತೆ ಏರ್ಪಾಡು ಇರುತ್ತದೆ. ಚಾಚುಪೀಠದಿಂದಲೇ ಎಲ್ಲ ಧ್ವನಿ ಸಂಗ್ರಾಹಕಗಳನ್ನು ಏಕಕಾಲದಲ್ಲಿ ಪ್ರಾರಂಭಿಸಲು ಸಾಧ್ಯವಾಗುವಂತೆ ಒಂದು ಸ್ವಿಚ್ಚಿನ ಏರ್ಪಾಡು ಇರುವುದುಂಟು. ಸಮಗ್ರ ಪ್ರಯೋಗಶಾಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗುವಂತೆ ಚಾಚುಪೀಠ ಉನ್ನತ ಸ್ಥಾನದಲ್ಲಿರುತ್ತದೆ.

ಶ್ರೀ ಅರವಿಂದರು ತಾವು ಕೈಕೊಂಡ ಯಾವುದನ್ನಾದರೂ ಅನಂತಪ್ರಮಾಣದಲ್ಲಿಯೇ ಸಾಧಿಸಿದವರು. ಕಾವ್ಯವೊ, ರಾಜಕೀಯವೊ, ಚರಿತ್ರೆಯೊ, ತತ್ತ್ವವೊ, ಮನಶ್ಶಾಸ್ತ್ರವೊ ಮಹಾಕಾವ್ಯವೊ, ಭಾವಗೀತೆಯೊ, ವಿಮರ್ಶೆಯೊ.–ಹೀಗೆ ನೂರಾರು ಪ್ರಕಾರಗಳಲ್ಲಿ ಅವರ ಪ್ರತಿಭೆ ಮಹಾದ್ಭುತವಾಗಿ ಪ್ರಕಟವಾಗಿದೆ. ಯಾವ ವ್ಯಕ್ತಿ ಯಾವುದನ್ನು ಬೇಕಾದರೂ ಅನಂತ ಪ್ರಮಾಣದಲ್ಲಿ ಸ್ವೀಕರಿಸುವಷ್ಟು ಸಾಮಗ್ರಿ ಅಲ್ಲಿದೆ. ಶ್ರೀ ಅರವಿಂದರ ಜೀವನದ ಸ್ವರೂಪವೂ ಆ ತೆರನಾದ ಅದ್ಭುತ ಪ್ರಮಾಣದಲ್ಲಿಯೆ ಗೋಚರವಾಗುತ್ತದೆ. ಬಂಗಾಳದಲ್ಲಿ ಹುಟ್ಟಿ, ಚಿಕ್ಕ ವಯಸ್ಸಿನಲ್ಲಿಯೆ ಇಂಗ್ಲೆಂಡಿಗೆ ಹೋಗಿ, ತಾರುಣ್ಯದಲ್ಲಿ ವಿದ್ಯಾರ್ಜನೆಮಾಡಿ ಯಶಸ್ಸು ಪಡೆದು ಭಾರತಕ್ಕೆ ಬಂದರು. ಬರೋಡಾ ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿದ್ದು ಅಲ್ಲಿಯ ಕಾಲೇಜಿನಲ್ಲಿ ಪ್ರಾಧ್ಯಾಪಕರೂ ಪ್ರಿನ್ಸಿಪಾಲರೂ ಆದರು. ಅನಂತರ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿ ಮಹಾಶಕ್ತಿಯ ಸಂಚಲನ ಮಾಡಿದರು: ದೇಶದ ನಾಡಿಯಲ್ಲಿ ಹೊಸ ಚೈತನ್ಯವನ್ನು ಹರಿಸಿದರು. ಅವರು ಸೆರೆಮನೆಯಲ್ಲಿದ್ದಾಗ ಪಡೆದ ದರ್ಶನದ ಪರಿಣಾಮವಾಗಿ ಪಾಂಡಿಚೆರಿಯನ್ನು ಸೇರಿ ಅಲ್ಲಿ ಸಾಧಕರಾಗಿ ನಿಂತರು.

ಸ್ವಾಮಿ ವಿವೇಕಾನಂದರು, ಮಹಾತ್ಮಾ ಗಾಂಧಿ, ಶ್ರೀ ಅರವಿಂದರು ಇವರೆಲ್ಲ ಒಂದು ಕ್ಷೇತ್ರಕ್ಕೆ ಸೇರುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ರಮಣಮಹರ್ಷಿ ಇವರು ಮತ್ತೊಂದು ಭೂಮಿಕೆಗೆ ಸೇರುವವರು. ಶ್ರೀ ಅರವಿಂದರ ಮೇಧಾಶಕ್ತಿ, ಪ್ರಾಚ್ಯ ಪಾಶ್ಚಾತ್ಯ ತತ್ತ್ವಶಾಸ್ತ್ರಗಳ ಪ್ರವೀಣತೆ, ಪ್ರಖರ ತೀಕ್ಷ್ಣ ಬುದ್ಧಿಶಕ್ತಿ ಇವುಗಳನ್ನು ನೋಡಿದಾಗ ನನಗೆ ಒಂದು ವಿಚಿತ್ರ ಸಂಗತಿ ನೆನಪಿಗೆ ಬರುತ್ತದೆ. ಒಮ್ಮೆ ಅವರು ತಮ್ಮ ಅಂತರಂಗದ ಶಿಷ್ಯರಿಗೆ ತಾವು ಹಿಂದಿನ ಜನ್ಮಗಳಲ್ಲಿ ಅಗಸ್ಟಸ್ ಸೀಸರ್ ಆಗಿದ್ದೆ, ಲಿಯೋನಾರ್ಡೋ ಡಾ ವಿಂಚಿಯಾಗಿದ್ದೆ ಎಂದು ಹೇಳಿದರಂತೆ! ಮೊದಲು ಇದನ್ನು ಕೇಳಿದಾಗ ಇದರ ಅರ್ಥವನ್ನು ಜೀರ್ಣ ಮಾಡಿಕೊಳ್ಳುವುದು ಕಷ್ಟವಾಗಿ ಕಂಡಿತು. ಆದರೆ ಅವರ 'Life Divine', 'Essays on the Giṭa,' Synthesis of Yoga' ಮೊದಲಾದ ಬೃಹತ್ ಕೃತಿಗಳನ್ನು ಓದಿದವರು ಜನ್ಮಾಂತರದ ವಿಚಾರವಾಗಿ ಆಶ್ಚರ್ಯಪಡಲಾರರು. ಒಂದು ಜೀವ ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಏರುತ್ತ ಬರುತ್ತದೆ. ಒಂದು ವಿಷಯ ನಿಶ್ಚಯ: ಅಗಸ್ಟಸ್ ಸೀಸರನಿಗಿಂತ ಲಿಯೋನಾರ್ಡೋ ಡಾ ವಿಂಚಿ ಆಧ್ಯಾತ್ಮಿಕವಾಗಿ ಬಹು ಮುಂದುವರಿದ ಚೇತನ. ಅದಕ್ಕಿಂತ ಶ್ರೀ ಅರವಿಂದರದು ಪೂರ್ಣಸಿದ್ಧಿಯ ಸ್ಥಾನ. ಲಿಯೋನಾರ್ಡೋ ಡಾ ವಿಂಚಿಯಲ್ಲಿ ಕಾಣುವ ಸರ್ವತೋಮುಖವಾದ ವೈವಿಧ್ಯತೆಯೂ ಸೀಸರನಲ್ಲಿ ಕಾಣುವ ಪರಾಕ್ರಮ ವೀರ ಸಾಹಸಗಳೂ ಶ್ರೀ ಅರವಿಂದರಲ್ಲಿ ಸಹಸ್ರಪಾಲು ಮಿಗಿಲಾಗಿ ಕಾಣುತ್ತವೆ[1].

—ಕುವೆಂಪು

1 'ಶ್ರೀ ಅರವಿಂದರ ಕಾವ್ಯದರ್ಶನ', ಷಷ್ಟಿನಮನ, ಉದಯರವಿ ಪ್ರಕಾಶನ, ಮೈಸೂರು. 1964, ಪು. 181–182

ಟಿ. ಕೆ. ವಾಸುದೇವ ಭಟ್

ನಮ್ಮ ವ್ಯವಸಾಯದ ಆಡಳಿತ ಮತ್ತು ಸಂಘಟನೆ

ಆಧುನಿಕ ಆಡಳಿತ, ವ್ಯವಹಾರ ಮತ್ತು ಯಾಂತ್ರೀಕರಣದಿಂದ ಮಾತ್ರ ಭಾರತದ ವ್ಯವಸಾಯದ ಉದ್ಧಾರ ಸಾಧ್ಯವಿದೆ. ಈ ಬದಲಾವಣೆಗೆ ಮುಖ್ಯ ಬೇಕಾದ್ದು ವ್ಯವಸಾಯದಲ್ಲಿ ಸೇರಿಕೊಂಡಿರುವ ವಿವಿಧ ಘಟಕಗಳಾದ ಭೂಮಿ, ಬಂಡವಾಳ, ದೈಹಿಕ ಮತ್ತು ಮಾನಸಿಕ ಶ್ರಮ ಮತ್ತು ನಾಯಕತ್ವಗಳನ್ನು ಸರಿಯಾಗಿ ಹೊಂದಿಸಲು ಸರಕಾರದ ವ್ಯವಸಾಯ ಧೋರಣೆ. ಸ್ವಾತಂತ್ರ್ಯ ಸಿಕ್ಕಿದ ಅನಂತರ ಸರ್ಕಾರ ದೇಶದ ಆರ್ಥಿಕ ಅಭಿವೃದ್ಧಿಗೆ ಹಲವಾರು ನಮೂನೆಯ ಧೋರಣೆಗಳನ್ನು ಕಾರ್ಯಾಚರಣೆಗೆ ತಂದಿದೆ. ಆದರೆ ಈ ಧೋರಣೆಯಲ್ಲಿ ಕೆಲಸಕ್ಕೆ ಬರುವ ತತ್ತ್ವ ಯಾವುದೂ ಇದ್ದಂತೆ ಕಾಣುವುದಿಲ್ಲ. ಈ ಕಲಸುಮೇಲೋಗರದಿಂದ ನಮ್ಮ ದೇಶದ ಆರ್ಥಿಕ ಅಭಿವೃದ್ಧಿ ಅಸಾಧ್ಯ. ಆದುದರಿಂದ ಈ ಲೇಖನದಲ್ಲಿ ಪ್ರತಿಪಾದಿಸುವ ವಿಷಯವೇನೆಂದರೆ, ನಮ್ಮ ಆರ್ಥಿಕ ದೌರ್ಬಲ್ಯ ಹೋಗಬೇಕಾದರೆ ನಮ್ಮ ದೇಶದ ಆರ್ಥಿಕ ರಂಗದ ಅಭ್ಯಾಸದಲ್ಲಿ ಒಂದು ಹೊಸ ನೋಟದ ಉದಯವಾಗಬೇಕು. ನಮ್ಮ ವ್ಯವಸಾಯದ ರಂಗವನ್ನು ರೂಪಿಸುವ ವಿವಿಧ ಶಕ್ತಿಗಳ ಕೂಲಂಕಷ ಶೋಧನೆಯ ಆಧಾರದ ಮೇಲೆ ವ್ಯವಸಾಯದ ಅಭಿವೃದ್ಧಿಗೆ ತಕ್ಕುದಾದ ಧೋರಣೆಯನ್ನು ಅಳವಡಿಸುವುದು ಯುಕ್ತವಾಗಿದೆ. ಆದರೆ ಅಭಿವೃದ್ಧಿಯ ಮಾತು ಬರೇ ವಿಜ್ಞಾನದ ಪ್ರಶ್ನೆ ಮಾತ್ರವಲ್ಲ. ಇದು ಸಮಾಜಜೀವನದ ಮತ್ತು ಸರ್ಕಾರ ಬಯಸುವ ಮೌಲ್ಯ ಮತ್ತು ಮಾದರಿಯ ಪ್ರಶ್ನೆಯೂ ಹೌದು. ವ್ಯವಸಾಯದ ಅಭಿವೃದ್ಧಿಯಲ್ಲಿ ಮೌಲ್ಯ ಮಾದರಿಯ ಪ್ರಶ್ನೆ ಅಂತರ್ಗತವಾದ ಮಾತ್ರಕ್ಕೆ ಸಮಾಜವಿಜ್ಞಾನಿಗಳಾಗಲಿ ಅರ್ಥಶಾಸ್ತ್ರಜ್ಞರಾಗಲಿ ಹೆದರುವ ಆವಶ್ಯಕತೆ ಇಲ್ಲ. ಮೌಲ್ಯ ಮಾದರಿಗಳನ್ನು ತೆಗೆದುಕೊಂಡೇ ಅವುಗಳ ಸಮತೋಲನ ಮಾಡಿಕೊಂಡೇ ನಾವು ಸಮಾಜದ ವಿವಿಧ ರಂಗಗಳ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ. ಈ ಸಮತೋಲನೆಯನ್ನು ಮಾಡುವಾಗ ಕಣ್ಣೆದಿರು ಇಟ್ಟುಕೊಳ್ಳಬೇಕಾದ ಮುಖ್ಯವಾದ ವಿಷಯವೆಂದರೆ ಒಂದನೆಯದಾಗಿ ಪ್ರಗತಿಪರವಾದ ನ್ಯಾಯ ಮತ್ತು ಎರಡನೆಯದು ವ್ಯಕ್ತಿಯ ಮತ್ತು ಸಮಾಜದ ಸರ್ವತೋಮುಖವಾದ ಸುಖ ಸಂತೋಷ. ಈ ಚೌಕಟ್ಟನ್ನು ಮೀರದ ಅಥವಾ ಈ ಚೌಕಟ್ಟನ್ನು ಇರಿಸಿಕೊಳ್ಳದ ವ್ಯವಸಾಯದ ಅಭಿವೃದ್ಧಿ ಶ್ಲಾಘನೀಯವಾಗದು.

ನಮ್ಮ ವ್ಯವಸಾಯವನ್ನು ರೂಪಿಸುವ ಮತ್ತು ಇಷ್ಟರ ತನಕ ಅರ್ಥ ವಿಜ್ಞಾನಿಗಳಿಗಾಗಲಿ ಸಮಾಜ ಶಾಸ್ತ್ರಜ್ಞರಿಗಾಗಲಿ ಸಾಕಷ್ಟು ರೀತಿಯಲ್ಲಿ ಗಮನಕ್ಕೆ ಬಾರದ ವಿಷಯವೆಂದರೆ ಕುಟುಂಬ, ಜಾತಿ, ಕೃಷಿಕನ ಅಂತಸ್ತು ಮತ್ತು ವ್ಯವಸಾಯಗಳೊಳಗಿರುವ ಸಂಬಂಧ, ಅವು ಒಂದರ ಮೇಲೊಂದು ಬೀರಿರುವ ಪ್ರಭಾವ. ವ್ಯವಸಾಯ ಮತ್ತು ಕುಟುಂಬ ಜೀವನಗಳೊಳಗಿನ ಸಂಬಂಧದ ಸರಿಯಾದ ಪರಿಚಯ ಮಾಡಿಕೊಂಡರೆ ಮಾತ್ರ ವ್ಯವಸಾಯದ ಅಭಿವೃದ್ಧಿಗೆ ಬೇಕಾದ ನಕ್ಷೆಯ ತಯಾರಿ ಮಾಡಬಹುದು. ಅಂತಹ ಸಮಾಜದಲ್ಲಿರುವ ಬೇರೆ ಬೇರೆ ಶಕ್ತಿಗಳನ್ನು ಎದುರಿಸಿ ಕಾರ್ಯಗತವಾಗಲು ಸಾಧ್ಯವಿದೆ. ಒಂದು ತಲೆಮಾರಿನ ಹಿಂದೆ ನಮ್ಮ ದೇಶದ ವ್ಯವಸಾಯದ ಸಮಸ್ಯೆಗಳನ್ನು ನಾವು ಹೇಗೆ ಅರ್ಥಮಾಡಿಕೊಳ್ಳುತ್ತಿದ್ದೆವೋ ಮತ್ತು ಹೇಗೆ ಅವುಗಳನ್ನು ಬಿಡಿಸಲು ಪ್ರಯತ್ನಿಸುತ್ತಿದ್ದೆವೋ ಅಂತಹ ಪರಿಸ್ಥಿತಿ ಇಂದಿನ ಜಗತ್ತಿನಲ್ಲಿ ಇಲ್ಲವಾಗಿದೆ. ಯಾವ ಒಂದು ಸಮಸ್ಯೆಯನ್ನು ತೆಗೆದುಕೊಂಡರೂ ಅದು ಒಂದು

ಬಿಡಿ ಪ್ರಶ್ನೆಯಲ್ಲ. ಅದು ಇಡೀ ಸಮಾಜವೆಂಬ ಜೀವಿಯ ಒಂದು ಭಾಗವಾಗಿದೆ ಎಂದು ಈಗ ಹೆಚ್ಚು ಹೆಚ್ಚಾಗಿ ಮನವರಿಕೆಯಾಗುತ್ತಿದೆ. ಆದ್ದರಿಂದ ಒಂದು ಪ್ರಶ್ನೆಯನ್ನು ಬಗೆಹರಿಸಲು ಪ್ರಯತ್ನಿಸುವವರು ಆ ಪ್ರಶ್ನೆ ಯಾವ ರೀತಿಯಲ್ಲಿ ಇತರ ಭಾಗಗಳೊಂದಿಗೆ ಮತ್ತು ಸಂಪೂರ್ಣ ದೇಶದೊಂದಿಗೆ ಸೇರಿಕೊಂಡಿದೆ ಎಂಬ ವಿಷಯವನ್ನು ತಿಳಿದುಕೊಳ್ಳಬೇಕಾಗಿದೆ.

ವ್ಯವಸಾಯಕ್ಕೂ ಕೈಗಾರಿಕೆಗೂ ತುಂಬ ವ್ಯತ್ಯಾಸವಿದೆ. ಆದರೆ ಕೈಗಾರಿಕೆಯನ್ನು ನಡೆಸುವ ಕ್ರಮ, ಅಲ್ಲಿರುವ ಆಡಳಿತ ಮತ್ತು ಅದರಲ್ಲಿರುವ ಸಮಸ್ಯೆಗಳನ್ನು ಪರಿಹರಿಸುವ ಸೂತ್ರ ಮುಂತಾದವನ್ನು ವ್ಯವಸಾಯದಲ್ಲಿ ಕೂಡ ಯುಕ್ತ ರೀತಿಯಲ್ಲಿ ಬಳಸಿದಾಗ ಮಾತ್ರ ವ್ಯವಸಾಯದ ಅಭಿವೃದ್ಧಿ ಸಾಧ್ಯ. ವ್ಯವಸಾಯದಲ್ಲಿ ಕೈಗಾರಿಕೆಯ ಸೂತ್ರಗಳನ್ನು ಬಳಸಲು ಅಸಾಧ್ಯವೆನ್ನುವ ಮಾತು ಅಜ್ಞಾನ ಅಥವಾ ಸ್ವಾರ್ಥಸಾಧನೆಯ ಮಾತೆಂದರೂ ತಪ್ಪಾಗದು. ಆದರೆ ಅಂತಹ ಪ್ರಗತಿ ನಮ್ಮ ವ್ಯವಸಾಯದಲ್ಲಿ ಬರಬೇಕಾದರೆ ಈಗ ಇರುವ ಪರಿಸ್ಥಿತಿಯಲ್ಲಿ ಮೂಲಭೂತವಾದ ಬದಲಾವಣೆಯ ಆವಶ್ಯಕತೆಯಿದೆ. ಇಂತಹ ಬದಲಾವಣೆಯನ್ನು ಯೋಚಿಸುವಾಗ ಮೊತ್ತಮೊದಲಾಗಿ ಕಾಣುವುದು ಕುಟುಂಬ ಮತ್ತು ವ್ಯವಸಾಯದೊಳಗೆ ಇರುವ ಪ್ರಗತಿಗೆ ಅಹಿತವಾಗಿರುವ ಸಂಬಂಧ.

ಕುಟುಂಬಜೀವನದ ಆಗುಹೋಗುಗಳು ವ್ಯವಸಾಯವನ್ನು ಕುಂಠಿಸದಂತೆ ಮಾಡಬೇಕಾದರೆ ಕುಟುಂಬ ಮತ್ತು ವ್ಯವಸಾಯದೊಳಗೆ ಇರುವ ಸಂಪರ್ಕವನ್ನು ಸಂಪೂರ್ಣವಾಗಿ ಮುರಿದು ವ್ಯವಸಾಯವನ್ನು ಕೈಗಾರಿಕೆಯಂತೆ ಮೊತ್ತ ಆಡಳಿತೆಯ ಅವಿಭಾಜ್ಯ ಅಂಗವಾಗಿಸುವುದು ಅತಿ ಅಗತ್ಯ. ಕೈಗಾರಿಕೆಯಾಗಲಿ ವ್ಯವಸಾಯವಾಗಲಿ ಆಡಳಿತೆ ಮತ್ತು ಆಡಳಿತ ಸೂತ್ರದ ಮೇಲೆ ನಡೆಯದಿರುವಾಗ ಉತ್ಪತ್ತಿಯನ್ನಾಗಲಿ ಸುಭಿಕ್ಷೆಯನ್ನಾಗಲಿ ತರುವುದು ಅಸಾಧ್ಯ. ನಮ್ಮ ಒಟ್ಟು ದೇಶವನ್ನು ನೋಡುವಾಗ ಇಲ್ಲಿ ಕಂಡುಬರುವ ಉದ್ಯೋಗ ವ್ಯವಸ್ಥೆಯಲ್ಲಿ ಒಂದು ಸೋಜಿಗವೂ ಶೋಚನೀಯವೂ ಆದ ಪರಿಸ್ಥಿತಿ ಕಣ್ಣ ಮುಂದೆ ತೋರುತ್ತಿದೆ. ಅದೇನೆಂದರೆ ವ್ಯವಸಾಯವನ್ನು ಮಾಡಲು ಕೇವಲ ಅವಿದ್ಯಾವಂತರನ್ನೂ, ಕೈಗಾರಿಕೆಗೆ ವಿದ್ಯಾವಂತರನ್ನೂ ಇಟ್ಟಿದ್ದು; ಮತ್ತು ಕೈಗಾರಿಕೆಯ ವಸ್ತುಗಳಿಗೆ ಹೆಚ್ಚು ಮೌಲ್ಯವನ್ನೂ ಕೈಗಾರಿಕೆಯಲ್ಲಿ ಸೇರಿಕೊಂಡವರಿಗೆ ಹೆಚ್ಚು ವೇತನವನ್ನೂ ಮಾಡಿದ್ದು. ಈ ತರದ ವ್ಯವಸ್ಥೆಯಲ್ಲಿ ಎರಡು ರೀತಿಯ ದೋಷಗಳು ಮೊದಲಾಗಿ ತೋರುತ್ತವೆ. ಒಂದನೆಯದಾಗಿ ಸಾಕಷ್ಟು ಆಹಾರ ಉತ್ಪತ್ತಿಯಾಗದಂತಾಯಿತು. ಎರಡನೆಯದಾಗಿ ಆಹಾರೋತ್ಪತ್ತಿಯಲ್ಲಿ ಸೇರಿಕೊಂಡ ಜನರಿಗೆ ಉತ್ತಮ ಜೀವನ ಸಿಗದಂತಾಯಿತು. ಮನುಷ್ಯನ ಪ್ರಪ್ರಥಮ ಬೇಡಿಕೆ ಆಹಾರವಾದ್ದರಿಂದಲೂ ನಮ್ಮ ದೇಶದಲ್ಲಿ ಹೆಚ್ಚಿನ ಜನಸಂಖ್ಯೆ ಹಳ್ಳಿಯಲ್ಲಿ ವ್ಯವಸಾಯದಲ್ಲಿರುವುದರಿಂದಲೂ ನಮ್ಮ ಸರ್ಕಾರ ವ್ಯವಸಾಯದ ಬಗ್ಗೆ ಸರಿಯಾದ ಧೋರಣೆಯನ್ನು ಮಾಡುವುದರಲ್ಲಿ ಸೋತದ್ದರಿಂದ ನಮ್ಮ ದೇಶ ಇನ್ನೂ ಕೂಡ ಪ್ರಗತಿಯನ್ನು ಸಾಧಿಸದಂತಾಯಿತು. ನಮ್ಮ ದೇಶದ ಆರ್ಥಿಕ ಹಾಗೂ ಉದ್ಯಮಗಳ ವ್ಯವಸ್ಥೆಯನ್ನು ನೋಡುವಾಗ ಉದ್ಯಮಗಳ ಬೆಳವಣಿಗೆ ಮತ್ತು ಅವುಗಳನ್ನು ನಡೆಸುವ ಕ್ರಮ, ಅದರಲ್ಲಿ ಸೇರಿಕೊಂಡಿರುವ ಜನರ ಮನೋವೃತ್ತಿ, ಅವರ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಹೊಂದಿಕೊಂಡಿದೆಯೆಂದು ಧೈರ್ಯವಾಗಿ ಹೇಳಬಹುದು. ವ್ಯವಸಾಯದಲ್ಲಿ ಸೇರಿಕೊಂಡಿರುವ ಕೆಲಸಗಾರರ ಹಿಡುವಳಿದಾರರ ಮತ್ತು ಇತರ ಗುಂಪುಗಳ ಸಂಸ್ಕೃತಿ ಮತ್ತು ಮನೋವೃತ್ತಿ ವ್ಯವಸಾಯದ ಮೇಲೆ ಪ್ರಭಾವವನ್ನು ಬೀರುತ್ತದೆ. ಅಂತೆಯೇ ಕೈಗಾರಿಕೆಯಲ್ಲಿ ಸೇರಿಕೊಂಡ ಬಂಡವಾಳಶಾಹಿಗಳು ಮಾನಸಿಕ ಮತ್ತು ದೈಹಿಕ ಕೆಲಸ ಮಾಡುವ ವರ್ಗ. ವಸ್ತುಗಳನ್ನು ಮಾರುವವರುಗಳು ತಮ್ಮ ಪಾಲಿನ ಲಾಭವನ್ನು ಹೆಚ್ಚಿಸಲೋಸುಗ ಒಬ್ಬರನ್ನೊಬ್ಬರು ಪ್ರತಿಸ್ಪರ್ಧೆಯನ್ನೂ ಒಳಜಗಳವನ್ನೂ ಮಾಡುವುದು ನಮಗೆ ತೋರುವ ಸಂಗತಿ. ಆದ್ದರಿಂದ ಒಂದು ದೇಶದ ಅರ್ಥವ್ಯವಸ್ಥೆಯ ಮೇಲೆ ಅಥವಾ ಉದ್ಯಮಕೂಟದ ಮೇಲೆ ಆ ದೇಶದಲ್ಲಿ ಇರಬಹುದಾದ ಪ್ರಗತಿರಹಿತ ಪರಂಪರೆಯ ಪ್ರಭಾವ ಬಾರದಂತಾಗಬೇಕಾದರೆ ಉದ್ಯಮಗಳ ಮೇಲೂ ಅರ್ಥವ್ಯವಸ್ಥೆಯ ಮೇಲೂ ಸಮಂಜಸವಾದ ಹತೋಟಿ ಅಗತ್ಯ. ಉದ್ಯಮಗಳ ದೈನಂದಿನ ವ್ಯವಹಾರ ಹಾಗೂ ಅವುಗಳ ಅಭಿವೃದ್ಧಿ ಉದ್ಯಮಗಳಿಂದ ಸಿಗಬಹುದಾದ ಲಾಭವನ್ನು ಹೊಂದಿಕೊಂಡಿರುವುದು ಮಾತ್ರವಲ್ಲದೆ ಈ ಉದ್ಯಮಗಳನ್ನು ಮಾಡುವಾಗ ಅದರಿಂದ ಯಾವ ರೀತಿಯ ಜೀವನ ವ್ಯಕ್ತಿಗೆ ಒದಗುತ್ತದೆ ಎಂಬುದು ಕೂಡ ತುಂಬ ಮುಖ್ಯವಾದ ವಿಷಯ. ಈ ದೃಷ್ಟಿಯಲ್ಲಿ ನೋಡುವಾಗ ನಮ್ಮ ದೇಶದ ಉದ್ಯಮ

ವ್ಯವಸ್ಥೆಗೂ ಸಮಾಜದಲ್ಲಿರುವ ಜಾತಿ ಧರ್ಮ ವಿಭಜನೆಗೂ ಒಂದು ಗಾಢವಾದ ಸಂಬಂಧವಿದೆ ಎಂದು ತೋರಿ ಬರುತ್ತದೆ. ಆದರಿಂದ ವ್ಯವಸಾಯದ ಆಧುನೀಕರಣವಾಗಬೇಕಾದರೆ ಅದನ್ನು ಕುಟುಂಬ ಜೀವನದಿಂದ ಬರುವ ಕುಂಠಿಸುವ ಪ್ರಭಾವದಿಂದಲೂ ಜಾತಿ ಧರ್ಮ ವಿಭಜನೆ ಅದರ ಮೇಲೆ ಬೀರುವ ಪ್ರಭಾವದಿಂದಲೂ ರಕ್ಷಿಸಬೇಕು. ಇದೇ ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಮ್ಮ ದೇಶದ ವ್ಯವಸಾಯವನ್ನು ಸಮಂಜಸವಾದ ನೌಕರಶಾಹಿ ಆಡಳಿತೆಯೊಂದಿಗೆ ಸಂಘಟಿಸಬೇಕು. ವ್ಯವಸಾಯ ಕೈಗಾರಿಕೆಗಿಂತ ಹೆಚ್ಚು ಅಗತ್ಯದ ಬೇಡಿಕೆ ಆದ್ದರಿಂದ ಮತ್ತು ವ್ಯವಸಾಯವನ್ನು ಸಸ್ಯ ಜಗತ್ತಿನ ಮತ್ತು ಹವೆ ಮತ್ತು ಭೂಮಿಯಿಂದಾಗಿ ಏರ್ಪಟ್ಟ ಶಕ್ತಿಗಳ ವೈಜ್ಞಾನಿಕ ಅರಿವಿನ ಮೇಲೆ ನಡೆಸಬೇಕಾದ್ದರಿಂದ ಇದನ್ನು ಬರೇ ಒಂದು ಕುಟುಂಬದ ಮಾನಸಿಕ ಮತ್ತು ದೈಹಿಕ ಶಕ್ತಿಯಿಂದ ಮಾತ್ರ ನಡೆಸಿದರೆ ಅದನ್ನು ನಮ್ಮ ಇಂದಿನ ಆಧುನಿಕ ಜಗತ್ತಿನಲ್ಲಿ ಸರಿಯೆಂದು ಪ್ರತಿಪಾದಿಸುವುದು ಕಷ್ಟದ ಕೆಲಸ. ಒಂದು ವೇಳೆ ನಮ್ಮ ವ್ಯವಸಾಯದ ವ್ಯವಸ್ಥೆಯಲ್ಲಿ ವ್ಯಕ್ತಿಯ ಒಡೆತನವನ್ನು ಇಡಬೇಕಾಗಿ ಬಂದರೂ ಭೂಮಿಯನ್ನು ಸಾಗುವಳಿ ಮಾಡುವವರಿಗೆ ಸಹಾಯವಾಗಿ ಇತರ ಸಂಸ್ಥೆಗಳು ಆಧುನಿಕ ಸಲಕರಣೆಗಳು ಮತ್ತು ವೈಜ್ಞಾನಿಕ ಜ್ಞಾನವನ್ನು ಕೊಡುವುದು ತೀರ ಅಗತ್ಯವಾಗಿದೆ.

ನಮ್ಮ ವ್ಯವಸಾಯದಲ್ಲಿ ಸಾಕಷ್ಟು ಪ್ರಗತಿಯಾಗದಿರಲು ಮುಖ್ಯವಾದ ಕಾರಣವೇನೆಂದರೆ ವ್ಯವಸಾಯಕ್ಕೆ ಸಂಬಂಧಪಟ್ಟ ಆಡಳಿತೆಯಾಗಲಿ ಸಂಸ್ಥೆಯಾಗಲಿ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದು. ವ್ಯವಸಾಯ ಮಾಡಬಹುದಾದ ಭೂಮಿಯ ಒಡೆತನವನ್ನು ಸಣ್ಣ ಮಟ್ಟದ ಹಿಡುವಳಿದಾರರ ವಶದಲ್ಲಿರಿಸುವುದು ಸರಿಯಲ್ಲವೆಂದು ಹೇಳುವುದು ತಪ್ಪು. ಆದರೆ ಈ ಸಣ್ಣ ಮಟ್ಟದ ಹಿಡುವಳಿದಾರರು ತಮ್ಮ ಕೌಟುಂಬಿಕ ಶ್ರಮದಿಂದ ಅಥವಾ ಇತರ ವ್ಯವಸಾಯಿಕ ಕೆಲಸಗಾರರ ಬಳಕೆಯಿಂದ ಭೂಮಿಯಿಂದ ಸಾಕಷ್ಟು ಪ್ರಯೋಜನವನ್ನು ಪಡೆಯದೆ ಇರುವಾಗ ಅವರು ದೇಶದ ಮುಂದೆ ದೊಡ್ಡ ಸಮಸ್ಯೆಯನ್ನು ತರುತ್ತಾರೆ. ಅಂತೆಯೇ ದೊಡ್ಡ ಭೂ ಮಾಲೀಕರು ಭೂಮಿಯಲ್ಲಿ ವ್ಯವಸಾಯಕ್ಕಾಗಿ ಸಾಕಷ್ಟು ಬಂಡವಾಳವನ್ನು ಸುರಿಯದೆ ಕೆಲಸಗಾರರನ್ನು ಆಧುನಿಕ ಆಡಳಿತೆಯಲ್ಲಿ ಸಂಘಟಿಸದೆ ತಮ್ಮ ಭೂಮಿಗಳನ್ನು ಒಕ್ಕಲುಗಳಿಗೆ ಅಧಿಕ ಬಾಡಿಗೆಗೆ ವ್ಯವಸಾಯಕ್ಕೆ ಕೊಟ್ಟು ವ್ಯವಸಾಯದಲ್ಲಿ ಅಧಃಪತನವನ್ನು ತಂದರೆ ದೇಶದ ಸಂಪೂರ್ಣ ಅರ್ಥವ್ಯವಸ್ಥೆಯಲ್ಲಿ ಡೋಲಾಯಮಾನ ಪರಿಸ್ಥಿತಿ ಬರುವುದರಲ್ಲಿ ಆಶ್ಚರ್ಯವೇನಿಲ್ಲ. ನಮ್ಮ ದೇಶದಲ್ಲಿ ಭೂಮಿ ಜನಸಂಖ್ಯೆಗೆ ಅನುಗುಣವಾಗಿಲ್ಲವಾದ್ದರಿಂದ ಮತ್ತು ಕೈಗಾರಿಕೆಯಲ್ಲಿ ಸಾಕಷ್ಟು ಅವಕಾಶವಿಲ್ಲದ್ದರಿಂದ ದೊಡ್ಡ ಹಿಡುವಳಿದಾರರು ಇರುವುದು ಸರಿಯಲ್ಲವೆಂದು ಒಂದು ದೃಷ್ಟಿಯಲ್ಲಿ ಕಾಣಬಹುದು. ಆದರೆ ದೊಡ್ಡ ಹಿಡುವಳಿದಾರರು ಸರಿಯಾದ ಧೋರಣೆಯನ್ನು ಅನುಸರಿಸುವುದಾದರೆ ಅವರು ವ್ಯವಸಾಯವನ್ನು ಆಧುನೀಕರಣ ಮಾಡಬಲ್ಲರು. ಆದ್ದರಿಂದಲೇ ನಮ್ಮ ಅರ್ಥವ್ಯವಸ್ಥೆಯಲ್ಲೂ ವ್ಯವಸಾಯಾಭಿವೃದ್ಧಿಯಲ್ಲೂ ಅಭಿವೃದ್ಧಿಯ ಮುಖ್ಯ ಸಮಸ್ಯೆ ಆಡಳಿತೆಯ ಸಮಸ್ಯೆ ಮತ್ತು ಮೌಲ್ಯ ಮತ್ತು ಧೋರಣೆಯ ಸಮಸ್ಯೆ. ಈ ಆಡಳಿತೆ ಮತ್ತು ಧೋರಣೆ ವ್ಯವಸಾಯಕ್ಕೆ ಸಂಬಂಧಪಟ್ಟ ಘಟಕಗಳನ್ನು ಒಂದುಗೂಡಿಸುವ ಸೂತ್ರವಾದ್ದರಿಂದ ಇದನ್ನು ಆಳವಾಗಿ ಪರಿಶೀಲಿಸಬೇಕಾಗಿದೆ. ದೇಶದಲ್ಲಿ ಜನಸಂಖ್ಯೆ ಜಾಸ್ತಿ ಇರುವುದರಿಂದಾಗಿ ದೊಡ್ಡ ಹಿಡುವಳಿದಾರರನ್ನು ಕಡಿಮೆ ಮಾಡುವ ಅಗತ್ಯ ಇಲ್ಲ. ದೇಶದಲ್ಲಿ ಕೈಗಾರಿಕೆ ಸಾಕಷ್ಟು ಬೆಳೆಯದಿದ್ದು ಬೇಸಾಯಕ್ಕೆ ಭೂಮಿಯ ಬೇಡಿಕೆ ವಿಪರೀತವಿರುವುದರಿಂದ ದೊಡ್ಡ ಹಿಡುವಳಿದಾರರನ್ನು ಕಡಿಮೆ ಮಾಡುವ ಅಗತ್ಯ ಕಂಡುಬರಬಹುದು. ಆದರೆ ದೊಡ್ಡ ಹಿಡುವಳಿದಾರರು ಅಧಿಕ ಪ್ರಮಾಣದಲ್ಲಿ ಭೂಮಿಯಿಂದ ಆಹಾರ ಸಂಪತ್ತನ್ನು ಬೆಳೆಸುತ್ತಿದರೆ ಮತ್ತು ವ್ಯವಸಾಯ ಕ್ಷೇತ್ರದಲ್ಲಿ ದುಡಿಯುವ ಕೆಲಸಗಾರರಿಗೆ ಉತ್ತಮ ಆಡಳಿತೆಯನ್ನೂ ಜೀವನವನ್ನೂ ದೊರಕಿಸಿದರೆ ಅವರ ಸಂಖ್ಯೆಯನ್ನು ಆರ್ಥಿಕ ದೃಷ್ಟಿಯಿಂದ ಕಡಿಮೆ ಮಾಡುವ ಆವಶ್ಯಕತೆ ಇರಲಾರದು. ರಾಜಕೀಯ ದೃಷ್ಟಿಯಿಂದ ಕೆಲವು ಧೋರಣೆಗಳಿಗನುಗುಣವಾಗಿ ಅಂತಹ ಆವಶ್ಯಕತೆ ಬರಬಹುದು. ನಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ತೋರಿಬರುವ ದೊಡ್ಡ ಸಮಸ್ಯೆ ಏನೆಂದರೆ ಆರ್ಥಿಕಾಭಿವೃದ್ಧಿಯ ಶಕ್ತಿಗಳನ್ನು ದೇಶದ ಹಿತದೃಷ್ಟಿಯೊಂದಿಗೆ ಹೊಂದಿಸುವುದು. ಅಭಿವೃದ್ಧಿ. ವಿಜ್ಞಾನದ ಮತ್ತು ಬುದ್ಧಿಶಕ್ತಿಯ ಪ್ರಶ್ನೆಯಾದರೆ ದೇಶದ ಒಟ್ಟು ಹಿತಾಸಕ್ತಿ ಧೋರಣೆಯ ಮತ್ತು ಮೌಲ್ಯಗಳ ಪ್ರಬಲ ಪ್ರಶ್ನೆಯಾಗಿದೆ. ಅಭಿವೃದ್ಧಿ ಮತ್ತು ಧೋರಣೆ ಇಷ್ಟು ಸಾಮ್ಯತೆಯಲ್ಲಿರುವಾಗ ಅರ್ಥವಿಜ್ಞಾನಿ

ಗಳಾಗಲಿ, ಸಮಾಜಶಾಸ್ತ್ರಜ್ಞರಾಗಲಿ ಅವುಗಳ ಬಗ್ಗೆ ಗಾಢವಾದ ಆಲೋಚನೆ ಮಾಡದೆ ಸಮಾಜದ ಸಮಸ್ಯೆ ಬಗೆಹರಿಯಲಾರದು.

ಆಧುನಿಕ ವ್ಯವಸಾಯವನ್ನು ಸಣ್ಣ ಹಿಡುವಳಿಗಳಲ್ಲಿ ಮಾಡಬೇಕಾದರೆ ಸಣ್ಣ ಹಿಡುವಳಿದಾರರೊಳಗೆ ವ್ಯವಸಾಯದ ಎಲ್ಲ ಚಟುವಟಿಕೆಗಳನ್ನು ಒಟ್ಟಾಗಿ ಮಾಡಲು ಸಹಕಾರ ಬೇಕು. ಅಥವಾ ಸಣ್ಣ ಹಿಡುವಳಿದಾರರಿಗೆ ಆಧುನಿಕ ವ್ಯವಸಾಯ ಸೌಕರ್ಯವನ್ನು ಒದಗಿಸುವ ಸಹಾಯಕ ಸಂಸ್ಥೆಗಳು ಬೇಕು. ಅಂದರೆ ಸಣ್ಣ ಹಿಡುವಳಿದಾರರ ಗದ್ದೆಯನ್ನು ಉಳಲು, ಅವರಿಗೆ ಉತ್ತಮ ಬೀಜಗಳನ್ನು ಒದಗಿಸಲು, ರೋಗ ರುಜಿನಗಳು ಬಂದಾಗ ಔಷಧಿಗಳನ್ನು ಸಿಂಪಡಿಸಲು ಮತ್ತು ಇತರ ಸೌಕರ್ಯಗಳನ್ನು ಒದಗಿಸಲು ಸಂಸ್ಥೆಗಳು ಬೇಕು.

ಈ ಸಂಸ್ಥೆಗಳು ಸರ್ಕಾರದ ಸಂಸ್ಥೆಗಳಾಗಿರುವುದಕ್ಕಿಂತ ಖಾಸಗಿ ಸಂಸ್ಥೆಗಳಾಗಿದ್ದರೆ ಹೆಚ್ಚು ಉತ್ಸಾಹದಲ್ಲಿ ಕೆಲಸ ನಡೆಯುವುದು. ಸಣ್ಣ ಹಿಡುವಳಿದಾರನ ಪ್ರತಿಯೊಂದು ವ್ಯವಸಾಯದ ಸಮಸ್ಯೆಗೆ ಆಧುನಿಕ ಮತ್ತು ವ್ಯಾವಹಾರಿಕ ರೀತಿಯಲ್ಲಿ ಸೇವೆಯನ್ನು ಕೊಟ್ಟಲ್ಲಿ ಸಣ್ಣ ಹಿಡುವಳಿಗಳು ಕೂಡ ಆಧುನಿಕ ರೀತಿಯಲ್ಲಿ ಬೆಳೆ ಬೆಳೆಸಬಹುದು. ಆದರೆ ದೊಡ್ಡ ಹಿಡುವಳಿಗಳು ಕೂಡ ಇರುವುದರಿಂದ ವ್ಯವಸಾಯ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಬೇಕಾದ ನಾಯಕತ್ವ ಸಿಗುವ ಸಾಧ್ಯತೆ ಇದೆ. ದೊಡ್ಡ ಹಿಡುವಳಿದಾರರು ತಮ್ಮವೇ ಆದ ಸಂಸ್ಥೆಗಳನ್ನು ಇಟ್ಟುಕೊಂಡು ಹೆಚ್ಚು ಜನರಿಗೆ ಉದ್ಯೋಗಾವಕಾಶವನ್ನು ನೀಡಿ ವ್ಯವಸಾಯಕ್ಷೇತ್ರದಲ್ಲಿ ಸಂಶೋಧನೆ ನಡೆಸಿ ಅಭಿವೃದ್ಧಿಗೆ ಕಾರಣರಾಗಬಹುದು. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ವ್ಯವಸಾಯಕ್ಷೇತ್ರದ ಮುಖ್ಯ ಸಮಸ್ಯೆ ಸಣ್ಣ ಮತ್ತು ದೊಡ್ಡ ಹಿಡುವಳಿದಾರರ ಸಮಸ್ಯೆಯಲ್ಲ. ಇಲ್ಲಿರುವ ಸಮಸ್ಯೆ ಸಂಸ್ಥೆಗಳನ್ನು ಕಟ್ಟಬೇಕಾದ ಸಮಸ್ಯೆ ಮತ್ತು ವ್ಯವಸಾಯ ಕ್ಷೇತ್ರದಲ್ಲಿರುವ ಅಭಿವೃದ್ಧಿಪರ ಶಕ್ತಿಗಳನ್ನು ಕಂಡುಹಿಡಿದು ಅವುಗಳಿಗೆ ಪ್ರೋತ್ಸಾಹ ನೀಡಬೇಕಾದ ಸಮಸ್ಯೆಯಾಗಿದೆ. ವ್ಯವಸಾಯದ ಸಮಸ್ಯೆಗಳು ಹಳ್ಳಿಯ ಜೀವನದ ಸಮಸ್ಯೆಗಳೊಂದಿಗೆ ಸೇರಿಕೊಂಡಿವೆ. ಹಳ್ಳಿಯ ಸಮಸ್ಯೆಗಳನ್ನು ಬಿಡಿಸಲು ಮೊತ್ತಮೊದಲಾಗಿ ಬೇಕಾದ ಔಷಧಿ ಹಳ್ಳಿಯಲ್ಲಿ ಜನಶಕ್ತಿಯನ್ನು ಬಳಸಲು ಬೇಕಾದ ಒಂದು ವ್ಯವಸ್ಥೆ. ಆಧುನಿಕ ಸಮಾಜದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುವಾಗ ಕೆಲವು ವಿಧಿ ನಿಯಮಗಳನ್ನು ಪಾಲಿಸಬೇಕು. ಉದ್ಯೋಗವನ್ನು ತೆಗೆದುಕೊಳ್ಳುವವನಲ್ಲಿ ಉದ್ಯೋಗಕ್ಕೆ ಬೇಕಾದ ತರಬೇತಿ ಮತ್ತು ವೈಯಕ್ತಿಕ ಆಸಕ್ತಿ ಮತ್ತು ಶ್ರದ್ಧೆ ಅಗತ್ಯ. ಉದ್ಯೋಗದ ವಿವರ ಮತ್ತು ಚಟುವಟಿಕೆಗಳ ವಿಷಯಗಳನ್ನು ಪಾಲಿಸಲು ಉದ್ಯೋಗವನ್ನು ತೆಗೆದುಕೊಳ್ಳುವವನಲ್ಲಿ ಸಂಪೂರ್ಣ ಸಮ್ಮತಿ ಉದ್ಯೋಗಕ್ಕೆ ಸೇರುವ ಮುಂಚೆಯೇ ಬೇಕು. ನಮ್ಮ ದೇಶದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುವುದು ಸರ್ಕಾರಕ್ಕೆ ಒಂದು ದೊಡ್ಡ ಸಮಸ್ಯೆಯಾಗಿದೆ. ವ್ಯವಸಾಯ ಕ್ಷೇತ್ರದಲ್ಲಿ ಅಗತ್ಯಕ್ಕಿಂತ ಹೆಚ್ಚು ಜನಸಂಖ್ಯೆ ಇದೆ ಎಂಬುದರಲ್ಲಿ ಏನೂ ಸಂದೇಹ ಇಲ್ಲ. ವ್ಯವಸಾಯದ ಅಭಿವೃದ್ಧಿಯ ದೃಷ್ಟಿಯಲ್ಲಿ ಗ್ರಾಮೀಣ ಕೆಲಸಗಾರರನ್ನು ಸಂಘಟಿಸುವುದು ತೀರ ಅಗತ್ಯವಾಗಿದೆ. ಈ ಸಂಘಟನೆಯಿಂದ ಏನನ್ನು ಸಾಧಿಸಬಹುದು? ಮತ್ತು ಇದರ ರೂಪರೇಖೆಗಳು ಹೇಗಿರಬೇಕೆಂಬುದರ ಬಗ್ಗೆ ಸ್ವಲ್ಪ ಆಲೋಚಿಸೋಣ. ಹೆಚ್ಚಾಗಿ ಕೆಲಸಗಾರರ ಸಂಘಟನೆ ಎಂದರೆ ಅದು ಕೆಲಸಗಾರರ ಅಭ್ಯುದಯಕ್ಕಾಗಿ ಎಂಬ ಭಾವನೆ ಇದೆ. ಆದರೆ ಇದು ಒಂದು ಭಾಗ ಮಾತ್ರ. ಕೆಲಸಗಾರರನ್ನು ಸಂಘಟಿಸುವಾಗ ಅವರ ಅಭ್ಯುದಯವನ್ನು ಮಾತ್ರ ಸಾಧಿಸಿದರೆ ಸಾಲದು. ಅದರೊಂದಿಗೆ ಅವರು ದುಡಿಯುವ ಕ್ಷೇತ್ರದ ಅಭ್ಯುದಯದ ಸಾಧನೆಯೂ ಬೇಕು. ಮತ್ತು ಈ ಕ್ಷೇತ್ರದ ಬೆಳವಣಿಗೆಯಾಗಿ ಅದು ಒಟ್ಟು ಸಮಾಜದ ಬೆಳವಣಿಗೆಗೂ ಕಾರಣವಾಗಬೇಕು. ವ್ಯವಸಾಯ ಕ್ಷೇತ್ರದಲ್ಲಿ ದೈಹಿಕ ಶ್ರಮ ಮಾಡುವವರಿಗೆ ವಿವಿಧ ರೀತಿಯಲ್ಲಿ ನೌಕರಿಯ ಆಸ್ಪದ ಸಿಗಬೇಕು. ಇಲ್ಲಿ ನಾನು ಪ್ರತಿಪಾದಿಸುತ್ತಿರುವ ವ್ಯವಸಾಯದ ಆಡಳಿತೆಯ ರೂಪರೇಷೆಯಲ್ಲಿ ಈ ಕೆಳಗಿನ ಸಲಹೆಗಳನ್ನು ಸೂಚಿಸಬಹುದು:

1 ಭೂಮಿಯ ಒಡೆತನ (i) ಸಣ್ಣ ಪುಟ್ಟ ರೈತರಿಗೂ (ii) ದೊಡ್ಡ ಜಮೀನುದಾರರಿಗೂ (iii) ಸರ್ಕಾರದ ಸಾಗುವಳಿ ಕಂಪನಿಗಳಿಗೂ (iv) ವಿದ್ಯಾಸಂಸ್ಥೆಗಳಿಗೂ (v) ಖಾಸಗಿ ಕಂಪೆನಿಗಳಿಗೂ ಕೊಡಬಹುದು. ಈ ರೀತಿಯ ವಿಭಜನೆಯಿಂದಾಗಿ ವ್ಯವಸಾಯದ ಆಡಳಿತವನ್ನು ಯಾವ ವರ್ಗದ ಒಡೆಯರು ಸಮರ್ಪಕವಾಗಿ ನಡೆಸುವರೆಂಬುದು ತಿಳಿದುಬರುತ್ತದೆ. ಮತ್ತು ಇದರಿಂದ ಈಗ ಇರುವ

ಸಣ್ಣ ಪುಟ್ಟ ಒಡೆಯರಿಗೂ ದೊಡ್ಡ ಜಮೀನುದಾರರಿಗೂ ಭೂಮಿಯಿಂದ ಹೆಚ್ಚು ಉತ್ಪತ್ತಿಯನ್ನು ಪಡೆಯಲು ಒಂದು ಅವಕಾಶವನ್ನು ಕೂಡ ಕಲ್ಪಿಸಿಕೊಟ್ಟಂತಾಗುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಮೆಚ್ಚ ಬಹುದಾದ ವಿಷಯವೇನೆಂದರೆ ಈ ವರ್ಗೀಕರಣವಾದರೆ ವ್ಯವಸಾಯವಲ್ಲಿ ಕೈಗಾರಿಕೆಯ ಸೂತ್ರಗಳು ಪ್ರಚಲಿತಕ್ಕೆ ಬಂದು ವ್ಯವಸಾಯದ ಮತ್ತು ಹಳ್ಳಿಗಳ ಸುಧಾರಣೆ ಆಗುವ ಸಾಧ್ಯತೆ ಇದೆ.

2 ವ್ಯವಸಾಯ ಕ್ಷೇತ್ರದ ಎಲ್ಲ (ಮಾನಸಿಕ ಮತ್ತು ದೈಹಿಕ) ಕೆಲಸಗಾರರನ್ನು ಒಂದೆರಡು ಆಡಳಿತ ಸಂಸ್ಥೆಗಳಲ್ಲಿ ಖಾಯಂ ನೌಕರರನ್ನಾಗಿರಿಸಿಕೊಂಡು ಅವರುಗಳನ್ನು ಬೇಕುಬೇಕಾದಲ್ಲಿಗೆ ವರ್ಗಾವರ್ಗಿ ಮಾಡಿ ವ್ಯವಸಾಯದ ದೈಹಿಕ ಮತ್ತು ಯಂತ್ರಗಳನ್ನು ಉಪಯೋಗಿಸಿ ಮಾಡುವ ಕೆಲಸಗಳ ಮಟ್ಟವನ್ನು ಏರಿಸಬಹುದು. ವ್ಯವಸಾಯದ ಕೆಲಸಗಾರರ ಆಡಳಿತೀಕರಣ ದೇಶದ ಆರ್ಥಿಕ ಮತ್ತು ರಾಜಕೀಯ ರಂಗದಲ್ಲಿ ಒಂದು ನವಸ್ಫೂರ್ತಿಯನ್ನು ತರುವುದರಲ್ಲಿ ಸಂದೇಹವಿಲ್ಲ. ವ್ಯವಸಾಯದ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ವಿವಿಧ ನೌಕರ ವರ್ಗಗಳ ಆವಶ್ಯಕತೆಯಿದೆ. ಒಂದು ವರ್ಗದ ನೌಕರರನ್ನು ಸರಿದಾರಿಯಲ್ಲಿ ನಡೆಸಲು ಇನ್ನೊಂದು ವರ್ಗದ ನೌಕರರನ್ನೂ ಹಾಗೆಯೇ ಇಡೀ ಆಡಳಿತ ಜವಾಬ್ದಾರಿಯನ್ನು ವಹಿಸಲು ಆಫೀಸರ್ ವರ್ಗಗಳನ್ನೂ ಮಾಡಿ ವ್ಯವಸಾಯಕ್ಕೆ ಬೇಕಾದ ಮಾನಸಿಕ ಮತ್ತು ದೈಹಿಕ ಕೆಲಸಗಾರರನ್ನು ಕೈಗಾರಿಕೆಯ ಕೆಲಸಗಾರರಂತೆಯೇ ನಡೆಸುವುದು ಉತ್ತಮವಾಗಿದೆ.

3 ಆಧುನಿಕ ವ್ಯವಸಾಯಕ್ಕೆ ಬೇಕಾದದ್ದು ಬಂಡವಾಳ. ಯಾವ ಕ್ಷೇತ್ರದಲ್ಲಿ ಆರ್ಥಿಕ ಅಭಿವೃದ್ಧಿಯ ಅಗತ್ಯವಿದೆಯೋ ಆ ಕ್ಷೇತ್ರಕ್ಕೆ ಬಂಡವಾಳದ ಸರಬರಾಯಿ ಮಾಡಬೇಕು. ಮತ್ತು ಬಂಡವಾಳವನ್ನು ಕಳುಹಿಸಿದ ಕಡೆಯಲ್ಲಿ ಉಚಿತವಾದ ಅಧಿಕ ಸಂಪತ್ತು ಬರಬೇಕು. ವ್ಯವಸಾಯಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಲು ಕೇಂದ್ರೀಕೃತ ಸಂಸ್ಥೆಗಳನ್ನು ಸ್ಥಾಪಿಸಿದರೆ ಬಂಡವಾಳವನ್ನು ಈ ಸಂಸ್ಥೆಗಳಿಗೆ ಕೊಟ್ಟು ಆ ಮೂಲಕ ಅದರ ಪ್ರಯೋಜನ ವ್ಯವಸಾಯ ಕ್ಷೇತ್ರಕ್ಕೆ ಹೋಗುವಂತೆ ಮಾಡಬಹುದು. ಬಂಡವಾಳವನ್ನು ಸುರಿದು ವೈಜ್ಞಾನಿಕ ಉಪಕರಣಗಳನ್ನು ತರಿಸುವ ಸಂಸ್ಥೆ ಕಾರ್ಮಿಕರನ್ನು ಖಾಯಂ ನೌಕರರನ್ನಾಗಿ ಇರಿಸಿಕೊಳ್ಳುವ ಸಂಸ್ಥೆ ಒಂದೇ ಆಗಿರಬೇಕು. ಭೂಮಿಯ ಒಡೆತನ ಕೂಡ ಅಂತಹ ಸಂಸ್ಥೆಗಳಿಗಿರಬೇಕು. ಈ ದೃಷ್ಟಿಯಲ್ಲಿ ವಿದ್ಯಾಸಂಸ್ಥೆಗಳು, ಖಾಸಗಿ ಮತ್ತು ಸರಕಾರಿ ಕಂಪೆನಿಗಳು ಬಂಡವಾಳವನ್ನೂ ಕಾರ್ಮಿಕರನ್ನೂ ಯೋಗ್ಯ ರೀತಿಯಲ್ಲಿ ಹೊಂದಿಸಲು ಅನುಕೂಲವಿದೆ. ನಮ್ಮ ದೇಶದ ಪ್ರತಿಯೊಂದು ಕ್ಷೇತ್ರದಲ್ಲೂ ಹೆಚ್ಚಾಗಿ ಸರ್ಕಾರಿ ಸಂಸ್ಥೆಗಳಿಂದ ಬಂಡವಾಳವನ್ನು ಉಪಯೋಗಿಸಿದಾಗ ಅದಕ್ಕೆ ಸರಿಯಾದ ಪ್ರತಿಫಲ ಸಿಗುವುದು ಕಡಿಮೆ. ಕಾರಣವೇನೆಂದರೆ ಬಂಡವಾಳದ ವಿನಿಯೋಗ ಸರಿಯಾಗಿ ನಡೆಯದೆ ಅಥವಾ ಬಂಡವಾಳದೊಂದಿಗೆ ಬೇಕಾದ ಸಹಾಯಕ ಘಟಕಗಳು ಇಲ್ಲದೆ ಬಂಡವಾಳದ ದುರುಪಯೋಗವಾದಂತಾಗುತ್ತದೆ. ಆದ್ದರಿಂದ ಬಂಡವಾಳವನ್ನು ವಸ್ತುಗಳ ರೂಪದಲ್ಲೂ ಬಂಡವಾಳದೊಂದಿಗೆ ಸಹಾಯಕ ಘಟಕಗಳನ್ನೂ ಒದಗಿಸಬೇಕು.

4 ವ್ಯವಸಾಯಕ್ಕೆ ಬೇಕಾದ ಮುಂದಾಳುತನವನ್ನು ತಯಾರುಮಾಡಬೇಕೆಂಬ ಪ್ರಶ್ನೆ—ವ್ಯವಸಾಯದ ಸಣ್ಣ ಪುಟ್ಟ ಮತ್ತು ದೊಡ್ಡ ಸಮಸ್ಯೆಗಳ ಬಗ್ಗೆ ಬುದ್ಧಿಶಕ್ತಿಯನ್ನು ಉಪಯೋಗಿಸಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ಇದ್ದಾರೆಯೆ? ಎಂಬ ಪ್ರಶ್ನೆ. ದೇಶದಲ್ಲಿ ಎಷ್ಟರ ವರೆಗೆ ನಿರಕ್ಷರತೆ ಮತ್ತು ಅಂಧಶ್ರದ್ಧೆಗಳಿರುತ್ತವೆಯೋ ಅಷ್ಟರವರೆಗೆ ಅವೆಲ್ಲ ವ್ಯವಸಾಯ ಕ್ಷೇತ್ರದಲ್ಲಿ ಉಳಿದಿರುವಂತೆ ಭಾಸವಾಗುತ್ತದೆ. ಆದುದರಿಂದಲೇ ವ್ಯವಸಾಯ ಕ್ಷೇತ್ರದಲ್ಲಿ ಎದ್ದು ತೋರುವ ಪ್ರಗತಿಯಾಗಬೇಕಾದರೆ ದೇಶದ ಅರ್ಧಕ್ಕಿಂತ ಹೆಚ್ಚು ಭೂಮಿಯನ್ನು ಖಾಸಗಿ ಮತ್ತು ಸರ್ಕಾರಿ ಕಂಪನಿಗಳಿಗೂ ವಿದ್ಯಾಸಂಸ್ಥೆಗಳಿಗೂ ಕೊಟ್ಟು ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡಬೇಕಾಗುತ್ತದೆ. ನಮ್ಮ ದೇಶದ ಸಮುದಾಯ ಅಭಿವೃದ್ಧಿ ಇಲಾಖೆ ದೊಡ್ಡ ಮಟ್ಟದ ವ್ಯವಸಾಯ ಮಾಡಿ ಪ್ರಚಾರದ ಕೆಲಸವನ್ನು ಹೆಚ್ಚು ವ್ಯವಸ್ಥಿತ ರೀತಿಯಲ್ಲಿ ಮಾಡಿದ್ದರೆ ಅದು ಜನರಿಗೆ ಹೆಚ್ಚು ಪ್ರಯೋಜನವಾಗುತ್ತಿತ್ತು. ನಮ್ಮ ಹಿಂದುಳಿದ ವ್ಯವಸಾಯದ ಸಮಸ್ಯೆಗಳಲ್ಲಿ ಇನ್ನೂ ಗಮನಕ್ಕೆ ಬಾರದ ವಿಷಯವೇನೆಂದರೆ ಅದರ ಆಡಳಿತದ ಪ್ರಶ್ನೆ. ಆಡಳಿತ ಚೆನ್ನಾಗಿಲ್ಲದಾಗ ಸಮುದಾಯ ಅಭಿವೃದ್ಧಿ ಇಲಾಖೆಯವರು ಖರ್ಚು ಮಾಡುವ ಹಣ. ತೂತಿರುವ ಪಾತ್ರೆಗೆ ನೀರು ಸುರಿದಂತೆ. ನಮ್ಮ ವ್ಯವಸಾಯದ ಅಭಿವೃದ್ಧಿ ಎಂದರೆ ಹೆಚ್ಚು ಉತ್ಪಾದನೆಯ ಪ್ರಶ್ನೆ ಮಾತ್ರ ಅಲ್ಲ. ಇದು ಉತ್ತಮ ಆಡಳಿತ ಮತ್ತು ಹಳ್ಳಿಗಳಲ್ಲಿ ಉತ್ತಮ ಸಮಾಜವನ್ನು ಕಟ್ಟುವ

ಪ್ರಶ್ನೆ ಕೂಡ ಹೌದು. ಹಳ್ಳಿಯಲ್ಲಿ ಕೂಡ ಪೇಟೆಯಂತೆ ಮನುಷ್ಯನ ಬುದ್ಧಿಯ ವಿಕಾಸಕ್ಕೆ ಬೇಕಾದ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕೆ ಒಂದೇ ಮಾರ್ಗವೆಂದರೆ ವ್ಯವಸಾಯವನ್ನು ಕೈಗಾರಿಕೆಯಂತೆಯೇ ನಡೆಸಬೇಕು.

ಭಾರತದ ವ್ಯವಸಾಯದ ಸಮಸ್ಯೆಗಳು ಪರಿಹಾರವಾಗಬೇಕಾದರೆ ಅದರಲ್ಲಿ ಕೈಗಾರಿಕೆಯ ಆಡಳಿತದ ಸೂತ್ರಗಳು ಬಳಕೆಗೆ ಬರಬೇಕು. ವ್ಯವಸಾಯಕ್ಕೆ ಅವಿದ್ಯಾವಂತರನ್ನೇ ಬಿಟ್ಟು ಅದರಲ್ಲಿ ವಿಜ್ಞಾನದ ಪ್ರಭಾವ ಬೀಳದಂತಿರುವ ಪರಿಸ್ಥಿತಿಯನ್ನು ಬದಲಿಸಬೇಕು. ವ್ಯವಸಾಯದಲ್ಲಿರುವ ದೈಹಿಕ ಕೆಲಸಗಾರರನ್ನು ಸಂಘಟಿಸಿ ಅವರ ಹಿತ ಸಾಧನೆಗೂ ವ್ಯವಸಾಯದ ಅಭಿವೃದ್ಧಿಗೂ ಬೇಕಾದ ಸೂತ್ರಗಳನ್ನು ಕಾರ್ಯಾಚರಣೆಗೆ ತರಬೇಕು. ಈಗ ವ್ಯವಸಾಯದ ಹಿನ್ನೆಲೆಯಾಗಿರುವ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಒಮ್ಮೆಯೇ ಮುರಿಯದೆ ಅದನ್ನು ಮುಂದಿನ ವ್ಯವಸ್ಥೆಯಲ್ಲಿ ಸಾಧ್ಯವಾದಲ್ಲೆಲ್ಲ ಉಪಯೋಗಿಸಬೇಕು. ವ್ಯವಸಾಯದ ಪ್ರಶ್ನೆಗಳು ದೇಶದ ರಾಜಕೀಯದಲ್ಲಿ ಪ್ರತಿಬಿಂಬಿಸಬೇಕು. ವ್ಯವಸಾಯದ ಪ್ರತ್ಯಕ್ಷ ಅನುಭವವನ್ನೂ ವ್ಯವಸಾಯದ ಮಹತ್ವವನ್ನೂ ಜನಸಾಮಾನ್ಯರ ಜೀವನ ಕ್ರಮವನ್ನೂ ದೇಶದ ವಿದ್ಯಾಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳಿಗೂ ವಿದ್ಯಾಸಂಸ್ಥೆಗಳಲ್ಲಿರುವ ಬೋಧಕರಿಗೂ ಕೈಗಾರಿಕೆಯಲ್ಲಿರುವ ನಾಯಕ ಹಾಗೂ ನೌಕರ ವರ್ಗದವರಿಗೂ ಮೇಲಾಗಿ ರಾಜಕೀಯದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ದೊರಕಿಸುವ ವ್ಯವಸ್ಥೆ ಮಾಡಬೇಕು. ಕೇವಲ ವ್ಯವಸಾಯದ ಕ್ಷೇತ್ರದಲ್ಲಿ ಮಾಡಬೇಕಾದ ಈ ಬದಲಾವಣೆಗಳಲ್ಲದೆ ಸಮಾಜದ ಒಟ್ಟು ಸಂಸ್ಥೆಗಳಲ್ಲಿಯೂ ಸಮಾಜದ ವಿನ್ಯಾಸದಲ್ಲೂ ಸಮಂಜಸವಾದ ಮಾರ್ಪಾಡು ಅತ್ಯಂತ ಅಗತ್ಯ.

ಡಾ. ಎ. ಎಸ್. ಸೀತಾರಾಂ

ಅರವಿಂದರ ಶಿಕ್ಷಣತತ್ತ್ವದರ್ಶನ

ಇಪ್ಪತ್ತನೆಯ ಶತಮಾನದಲ್ಲಿ ಮಾನವನ ನಾಗರಿಕತೆ ಕವಲುದಾರಿಯ ಬಳಿಯಲ್ಲಿದೆ. ವಿಭಿನ್ನ ರಾಜಕೀಯ ತತ್ತ್ವಗಳು, ಆರ್ಥಿಕ ಧೋರಣೆಗಳು, ಧಾರ್ಮಿಕ ಪಂಥಗಳು, ದಾರ್ಶನಿಕ ಶಾಲೆಗಳು ಕೈಬೀಸಿ ಕರೆಯುತ್ತಿವೆ. ಈ ವೈವಿಧ್ಯಮಯ ಜಗತ್ತಿನಲ್ಲಿ ಯಾವ ಹಾದಿ ಹಿಡಿದರೆ ಮಾನವ ಜನಾಂಗಕ್ಕೆ ನಿರಂತರ ವಾದ, ಶಾಶ್ವತದ ಕಲ್ಯಾಣವಾಗುತ್ತದೆ ಮತ್ತು ಸುಭದ್ರವಾದ ವಿಶ್ವಶಾಂತಿ ದೊರೆಯುತ್ತದೆ ಎಂಬುದು ವಿವಾದಾಸ್ಪದವಾದ ಅಂಶ. ಯಾವ ಜೀವನಧ್ಯೇಯ ವಿಶ್ವಸಮಾಜದ ಸಕಲ ಸಂಕೀರ್ಣ ಸಮಸ್ಯೆಗಳನ್ನು ಸುಲಲಿತವಾಗಿ ಪರಿಹರಿಸಿ ನಮಗೆ ನಿತ್ಯಶಾಂತಿಯ ಆಶ್ವಾಸನೆ ಕೊಡುತ್ತದೆ ಎಂಬುದೇ ಮೂಲಭೂತ ಪ್ರಶ್ನೆ. ಅರವಿಂದರ ವಿಚಾರಧಾರೆ ಈ ಪ್ರಶ್ನೆಗೆ ಎಷ್ಟು ಸಮಂಜಸವಾದ ಉತ್ತರವನ್ನೀಯುತ್ತದೆ, ಆ ಉತ್ತರ ಎಷ್ಟು ಅರ್ಥಪೂರ್ಣವಾಗಿದೆ–ಎಂದು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು ಈ ಲೇಖನದ ಉದ್ದೇಶ.

ಅರವಿಂದರು ಮತ್ತು ಭಾರತ

ಅರವಿಂದರನ್ನು ಅವರ ಸಮಕಾಲೀನರು ಋಷಿ–ದಾರ್ಶನಿಕ ಎನ್ನುತ್ತಿದ್ದರು. ಅವರು ದಾರ್ಶನಿಕರೂ ಆಗಿದ್ದರು ಮತ್ತು ವೈಯುಕ್ತಿಕ ಜೀವನದಲ್ಲಿ ಮಹರ್ಷಿಯಂತಿದ್ದರು. ಅವರು ಆಧುನಿಕ ಭಾರತದ ಪ್ರತಿನಿಧಿಯಾದರೂ ಪ್ರಾಚೀನ ಭಾರತದ ತತ್ತ್ವಜ್ಞಾನಿಗಳ ಜೀವನ ಶೈಲಿಯ ಪರಂಪರೆಯನ್ನೇ ಅನುಸರಿಸಿದ್ದಾರೆ. ಚಟರ್ಜಿಯವರು ಹೇಳಿರುವಂತೆ, "ಶ್ರೀ ಅರವಿಂದರ ಜೀವನ ಮತ್ತು ದರ್ಶನ ಪ್ರಾಚೀನ ಭಾರತದ ಸಾಂಸ್ಕೃತಿಕ ಜೀವನವನ್ನು ಪ್ರಸ್ತುತದೊಂದಿಗೆ ಸೇರಿಸುವ ಒಂದು ಸರಪಳಿಯ ಚಿನ್ನದ ಕೊಂಡಿಯಂತೆ".1 ಡಾ. ರಾಧಾಕೃಷ್ಣನ್ ಮತ್ತು ಸಿ. ಎ. ಮೂರ್ ಪ್ರಕಾಶಿಸಿರುವ, ಭಾರತೀಯ ತತ್ವಶಾಸ್ತ್ರದ ಆಕರಗ್ರಂಥವೊಂದರಲ್ಲಿ2 ಅರವಿಂದರನ್ನು ಆಧುನಿಕ ಭಾರತದ ವಿಚಾರಧಾರೆಯ ಇಬ್ಬರು ಪ್ರವಾದಿಗಳಲ್ಲಿ ಒಬ್ಬರು ಎಂದು ಪರಿಗಣಿಸಿದ್ದಾರೆ.

ಅರವಿಂದರ ತತ್ತ್ವದರ್ಶನ

ಅರವಿಂದರಿಗೆ ಭಾರತೀಯ ವಿಚಾರ ಪರಂಪರೆಯ ವೈವಿಧ್ಯ ವೇದ್ಯವಾಗಿತ್ತು. ಅವರೊಂದಿಗೆ ಇಪ್ಪತ್ತನೆಯ ಶತಮಾನದ ಭಾರತೀಯ ದರ್ಶನಧಾರೆಯ ಜೀವನಾಡಿ ಅವರ ಹಿಡಿತದಲ್ಲಿತ್ತು. ಅದು ಸಮನ್ವಯ.

1. Prof. S. Chatterji: *The Integral Philosophy of Sri Aurobindo* in a *Commemorative Symposium*, Ed.: Haridas Chaudhuri; George Allen Unwin, London, 1960, p. 35
2. *A Source Book in Indian Philosophy*, Princeton University Press, New Jersey, 1957, p. xi

ಆದ್ದರಿಂದ ಅರವಿಂದರೂ ಜೀವನವನ್ನು ಸಮಗ್ರವಾಗಿ ಪರಿಶೀಲಿಸಿ, ಅದಕ್ಕೆ ಸಮನ್ವಯ ದರ್ಶನದೃಷ್ಟಿಯನ್ನು ಕೊಡಲು ಪ್ರಯತ್ನಿಸಿದರು. ಗೀತೆಯ ವಿಚಾರಗಳು ಆಧುನಿಕ ಪ್ರಪಂಚಕ್ಕೆ ಹೇಗೆ ಸೂಕ್ತವಾದವುಗಳು ಎಂದು ಅವರು ವಾದಿಸಿರುವ ಶೈಲಿಯೇ ಇದಕ್ಕೆ ಒಂದು ನಿದರ್ಶನವಾಗಿದೆ. ಅರವಿಂದರೇ ಹೇಳಿರುವ ಹಾಗೆ. "ಗೀತೆ ಯಾವೊಂದೂ ಮಾರ್ಗದ ಪ್ರತ್ಯೇಕವಾದ ವಿಶಿಷ್ಟತೆಯನ್ನು ಎತ್ತಿ ಹಿಡಿಯದು. ತತ್‌ಕ್ಷಣದ ವಿಚಾರಧಾರೆಯನ್ನು ವಿಶದಪಡಿಸುವುದಕ್ಕಾಗಿ ಒಂದು ಸಾರಿ ಜ್ಞಾನವನ್ನೂ ಮತ್ತೆ ಕರ್ಮವನ್ನೂ ಮತ್ತೆ ಭಕ್ತಿಯನ್ನೂ ಎತ್ತಿ ಹೇಳಿ. ಸಂಪೂರ್ಣವಾದ ಸಮಾನ ಸಮದರ್ಶಿತ್ವವನ್ನು ರಕ್ಷಿಸಿಕೊಂಡಿದೆ".3 ಈ ರೀತಿಯಾದ ಒಂದು ಸಮನ್ವಯ ದೃಷ್ಟಿಯನ್ನು ಗೀತೆಯಲ್ಲಿ ತೋರ್ಪಡಿಸಿದ ಅರವಿಂದರು ತಮ್ಮ ಮನಸ್ಸಿನಲ್ಲಿದ್ದ ಸಮನ್ವಯ ಭಾವವನ್ನು ಪ್ರತಿಬಿಂಬಿಸಿದ್ದಾರೆ. ಸ್ವಾಮಿ ಶಿವಾನಂದರ ಮಾತಿನಲ್ಲಿ ಹೇಳುವುದಾದರೆ. "ಭಾರತದ ಮಹದಾಕಾಂಕ್ಷೆಯಾದ ಪರಿಪೂರ್ಣತೆಯ ಸ್ವಯಂಪೂರ್ಣ ಭಾವಾಭಿವ್ಯಕ್ತಿಯೇ ಅರವಿಂದರು."4

ಧಾರ್ಮಿಕ. ರಾಜಕೀಯ. ಸಾಮಾಜಿಕ ಮತ್ತು ಇತರ ದೃಷ್ಟಿಕೋನಗಳಿಂದ ವೈಚಾರಿಕವಾಗಿ ವೈವಿಧ್ಯಮಯವಾಗಿರುವ ಈ ಪ್ರಪಂಚಕ್ಕೆ "ಮೂಲತಃ ಸತ್ಯವು ಒಂದೇ" ಎನ್ನುವ ತತ್ವವನ್ನು ಅರವಿಂದರು ಬೋಧಿಸಿದರು. ಅರವಿಂದರು ತಮ್ಮ ದರ್ಶನದಲ್ಲಿ ವಿಭಿನ್ನವಾದ ತತ್ವಗಳನ್ನು ಸಮಗ್ರೀಕರಿಸಿಕೊಂಡಿದ್ದರು. ಅವರ ತತ್ವದೃಷ್ಟಿಯ ಶ್ರೇಷ್ಠತೆ ಅಥವಾ ಹಿರಿಮೆ ಅದರ ಸಮಗ್ರತೆಯಲ್ಲಿ ಮತ್ತು ಅದರ ಸತ್ಯದ ಏಕತೆಯ ಪ್ರತಿಪಾದನೆಯಲ್ಲಿದೆ. ಅವರೇ ಹೇಳಿರುವ ಹಾಗೆ. "ವಿಶ್ವದಲ್ಲಿ ಶಾಶ್ವತವಾದ ಒಂದೇ ಒಂದು ಸತ್ಯವಿದೆ; ಈ ಸತ್ಯವನ್ನೇ ನಾವು ಶೋಧಿಸುತ್ತಿದ್ದೇವೆ: ಈ ಸತ್ಯದಿಂದಲೇ ಉಳಿದೆಲ್ಲಾ ಸತ್ಯಗಳೂ ಹೊರಹೊಮ್ಮುತ್ತವೆ: ಇದರ ಜ್ಯೋತಿಯಿಂದಲೇ ಉಳಿದ ಸತ್ಯಗಳಿಗೆ ತಕ್ಕ ಮಾನ್ಯತೆ ದೊರೆಯುತ್ತದೆ"5. ಅರವಿಂದರು ವಿಶ್ವದ ಮತ್ತು ಜೀವನದ ಸಮಸ್ತ ಸಂಗತಿಗಳನ್ನೂ. ಅನುಭವಗಳನ್ನೂ ಸಮಗ್ರೀಕರಿಸುವುದಕ್ಕೆ ಪ್ರಯತ್ನಿಸಿರುವುದರಿಂದ ಅವರ ತತ್ತ್ವದೃಷ್ಟಿಯನ್ನು 'ಸಮಗ್ರ ದರ್ಶನ' ಎಂದು ಕರೆದಿದ್ದಾರೆ. ಅವರ ತತ್ವದೃಷ್ಟಿ ಮಾತ್ರವಲ್ಲ. ಅವರ ಜೀವನದ ಹೊಂಗನಸು ಕೂಡ ಮಾನವ ಜನಾಂಗದ ಏಕತೆಯನ್ನು ಕುರಿತ್ತು.6

ಅವರ ತತ್ತ್ವದೃಷ್ಟಿಯ ಇನ್ನೊಂದು ಹೆಸರು 'ಪೂರ್ಣಯೋಗದರ್ಶನ' ಎಂದು. ಎಲ್ಲರಿಗೂ ತಿಳಿದಿರುವ ಹಾಗೆ ಭಾರತೀಯ ದರ್ಶನದಲ್ಲಿ ಹಠಯೋಗ, ರಾಜಯೋಗ. ಕರ್ಮಯೋಗ. ಜ್ಞಾನಯೋಗ. ಭಕ್ತಿಯೋಗ ಮುಂತಾದ ಹಲವಾರು ಯೋಗಗಳಿವೆ. ಅರವಿಂದರು ಈ ವಿವಿಧ ಯೋಗಗಳಲ್ಲಿ ಅಡಕವಾಗಿರುವ ಆಂತರಿಕ ಮೌಲ್ಯಗಳನ್ನು ಗುರುತಿಸಿ ಅವನ್ನು ತಮ್ಮ ಜೀವನ ಮಾರ್ಗದಲ್ಲಿ ಸಾಧಿಸಲೆತ್ನಿಸಿ. ತಮ್ಮ ಬರಹಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಈ ಎಲ್ಲ ಯೋಗಗಳನ್ನೂ ಜೀವನದಲ್ಲಿ ಸಮನ್ವಯಗೊಳಿಸುವುದೇ ಆದರ್ಶವೆಂದು ಅವರು ಬೋಧಿಸಿದ್ದಾರೆ.7 ಒಬ್ಬ ಮಾನವ ಅತಿಮಾನವನಾಗಲು. ಪುರುಷೋತ್ತಮನಾಗಲು ಪೂರ್ಣಯೋಗ ಸಹಕಾರಿಯಾಗಿದೆ. ಅರವಿಂದರು ಗೀತೆಯ ಮೇಲಿನ ತಮ್ಮ ಪ್ರಬಂಧ

---

3. *Essays on the Gita*, Ch. IV, " *The Core of the Teaching* ", Aurobindo Ashram

4. Op. Cit., *The Integral Philosophy of Sri Aurobindo*, Ch. 25. (Ed) by Haridas Chaudhuri.

5. *Essays on the Gita*, Ch. I

6. Aurobindo: *The Ideal of Human Unity*, Aurobindo Ashram, Pondicherry, 1950

7. Aurobindo: *The Synthesis of Yoga*, Sri Aurobindo Library, Madras 1948

ಗಳನ್ನು ಅಂತ್ಯಗೊಳಿಸುವಾಗ ನಿರ್ಧಾರಾತ್ಮಕವಾಗಿ ಹೀಗೆ ಹೇಳಿದ್ದಾರೆ:8 "ಈ ರೀತಿಯಾಗಿ ನೀನು ನಿನ್ನಲ್ಲಿಯೇ ಇರುವ ಪರಿಪೂರ್ಣತೆಯನ್ನು ಸಾಧಿಸಿಕೊಳ್ಳುವ ಹಾಗೆ ಜೀವಿಸುವುದರ ಮೂಲಕ ಸಮಗ್ರವಾದ ದಿವ್ಯೈಕ್ಯವನ್ನು ಪಡೆಯುತ್ತೀಯೆ. ದೋಷರಹಿತ ಪೂರ್ಣಯೋಗವನ್ನು ಸಿದ್ಧಿಸಿಕೊಳ್ಳುತ್ತೀಯೆ." ಈಗ ಕೆಲವು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪುದುಚೇರಿಯ ಅರವಿಂದಾಶ್ರಮದ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಇಂದ್ರಸೇನ್ ಎಂಬವರಿಂದ ಅರವಿಂದರ ದರ್ಶನದ ಮೇಲೆ ಉಪನ್ಯಾಸಗಳನ್ನೇರ್ಪಡಿಸಿತ್ತು. ಈ ಉಪನ್ಯಾಸಗಳು 'The Integral Man ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ಆ ಪುಸ್ತಕದಲ್ಲಿನ ಒಂದು ವಾಕ್ಯವನ್ನು ಇಲ್ಲಿ ಉದ್ಧರಿಸುವುದಾದಲ್ಲಿ, "ಸಮಕಾಲೀನ ಯುಗದ ಅವಶ್ಯಕತೆಯನ್ನೂ ಮನೋಭಾವವನ್ನೂ ಗ್ರಹಿಸಿದ್ದರೋ ಎನ್ನುವಂತೆ ಅರವಿಂದರು The Synthesis of Yoga ಎನ್ನುವ ಅಧ್ಯಯನದ ಸವಿಸ್ತಾರವಾದ ಸಂಶೋಧನೆಯನ್ನು ಕೈಗೊಂಡರು. ಈ ಗ್ರಂಥದಲ್ಲಿ ತೋರುವ ಹಾಗೆ, ಪರಿಪೂರ್ಣ ವ್ಯಕ್ತಿತ್ವವೇ ಅವರ ಶ್ರೇಷ್ಠ ಉದ್ದೇಶವಾಗಿದೆ: ವಿವಿಧ ಆಚಾರ, ವಿಚಾರ, ಸಂವೇದನಾ ವಿಧಾನಗಳಾದ ಜ್ಞಾನ, ಭಕ್ತಿ, ಕರ್ಮಗಳನ್ನು ಅಭ್ಯಸಿಸಿ ಅವನ್ನು ಸಮನ್ವಯಗೊಳ್ಳುವ ಹಾಗೆ ಅರ್ಥೈಸಿದ್ದಾರೆ. ಇಲ್ಲಿ ಪರಿಪೂರ್ಣ ಮಾನವ ಒಂದು ಭಾವನೆಯಾಗಿ ಮಾತ್ರ ಉಳಿಯದೆ, ನಿರ್ದಿಷ್ಟವಾದ ಗುರಿಯಾಗಿದ್ದಾನೆ, ಸಚೇತನ ಕಲ್ಪನೆಯ, ಅತಿಯಾಗಿ ಮಹತ್ವವುಳ್ಳ ಆಶೆಯ ಸಂಕೇತವಾಗಿದ್ದಾನೆ".9

ಸಕಲ ಜೀವ ಜಂತುಗಳೂ, ಸೃಷ್ಟಿ ಕೂಡ, 'ವಿಕಾಸ' ಪ್ರಕ್ರಿಯೆಗೆ ಒಳಪಟ್ಟಿವೆ ಎಂದು ಅರವಿಂದರು ನಂಬುತ್ತಾರೆ. ಈ ದೃಷ್ಟಿಯಿಂದ ನೋಡುವುದಾದರೆ ಅವರ ತತ್ತ್ವದೃಷ್ಟಿಗೆ ವಿಜ್ಞಾನ ತನ್ನ ಮುದ್ರೆಯನ್ನೊತ್ತುತ್ತದೆ. ಆದರೆ ಅರವಿಂದರ ವಿಕಾಸ ಸಿದ್ಧಾಂತಕ್ಕೂ ವಿಜ್ಞಾನದ ಸಿದ್ಧಾಂತಕ್ಕೂ ಒಂದು ಪ್ರಮುಖ ವ್ಯತ್ಯಾಸವಿದೆ. ಡಾರ್ವಿನ್, ಸ್ಪೆನ್ಸರ್ ಮುಂತಾದ ವಿಜ್ಞಾನಿಗಳ ಸಿದ್ಧಾಂತವಾದ 'ಯಾಂತ್ರಿಕ ವಿಕಾಸ'ವನ್ನು ಅರವಿಂದರು ಮೆಚ್ಚಲಿಲ್ಲ. ಅರವಿಂದರು ಒಂದು ಹೆಜ್ಜೆ ಮುಂದೆ ಹೋಗಿ ಉದ್ದೇಶಪೂರಿತವಾದ ದಿವ್ಯವಿಕಾಸದ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರ ಪ್ರಕಾರ ಮಾನವ ವಿಕಾಸ ಯಾಂತ್ರಿಕವಾದ್ದಲ್ಲ. ಅದಕ್ಕೆ ಒಂದು ಅರ್ಥವಿದೆ, ಒಂದು ಉದ್ದೇಶವಿದೆ. ಮಾನವ ಅತಿಮಾನವನಾಗುತ್ತಾನೆ, ಅವನ ಮನಸ್ಸು ಅತಿಮಾನಸ ಚೇತನವಾಗುತ್ತದೆ ಎಂದು ಆಶಿಸಿದ್ದಾರೆ. ಅವರು ಗೀತೆಯಲ್ಲಿ ಬರೆದಿರುವ ಹಾಗೆ, "ಜೀವಿಸುವುದಕ್ಕಾಗಿ ಮಾತ್ರ ಜೀವನವಲ್ಲ, ಪರಮಾತ್ಮನಿಗಾಗಿ ಅದು ಮೀಸಲು...... ನಮ್ಮ ಕರ್ಮ ಆತ್ಮಶೋಧನೆಗಾಗಿ, ಆತ್ಮತೃಪ್ತಿಗಾಗಿ, ಆತ್ಮಸಿದ್ಧಿಗಾಗಿರಬೇಕಲ್ಲದೆ ವರ್ತಮಾನದ ಅಥವಾ ಭವಿಷ್ಯದ ಬಾಹ್ಯ ತೋರಿಕೆಯ ಫಲಗಳ ಸಿದ್ಧಿಗಾಗಲ್ಲ. ಸೃಷ್ಟಿಕರ್ತನನ್ನು ಹೊಂದಿಕೊಂಡಿರುವ ಎಲ್ಲ ಜೀವಿಗಳಿಗೂ ಜೀವನದಲ್ಲಿ ಒಂದು ಅರ್ಥವಿದೆ, ಒಂದು ಆಂತರಿಕ ನಿಯಮವಿದೆ".10 ಅರವಿಂದರು ಸಂಪೂರ್ಣವಾದ ಆಶಾಭಾವದೊಂದಿಗೆ ಮಾನವನ ಈ ರೀತಿಯ ದಿವ್ಯೋದ್ದೇಶಪೂರಿತವಾದ ವಿಕಾಸದ ಭವಿಷ್ಯದ ಮಾರ್ಗವನ್ನು ಅವರ ಒಂದು ಪುಸ್ತಕದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ.11 ಈ ಗ್ರಂಥದಲ್ಲಿ ಅವರು ಮಾನವ ಅತಿಮಾನವನಾಗುತ್ತಾನೆಂದೂ, ಅವನ ಮನಸ್ಸು ಅತಿಮಾನಸಸ್ಥಿತಿ ತಲುಪುವುದೆಂದೂ ಭವಿಷ್ಯ ನುಡಿದಿದ್ದಾರೆ. ಅತಿಮಾನಸವ್ಯಕ್ತಿಗೆ ದಿವ್ಯದೃಷ್ಟಿಯಿರುತ್ತದೆ–'ಸತ್ ಚಿತ್ ಆನಂದ'ದ ಅರಿವಾಗಿರುತ್ತದೆ. ಅತಿಮಾನವನಿಗೂ ಮಾನವನಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುವುದಕ್ಕಾಗಿ ಅವರು ಗೀತೆಯ ಎರಡು ವ್ಯಕ್ತಿಗಳನ್ನು ಉದ್ಧರಿಸುತ್ತಾರೆ. ಅರವಿಂದರ ಪ್ರಕಾರ ಶ್ರೀಕೃಷ್ಣನನ್ನು (ದೈವಿಕ ಗುರು) ಅತಿಮಾನಸದ ಪ್ರತಿರೂಪವನ್ನಾಗಿಯೂ ಅರ್ಜುನನನ್ನು (ಮಾನವ ವಿದ್ಯಾರ್ಥಿ) ಸಾಮಾನ್ಯರ

---

8. Op. Cit., Ch. 24: *The Message of the Gita*, p. 558
9. Dr. Indra Sen : *The Integral Man*, pp. 24–25
10. *Essays on the Gita*, Ch. 24
11. Aurobindo: *The Future Evaluation of Man*, Allen & Unwin, 1963

ಮನಸ್ಸಿನ ("ಇನ್ನೂ ಜ್ಞಾನವನ್ನು ಪಡೆಯದೆ ತೊಳಲಾಡುತ್ತಿರುವ ಆತ್ಮಗಳು") ಪ್ರತಿರೂಪವಾಗಿಯೂ ಪರಿಗಣಿಸಬಹುದು. ಅವರ ದೃಷ್ಟಿಯಲ್ಲಿ, ಇಡೀ ಮಹಾಭಾರತವೇ ಮಾನವ ಜೀವನದ ದೃಷ್ಟಾಂತ ಆಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಅತಿಮಾನವನೇ ಪರಿಪೂರ್ಣವ್ಯಕ್ತಿ. ಈ ಪರಿಪೂರ್ಣ ವ್ಯಕ್ತಿ ಹೇಗೆ ಸಾಮಾನ್ಯ ಮಾನವರಿಗಿಂತ ಬೇರೆಯಾಗಿದ್ದಾನೆ ಎಂದು ವಿಶ್ಲೇಷಿಸುವುದರ ಮೂಲಕ ಡಾ. ಇಂದ್ರಸೇನ್‌ರವರು ಪರಿಪೂರ್ಣವ್ಯಕ್ತಿಯ ಭಾವನೆಯನ್ನು ಸ್ಪಷ್ಟಪಡಿಸಿದ್ದಾರೆ. ಅತಿಮಾನವನೇ, ಪರಿಪೂರ್ಣ ವ್ಯಕ್ತಿಯೇ ಆದರ್ಶ ವ್ಯಕ್ತಿ. ಯಾವ ಸಮಾಜದ ಸದಸ್ಯರಾಗಿ ಇಂತಹ ಆದರ್ಶ ವ್ಯಕ್ತಿಗಳೇ ಇರುತ್ತಾರೋ ಅದೇ ಆದರ್ಶ ಸಮಾಜ. ಅರವಿಂದರು ತಮ್ಮ ಗ್ರಂಥವಾದ The Human Cycleನಲ್ಲಿ ಈ ರೀತಿಯ ಆದರ್ಶ ವ್ಯಕ್ತಿಗಳಿಂದ ಕೂಡಿದ ಆದರ್ಶ ಸಮಾಜದ ರೂಪುರೇಷೆಗಳನ್ನು ವರ್ಣಿಸಿದ್ದಾರೆ.12 ಈ ಗ್ರಂಥದಲ್ಲಿ ಮಾನವ ಸಮಾಜಗಳ ಉತ್ಥಾನ ಮತ್ತು ಪತನವನ್ನು ವಿಶ್ಲೇಷಿಸುತ್ತ ಅರವಿಂದರು ಒಂದು ಗಹನವಾದ ಸತ್ಯವನ್ನು ನುಡಿದಿದ್ದಾರೆ: "ಮಾನವನ ನಿಜವಾದ ಅಸ್ತಿತ್ವಕ್ಕೆ ಕಾರಣಭೂತವಾದ ಆತ್ಮವನ್ನು, ಈ ಆತ್ಮಿಕ ಶಕ್ತಿಯನ್ನು ಕಡೆಗಣಿಸಿರುವುದೇ ಅಳಿದುಳಿದಿರುವ ಎಲ್ಲ ನಾಗರಿಕತೆಗಳ ಪರಮ ದೋಷವಾಗಿದೆ. ಆದ್ದರಿಂದ ಮಾನವ ತನ್ನ ಆತ್ಮಸಿದ್ಧಿಯನ್ನು ಪಡೆಯುವುದಕ್ಕೆ ಶ್ರಮಿಸುವುದರಲ್ಲಿಯೇ ಅವನ ನಿಜವಾದ ಕಲ್ಯಾಣವಿದೆ."

ಅರವಿಂದರ ಶಿಕ್ಷಣ ತತ್ತ್ವಗಳು

ಅರವಿಂದರ ಶಿಕ್ಷಣ-ವಿಚಾರಗಳು ಅವರ ಎರಡು ವ್ಯವಸ್ಥಿತ ಮೂಲ ಬರಹಗಳಿಂದ13—14 ದೊರೆಯುತ್ತವೆ. ಈ ಮೂಲಗಳ ಆಧಾರದ ಮೇಲೆ ಅವರ ಶಿಕ್ಷಣ ಪದ್ಧತಿಯನ್ನು ಎರಡೇ ಎರಡು ಪದಗಳಲ್ಲಿ ಸಾರಭೂತವಾಗಿ ಹೆಸರಿಸುವುದಾದರೆ ಅದನ್ನು 'ಸಮಗ್ರ ಶಿಕ್ಷಣ' ಎನ್ನಬಹುದು. ಸಮಗ್ರ ಶಿಕ್ಷಣಕ್ಕೆ ಎರಡು ಕ್ರಿಯೆಗಳು ಪೂರಕವಾಗಿವೆ: 1 ವಿಶ್ವದ ಸಮಗ್ರ ದರ್ಶನವನ್ನು ಕೊಡುವುದು; 2 ವಿದ್ಯಾರ್ಥಿಯ ಸರ್ವತೋಮುಖ ವಿಕಾಸಕ್ಕೆ ಅನುವು ಮಾಡಿಕೊಡುವುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಾಮಾನ್ಯ ಮಾನವನನ್ನು ಸಮಗ್ರ ಮಾನವನನ್ನಾಗಿ (ಅತಿಮಾನವ) ರೂಪಾಂತರಗೊಳಿಸುವುದೇ ಶಿಕ್ಷಣ. ಮಾನವನ ಪ್ರಸಕ್ತ ಸ್ಥಿತಿಯಿಂದ ಈ ರೀತಿಯಾದ ಅಗಾಧವಾದ ಮತ್ತು ಸಂಪೂರ್ಣವಾದ ರೂಪಾಂತರಕ್ಕೆ ಅವಶ್ಯಕತೆ ಇದೆ ಎಂದು ಅರವಿಂದರು ನುಡಿದಿದ್ದಾರೆ. ಈ ಪರಿವರ್ತನೆಯ ಸ್ವಭಾವದ ಬಗ್ಗೆ ಅರವಿಂದರು ಈ ರೀತಿ ವಿವರಿಸಿದ್ದಾರೆ15: "ಮನುಷ್ಯ ಈಗ ಇರುವ ಸಾಮಾನ್ಯವಾದ ಅಭ್ಯಾಸಯುತವಾದ ಸ್ವಭಾವದಿಂದ ಪರಮಶ್ರೇಷ್ಠವಾದ, ದಿವ್ಯವಾದ ಆತ್ಮಿಕ ಸ್ವಭಾವವನ್ನು ಹೊಂದುವಂತೆ ಅವನಲ್ಲಿ ಪರಿವರ್ತನೆಯನ್ನು ತರುವ ಅವಶ್ಯಕತೆ ಇದೆ. ಏಕಕಾಲದಲ್ಲಿ ಸಮಗ್ರ ಜ್ಞಾನದ ಯೋಗವೂ ಸಮಗ್ರ ಸಂಕಲ್ಪ ಹಾಗೂ ಕ್ರಿಯಾಶಕ್ತಿಗಳ ಯೋಗವೂ, ಸಮಗ್ರ ಪ್ರೀತಿ, ಗೌರವ ಮತ್ತು ಭಕ್ತಿಗಳ ಯೋಗವೂ, ಇಡೀ ವ್ಯಕ್ತಿಯ, ಅವನ ಅಂಶಗಳ, ಮನಃಸ್ಥಿತಿಗಳ, ಶಕ್ತಿಗಳ, ಕ್ರಿಯೆಗಳ ಸಮಗ್ರವಾದ ಆತ್ಮಿಕ ಪರಿಪೂರ್ಣತೆಯ ಯೋಗವೂ ಆದಂತಹ, ಒಂದೇ ಪದದಲ್ಲಿ ಹೇಳುವುದಾದರೆ ಒಂದು 'ಪೂರ್ಣ ಯೋಗ'ದ ಅವಶ್ಯಕತೆ ಇದೆ". ಈ ರೀತಿಯ ಪೂರ್ಣಯೋಗ ವಿಧಾನದ ಮೂಲಕ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಆದರ್ಶವ್ಯಕ್ತಿಯನ್ನಾಗಿ, ಸಮಗ್ರ ವ್ಯಕ್ತಿಯನ್ನಾಗಿ ಪರಿವರ್ತಿಸುವುದೇ ಶಿಕ್ಷಣದ ಉದ್ದೇಶ.

ಅರವಿಂದರ ಶಿಕ್ಷಣ ಕ್ರಮದ ಇನ್ನೊಂದು ವಿಶೇಷವೆಂದರೆ, ಅವರ ಶಿಕ್ಷಣದ ಧ್ಯೇಯಗಳು ನಮ್ಮ ಪ್ರಾಚೀನತೆಯಲ್ಲಿ, ಭಾರತೀಯ ಸಂಸ್ಕೃತಿಯಲ್ಲಿ ಅಂಕುರವಾಗಿವೆ ಮತ್ತು ಅವರ ಶಿಕ್ಷಣದ ವಿಧಾನಗಳಿಗೆ

---

12. Aurobindo : *The Human Cycle*, Aurobindo Ashram, Pondicherry, 1949
13. *On Education*
14. *A System of National Education*
15. *Essays on the Gita*, p. 557

ಆಧುನಿಕ ಮನೋವಿಜ್ಞಾನ ವಿಚಾರಗಳ ಒಪ್ಪಿಗೆ ಇದೆ. ಭಾರತೀಯ ಸಂಸ್ಕೃತಿಯ ಮೇಲಿನ ಅರವಿಂದರ ಪ್ರೇಮ ಕುರುಡು ಪ್ರೇಮವಾಗಿರಲಿಲ್ಲ, ಅಂಧ ವಿಶ್ವಾಸವಾಗಿರಲಿಲ್ಲ. ಅವರು ಭಾರತೀಯ ಸಂಸ್ಕೃತಿಯಲ್ಲಿ ಅಗಾಧವಾದ ಪ್ರೇಮವನ್ನಿಟ್ಟಿದ್ದರೂ ಅವರು ನಮ್ಮ ಸಂಸ್ಕೃತಿಯ ಪುನರುತ್ಥಾನದ ಆವಶ್ಯಕತೆಯಲ್ಲಿ ನಂಬಿಕೆ ಇಟ್ಟಿದ್ದರು.16 ಅವರು ತಮ್ಮ ಬರಹಗಳಲ್ಲಿ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ತೋರಿಸಿ ಕೆಲವು ಪಾಶ್ಚಾತ್ಯರ ಅಂಧ ವಿಮರ್ಶೆಗಳ ನ್ಯೂನತೆಗಳನ್ನು ಖಂಡಿಸಿದ್ದಾರೆ. ನಮ್ಮ ವಿದ್ಯಾರ್ಥಿಗಳು ನಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡು ಅದರ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ಆಶಿಸಿದ್ದಾರೆ. ಅವರೇ ವಿದ್ಯಾರ್ಥಿಗಳ ಬಗ್ಗೆ ಹೇಳಿರುವ ಹಾಗೆ, "ಅವರು ಭಾರತೀಯ ಪರಂಪರೆಯ ರೀತಿಯ ಮಕ್ಕಳಾಗಿರಬೇಕು, ಇಂದಿನ ಸಂಸ್ಕೃತಿಯ ರಕ್ಷಕರಾಗಿರಬೇಕು ಮತ್ತು ಭವಿಷ್ಯದ ಸೃಷ್ಟಿಕರ್ತರಾಗಿರಬೇಕು. ಭೂತಕಾಲವೇ ಅವರ ಅಡಿಪಾಯ. ವರ್ತಮಾನವೇ ಅವರ ಸೃಷ್ಟಿಯ ಸಾಮಗ್ರಿ ಮತ್ತು ಭವಿಷ್ಯವೇ ಅವರ ಗುರಿ ಮತ್ತು ಅಂತಿಮ ಧ್ಯೇಯ".17

ಶಿಕ್ಷಣದ ನಿರ್ದಿಷ್ಟ ಗುರಿಗಳು

ಭಾರತೀಯ ಮೂಲವಿರುವ ದರ್ಶನಗಳಲ್ಲಿ ಹಲವಾರು ವೈವಿಧ್ಯಗಳಿವೆ. ಈ ವೈವಿಧ್ಯಮಯವಾದ ದರ್ಶನದ ಜಗತ್ತಿನಲ್ಲಿ ಹಲವಾರು ವೈಚಾರಿಕ ಭಿನ್ನತೆಗಳಿದ್ದರೂ ಒಂದೇ ಒಂದು ಜೀವನಧ್ಯೇಯ ಹೊರ ಹೊಮ್ಮಿದೆ. ಶಿಕ್ಷಣದ ಧ್ಯೇಯ ಈ ಜೀವನ ಧ್ಯೇಯಕ್ಕಿಂತ ಬೇರೆಯಾದುದಲ್ಲ. ಆದ್ದರಿಂದ ಭಾರತೀಯ ತತ್ತ್ವಶಾಸ್ತ್ರದ ಮತ್ತು ಶಿಕ್ಷಣ ಕ್ರಮದ ಧ್ಯೇಯ 'ಆತ್ಮ ಸಾಕ್ಷಾತ್ಕಾರ'ವೇ18 ಆಗಿದೆ (ಆತ್ಮಸಿದ್ಧಿ). ಭಾರತೀಯ ಶಿಕ್ಷಣ ಶೈಲಿಗೆ ಯೋಗ್ಯವಾದ ಈ ಶೈಕ್ಷಣಿಕ ಗುರಿಯೇ ಅರವಿಂದರ ಶಿಕ್ಷಣ ಕ್ರಮದ ಪ್ರಧಾನ ಧ್ಯೇಯವಾಗಿದೆ. ಅರವಿಂದರೂ ಈ ಧ್ಯೇಯವನ್ನೇ ತಮ್ಮ ಶೈಕ್ಷಣಿಕ ಬರಹಗಳಲ್ಲಿ ಎತ್ತಿ ಹಿಡಿದಿದ್ದಾರೆ. ಉದಾಹರಣೆಗೆ 1920ರಲ್ಲಿ ಪ್ರಕಟವಾಗುತ್ತಿದ್ದ 'ಆರ್ಯ' ಪತ್ರಿಕೆಯ ಒಂದು ಲೇಖನದಲ್ಲಿ ಅವರು ಹೀಗೆ ಬರೆದಿದ್ದಾರೆ: "ಯಾವುದೇ ಕಾಲದಲ್ಲಿಯಾದರೂ ಶಿಕ್ಷಣ ಮನುಷ್ಯನ ಅತ್ಯುನ್ನತ ಗುರಿಯಾದ, ಅವನ ಆಧ್ಯಾತ್ಮಿಕತೆಯನ್ನು ಸಚೇತನಗೊಳಿಸಿ ವಿಕಸಿಸುವ ಕಾರ್ಯವನ್ನು ಕಡೆಗಣಿಸಲಾಗುವುದಿಲ್ಲ".19 ಇನ್ನೊಂದು ಕಡೆ20 ಅರವಿಂದರು ಈ ಧ್ಯೇಯವನ್ನು ಇನ್ನೂ ಸ್ಪಷ್ಟಪಡಿಸಿದ್ದಾರೆ: "ಶಿಕ್ಷಣದ ಪ್ರಮುಖ ಉದ್ದೇಶ ವಿಕಸಿಸುತ್ತಿರುವ ಆತ್ಮ (ಶಿಶುವಿನ) ತನ್ನಲ್ಲಿರುವ ಶ್ರೇಷ್ಠತೆಯನ್ನು ಹೊರಹೊಮ್ಮಿಸಿ ಅದನ್ನು ಉದಾತ್ತ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವುದಕ್ಕೆ ಸಹಾಯ ಮಾಡುವುದಾಗಿದೆ."

ಪ್ರಮುಖ ಉಪನಿಷತ್ತುಗಳಲ್ಲಿ ಒಂದಾದ ತೈತ್ತಿರೀಯ ಉಪನಿಷತ್ತು ಆತ್ಮ ಐದು ಕೋಶಗಳಿಂದ ಸುತ್ತುವರಿಯಲ್ಪಟ್ಟಿದೆ ಎಂದು ಹೇಳುತ್ತದೆ. ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ, ಆನಂದಮಯ ಕೋಶ ಎಂಬ ಪಂಚಕೋಶಗಳೇ ಆತ್ಮವನ್ನು ಆವರಿಸಿವೆ ಎಂಬ ಈ ನಂಬಿಕೆಯಲ್ಲಿ ಅರವಿಂದರು ಪೂರ್ಣ ವಿಶ್ವಾಸವನ್ನಿಟ್ಟಿದ್ದಾರೆ. ಅರವಿಂದರು ಆತ್ಮದ ಶಿಕ್ಷಣವೆಂದು ಹೇಳುವಾಗ ಅವರ ದೃಷ್ಟಿಯಲ್ಲಿ ಈ ಐದು ಪದರಗಳಿಗೂ ಸಂಬಂಧಿಸಿದ ಶಿಕ್ಷಣವಿದೆ ಮತ್ತು ಈ ರೀತಿಯ ಶಿಕ್ಷಣವನ್ನೇ ಅವರು ಸಮಗ್ರ ಶಿಕ್ಷಣವೆಂದು ಪರಿಗಣಿಸಿದ್ದಾರೆ. ಅವರ ಶಿಕ್ಷಣ ಕ್ರಮ

---

16. Aurobindo : *Renaissance in India*, Arya Publishing House, Calcutta, 1946
17. *On Education*, Sri Aurobindo International Centre on Edn., Pondicherry, 1960
18. Humayun Kabir : *Indian Philosophy of Education*
19. Aurobindo : *A Preface on National Education*
20. *A System of National Education*, p. 11

ವನ್ನು ತೈತ್ತಿರೀಯ ಉಪನಿಷತ್ತಿನ ಆತ್ಮದ ವರ್ಣನೆಯ ದೃಷ್ಟಿಯಲ್ಲಿ ಈ ರೀತಿ ತೋರಿಸಬಹುದು21 :

ಅ.	ಅನ್ನಮಯ ಕೋಶ	ದೈಹಿಕ ಪದರ	ದೈಹಿಕ ಶಿಕ್ಷಣ
ಆ.	ಪ್ರಾಣಮಯ ಕೋಶ	ಸಚೇತನತೆಯ ಪದರ	ಸಚೇತನ ಶಿಕ್ಷಣ (ಇಂದ್ರಿಯಗಳ ಶಿಕ್ಷಣ)
ಇ.	ಮನೋಮಯ ಕೋಶ	ಮಾನಸಿಕ ಪದರ	ಮಾನಸಿಕ ಶಿಕ್ಷಣ ಅಥವಾ ಬೌದ್ಧಿಕ ಶಿಕ್ಷಣ
ಈ.	ವಿಜ್ಞಾನಮಯ ಕೋಶ	ಅಂತಶ್ಚೇತನ ಪದರ	ಅಂತಶ್ಚೇತನ ಹಾಗೂ ಆಧ್ಯಾತ್ಮಿಕ ಶಿಕ್ಷಣ
ಉ.	ಆನಂದಮಯ ಕೋಶ	ಆತ್ಮದ ಪದರ	

ದೈಹಿಕ, ಸಚೇತನ, ಮಾನಸಿಕ, ಅಂತಶ್ಚೇತನ ಹಾಗೂ ಆಧ್ಯಾತ್ಮಿಕ ಶಿಕ್ಷಣಗಳು ಜೊತೆಗೂಡಿ ಸಮಗ್ರ ಶಿಕ್ಷಣವಾಗುತ್ತದೆ. ಅರವಿಂದರು ಬರೆದಿರುವ ಹಾಗೆ, "ಶಿಕ್ಷಣ ಸಂಪೂರ್ಣವಾಗಬೇಕಾದರೆ ಅದು ಮನುಷ್ಯನ ಐದು ಪ್ರಮುಖ—ದೈಹಿಕ, ಐಂದ್ರಿಕ, ಬೌದ್ಧಿಕ, ಅಂತಶ್ಚೇತನ ಹಾಗೂ ಆಧ್ಯಾತ್ಮಿಕ—ಚಟುವಟಿಕೆಗಳಿಗೆ ಸಂಬಂಧಿಸಿದಂತಿರಬೇಕು. ಸಾಮಾನ್ಯವಾಗಿ ಈ ಐದು ರೀತಿಯ ಶಿಕ್ಷಣಗಳು ವ್ಯಕ್ತಿಯ ವಿಕಾಸವನ್ನು ಅನುಸರಿಸಿ ಒಂದಾದ ಮೇಲೊಂದರಂತೆ ಪೂರ್ಣವಾಗುತ್ತ ಬರುತ್ತವೆ. ಹೀಗೆಂದ ಮಾತ್ರಕ್ಕೆ ಒಂದರ ಸ್ಥಳವನ್ನು ಇನ್ನೊಂದು ಆಕ್ರಮಿಸಬೇಕು ಎಂಬ ಅರ್ಥವಲ್ಲ. ಮೇಲಾಗಿ ಎಲ್ಲಾ ಶಿಕ್ಷಣಗಳನ್ನೂ ಒಂದಕ್ಕೊಂದು22 ಪೂರಕವೆನ್ನುವಂತೆ ಜೀವನಮಪ್ಪಕ್ಕೂ ಕೊಡುತ್ತಿರಬೇಕು."

ಅರವಿಂದರ ಶಿಕ್ಷಣ ವ್ಯವಸ್ಥೆಯಲ್ಲಿ ಬೋಧನಾ ವಿಧಾನಗಳು

ಅರವಿಂದರಿಗೆ ಸ್ವಯಂ-ಶಿಕ್ಷಣ ಮಾರ್ಗದಲ್ಲಿ ವಿಶ್ವಾಸವಿತ್ತು. ವಿದ್ಯಾರ್ಥಿಗೆ ಜ್ಞಾನವನ್ನು ಉಪಾಧ್ಯಾಯರು ಕೊಡಬಾರದು. ಅವನೇ ಚಟುವಟಿಕೆಯ ಮೂಲಕ, ಶೋಧನೆಯ ಮೂಲಕ ಜ್ಞಾನವನ್ನು ಪಡೆಯಬೇಕು. ಹೇಗೆ ಕಲಿಯಬೇಕು ಎಂಬುದನ್ನು ಮಾತ್ರ ಅಧ್ಯಾಪಕರು ಸೂಚಿಸಬೇಕು. ಅಧ್ಯಾಪಕರ ಕರ್ತವ್ಯ ಅತ್ಯಾವಶ್ಯಕವಾದಷ್ಟು ಮಾತ್ರ ಮಾರ್ಗದರ್ಶನವನ್ನು ಕೊಡುವುದಕ್ಕೆ ಸೀಮಿತವಾಗಿರಬೇಕು. ವಿದ್ಯಾರ್ಥಿಯ ಸಂಯೋಜಿತ ಚಟುವಟಿಕೆಗಳೇ ಅವನ ಕಲಿಕೆಯ ಕೇಂದ್ರ ಬಿಂದುಗಳಾಗಿರಬೇಕು. ಅರವಿಂದರೇ ಬರೆದಿರುವ ಹಾಗೆ: "ಅಧ್ಯಾಪಕ ಶಿಶುವನ್ನು ಅವನದೇ ಆದ ಪರಿಪೂರ್ಣತೆಯ ಹಾದಿಯಲ್ಲಿ ತೊಡಗಿಸಿ, ಅವನನ್ನು ಗಮನಿಸುತ್ತ, ಸಲಹೆಗಳನ್ನು ಕೊಡುತ್ತ, ಸಹಾಯ ಮಾಡುತ್ತ, ಆದರೆ ಎಂದೂ ಮಧ್ಯೆ ಪ್ರವೇಶಿಸದೆ, ಪ್ರೋತ್ಸಾಹಿಸುತ್ತಿರಬೇಕು".23 ಈ ರೀತಿಯ ಬೋಧನಾ ಕ್ರಮ ಮನಶ್ಶಾಸ್ತ್ರದ ದೃಷ್ಟಿಯಿಂದ ಅತಿ ಸಮಂಜಸವಾಗಿದೆ. ಇದೇ ವಿಧಾನವನ್ನೇ ನಿಸರ್ಗವಾದ, ಫಲಪ್ರಮಾಣವಾದ ಮುಂತಾದ ಹಲವು ಆಧುನಿಕ ಪ್ರಗತಿಪರ ಶಿಕ್ಷಣ ಶಾಲೆಗಳು ಅನುಸರಿಸುತ್ತವೆ.

ಅರವಿಂದರ ಶಿಕ್ಷಣ ಕ್ರಮ ಮತ್ತು ಸಮಕಾಲೀನ ಭಾರತ

ಅರವಿಂದರ ಶಿಕ್ಷಣ ಪದ್ಧತಿಯಲ್ಲಿ ಹಲವಾರು ವಿಶಿಷ್ಟತೆಗಳಿವೆ. ಸಂಗ್ರಹವಾಗಿ ಹೇಳುವುದಾದರೆ, ಜನಸಾಮಾನ್ಯರಲ್ಲಿ ನೈತಿಕ ಮೌಲ್ಯಗಳ ಅಧಃಪತನವಾಗುತ್ತಿರುವ ಇಂದಿನ ಭಾರತಕ್ಕೆ ಅರವಿಂದರ ಶಿಕ್ಷಣ ಕ್ರಮ ಸೂಕ್ತಪರಿಹಾರವಾಗಿರಬಹುದು. ಆದರೆ, ಹಲವು ವಿಮರ್ಶಕಾರರು ಸಂಶಯ ವ್ಯಕ್ತಪಡಿಸಿರುವ ಹಾಗೆ ಅದು ಇಂದಿನ ಮುಖ್ಯ ಸಮಸ್ಯೆಗಳಾದ ನಿರುದ್ಯೋಗ, ಆಹಾರ ಮತ್ತಿತರ ಸಮಸ್ಯೆಗಳಿಗೆ ಎಷ್ಟರ ಮಟ್ಟಿಗೆ ಉತ್ತರವಾಗಿದೆ ಎಂಬುದು ಸಂದೇಹಾಸ್ಪದವಾದ ಅಂಶ. ಪುದುಚೇರಿಯ ಅರವಿಂದಾಶ್ರಮ ಅವರ ಶೈಕ್ಷಣಿಕ ಹಾಗೂ ಜೀವನದ ಆದರ್ಶಗಳನ್ನು ಕಾರ್ಯರೂಪಕ್ಕೆ ತರಲು ಹಲವಾರು ದಶಕಗಳಿಂದ ಪ್ರಯತ್ನಿಸುತ್ತಿದೆ.

---

21. A. B. Purani : *Aurobindo on Education*
22. Aurobindo : *On Education*, pp. 55–56
23. *A System National Education* p. 17

ಪುಸ್ತಕಲೋಕ

ನಗರ ಮತ್ತು ಪ್ರಾದೇಶಿಕ ಯೋಜನೆ*

ವಿಜ್ಞಾನ ಮತ್ತು ಯೋಜನೆಗಳು ಅವಿಭಾಜ್ಯ ವಿಚಾರಗಳೇನೋ ಅನಿಸುವಷ್ಟರ ಮಟ್ಟಿಗೆ ಎರಡಕ್ಕೂ ನಿಕಟ ಸಂಪರ್ಕವಿದೆ. ಇಪ್ಪತ್ತನೆಯ ಶತಮಾನವಂತೂ ಯೋಜನೆಗಳ ಯುಗವೆಂದರೂ ತಪ್ಪಾಗಲಾರದು. ವಿಜ್ಞಾನದ ಪ್ರಗತಿಯಾದಂತೆ ಮಾನವನ ಬುದ್ಧಿ ಭವಿಷ್ಯವನ್ನು ರೂಪಿಸುವುದರಲ್ಲಿ ಹೆಚ್ಚು ವಾಸ್ತವ ನಿಲುವನ್ನು ತಾಳಲಾರಂಭಿಸಿತು. ಯಂತ್ರಯುಗ ಇದಕ್ಕೆ ಪೋಷಕವಾಗಿ ಕಾಣಿಸಿತು. ಯಂತ್ರಗಳು. ಶಾಸ್ತ್ರ ಪಾಂಡಿತ್ಯ, ಮಾನವಮತಿ ಇವು ಮೂರೂ ಸೇರಿದಾಗ ಅದ್ಭುತ ಅನೂಹ್ಯ ವಿಚಾರಗಳು ಮುಷ್ಟಿಗ್ರಾಹ್ಯವಾಗತೊಡಗಿದವು. ಯೋಜನೆ ಎಂದರೇನು? ಕೆಲವರಿಗೆ ಕುಟುಂಬ ಯೋಜನೆ ಎಂದಾಗ 'ಸಂತಾನ ನಿರೋಧ' ಎಂದೇ ಅರ್ಥವಾಗುವುದರಿಂದ ಯೋಜನೆ ಎಂದಾಗ ನಿಷೇಧಾತ್ಮಕ ಅರ್ಥವೇ ಸ್ಫುರಿಸಬಹುದು. ಕುಟುಂಬ ಯೋಜನೆ ಎಂದರೆ ಒಬ್ಬ ವ್ಯಕ್ತಿ ತನ್ನ ಆಸ್ತಿ ಆದಾಯಗಳಿಗೆ ತಕ್ಕಂತೆ ಕುಟುಂಬದ ಗಾತ್ರವನ್ನು ನಿಯಂತ್ರಿಸುವುದು ಎಂದು ಅರ್ಥ. ಹಾಗೆಯೇ ಇತರ ಯಾವ ಯೋಜನೆಯಾದರೂ ಸಹ. ಯೋಜನೆಗೆ ಯೋಚನೆ ಅತ್ಯವಶ್ಯ.

"ನಗರ ಮತ್ತು ಪ್ರಾದೇಶಿಕ ಯೋಜನೆ" ಎಂಬ ಈ ಇಂಗ್ಲಿಷ್ ಗ್ರಂಥ ಸಾಕಷ್ಟು ವಿಸ್ತಾರವಾಗಿ ವಿಚಾರ ಪ್ರತಿಪಾದನೆಯನ್ನು ಮಾಡಿದೆ. ಲೇಖಕರು ನಗರಯೋಜನಾ ಇಲಾಖೆಯ ನಿರ್ದೇಶಕರೂ ಆದುದರಿಂದ ಅವರಿಗೆ ಪರಿಸ್ಥಿತಿಯ ವಾಸ್ತವತೆಯ ಅರಿವು ಚೆನ್ನಾಗಿಯೇ ಇರುವುದು ಪೋಷಕವಾಗಿದೆ. ಕೇವಲ ನಗರ ಯೋಜನೆಯಿಂದ ಎಲ್ಲವನ್ನೂ ಸಾಧಿಸಿದಂತಾಗುವುದಿಲ್ಲ. ನಗರಕ್ಕೆ ಗರ ಬಡಿಯುವುದನ್ನು ತಪ್ಪಿಸಲು ಬಹು ವಿಸ್ತಾರದಿಂದ ಸಕಲವನ್ನೂ ಪರಿಶೀಲಿಸಬೇಕಾಗುತ್ತದೆ. ಪುಸ್ತಕದ ಹೆಸರನ್ನು ನೋಡಿದರೆ ಪ್ರಾದೇಶಿಕ ಯೋಜನೆಗೂ ಪ್ರಾಮುಖ್ಯ ಕೊಟ್ಟಿರುವುದು ಗಮನಕ್ಕೆ ಬರುತ್ತದೆ. ನಮ್ಮ ಮನೆಯನ್ನು ಮಾತ್ರ ಚೊಕ್ಕಟವಾಗಿಟ್ಟುಕೊಂಡರೆ ಅಕ್ಕಪಕ್ಕದ ಗಲೀಜಿನಿಂದ ಪಾರಾಗಲು ಸಾಧ್ಯವೆ? ಆದ್ದರಿಂದ ನಗರ ಯೋಜನೆಯೊಂದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಈ ಕೃತಿಯಲ್ಲಿ ಪ್ರಾದೇಶಿಕ ಯೋಜನೆಯನ್ನೂ ಕುರಿತು ವಿಶದವಾಗಿ ನಿರೂಪಿಸಿದ್ದಾರೆ.

ಪ್ರಾಚೀನ ಭಾರತದಲ್ಲೂ ನಗರ ಯೋಜನೆ ಅಸ್ತಿತ್ವದಲ್ಲಿತ್ತು ಎನ್ನುವುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಪಶ್ಚಿಮ ದೇಶಗಳಲ್ಲಿ ಯೋಜನೆಯ ಅರಿವು ಕ್ರಿ.ಪೂ.1800ರಿಂದಲೂ ಇದ್ದಿತೆಂದೂ, ಗ್ರೀಕರ ಕಾಲದಲ್ಲಿ ಸರಳತೆ, ಸುಭಗತೆಯ ಕಡೆ ಒಲವಿದ್ದರೆ, ರೋಮನ್ ಯುಗದಲ್ಲಿ ಭವ್ಯತೆ, ಸಂರಕ್ಷಣೆಗಳ ಕಡೆ ಗಮನವಿದ್ದಿತೆಂದೂ, ಮಧ್ಯಯುಗದಲ್ಲಿ ಹೋರಾಟಗಳಿಂದಾಗಿ ಅಶಾಂತಿ ವ್ಯಾಪಕವಾಗಿ ಹಬ್ಬಿತ್ತೆಂದೂ ತಿಳಿಸಿದ್ದಾರೆ. 19ನೆಯ ಶತಮಾನದಲ್ಲಿ ಯಂತ್ರಗಳಿಗೆ ಎಲ್ಲಿಲ್ಲದ ಪ್ರಾಧಾನ್ಯ ದೊರೆತು ಅನುಕೂಲಗಳ ಜತೆಗೆ ಅನಾನುಕೂಲಗಳೂ ಉಂಟಾದುವು. ಜನರು ಹಳ್ಳಿಗಳಿಂದ ವಲಸೆ ಬಂದು ನಗರದಲ್ಲಿ ನೆಲಸ

---

*Urban and Regional Planning; ಲೇಖಕರು; ಕೆ. ಎಸ್. ರಾಮೇಗೌಡ; ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (1972); ಪುಟಗಳು: 245; ಬೆಲೆ: ರೂ. 40 (ವಿದೇಶ: 56 ಡಾ.)

ಲಾರಂಭಿಸಿದರು. ನಗರಗಳು ಮನಸೋಇಚ್ಛೆ ಹಿಗ್ಗತೊಡಗಿದುವು. ನಗರ ಜೀವನ ಅಗ್ನಿಪಲ್ಲವಾದುದರಿಂದ ಕೊಳಚೆ ಪ್ರದೇಶಗಳು ಅಣಬೆಗಳಂತೆ ಹುಟ್ಟಿಕೊಂಡುವು. ನೀರು, ವಸತಿ, ಆಹಾರಗಳ ಪೂರೈಕೆ ದುಸ್ಸಾಧ್ಯವಾಗತೊಡಗಿತು. ನಗರಗಳು ದೊಡ್ಡವಾಗಿ ಬೆಳೆದ ಕಾರಣ ಒಂದು ಕಡೆಯಿಂದ ಇನ್ನೊಂದು ಕಡೆಗೆ ನಡೆದು ಹೋಗಲು ಅಸಾಧ್ಯವಾದಾಗ. ಕಾಲದ ಮಹತ್ವ ಅತಿಯಾದಾಗ ನಗರ ಸಾರಿಗೆಯ ಅವಶ್ಯಕತೆ ಕಂಡು ಬಂದಿತು. ನಗರಸಾರಿಗೆ ಸಮರ್ಪಕವಾಗಿ ಕೆಲಸ ಮಾಡಲು ಅನೇಕ ಪೂರ್ವಭಾವೀ ಅಗತ್ಯಗಳು ಅತ್ಯವಶ್ಯ. ನಗರ ಯಾವ ಯೋಜನೆಯನ್ನೂ ಕಾಣದೆ ಅಡ್ಡಾದಿಡ್ಡಿ ಬೆಳೆದಿದ್ದರೆ. ನೇರವಾದ ಮಾರ್ಗಗಳು ಇಲ್ಲದಿದ್ದರೆ. ಒಂದು ಕೇಂದ್ರ ಸ್ಥಳದಿಂದ ಇನ್ನೊಂದಕ್ಕೆ ಸಾಗುವುದು ಕಠಿನವಾಗುತ್ತದೆ. ವಿಳಂಬವಾಗುತ್ತದೆ. ಆದ್ದರಿಂದ ಲೇಖಕರು ನಗರಗಳು ಹೇಗೆ ಬೆಳೆಯಬೇಕು ಎನ್ನುವುದನ್ನು ಕೂಲಂಕಷವಾಗಿ ವಿವರಿಸಿದ್ದಾರೆ.

1 Linear type 2 Radial type 3 Grid iron type 4 Concentric pattern ಪ್ರಮುಖವಾಗಿ ಈ ನಾಲ್ಕು ವಿಧಾನಗಳನ್ನು ಚಿತ್ರಸಹಿತ ವಿವರಿಸಿದ್ದಾರೆ. ಇವು ಕೇವಲ ಕಾಗದಗಳ ಮೇಲೆ ಸಿದ್ಧಾಂತಗಳಾಗಿಯೇ ಉಳಿದರೆ ಪ್ರಯೋಜನವಿಲ್ಲ. ಯೋಜನೆಯಿಂದ ಜನರಿಗೆ ಜೀವನ ಸುಖಮಯವಾಗಬೇಕು. ಆನಂದದಾಯಕವಾಗಬೇಕು. ಲೇಖಕರ ಮಾತುಗಳಲ್ಲಿ "Pleasure is the joy and happiness that would be derived by the people out of the clean, healthy and visually attractive environment." ಈ ಹೇಳಿಕೆ ಸಮರ್ಪಕವಾಗಿದೆ. ಆದರೆ ಸ್ವಾತಂತ್ರ್ಯ ಬಂದು 25 ವರ್ಷಗಳು ಕಳೆದರೂ ಇನ್ನೂ ಹಲವು ಪ್ರಾಂತಗಳಲ್ಲಿ ಶಾಸನಬದ್ಧ ಯೋಜನಾ ಸಂಸ್ಥೆ ಅಸ್ತಿತ್ವಕ್ಕೆ ಬಂದಿಲ್ಲವೆಂದು ಲೇಖಕರು ವಿಷಾದಿಸಿದ್ದಾರೆ.

ಯೋಜನೆ ಎಂದರೆ ಕೇವಲ ಕಟ್ಟಡಗಳ ನಿರ್ಮಾಣವಲ್ಲವೆಂದು ಎಚ್ಚರಿಕೆ ನೀಡಿದ್ದಾರೆ. ಸಾಮಾಜಿಕ ಮತ್ತು ಆರ್ಥಿಕ ವೃತ್ತಿಗಳನ್ನೂ ಅದು ಒಳಗೊಳ್ಳಬೇಕು. ಅಷ್ಟೇ ಅಲ್ಲ. ನಗರ ಯೋಜನೆಯು ಪ್ರಾದೇಶಿಕ ಯೋಜನೆಯಿಲ್ಲದೆ ಅಸಮರ್ಪಕವೆಂದು ಹೇಳಿದ್ದಾರೆ. ಪ್ರಾದೇಶಿಕ ಯೋಜನೆ ಎಂದರೇನು? ನಮ್ಮ ದೃಷ್ಟಿ ಕೇವಲ ನಗರಗಳ ಕಡೆ ಮಾತ್ರ ಕೇಂದ್ರೀಕೃತವಾಗದೆ ಆ ನಗರಗಳಿಗೆ ಪೂರಕವೂ ಪೋಷಕವೂ ಆದ ಇತರ ಸಣ್ಣ ಸಣ್ಣ ಕೇಂದ್ರಗಳ. ತಾಲ್ಲೂಕು ಪಟ್ಟಣಗಳ. ಹಳ್ಳಿಗಳ ಕಡೆಯೂ ಗಮನ ಕೊಡಬೇಕು. ಗ್ರಾಮಾಂತರ ಜೀವನವೂ ಆಕರ್ಷಕವಾಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿಯೂ ಕಾರ್ಖಾನೆಗಳು ಸ್ಥಾಪಿತವಾಗಬೇಕು. ಆ ಪ್ರದೇಶಕ್ಕೂ ವಿದ್ಯುತ್. ನೀರು. ಸಾರಿಗೆ ಸೌಕರ್ಯಗಳು ಲಭಿಸಬೇಕು. ಆಗಲೇ ಜನರು ನಗರಗಳಿಗೆ ಜೀವನೋಪಾಯಕ್ಕಾಗಿ ವಲಸೆ ಬರುವುದು ತಪ್ಪುತ್ತದೆ ಅಥವಾ ಕಡಿಮೆಯಾಗುತ್ತದೆ. ಅದಕ್ಕಾಗಿ ಕೈಗಾರಿಕಾ ವಿಕೇಂದ್ರೀಕರಣ (Decentralisation of Industries) ವನ್ನು ಸೂಚಿಸಿದ್ದಾರೆ. ಒಂದು ಪ್ರದೇಶದ ಹಲವು ಕಡೆ ಇಂತಹ ಕೇಂದ್ರಗಳು ಇದ್ದರೆ ಜನರು ನಗರಗಳಿಗೆ ಬರುವುದು ಕಡಿಮೆಯಾಗಿ. ನಗರದವರೂ ಹಳ್ಳಿಯವರೂ ತಮ್ಮ ಜೀವನವನ್ನು ಸುಲಭವಾಗಿ ಹಾಗೂ ಸುಖಮಯವನ್ನಾಗಿ ಮಾಡಿಕೊಳ್ಳಬಹುದು.

ಲೇಖಕರು ವ್ಯವಸಾಯ ಮತ್ತು ಕೈಗಾರಿಕೆಗಳು ಹೇಗೆ ಸಮ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಬೇಕು ಎನ್ನುವುದನ್ನು ವಿವರಿಸುತ್ತಾ. ಕೃಷಿಯೋಗ್ಯ ಭೂಮಿಯನ್ನು ಕೈಗಾರಿಕೆಗಳನ್ನು ಸ್ಥಾಪಿಸಲು ಉಪಯೋಗಿಸಬಾರದೆಂದು ಎಚ್ಚರಿಸಿದ್ದಾರೆ. ಇದು ಅತ್ಯಂತ ಸಮಯೋಚಿತ ಸಲಹೆ. ಇಂದು ಹಲವು ಸ್ಥಳಗಳಲ್ಲಿ ಸೊಗಸಾದ ನೀರಾವರಿ ಭೂಮಿಯನ್ನು ಕೈಗಾರಿಕೆಗಳಿಗೆ. ಬಾಡಿಗೆ ಮನೆಗಳಿಗೆ ಉಪಯೋಗಿಸುತ್ತಿರುವುದನ್ನು ಕಾಣಬಹುದು. ಇದರಿಂದ ದುಷ್ಪರಿಣಾಮ ತಪ್ಪದು. ಬ್ರಿಟಿಷರು ತಮ್ಮ ಆಳ್ವಿಕೆಯ ಕಾಲದಲ್ಲಿ ಯಾವ ದೃಷ್ಟಿಯನ್ನು ಹೊಂದಿದ್ದರೆಂಬುದನ್ನು ಈ ಒಂದು ವಾಕ್ಯದಿಂದ ಮನಗಾಣಬಹುದು: "The British developed Bombay as their outpost in the West Coast and started draining off raw materials from the extensive *Underdeveloped areas* and dumped back the manufactured goods produced in Great Britain."

ಈ ಕೃತಿಯ ಕೆಲವು ಅಧ್ಯಾಯಗಳು ಜನಸಂಖ್ಯೆ, ವಸತಿ ನಿರ್ಮಾಣ ಮೊದಲಾದುವುಗಳ ಅಂಕಿ ಅಂಶಗಳನ್ನು ನೀಡುತ್ತವೆ. ಇಂತಹ ಕಡೆ ಸಮಸ್ಯೆಗಳನ್ನು ಎತ್ತಿ ಹಿಡಿದು ಅವುಗಳಿಗೆ ಪರಿಹಾರವನ್ನು ಸೂಚಿಸುವುದನ್ನು ಕಾಣಲಾರೆವು. ಕೆಲವು ಸಂದರ್ಭಗಳಲ್ಲಿ ನಗರಗಳಿಗೆ ಆವಶ್ಯಕವಾದ ಅಂಶಗಳನ್ನು ವಿವರಿಸಿದ್ದಾರೆ. ಜನರ ಪ್ರಯಾಣ ಸೌಲಭ್ಯ, ವಾಹನಗಳನ್ನು ನಿಲ್ಲಿಸುವ ಸ್ಥಳಗಳ ವಿನ್ಯಾಸ, ಸಂಚಾರ ನಿಯಮಗಳು. ಟ್ಯಾಕ್ಸಿಗಳು. ರಿಕ್ಷಾಗಳ ಸೌಕರ್ಯ. ಸೈಕಲ್‌ಸವಾರಿಗೆ ಮತ್ತು ಪಾದಚಾರಿಗಳಿಗೆ ಬೇಕಾದ ಮಾರ್ಗಗಳು. ಅಪಘಾತಗಳನ್ನು ತಪ್ಪಿಸುವ ವಿಧಾನ. ಬೀದಿ ದೀಪಗಳ ಹಾಗೂ ಸಿಗ್ನಲ್ ದೀಪಗಳ ವಿಚಾರಗಳನ್ನು ನಿರೂಪಿಸಿ ತೊಂದರೆಗಳನ್ನು ಗಮನಿಸಿ "ಏನಾದರೂ ಮಾಡದಿದ್ದರೆ ಮುಂದೆ ತೊಂದರೆ" ಎನ್ನುತ್ತಾರೆ. ಏನು ಮಾಡಬೇಕು ಎನ್ನುವುದನ್ನು ಖಚಿತವಾಗಿ ತಿಳಿಸಿದ್ದರೆ ಇನ್ನೂ ಉಪಯುಕ್ತವೆನಿಸುತ್ತಿತ್ತು. ಆದರೆ ಒಂದು ಕಡೆ 'ಉದ್ದಿಮೆ'ಗಳನ್ನು ಒಳನಾಡಿನಲ್ಲಿಯೂ ಸ್ಥಾಪಿಸುವುದರ ಉಪಯುಕ್ತತೆಯನ್ನು ಪರಿಶೀಲಿಸಿ ಅದು ಅಷ್ಟು ಸುಲಭವಲ್ಲವೆಂದಿದ್ದಾರೆ. ಕೈಗಾರಿಕೋದ್ಯಮಗಳಿಗೆ ಸಾಕಷ್ಟು ಪ್ರಚೋದನೆ ನೀಡಬೇಕೆಂದು ಸೂಚಿಸಿದ್ದಾರೆ. ಇಲ್ಲವಾದರೆ ಬೆಂಗಳೂರು ಮೊದಲಾದ ಕೈಗಾರಿಕಾ ಕೇಂದ್ರಗಳು ಮಾನವರನ್ನೂ ಯಂತ್ರಗಳನ್ನಾಗಿ ಮಾಡಿಬಿಡುತ್ತವೆ. ಯಂತ್ರ ಸೌಲಭ್ಯವಿರುವುದು ಮಾನವನ ಸೌಖ್ಯವರ್ಧನಕ್ಕೆ ಎನ್ನುವುದನ್ನು ಮರೆತರೆ ಭಸ್ಮಾಸುರನ ಗತಿ ಅನಿವಾರ್ಯ. ಗ್ರಂಥದ ಎರಡನೆಯ ವಿಭಾಗದಲ್ಲಿ ಬೆಂಗಳೂರು, ಮಂಗಳೂರು, ದಾಂಡೇಲಿ. ಭದ್ರಾವತಿ, ಮೈಸೂರು ಕೇಂದ್ರಗಳ ಬೆಳವಣಿಗೆಯನ್ನು ಅಂಕಿ ಅಂಶಗಳೊಡನೆ ವಿವರಿಸಿದ್ದಾರೆ. ಇದು ಒಂದು ರೀತಿಯ ವರದಿಯಂತೆ ಕಾಣುತ್ತದೆ. ನಗರಗಳಲ್ಲಿ ಅನೇಕ ಸಮಸ್ಯೆಗಳಿವೆ. ಅವುಗಳನ್ನು ಪರಿಹರಿಸುವ ಮಾರ್ಗವನ್ನು ಹುಡುಕುವುದೇ ನಗರ ಯೋಜನೆಯ ಉದ್ದೇಶವಾದರೆ ಸಾಲದು. ಪಟ್ಟಣ ನಗರವಾಗಿ, ಮಹಾನಗರವಾಗಿ ಸ್ವರ್ಗನರಕಗಳ ಸಮಾವೇಶವಾಗುತ್ತದೆ. ನಗರ ಯೋಜಕರು ಮೊದಲು ನಗರಗಳ ಬೆಳವಣಿಗೆಗೆ ಒಂದು ಮಿತಿಯನ್ನು ಹಾಕಲೇಬೇಕು. ಅಂತಹ ಮಿತಿಯನ್ನು ಹಾಕಿದಾಗ ಇತರ ಕೇಂದ್ರಗಳ ಅಭಿವೃದ್ಧಿಗೆ ಮನ ಕೊಡಬೇಕು. "ಅಲ್ಲಿಗೆ ಹೆದ್ದಾರಿಯಾಗಬೇಕು. ಬ್ರಾಡ್‌ಗೇಜು ಬೇಕು, ಅದಕ್ಕೆ ಖರ್ಚು ಹೆಚ್ಚು" ಎಂದು ಬಿಟ್ಟರೆ "ಮಾನವನ ಸುಖಕ್ಕಾಗಿ ಇದೆಲ್ಲ" ಎನ್ನುವುದನ್ನು ಮರೆತಂತಾಗುತ್ತದೆ. ವಿದ್ಯಾಭ್ಯಾಸ ಇಲಾಖೆಗೆ ಎಷ್ಟು ವೆಚ್ಚವಾಗುತ್ತದೆ! ಅದರಿಂದ (ರಿಟರ್ನ್) ಆದಾಯವಿದೆಯೆ? ಹಾಗೆಂದು ಖೋತಾ ಮಾಡಬಹುದೆ? ಇಂದಿನ ಖರ್ಚನ್ನು ಲೆಕ್ಕಿಸದೆ ಭವಿಷ್ಯದ ಬಾಳನ್ನು ಗಮನಿಸಬೇಕು.

ಗ್ರಂಥಕರ್ತರ ಭಾಷಾ ಪ್ರಯೋಗ ಸರಳವಾಗಿಯೂ ಆಕರ್ಷಕವಾಗಿಯೂ ಇದೆ. ಕೆಲವು ಕಡೆ ಪ್ರಯೋಗದ ಸೊಗಸು ಕಾವ್ಯತ್ವಕ್ಕೇರುತ್ತದೆ. ಅಂತಹ ಸಂದರ್ಭಗಳಲ್ಲಿ ಲೇಖಕರ ಚಾತುರ್ಯ ಮನಸ್ಸಿಗೆ ಮುಟ್ಟುತ್ತದೆ—"Houses are constructed, shops are opened, markets flourish, schools, hospitals are built, roads are widened, new roads opened.... In a modern city, a man lives on one piece of land, works on another, shops at a third, plays on still others and travels over many other pieces of land in moving."

ಗ್ರಂಥಕರ್ತರು ಯೋಜನೆಯ ವಿಚಾರವನ್ನು ಚೆನ್ನಾಗಿ ತಿಳಿದಿದ್ದಾರೆ. ನಿರೂಪಿಸುವ ಸಾಮರ್ಥ್ಯವನ್ನೂ ಪಡೆದಿದ್ದಾರೆ. ಆದ್ದರಿಂದ ಅವರಿಂದ ಆನ್ವಯಿಕ ಯೋಜನೆಯ (Practical Planning) ಬಗ್ಗೆ ಕೃತಿಯೊಂದನ್ನು ನಿರೀಕ್ಷಿಸುವುದು ಸಂದರ್ಭೋಚಿತವಾಗಿದೆ. ಏಕೆಂದರೆ ಸೈದ್ಧಾಂತಿಕ ಯೋಜನೆ, ತಾತ್ವಿಕ ವಿವರಣೆ, ವರದಿ ವಿವರಗಳು ಮುಖ್ಯವಾದುವಾದರೂ ಸದ್ಯದ ಪೀಡೆಯಾದ ರಾಕ್ಷಸ ನಗರಗಳ ನಿವಾರಣೆ, ಕೈಗಾರಿಕಾ ವಿಕೇಂದ್ರೀಕರಣ ಮೊದಲಾದ ವಾಸ್ತವ ಅಂಶಗಳನ್ನು ಕುರಿತು ಸ್ಪಷ್ಟ ಸಲಹೆಗಳನ್ನು ಕೊಟ್ಟು ಬರೆಯುವುದರಿಂದ ಮಹೋಪಕಾರವಾಗುವುದೆಂದು ಆಶಿಸುವುದು ನಾಗರಿಕರೆಲ್ಲರ ಕರ್ತವ್ಯವಾಗಿದೆ.

—ಎಂ. ರಾಮಕೃಷ್ಣ

ನಗರ ಯೋಜನೆ: ಲೇ: ಕೆ. ಎಸ್. ರಾಮೇಗೌಡ; ಪ್ರ: ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು; ಪ್ರಥಮ ಮುದ್ರಣ: 1972; ಪುಟಗಳು: 20 + 108; ಬೆಲೆ: ಸಾದಾಪ್ರತಿ ರೂ. 3.00, ಕ್ಯಾಲಿಕೊ ರೂ. 5.00

'ಯೋಜನೆ' ಎನ್ನುವ ಶಬ್ದದ ಬಳಕೆ ಇತ್ತೀಚೆಗೆ ಹೆಚ್ಚು ಪ್ರಾಧಾನ್ಯ ಪಡೆದಿದೆ. ಭವಿಷ್ಯತ್ತಿನ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಪ್ರಜ್ಞೆ ಮೂಡಿದಂತೆಲ್ಲ ಯೋಚಿಸುವುದು, ಯೋಜಿಸುವುದು ಪ್ರಾರಂಭವಾದುವು. ಯೋಜನೆ ಇಲ್ಲದ ಕಾರ್ಯ ಗೊಂದಲಕ್ಕೆ ಕಾರಣವಾಗುವುದೆಂದು ತಿಳಿದಾಗಲೇ ಅದನ್ನು ನಿವಾರಿಸಲು ಮನುಷ್ಯ ಯತ್ನಿಸುತ್ತಾನೆ. ಅದಕ್ಕಾಗಿಯೇ ಪೂರ್ವಭಾವೀ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾನೆ. ಮನೆ ಕಟ್ಟಲಿ, ಮದುವೆ ಮಾಡಲಿ, ಅದರ ವೆಚ್ಚದ ವಿಚಾರವಾಗಿ ಒಂದು ಅಂದಾಜು ಪತ್ರವನ್ನು ತಯಾರಿಸಿಕೊಳ್ಳುತ್ತಾನೆ. ಅಂದಾಜು ಪತ್ರವೇ ಲಕ್ಷ್ಯಪೂರೈಕೆಯಾಗುವುದಿಲ್ಲ. ಆದರೆ ವೈಜ್ಞಾನಿಕ ಪದ್ಧತಿಯನ್ನು ಜಾರಿಗೆ ತರಲು ನೆರವಾಗುತ್ತದೆ.

'ನಗರ ಯೋಜನೆ' ಎಂಬ ಕೃತಿ ಶ್ರೀ ಕೆ. ಎಸ್. ರಾಮೇಗೌಡ ಅವರಿಂದ ರಚಿತವಾದುದು. ಗೃಹ ಸರಸ್ವತೀ ಗ್ರಂಥಮಾಲೆಯ ನಿಯಮದಂತೆ ಜಟಿಲವೂ, ತಾಂತ್ರಿಕವೂ ಆದ ಅಂಶಗಳನ್ನು ನಿವಾರಿಸಿಕೊಂಡೇ ಬಂದಿದೆ. ಈ ಕೃತಿಯಲ್ಲಿ ನಗರಗಳ ಯೋಜನೆಯ ಪ್ರಾರಂಭ, ಬೆಳವಣಿಗೆ, ಸಾಧನೆ, ಸಿದ್ಧಿಗಳ ಬಗ್ಗೆ ದಾಖಲಿಸಿದೆ. ಭಾರತದ ಬಗ್ಗೆ ವಿದೇಶೀಯರಿಗಿದ್ದ ತಪ್ಪು ಕಲ್ಪನೆಯನ್ನು ತೋರಿಸಿಕೊಡುತ್ತದೆ. "ಆಂಗ್ಲರಿಗೆ ಅರ್ಥವಾಗಲಿಲ್ಲವೋ...... ಭಾರತೀಯರ ಕಡುಬಡತನ, ದಾಳಿಗೀಡಾಗಿ ಅವಶೇಷ ಮಾತ್ರವಾಗಿ ಉಳಿದಿದ್ದ ಗುರುತುಗಳನ್ನು ಮಾತ್ರ ಕಂಡರೋ...ದೇಶಭಾಷೆ ತಿಳಿಯದೆಯೋ...ಶತಮಾನದಷ್ಟು ಸಮಯ ಬೇಕಾಯಿತು". ಎಂದಿರುವುದು ಸತ್ಯವಾದ ವಿಷಯ. ನಮ್ಮ ಬೌದ್ಧಿಕ ವರ್ಗದವರಲ್ಲಿ ಎರಡು ವಿಧದವರಿದ್ದಾರೆ. ಒಂದು ವರ್ಗದವರಿಗೆ ಪ್ರಾಚೀನ ಇತಿಹಾಸವನ್ನು ತಿಳಿಯಲು ಮನಸ್ಸಿಲ್ಲ. ಇನ್ನೊಂದು ವರ್ಗದವರಿಗೆ ಪಾಶ್ಚಿಮಾತ್ಯರ ವಿಚಾರಗಳೇ ಸರ್ವೋತ್ತಮ. ಆದ್ದರಿಂದ ಭಾರತದ ಬಗ್ಗೆ ಸತ್ಯ ಸಂಗತಿಗಳನ್ನು ಬಹಿರಂಗಪಡಿಸಿ, ಪಾಶ್ಚಿಮಾತ್ಯರಿಂದ ನಮ್ಮ ಜಾಯಮಾನಕ್ಕೆ ಪದ್ಧತಿಗೆ ಒಗ್ಗುವಂತಹ ಉತ್ತಮ ಅಂಶಗಳನ್ನು ಸ್ವೀಕರಿಸಲು ಸಿದ್ಧರಾದ ಜನರು ಬೇಕು. ಈ ಲೇಖಕರಿಗೆ ಈ ರೀತಿಯ ಚೈತನ್ಯವಿದೆ. ಅದು ಈ ಕೃತಿಯಲ್ಲಿ ಅತ್ಯಂತ ಮಿತವಾಗಿ ಕಂಡುಬಂದಿದೆ. ಅದಕ್ಕೆ ಗಾತ್ರದ ಮಿತಿಯೂ ಒಂದು ಕಾರಣವಿರಬಹುದು.

ಭಾರತದ ನಗರಯೋಜನೆ ಹೇಗೆ ವೈಜ್ಞಾನಿಕವಾಗಿತ್ತು, ಕ್ರಮಬದ್ಧವಾಗಿತ್ತು ಎನ್ನುವುದನ್ನು ತಿಳಿಸಿದ್ದಾರೆ. ಪಾಟಲಿಪುತ್ರ, ಮಧುರೆ, ಕಂಚೀಪುರ, ಕಾವೇರಿಪಟ್ಟಣ, ವಿಜಯನಗರ ಮೊದಲಾದ ನಗರಗಳು ವಿದೇಶೀ ಪ್ರವಾಸಿಗರ ಮೆಚ್ಚಿಕೆಗೂ ಪಾತ್ರವಾಗಿದ್ದುವು. ಮೊಗಲರು ಬಂದ ಮೇಲೆ ನಗರ ನಿರ್ಮಾಣ ಹೇಗೆ ಆಗಬೇಕೋ ಹಾಗೆ ಆಗಲಿಲ್ಲ. "ಅಧಿಕಾರ ದರ್ಪವನ್ನು ಪ್ರದರ್ಶಿಸಲು ಮತ್ತು ದುಂದು ಜೀವನ ನಡೆಸಲು ಬೇಕಾದ ಸಾಧನವಾಗಿತ್ತು. ನೀರು ಸರಬರಾಜು, ಜನಾರೋಗ್ಯ ಕ್ರಮಗಳು ಮೊದಲಾದುವುಗಳ ಕಡೆ ಹೆಚ್ಚು ನಿಗಾ ಕೊಡುತ್ತಿರಲಿಲ್ಲ". ವಿಜಯನಗರ ಮತ್ತು ಜಯಪುರಗಳ ರಚನಾ ಕೌಶಲವನ್ನು ಮೆಚ್ಚಿ ನುಡಿದಿದ್ದಾರೆ. ಆದರೆ ಆಂಗ್ಲರ ಆಗಮನದೊಡನೆ ಭಾರತದ ನಗರಗಳ ಚರಿತ್ರೆಯೂ ಬದಲಾಯಿತು. ಮುನಿಸಿಪಾಲಿಟಿಯಂತಹ ಮಂಡಲಿಗಳನ್ನು ಸ್ಥಾಪಿಸಿ ನಗರಗಳ ಸರ್ವತೋಮುಖ ಅಭಿವೃದ್ಧಿಗೆ ಬುನಾದಿ ಹಾಕಿದರು. ಆದರೆ ನಗರಗಳ ವಿಸ್ತರಣೆಯಿಂದ ಏನು ಅಪಾಯವೆನ್ನುವುದನ್ನು ಮುಂದೆ ಸೂಚಿಸಿದ್ದಾರೆ.

ನಗರ ವಿಂಗಡಣೆಯನ್ನು ಹೇಗೆ ಮಾಡಬಹುದೆಂಬುದನ್ನು ಇಲ್ಲಿ ವಿವರಿಸಿದ್ದಾರೆ: ಸಂಸ್ಥಾಕೇಂದ್ರಗಳು, ವಾಣಿಜ್ಯ ಕೇಂದ್ರಗಳು, ಕೈಗಾರಿಕಾ ಕೇಂದ್ರಗಳು, ಜಾತ್ರೆ ಮತ್ತು ಕ್ರೀಡಾಕೇಂದ್ರಗಳು ಮೊದಲಾದುವು. ಹಾಗೆಯೇ ನಗರಗಳನ್ನು ಕಟ್ಟುವಲ್ಲಿ ಉದ್ದನೆಯ ವಿನ್ಯಾಸ, ಚಕ್ರವಿಧಾನ, ಸಮಾನಾಂತರ ವಿಧಾನ, ಸೌರವ್ಯೂಹ ಮಾದರಿಗಳನ್ನು ತೋರಿಸಿದ್ದಾರೆ. ಇಲ್ಲೊಂದು ಮುಖ್ಯವಾದ ವಿಶ್ಲೇಷಣೆಯಿದೆ. ನಗರವನ್ನು ಕಟ್ಟುವಾಗ ಮನಸ್ಸಿನಲ್ಲಿಟ್ಟುಕೊಂಡಿರಬೇಕಾದ ಅಂಶಗಳೆಂದರೆ "ಅನುಕೂಲ, ಸುಖಸಂತೋಷ, ರಕ್ಷಣೆ". ಈ ಅಂಶಗಳನ್ನು ಇನ್ನಷ್ಟು ವಿಸ್ತಾರವಾಗಿ ವಿವರಿಸಬೇಕಾಗಿತ್ತು ಎನ್ನಿಸುತ್ತದೆ. ಸೂತ್ರಪ್ರಾಯ ಹೇಳಿಕೆ

ಯನ್ನು "ಸುಮಾರಾಗಿ ಎಸ್.ಎಸ್.ಎಲ್.ಸಿ. ಓದಿರುವ ಸಾಮಾನ್ಯರು" ಚೆನ್ನಾಗಿ ಗ್ರಹಿಸಲಾರರು. ಅವರಿಗೆ ಸ್ಪಷ್ಟವಾದ ನಿದರ್ಶನಪೂರ್ವಕ ವಿವರಣೆ ಆವಶ್ಯಕ. ನಗರಗಳ ವಲಯ ವಿಧಾನವನ್ನು ಕುರಿತು ವಿವರಿಸಲಾಗಿದೆ. ನಗರಗಳ ರಚನೆಯಲ್ಲಿ "ರಸ್ತೆಯಲ್ಲಿ ವಾಹನ ಸಂದಣಿ ಹೆಚ್ಚದಂತೆ, ಬೆಂಕಿ ಮುಂತಾದ ಭಯೋತ್ಪಾದಕ ಘಟನೆಗಳಿಗೆ ಅವಕಾಶ ಕೊಡದೆ ಜನರ ಆರೋಗ್ಯ ಮತ್ತು ಕ್ಷೇಮಕ್ಕೆ ಸಹಾಯಕವಾಗಿಯೂ ಜನಸಂದಣಿ ಅತಿಯಾಗಿರದಂತೆಯೂ, ಜನರಿಗೆ ಬೇಕಾದ ಸಾರಿಗೆ ವ್ಯವಸ್ಥೆ, ನೀರು, ನಿರ್ಮಲೀಕರಣ, ಶಾಲೆ, ಉದ್ಯಾನಗಳು ದೊರೆಯುವಂತೆಯೂ ಇರಬೇಕು" ಎಂದಿರುವುದು ಸರಿಯಾಗಿದೆ. ವಾಸದ ವಲಯ, ವಾಣಿಜ್ಯವಲಯ, ಕೈಗಾರಿಕಾವಲಯ, ಸಂಚಾರಸೌಲಭ್ಯವಲಯ, ಸಾರ್ವಜನಿಕ ಉಪಯುಕ್ತ ವಲಯ, ಸಾರ್ವಜನಿಕ ಸಂಸ್ಥೆಗಳ ವಲಯ, ಬಯಲು ಪ್ರದೇಶ, ಕ್ರೀಡಾಂಗಣಗಳ ವಲಯ, ವ್ಯವಸಾಯ ವಲಯಗಳನ್ನಾಗಿ ವಿಭಜಿಸಿ ಪ್ರತಿ ವಲಯದ ಆವಶ್ಯಕತೆ, ನಿಬಂಧನೆಗಳನ್ನು ವಿವರಿಸಿದ್ದಾರೆ.

ಈ ಕೃತಿಯ ಇನ್ನೊಂದು ಮುಖ್ಯ ಅಂಶವೆಂದರೆ ಗೃಹನಿರ್ಮಾಣ ಚಟುವಟಿಕೆಗಳನ್ನು ಕುರಿತು ಸಾಕಷ್ಟು ವಿವರಣೆ ಕೊಟ್ಟಿರುವುದು. ಅದರ ಸಮಸ್ಯೆಯ ತೀವ್ರತೆಯನ್ನು ಒತ್ತಿ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಗೃಹಗಳನ್ನು ನಿರ್ಮಿಸುವಾಗ ಗಮನಿಸಬೇಕಾದ ಅಂಶಗಳನ್ನು ತಿಳಿಸಿದ್ದಾರೆ. ಗ್ರಾಮ ವಿನ್ಯಾಸ, ಬಡಾವಣೆ, ಮನೆಗಳ ವಿನ್ಯಾಸಗಳ ಮಾದರಿಗಳನ್ನು ಕೊಟ್ಟು ವಿವರಿಸಿದ್ದಾರೆ. ಗ್ರಾಮಗಳಿಂದ ಜನರು ನಗರಗಳಿಗೆ ವಲಸೆ ಹೋಗುವುದರ ಕಾರಣವನ್ನು 'ಕಸಬಿನ ಅಭಾವ, ನಾಗರಿಕ ಜೀವನದ ಬಯಕೆ' ಎಂದು ಗುರುತಿಸಿದ್ದಾರೆ.

ಮುಂದಿನ, ನಗರಗಳು ಎಂಬ, ಅಧ್ಯಾಯದಲ್ಲಿ ಮಹಾನಗರಗಳ ಬೆಳವಣಿಗೆ, ಸಮಸ್ಯೆಗಳನ್ನು ಸೂಚಿಸಿದ್ದಾರೆ. ನಗರಗಳ ಸಮಸ್ಯೆಗಳನ್ನು ಪರಿಹರಿಸಬೇಕೆಂದಿದ್ದರೆ "ಮುಂದುವರಿದ ದೇಶಗಳು ಅನುಸರಿಸಿದ ಎಲ್ಲ ವಿಧಾನಗಳನ್ನೂ ಕಣ್ಣುಮುಚ್ಚಿಕೊಂಡು ಅನುಸರಿಸದೆ ಅವರು ಮಾಡಿದ ತಪ್ಪುಗಳಿಂದ ಪಾಠ ಕಲಿತು" ವರ್ತಿಸಬೇಕು ಎಂದಿರುವುದು ಉತ್ತಮ ದೃಷ್ಟಿ.

ಕೃತಿಯ ಕಡೆಯ ಭಾಗದಲ್ಲಿ ಪ್ರಮುಖವಾದ ಅಂಶವನ್ನು ಪ್ರಸ್ತಾಪಿಸಿದ್ದಾರೆ. ಆದರೆ ಸೂಕ್ತ ಪರಿಹಾರಗಳನ್ನು ಇನ್ನೂ ಚೆನ್ನಾಗಿ ವಿವರಿಸಬೇಕಾಗಿತ್ತು ಅನಿಸುತ್ತದೆ. ಅದೇ—ಬೃಹತ್ ನಗರಗಳ ಬೆಳವಣಿಗೆ. ರಷ್ಯ, ಇಂಗ್ಲೆಂಡ್ ಮೊದಲಾದ ದೇಶಗಳು ಈ ದಿಕ್ಕಿನಲ್ಲಿ ಎಚ್ಚರ ವಹಿಸಿವೆ. ಮಾಸ್ಕೋ ನಗರದ ಬೆಳವಣಿಗೆಯನ್ನು ಮಿತಿಯಲ್ಲಿಡಲು ಯೋಜನೆ ತಯಾರಿಸಿಯಾಗಿದೆ. ಹವಾನ ನಗರಕ್ಕೆ ಬಂದು ನೆಲಸಲು ಯಾರಿಗೂ ಅಪ್ಪಣೆ ಇಲ್ಲ. ಕ್ಯೂಬಾದಲ್ಲಿ ಜನರು ಗ್ರಾಮಾಂತರ ಪ್ರದೇಶಕ್ಕೆ ಹೋಗಿ ನೆಲಸುವಂತೆ ಪ್ರಯತ್ನ ನಡೆಯುತ್ತಿದೆ. ಲೇಖಕರು 'ಮಹಾನಗರ'ಗಳ ಭಯಂಕರ ಸಮಸ್ಯೆಗಳನ್ನು ಸ್ಪಷ್ಟವಾಗಿ ತೋರಿಸಿದ್ದಾರೆ. ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವುದು ಕಷ್ಟವಾಗುತ್ತದೆ. ನೀರು ಸರಬರಾಯಿ, ಒಳಚರಂಡಿ ವ್ಯವಸ್ಥೆ ಅಸ್ತವ್ಯಸ್ತವಾಗುತ್ತವೆ. ನಗರ ನೈರ್ಮಲ್ಯ ಕೆಡುತ್ತದೆ. ಒಂದೊಂದೇ ಕಟ್ಟಡದೊಳಗೆ ಸಾವಿರಾರು ಸಂಸಾರಗಳು ನಾಟಕೀಯವಾಗಿ ವಾಸಿಸುವ ಪರಿಸ್ಥಿತಿ. ಅವರ ಕಾಲ್ಪನಿಕ ಜೀವನ, ನೈತಿಕ ಪತನ, ಯಾಂತ್ರಿಕ ಆಚರಣೆ, ಜಾತ್ರೆಯಂತೆ ಸೇರುವುದು......ಇತ್ಯಾದಿ. ಬೆಂಗಳೂರು ಜೀವನವೇ ಇದಕ್ಕೆ ಸಾಕ್ಷಿಯಾಗಲು ಸಾಕಷ್ಟು ಅರ್ಹವಾಗಿದೆ. ಒಂದು ಕಡೆ ಭವ್ಯ ಸೌಧಗಳು, ಇನ್ನೊಂದು ಕಡೆ ಅಸಹ್ಯ ವಾಕರಿಕೆ ತರುವ ಹೊಲಸು ಸಂಗ್ರಹ. ಸ್ವರ್ಗ ನರಕಗಳೆರಡೂ ಒಂದೇ ಕಡೆ ಇರುವುದು ಸಾಧ್ಯವಾದಲ್ಲಿ ಅದು ಮಹಾನಗರಗಳಲ್ಲಿಯೇ.

ನಿಜ. ಪರಿಹಾರವೇನು? ಇದನ್ನು ಲೇಖಕರು ಇದರಲ್ಲಿ ಸ್ಪಷ್ಟವಾಗಿ ಹೇಳಿಲ್ಲ. "ನಗರಯೋಜನೆ ಬೇಕು" ಎಂದಿದ್ದಾರೆ. ಆದರೆ ನಗರ ಬೆಳೆಯದಂತೆ ಮಾಡಲು ತೆಗೆದುಕೊಳ್ಳಬೇಕಾದ ಕ್ರಮವನ್ನು ಸ್ಪಷ್ಟವಾಗಿ ವಿವರಿಸಿಲ್ಲ. "ಭಾರತದ ನಗರಗಳೂ, ಗ್ರಾಮಗಳೂ ಒಂದಕ್ಕೊಂದು ಪೂರಕವಾಗಿ ಸುವ್ಯವಸ್ಥಿತವಾಗಿ ಬೆಳೆಯಲು ಎಲ್ಲರೂ ಸಹಕರಿಸಬೇಕು" ಎಂದಿದ್ದಾರೆ. ಇದನ್ನು ಹೇಗೆ ಕಾರ್ಯರೂಪಕ್ಕೆ ತರಬೇಕೆಂಬುದನ್ನೂ ಇನ್ನೂ ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದರೆ ತುಂಬಾ ಉಪಯುಕ್ತ ಕೃತಿಯಾಗುತ್ತಿತ್ತು ಎನ್ನಬಹುದು. ಆದರೆ ನಗರಗಳು ಯೋಜನೆಯಿಲ್ಲದೆ ಬೆಳೆಯಬಾರದು ಎನ್ನುವ ಅಂಶ ಮನಮುಟ್ಟುವಂತಿದೆ.

—ಎಂ. ರಾಮಕೃಷ್ಣ

ಅರವಿಂದರ ಸುಪ್ರಮಾನಸ ದರ್ಶನ (ಏಳು ಉಪನ್ಯಾಸಗಳು): ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (1972); ಪುಟ: 120; ಬೆಲೆ: ರೂ. 2.50

ಕರ್ನಾಟಕ ವಿಶ್ವವಿದ್ಯಾಲಯ ಪ್ರತಿವರ್ಷವೂ ನಡೆಸುವ ವಿಶೇಷ ವಾಙ್ಮಯ ಪ್ರಸಾರೋಪನ್ಯಾಸ ಶಿಬಿರಗಳಲ್ಲಿ ಒಂದು 1972ರಲ್ಲಿ ಹಲಸಂಗಿಯ ಶ್ರೀ ಅರವಿಂದ ಮಂಡಲದ ಆಶ್ರಯದಲ್ಲಿ ಏರ್ಪಾಟಾಯಿತು. ಶ್ರೀ ಅರವಿಂದರ ಜೀವನದ ಧ್ಯೇಯ- ಸಂದೇಶಗಳನ್ನು ಬಹುವಾಗಿ ಮೆಚ್ಚಿ ಒಪ್ಪಿಕೊಂಡವರೂ ಅವರ ಸಾಹಿತ್ಯವನ್ನು ಚೆನ್ನಾಗಿ ಅಧ್ಯಯನ ಮಾಡಿದವರೂ ಆದ ಏಳು ಜನ ವಿದ್ವಾಂಸರು ಆಹ್ವಾನಿತರಾಗಿ ಬಂದು ಮಾಡಿದ ಏಳು ಉಪನ್ಯಾಸಗಳ ಸಂಕಲನ ಈ ಪುಸ್ತಕ.

ಬಿ. ಎಚ್. ಶ್ರೀಧರ ಅವರ 'ಭಾರತದ ಚರಿತ್ರೆಗೆ ಅರವಿಂದರ ಭಾಷ್ಯ' ಎಂಬ ಲೇಖನದಲ್ಲಿ ಪ್ರಸ್ತಾಪಿಸಿರುವ ಅಂಶಗಳು ವಿಚಾರಪ್ರಚೋದಕವಾಗಿವೆ. ಭಾರತದ ಇತಿಹಾಸದಲ್ಲಿ ಬರುವ ಏರಿಳಿತಗಳ ಕಾರಣವನ್ನು ವಿಶ್ಲೇಷಿಸಿ ಭಾರತೀಯ ಧರ್ಮಸಂಸ್ಕೃತಿಗಳ ವಿಶಿಷ್ಟ ಸತ್ವದ ಆಧಾರದ ಮೇಲೆ ಕಟ್ಟಿದಲ್ಲದೆ ಪಾಶ್ಚಾತ್ಯ ಸಮಾಜವನ್ನು ಅನುಕರಿಸುವುದರಿಂದ ಭಾರತದ ಶ್ರೇಯೋಸಾಧನೆಯಾಗುವುದಿಲ್ಲ ಎನ್ನುವ ಅರವಿಂದರ ವಿಚಾರಸಾರವನ್ನು ಈ ಲೇಖನ ಮುಂದಿಡುತ್ತದೆ. ಆದರೆ ಭಾಷೆಯಲ್ಲಾಗಲಿ ವಿಚಾರ ಪ್ರತಿಪಾದನೆಯಲ್ಲಾಗಲಿ ಎಷ್ಟೇನೂ ಸರಳವಾಗಿಲ್ಲದ ಈ ಲೇಖನದ ವಾಕ್ಯಗಳ ರಚನೆಯೇ ಹಿತವಾಗಿಲ್ಲ.

ಕೋ. ಚೆನ್ನಬಸಪ್ಪನವರ ಲೇಖನ: ಶ್ರೀ ಅರವಿಂದರ ರಾಷ್ಟ್ರಕಾರ್ಯ ಅತ್ಯಂತ ಸರಳವಾಗಿದೆ. ಕಥನ ಶೈಲಿಯಿಂದಾಗಿ ಸ್ವಾರಸ್ಯವಾಗಿದೆ. ಆದರೆ ಉಪನ್ಯಾಸಕ್ಕೆಂದು ತಯಾರಾದದ್ದರಿಂದಲೋ ಏನೋ ಪುನರುಕ್ತಿ, ಅನಾವಶ್ಯಕವಾದ ವಿವರಣೆಗಳು, ಅಮಿತವಾದ ಮಾತುಗಳಿಂದ ಬಂಧ ಶಿಥಿಲವಾಗಿದೆ. ಲೇಖನವಾಗಿ ಪ್ರಕಟಿಸುವಾಗಲಾದರೂ ಇವನ್ನು ಸರಿಪಡಿಸಬಹುದಾಗಿತ್ತು. ಅಲ್ಲದೆ ವಿಚಾರ ಮಂಡನೆಯಲ್ಲೂ ಒಂದೆಡೆ (ಬಹುಶಃ ಕಣ್ತಪ್ಪಿ ಆದ) ದೋಷ ಕಾಣುತ್ತದೆ: (ಪು. 15) "ಮುಂದೆ ಗಾಂಧೀಜಿ ಆಚರಣೆಯಲ್ಲಿ ತಂದ ಸ್ವರಾಜ್ಯ, ಸ್ವದೇಶಿ, ಅಸಹಕಾರ, ವಿದೇಶೀ ಬಹಿಷ್ಕಾರ ನೀತಿಯ ತಳಹದಿಯನ್ನು ಶ್ರೀ ಅರವಿಂದರೇ ಹಾಕಿದರು."

"ಏಟಿಗೆ ಏಟು: ಮುಯ್ಯಿಗೆ ಮುಯ್ಯಿ! ಹಿಂಸೆಗೆ ಪ್ರತಿಹಿಂಸೆ: ಅನ್ಯಾಯಕ್ಕೆ ಪ್ರತೀಕಾರವೇ ಮದ್ದು! ಅನ್ಯಾಯವನ್ನು ಪ್ರತಿಭಟಿಸದೆ ತಲೆಬಾಗಿ ತಗ್ಗಿ ನಡೆಯುವುದು ಹೇಡಿತನ! ಅದ ಕಾರಣ ದಬ್ಬಾಳಿಕೆ, ದೌರ್ಜನ್ಯ, ಅನ್ಯಾಯ ಇವುಗಳನ್ನು ವಿರೋಧಿಸುವುದೇ ವೀರೋಚಿತವಾದ ವರ್ತನೆ! ದಬ್ಬಾಳಿಕೆಯ ವಿಧ್ವಂಸಕ್ಕೆ ಆಹುತಿಯಾಗುವುದೇ ಸ್ವರಾಜ್ಯ ಸಂಪಾದನೆಗೆ ಇರುವ ಒಂದೇ ಮಾರ್ಗ—ಎಂಬುದಾಗಿ ಬಂಗಾಳದ ಜನತೆಯನ್ನು ನಿರ್ಭಯವಾಗಿ ಎಚ್ಚರಿಸುತ್ತಿದ್ದರು." ಪು. 20

ಹೀಗೆ ಮೂಲ ತತ್ವದಲ್ಲೇ ಪರಸ್ಪರ ವಿರೋಧವಾದ ವಿಚಾರಗಳನ್ನು ತಿಳಿಸುವ ಪು. 15ರ ವಾಕ್ಯಕ್ಕೂ ಪು. 20ರ ವಾಕ್ಯಗಳಿಗೂ ಸಂಬಂಧ ಕಲ್ಪಿಸುವುದೇ ಕಷ್ಟವಾಗುತ್ತದೆ. ಗಾಂಧೀಜಿ ಆಚರಣೆಗೆ ತಂದದ್ದಕ್ಕೆ ತದ್ವಿರುದ್ಧವಾದ ವಿಚಾರ ಪು. 20ರಿಂದ ಉದ್ಧರಿಸಿದ ಮೇಲಿನ ವಾಕ್ಯಗಳಲ್ಲಿ ವ್ಯಕ್ತವಾಗುವುದೊಂದೇ ಅಲ್ಲ: ಆ ವಾಕ್ಯಗಳಲ್ಲೇ— ಹಿಂಸೆಗೆ ಪ್ರತಿಹಿಂಸೆ: ಅನ್ಯಾಯಕ್ಕೆ ಪ್ರತೀಕಾರವೇ ಮದ್ದು! ಎಂಬ ಮಾತಿಗೂ ದಬ್ಬಾಳಿಕೆಯ ವಿಧ್ವಂಸಕ್ಕೆ ಆಹುತಿಯಾಗುವುದೇ ಸ್ವರಾಜ್ಯ ಸಂಪಾದನೆಗಿರುವ ಒಂದೇ ಮಾರ್ಗ ಎಂಬ ಮಾತಿಗೂ ಅರ್ಥಾರ್ಥ ಸಂಬಂಧವಿಲ್ಲ!

ದ. ರಾ ಬೇಂದ್ರೆಯವರ ಲೇಖ ಶ್ರೀ ಅರವಿಂದರ ತತ್ವಸಿದ್ಧಾಂತವನ್ನು ಸಾರುವ ಮಹಾಕೃತಿ ದಿ ಲೈಫ್ ಡಿವೈನ್ ಎಂಬ ಗ್ರಂಥವನ್ನು ಕುರಿತದ್ದು. ಇಲ್ಲಿನ ವಿಷಯ ದೊಡ್ಡದು. ಸುಲಭವಾಗಿ ನಿಲುಕುವಂತಹದಲ್ಲ. ಸರಳವಾದ ಒಂದು ಚೌಕಟ್ಟಿನಲ್ಲಿ ಹಾಕಿ ತೋರಿಸುವಂತಹದಲ್ಲ. ನಿಶಿತಮತಿಗಳೂ, ಅಂತರ್‌ದೃಷ್ಟಿಯುಳ್ಳವರೂ ಆದ ದ. ರಾ. ಬೇಂದ್ರೆಯವರೇ. "ಆ ಮಹಾಗ್ರಂಥದ ಹೊರ ಪರಿಚಯವನ್ನು ಮಾಡಿಕೊಟ್ಟು ಅದರ ಅಂತರಂಗದ ಆಳವನ್ನು ಇಲ್ಲಿ ಸೂಚಿಸುತ್ತೇನೆ." ಎಂದು ಆರಂಭಿಸಿದ್ದಾರೆ. ಶ್ರೀ ಅರವಿಂದರ ವಿಚಾರಗಳ ನೂತನತೆಯನ್ನೂ ಆಳ ಔನ್ನತ್ಯಗಳನ್ನೂ ಮಿಂಚಿಸುತ್ತ ಬೇಂದ್ರೆಯವರು ತಮ್ಮ ಕಾರ್ಯವನ್ನು ಸಮರ್ಥವಾಗಿಯೇ ಮಾಡಿದ್ದಾರೆ. ಈ ಲೇಖ ಓದುಗರಲ್ಲಿ ಅರವಿಂದರ ಗ್ರಂಥವನ್ನು ಓದಬೇಕೆಂಬ ಆಸಕ್ತಿಯನ್ನು ಹುಟ್ಟಿಸುವುದಲ್ಲದೆ, ಮುಂದೆ ಅದರ ಅಧ್ಯಯನದಲ್ಲೂ ಮಾರ್ಗದರ್ಶಿಯಾಗುವಂತಿದೆ.

ವಿ. ಕೃ. ಗೋಕಾಕ್ ಅವರು ತಮ್ಮ ಲೇಖನದಲ್ಲಿ ಶ್ರೀ ಅರವಿಂದರ ವಿದ್ವತ್ತಿನ ಅಗಾಧತೆಯನ್ನು ವಿವರಿಸುತ್ತ ಅವರ ತೀಕ್ಷ್ಣದರ್ಶಿತ್ವ, ತೀವ್ರಗಾಮಿತ್ವವನ್ನು 'ಗರುಡ ಪಕ್ಷಿ ವಿಧಾನ' ಎಂಬ ಹೊಸ ಮಾತಿನಲ್ಲಿ ಸೂಚಿಸಿದ್ದಾರೆ. ಅಂತಹ ಪಾಂಡಿತ್ಯವನ್ನು ಹಲವು ಪಟ್ಟು ಮೀರಿಸುವ ಪ್ರಖರತೆಯಿಂದ ಕೂಡಿದ ಅರವಿಂದರ ಪ್ರತಿಭೆಯನ್ನು ಅವರ ಕಾವ್ಯಕೃತಿಗಳಲ್ಲಿ ಗುರುತಿಸಿದ್ದಾರೆ. ವಿದ್ವತ್ತು ಅರವಿಂದರ ಮಹಾ ವ್ಯಕ್ತಿತ್ವದ ಒಂದು ಅಂಶ ಮಾತ್ರ; ಅದು ಸಂಪೂರ್ಣವಾಗಿ ಅವರ ಅಪ್ರತಿಹತ ಪ್ರತಿಭೆಯ ಒಂದು ಸಮರ್ಥವಾದ ಅಭಿವ್ಯಕ್ತಿ ಸಾಧನ ಮಾತ್ರ ಎನ್ನುವ ಲೇಖಕರ ಮಾತು ಸಮಂಜಸವಾಗಿರುವುದು ಮಾತ್ರವಲ್ಲ, ಅರವಿಂದರ ದಿವ್ಯವಾದ ವ್ಯಕ್ತಿತ್ವದ ಭವ್ಯಾನುಭವವನ್ನು ತಂದು ಕೊಡುತ್ತದೆ. ಕ್ರಾಂತದರ್ಶಿಯಾದ ಕವಿಯ ಕಣ್ಣಿನ ಮೂಲಕ ಓದುಗರಿಗೂ ವಿಶ್ವರೂಪದರ್ಶನದ ಕಿಂಚಿದನುಭವವಾಗುತ್ತದೆ.

ಸಾಹಿತ್ಯ ವಿಮರ್ಶೆಗೆ ಶ್ರೀ ಅರವಿಂದರು ಬೀರಿದ ಬೆಳಕು ಅಪೂರ್ವ ಮತ್ತು ಉಜ್ವಲವಾದುದು ಎಂದು ಆರಂಭಿಸುವ ರಂ. ಶ್ರೀ ಮುಗುಳಿಯವರು ಅರವಿಂದರ ಕೆಲವು ಪತ್ರಗಳಲ್ಲಿ, ಭವಿಷ್ಯ ಕಾಲೀನ ಕಾವ್ಯ ಎಂಬ ಗ್ರಂಥದಲ್ಲಿ ಮತ್ತು ಸಾವಿತ್ರಿ ಮುಂತಾದ ಕಾವ್ಯಗಳಲ್ಲಿ ಸಾಹಿತ್ಯ ತತ್ವ ಮತ್ತು ವಿಮರ್ಶೆಗಳನ್ನು ಕುರಿತು ವ್ಯಕ್ತವಾಗಿರುವ ಅವರ ಆಲೋಚನೆಗಳನ್ನು ಆರಿಸಿ ಕ್ರೋಡೀಕರಿಸಿ ವಿಶ್ಲೇಷಿಸಿ ಪರಾಮರ್ಶಿಸಿದ್ದಾರೆ. ಅರವಿಂದರು ಅತಿಮಾನಸ ಪ್ರಜ್ಞೆಯಿಂದ ಪರಿಭಾವಿಸಿ ಕೊಟ್ಟಿರುವ ನೂತನ ವಿಮರ್ಶಾ ವಿಚಾರಗಳು, ಪಾರಿಭಾಷಿಕ ಪದಗಳು ವಿಶ್ವ ಕಾವ್ಯ ಮೀಮಾಂಸೆಗೆ ವಿಶಿಷ್ಟವಾದ ಕಾಣಿಕೆಗಳಾಗಿರುವುದನ್ನೂ, ಕಾವ್ಯ ರಸಾಸ್ವಾದನೆಗೆ ಹೊಸ ಆಯಾಮವನ್ನು ಒದಗಿಸಿರುವುದನ್ನೂ ಈ ಕಿರುಲೇಖನದಲ್ಲಿ ಅಡಕವಾಗಿ ಹೇಳಿದ್ದಾರೆ.

ಅರವಿಂದರ ಪೂರ್ಣಯೋಗದಲ್ಲಿ ಶ್ರೀಮಾತೆಯ ಪಾತ್ರವೇನು ಎಂಬುದನ್ನು ವಿವೇಚಿಸಿರುವ ಸ. ಸ. ಮಾಳವಾಡರ ಲೇಖ ಹಿತಮಿತವಾಗಿ ಅರ್ಥಗರ್ಭಿತವಾಗಿ ಹೃದ್ಯವಾಗಿದೆ. ಶ್ರೀಮಾತೆಯನ್ನು ಕುರಿತ ಅರವಿಂದರ ದಾರ್ಶನಿಕ ವಿಚಾರಧಾರೆಯನ್ನಿಲ್ಲಿ ಸಂಗ್ರಹಿಸಿದ್ದಾರೆ.

ಸಿಂಪಿ ಲಿಂಗಣ್ಣನವರು ತಮ್ಮ ಉಪನ್ಯಾಸದಲ್ಲಿ ಶ್ರೀ ಅರವಿಂದಾಶ್ರಮದ ಸಂಪೂರ್ಣ ಚರಿತ್ರೆಯನ್ನೂ ಅದರ ಅಚ್ಚುಕಟ್ಟಾದ ಮತ್ತು ಆದರ್ಶಯುತವಾದ ಇಂದಿನ ದಿನಚರಿಯನ್ನೂ ಸವಿಸ್ತಾರವಾಗಿ ಹೇಳಿದ್ದಾರೆ. ಅರವಿಂದರ ಆದರ್ಶ ಕೇವಲ ತತ್ವಸಿದ್ಧಾಂತವಾಗಿ ಉಳಿಯದೆ ಹೇಗೆ ಒಂದು ಅನುಕರಣೀಯವಾದ ಜೀವನವಿಧಾನವಾಗಿ ಪ್ರಯೋಗಿಸಲ್ಪಟ್ಟಿದೆ ಎಂಬ ವಾಸ್ತವ ಸಂಗತಿಯನ್ನು ಈ ಲೇಖ ಸ್ವಾರಸ್ಯವಾಗಿ ತಿಳಿಸುತ್ತದೆ.

ಶ್ರೀ ಅರವಿಂದರ ಮುಖ್ಯಸಾಧನೆಯ ವಿವಿಧ ಮುಖಗಳನ್ನು ಸಮಗ್ರವಾಗಿ, ಸಂಕ್ಷಿಪ್ತವಾಗಿ, ಸರಳವಾಗಿ ಪರಿಚಯ ಮಾಡಿಕೊಡುವ ಈ ವಿಶೇಷ ವಾಙ್ಮಯ ಪ್ರಸಾರೋಪನ್ಯಾಸ ಯೋಜನೆಯ ಉದ್ದೇಶವನ್ನು ಬಹುಮಟ್ಟಿಗೆ ಈ ಉಪನ್ಯಾಸಗಳು ಸಫಲಗೊಳಿಸಿವೆ. ಶ್ರೀ ಅರವಿಂದರ ವ್ಯಕ್ತಿತ್ವ ಮತ್ತು ಸಂದೇಶಗಳ ಒಂದು ಸಮಗ್ರ ಚಿತ್ರ ಈ ಏಳು ಉಪನ್ಯಾಸಗಳ ಒಟ್ಟಿನಲ್ಲಿ ತೃಪ್ತಿಕರವಾಗಿ ಮೂಡಿದೆ.

—ಕೆ. ಬಿ. ಪ್ರಭುಪ್ರಸಾದ್

ಸಾಕ್ಷರತಾ ಸಾಹಿತ್ಯ ಸೂತ್ರಗಳು : ಲೇಖಕರು: ಟಿ. ಆರ್. ನಾಗಪ್ಪ; ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ (1972); ಪು. viii + 85; ಬೆಲೆ: 25 ಪೈಸೆ

ವಿದ್ಯಾವಂತನಾದವನು ದೇಶದ ಅಮೂಲ್ಯ ಆಸ್ತಿ. ವಿದ್ಯೆ ಇಲ್ಲದವನು ದುಷ್ಕರ್ಮಗಳಲ್ಲಿ ತೊಡಗುವ ಅವಕಾಶ ಹೆಚ್ಚು. ಕೃತ್ರಿಮಗಳ ಪ್ರಭಾವಕ್ಕೆ ಶೀಘ್ರವಾಗಿ, ತೀವ್ರವಾಗಿ ಸಿಲುಕುತ್ತಾನೆ. ಅಂಥವನಿಂದ ಯಾವ ಸಾರ್ಥಕವೂ ಇಲ್ಲ; ಸಮಾಜಕ್ಕೆ ದೇಶಕ್ಕೆ ಭಾರವಾಗುತ್ತಾನೆ. ಅವಿದ್ಯಾವಂತ ವಯಸ್ಕನಿಗೆ ಅಕ್ಷರ ಬೋಧನೆ ಆಗಬೇಕು; ವಿದ್ಯಾವಿನಿಯೋಗವಾಗಬೇಕು, ಸರಿ. ವಯಸ್ಕನಿಗೆ ಅಕ್ಷರಜ್ಞಾನ ಇಲ್ಲದಿರಬಹುದು; ಅವನು ವಿದ್ಯಾವಂತನಲ್ಲದಿರಬಹುದು; ಆದರೆ ಅವನಿಗೆ ಪ್ರಾಪಂಚಿಕ ಅನುಭವವಿದೆ; ಅವರ ಹಿನ್ನೆಲೆ

ಯಲ್ಲಿ "ಇದು ಸರಿ. ಇದು ತಪ್ಪು" ಎಂಬುದರ ಕಲ್ಪನೆಯಿದೆ. ವಯೋಮಾನಕ್ಕೆ ಅನುರೂಪವಾದ ಇಂಗಿತಜ್ಞತೆ. ಸೂಕ್ಷ್ಮತಿಳಿವು ಇವೆ. ಈ ಇಂಗಿತಜ್ಞತೆಗೆ. ತಿಳಿವಿಗೆ ಸಂಕೇತ ಸಮುದಾಯಗಳಿಲ್ಲದ್ದರಿಂದ, ಅವು ಅಮೂರ್ತರೂಪ ತಳೆದಿರುತ್ತವೆಯಷ್ಟೆ. ತಾನು ವಿದ್ಯಾವಂತನಲ್ಲ ಎಂಬುದರ ಕೊರತೆ ಅವನ ಮನಸ್ಸಿನಲ್ಲಿ ಮನೆಮಾಡಿಕೊಂಡಿರುತ್ತದೆ. ಈ ಕೊರತೆಯೇ ಅವನ ವೈಯಕ್ತಿಕ ಪ್ರಗತಿಗೆ ಅಡ್ಡ ಬರುತ್ತದೆ.

ವಯಸ್ಕನ ಪ್ರಾಪಂಚಿಕ ಅನುಭವ. ಇಂಗಿತಜ್ಞತೆ ಹಾಲು ಹಸುಳೆಗೆ ಎಲ್ಲಿಂದ ಬರಬೇಕು? ಪ್ರಾಥಮಿಕ ತರಗತಿಯನ್ನು ಪ್ರವೇಶಿಸಿದ ಶಿಶುವಿಗೆ ಅಕ್ಷರಜ್ಞಾನ ಮೂಡುವುದೊಂದೇ ಅಲ್ಲ, ಅದರ ವ್ಯಕ್ತಿತ್ವವೂ ವಿಕಾಸಗೊಳ್ಳಬೇಕು. ಅದರ ಪ್ರಾಪಂಚಿಕ ಜ್ಞಾನ ಬೆಳೆಯಬೇಕು. ವಯಸ್ಕನಿಗಾದರೋ ಅಕ್ಷರಜ್ಞಾನ ಮೂಡುವುದೊಂದೇ ಅವಶ್ಯಕ: ಅವನ ವ್ಯಕ್ತಿತ್ವ ಎಂದೋ ರೂಪುಗೊಂಡಿರುತ್ತದೆ. ಅವನ ಪ್ರಾಪಂಚಿಕ ಜ್ಞಾನದಲ್ಲಿ ಎಳ್ಳಷ್ಟೂ ಕೊರತೆ ಇರುವುದಿಲ್ಲ. ವಿದ್ಯಾವಿಹೀನನಾದ್ದರಿಂದ ಅವನಲ್ಲಿ ಆತ್ಮವಿಶ್ವಾಸ ಮೂಡಿರುವುದಿಲ್ಲ; ಸ್ವಾಭಿಮಾನ ಸಾಕಷ್ಟು ಅರಳಿರುವುದಿಲ್ಲ. ಸಮಾಜ ರಚನಾ ಕಾರ್ಯಗಳಲ್ಲಿ ಅವನು ಯಶಸ್ವಿಯಾಗಿ ಭಾಗವಹಿಸಲಾರ.

ಮೂರು ದಶಕಗಳಿಗೆ ಹಿಂದೆ 'ವಯಸ್ಕರ ಶಿಕ್ಷಣ'ದ ಕಲ್ಪನೆಯೇ ಯಾರಿಗೂ ಇರಲಿಲ್ಲ. ವಯಸ್ಸಾದ ಮೇಲೆ ಓದು ಬರಹ ಹತ್ತುವುದಿಲ್ಲ. ಎಂಬ ಅಭಿಪ್ರಾಯ ಸರ್ವಸಾಮಾನ್ಯವಾಗಿತ್ತು. ಅನಕ್ಷರಸ್ಥ ವಯಸ್ಕನಲ್ಲೂ ಅಷ್ಟೆ: "ತಾನಿನ್ನು ನಿರುಪಯೋಗಿ. ತನ್ನ ಪಾಲಿಗೆ ಬಂದದ್ದು ಪರಮಾನ್ನ" ಎಂಬ ಮನೋಭಾವ ತಳವೂರಿತ್ತು. ಇಂದಿನ ಕಲ್ಪನೆಯೇ ಬೇರೆ. ಕಲಿಕೆಗೆ ವಯಸ್ಸು ಅಡ್ಡಿ ಇಲ್ಲ. ವಿದ್ಯಾರ್ಜನೆ ಜೀವನವಿಡೀ ನಡೆಯುತ್ತಲೇ ಹೋಗುವ ಕ್ರಿಯೆ. ವಯಸ್ಕನ ಸಮಾಜಜೀವನ. ವ್ಯಕ್ತಿತ್ವ ಒತ್ತಟ್ಟಿಗಿರಲಿ, ಅವನ ಔದ್ಯೋಗಿಕ ಮೇಲ್ಮೆಗೂ ಸಾಕ್ಷರತೆ ಬೇಕೇ ಬೇಕು. ಅದು ಅವನಿಗೆ ರಕ್ಷಾ ಕವಚವಷ್ಟೆ.

ಸಾಕ್ಷರತೆಯನ್ನು ಕುರಿತ ಈ ಯೋಚನಾ ತರಂಗಗಳು ಮೊದಲ ಅಧ್ಯಾಯದಲ್ಲಿ ಹರಿದಿವೆ. ಎರಡನೆಯ ಅಧ್ಯಾಯದಲ್ಲಿ ವಯಸ್ಕರ ಸಾಹಿತ್ಯಾಭಿರುಚಿಗೆ ಸಂಬಂಧಿಸಿದ್ದು. ಶಿಶುಸಾಹಿತ್ಯ ಅನಕ್ಷರಸ್ಥ ವಯಸ್ಕನಿಗೆ ಸಲ್ಲದೆಂದ ಮೇಲೆ. ಅವನಿಗಾಗಿಯೇ ವಿಶಿಷ್ಟ ಸಾಹಿತ್ಯ ರಚನೆ ಆಗಬೇಕಾದದ್ದು ಅನಿವಾರ್ಯ. ಇಂತಹ ಸಾಹಿತ್ಯವನ್ನು ನಿರ್ಮಿಸುವಾಗ ವಯಸ್ಕನ ಅಭಿರುಚಿಗೆ ತಕ್ಕ ವಿಷಯಗಳನ್ನೇ ಆರಿಸಿಕೊಳ್ಳುವುದು ಸೂಕ್ತ. "ಓದುಗರ ಅಭಿರುಚಿಯನ್ನು ತಿಳಿಯದೆ ರಚಿಸಿದ ಪುಸ್ತಕ...ಉಪಯೋಗಕ್ಕೆ ಬಾರದೆ ಹೋಗುವ ಸಂದರ್ಭವೇ ಹೆಚ್ಚು" (ಪುಟ 11).

ಓದುಗನ ವಾಚನಾಭಿಲಾಷೆಯನ್ನು ತಿಳಿಯುವ ಹಲವಾರು ಕ್ರಮಗಳನ್ನು ಈ ಅಧ್ಯಾಯದಲ್ಲಿ ಸೂಚಿಸಲಾಗಿದೆ. ಈ ಕ್ರಮಗಳಲ್ಲೆಲ್ಲ ಹೊಸದಾಗಿ ಅಕ್ಷರಸ್ಥರಾದ ವಯಸ್ಕರನ್ನೇ ಭೇಟಿಮಾಡಿ. ಅವರ ಅಭಿಪ್ರಾಯಗಳನ್ನು ಪಡೆದು. ಕ್ರೋಢೀಕರಿಸಿ (ಪುಟ 13). ಅದನ್ನನುಸರಿಸಿ ರಚಿಸಿದ ಸಾಹಿತ್ಯವೇ ಉತ್ತಮವಾದದ್ದು.

ಕೆಂಗೇರಿ ವಿದ್ಯಾಪೀಠದ ಸಾಹಿತ್ಯ ಶಿಬಿರದವರು ವಯಸ್ಕರಿಗಾಗಿಯೆ ಬರೆದಿದ್ದ ಹಸ್ತಪ್ರತಿಗಳನ್ನು ನೆರೆಹೊರೆಯ ಹಳ್ಳಿಗಳಲ್ಲಿ ಪರೀಕ್ಷಿಸಿದ್ದು. ಅವುಗಳ ಬಗ್ಗೆ ಅಲ್ಲಿದ್ದ ವಯಸ್ಕರು ತೋರಿದ ಕುತೂಹಲ. ತೃಪ್ತಿ ಗಣನೀಯ ಅನುಭವಗಳಾಗಿವೆ.

ವಯಸ್ಕ ಅಪೇಕ್ಷಿಸುವ ಸಾಹಿತ್ಯ ನಿರ್ಮಿಸುವುದು ಒಂದು ವಿಧಾನ. ಆದರೆ. ವಯಸ್ಕ ಅಪೇಕ್ಷಿಸಿದ್ದೆಲ್ಲ ಅವನಿಗೆ ಉಪಯುಕ್ತವಾದದ್ದೆ. ಎಂದು ಹೇಳುವುದಾದರೂ ಹೇಗೆ? ವಯಸ್ಕನಿಗೆ ತಿಳಿಯದ. ಆದರೆ ಅವನ ಜೀವನದಲ್ಲಿ ನೆರವಾಗುವ ಸಾಹಿತ್ಯ ರಚನೆಯ ಬಗ್ಗೆ ವಯಸ್ಕರ ಶಿಕ್ಷಣವೇತ್ತರ ಗಮನ ಹರಿದಿದೆ. ಲೇಖಕರು ಇದನ್ನು ಅಷ್ಟು ವಿವರಿಸಬಹುದಾಗಿತ್ತು.

ಮೂರು ಹಂತಗಳಲ್ಲಿ. ಕೇವಲ 300 ರಿಂದ 700 ಕನ್ನಡ ಪದಗಳನ್ನು ಮಾತ್ರ ಬಲ್ಲ ನವಸಾಕ್ಷರನಿಗೆ ಸಾಹಿತ್ಯ ರಚಿಸುವ ಸೂತ್ರಗಳ ವಿವರಣೆ ಮೂರನೆಯ ಅಧ್ಯಾಯದಲ್ಲಿ ಮೂಡಿ ಬಂದಿದೆ. ವಾಕ್ಯರಚನೆ. ವಿವರಣಾತ್ಮಕ ಚಿತ್ರಗಳ ಜೋಡಣೆ. ಪುಸ್ತಕದ ಆಕೃತಿ ಎಲ್ಲಕ್ಕೂ ವಿಶಿಷ್ಟ ತಾಂತ್ರಿಕ ಕ್ರಮಗಳನ್ನು ಅಳವಡಿಸಬೇಕು. ಸಾಕ್ಷರತಾ ಸಾಹಿತಿಗಳು ವಯಸ್ಕನಿಗೆ ಉಪಯುಕ್ತವಾದ ಕೃತಿಗಳನ್ನು ಕೊಟ್ಟಾಗ. ಅವನಿಗೆ ಅವು ಅರ್ಥವಾಗಬೇಕಷ್ಟೆ; ಆಗಲೇ ಆ ಕೃತಿಯ ಸಾರ್ಥಕ್ಯ, ಸಾಹಿತಿಗಳ ಶ್ರಮದ ಸಾರ್ಥಕ್ಯ.

ಪುಸ್ತಕದ ಮೌಲ್ಯಮಾಪನೆ ನಾಲ್ಕನೆಯ ಅಧ್ಯಾಯದ ವಿಷಯ. ಹೊರದೇಶಗಳಲ್ಲಾಗಿರುವ ಪ್ರಯೋಗ ಪರೀಕ್ಷೆಗಳಿಗೆ ಲೇಖಕರು ಆದ್ಯತೆ ಕೊಟ್ಟಿದ್ದಾರೆ. ಈ ದಿಸೆಯಲ್ಲಿ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಅನೇಕ ಪ್ರಯೋಗಗಳು ಹಿಂದೆಯೇ ನಡೆದುವು. 'ಯುನೆಸ್ಕೊ' ಅಂತರರಾಷ್ಟ್ರೀಯ ಸಂಸ್ಥೆ ಮತ್ತು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ವಿಲವಾಲದಲ್ಲಿ ಶಿಕ್ಷಣ ಕೇಂದ್ರ ಒಂದು 1949ರಲ್ಲೇ ನಡೆಯಿತು. ಈ ಶಿಕ್ಷಣ ಶಿಬಿರದಲ್ಲಿ, ಡಾ. ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ಪ್ರಾಯೋಗಿಕವಾಗಿ ಸಾಕ್ಷರತಾ ಸಾಹಿತ್ಯ ರಚಿತವಾಯಿತು. ಇಂದಿಗೂ ಈ ಪೀಠಿಕೆಯಲ್ಲೇ ಸಮಿತಿಯ ಸಾಹಿತ್ಯ ರಚನೆ ನಡೆದಿದೆ. ಇದರ ಬಗ್ಗೆ ಲೇಖಕರು ನಾಲ್ಕು ಮಾತುಗಳನ್ನಾಡಬಹುದಾಗಿತ್ತು.1949 ರಿಂದೀಚೆಗೆ. 1952. 1962, 1965ರ ಮೊದಲಾಗಿ ಅನೇಕ ಸಾಹಿತ್ಯ ಶಿಬಿರಗಳು ನಡೆದುವು.

ನಮ್ಮದೇ ಆದ ಸಂಸ್ಥೆ. ನಮ್ಮ ರಾಜ್ಯ, ಭಾರತ ಸರಕಾರ ಈ ನಿಟ್ಟಿನಲ್ಲಿ ನಡೆಸಿರುವ ರಚನಾತ್ಮಕ ಕಾರ್ಯಗಳ ವಿವರಣೆ ಈ ಕಿರು ಹೊತ್ತಗೆಯಲ್ಲಿ ಬಾರದಿರುವುದು ಒಂದು ಕೊರತೆ.

ಹಾಗೆ ನೋಡಿದಲ್ಲಿ 1949–1960ರ ಸಂವತ್ಸರಗಳು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಇತಿಹಾಸದಲ್ಲಿ ಪ್ರಗತಿಪರ ಕಾಲ. ಈ ಸಂಸ್ಥೆ ಆ ಕಾಲಕ್ಕೆ ಉತ್ತಮ ಸಾಹಿತ್ಯ ರಚನೆಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿತು. ಇದನ್ನು 'ಯುನೆಸ್ಕೋ' ಮೆಚ್ಚಿಕೊಂಡಿತ್ತು. ಸಾಕ್ಷರತಾ ಸಾಹಿತ್ಯ ನಿರ್ಮಾಣದಲ್ಲಿ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಅಗ್ರಗಾಮಿ ಎಂದೇ ಹೇಳಬೇಕು.

ಇದು ಹೇಗೇ ಇರಲಿ, ಈ ಕಿರುಹೊತ್ತಗೆಯ ವೈಜ್ಞಾನಿಕ ಅಂಶಗಳು ಗಣನೀಯವಾಗಿವೆ. ಭಾಷಾ ನಿರೂಪಣೆ ಅಲ್ಲಲ್ಲಿ ಅಷ್ಟು ಸಮರ್ಪಕವಾಗಿಲ್ಲ. ಎಲ್ಲರೂ ಕೊಂಡು ಓದಬಹುದಾದ ಹೊತ್ತಗೆ ಇದು.

ಇಂದು ಅಕ್ಷರಪ್ರಚಾರ. ವಯಸ್ಕರ ಶಿಕ್ಷಣ ಇವುಗಳಿಗೆ ಬೇಕಾದ ಸಾಹಿತ್ಯರಚನಾಕ್ರಮ ವಿಶಿಷ್ಟ ತಂತ್ರವಿಧಾನವಾಗಿದೆ. ಇದರ ಸ್ಥೂಲ ಪರಿಚಯ ಕೂಡ ಸಾರ್ವತ್ರಿಕವಾಗಿಲ್ಲ. ಈ ನಿಟ್ಟಿನಲ್ಲಿ ಕಳೆದ 30 ವರ್ಷಗಳಿಂದ ಪ್ರಗತಿಪರವಾಗಿ ಕೆಲಸ ಮಾಡಿರುವ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯೇ ಈ ತಂತ್ರಗಳನ್ನು ಕುರಿತು ಪ್ರಚಾರಪತ್ರಗಳನ್ನು, ಹೊತ್ತಗೆಗಳನ್ನು ಪ್ರಕಟಿಸಬಹುದಾಗಿತ್ತು.

ಈ ಕಿರುಹೊತ್ತಗೆಯನ್ನು ಬೆಳಕಿಗೆ ತಂದು, ಪ್ರಸಾರಾಂಗ ಈ ಕೊರತೆಯನ್ನು ತುಂಬಿಸಿಕೊಟ್ಟಿದೆ.

ಅರಬ್ ಭೂಗೋಳ ಶಾಸ್ತ್ರಜ್ಞರು : ಲೇಖಕರು: ಕೆ. ಆರ್ ರಂಗಾಚಾರ್; ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ (1972); ಪುಟಗಳು: 9+65 ಬೆಲೆ: 25 ಪೈಸೆ

ಲೇಖಕರು 1972ರಲ್ಲಿ ಈ ಕಿರುಹೊತ್ತಗೆಯನ್ನು ಬರೆಯುತ್ತಾ ತಮ್ಮ ಅರಿಕೆಯಲ್ಲಿ "ಭೂಗೋಳ ಶಾಸ್ತ್ರಗ್ರಂಥಗಳು ವಿಶ್ವವಿದ್ಯಾನಿಲಯ ಮತ್ತು ಪಠ್ಯಪುಸ್ತಕ ಪ್ರಕಟನೆಗಳನ್ನೇ ಅವಲಂಬಿಸಿವೆ" (ಪು.vi) ಎನ್ನುವ ಪ್ರಲೋಭನೆಗೆ ಕಾರಣಗಳಿವೆ.

ಲಾಭವೇ ಉದ್ದೇಶವಾಗಿರುವ ಖಾಸಗಿ ಪ್ರಕಾಶಕರು ತಾಂತ್ರಿಕ–ವೈಜ್ಞಾನಿಕ ಪುಸ್ತಕಗಳನ್ನು ಪ್ರಕಟಿಸಬೇಕಲ್ಲ? ಇನ್ನು ಲೇಖಕರು ತಮ್ಮ ವೈಜ್ಞಾನಿಕ ಕೃತಿಗಳನ್ನು ಬೆಳಕಿಗೆ ತರುವಲ್ಲಿ ವಿಶ್ವವಿದ್ಯಾನಿಲಯಗಳನ್ನಲ್ಲದೆ ಬೇರೆ ಯಾರನ್ನು ಆಶ್ರಯಿಸಬೇಕು? ಜ್ಞಾನ ಪ್ರಸಾರದಲ್ಲೇ ತೀವ್ರಾಸಕ್ತಿ ತಳೆದು, ಲಾಭದ ಉದ್ದೇಶವೇ ಇಲ್ಲದೆ, ಸ್ವಭಾಷೆಯಲ್ಲೆ ಶಾಸ್ತ್ರ ಬೆಳೆಯಬೇಕೆಂದು ಆಶಿಸಿ, ಅದಕ್ಕಾಗಿ ಶ್ರಮಿಸುತ್ತಿರುವವು ವಿಶ್ವವಿದ್ಯಾನಿಲಯಗಳು.

ಭೂಗೋಳಶಾಸ್ತ್ರವನ್ನು ಕುರಿತಾದ ಪುಸ್ತಕಗಳು ಈಗ ಕನ್ನಡದಲ್ಲಿ ಹೊರಬರುತ್ತಿವೆ. ಇದರ ಬಗ್ಗೆ ಲೇಖಕರ ನಿರಾಶಾಭಾವ ಅನಾವಶ್ಯಕ. ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳು, ಆಕರ ಗ್ರಂಥಗಳ ರಚನೆಗೆ ನಾನಾ ರೀತಿಗಳಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಪ್ರೋತ್ಸಾಹ ಕೊಡುತ್ತಿದೆ; ಭೂಗೋಳ ಶಾಸ್ತ್ರದ ಹಲ

ವಾರು ವಿಷಯಗಳನ್ನು ಕುರಿತು ಉತ್ತಮ ಕೃತಿಗಳನ್ನು ಈ ಸಂಸ್ಥೆ ಪ್ರಚುರ ಪಡಿಸಿದೆ; ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವಾದರೂ ಹಿಂದುಳಿದಿಲ್ಲ.

ಅರಬ್ಬರ ಭೂಗೋಳಶಾಸ್ತ್ರಾಧ್ಯಯನದಲ್ಲಿ ಕ್ರಿ. ಶ. 800ರಿಂದ ಕ್ರಿ.ಶ. 1000 ವರೆಗಿನ ಕಾಲ ಸ್ವರ್ಣಯುಗವಾಗಿತ್ತೆಂದು ಲೇಖಕರು ಹೇಳಿದ್ದಾರೆ (ಪುಟ 5). ಈ ಕಾಲದ ಅರಬ್ ಭೂಗೋಳ ಶಾಸ್ತ್ರಜ್ಞರ ಮೇಲೆ ಟಾಲೆಮಿಯ ಪ್ರಭಾವ ಇದ್ದುದು ತಿಳಿಯಬರುತ್ತದೆ.

ಈ ಕಾಲಕ್ಕೆ ಮೊದಲೇ, ಎಂದರೆ ಕ್ರಿ.ಪೂ. 3ನೆಯ ಶತಮಾನದಲ್ಲೇ, ಈಜಿಪ್ಟಿನಲ್ಲಿ ಹಲವಾರು ಪ್ರಯೋಗಗಳನ್ನು ನಡೆಸಿ, ಭೂ ಕಲ್ಪದ ವರ್ತುಲಾಕೃತಿಯ ಬಗ್ಗೆ ಅಂಕಿಅಂಶಗಳನ್ನು ಮೊದಲಿಗೆ ವ್ಯಕ್ತಪಡಿಸಿದ ಎರಟಾಸ್ಥನೀಸನ ಪ್ರಭಾವವೂ ಅರಬ್ಬರ ಮೇಲಿತ್ತು; ಇದನ್ನು ಕುರಿತ ಸಾಕ್ಷ್ಯ ಪುರಾವೆಗಳಿವೆ. ಈ ಅಂಶ ಹೊತ್ತಗೆಯಲ್ಲಿ ಮೂಡಿಲ್ಲ.

ಮೂರನೆಯ ಅಧ್ಯಾಯದಲ್ಲಿ ಸ್ವರ್ಣಯುಗಕ್ಕೆ ಸಂಬಂಧಿಸಿದ ವಿವರಣೆಗಳು ಸೂಕ್ತವಾಗಿವೆ. ಆ ಕಾಲದಲ್ಲಿ ದೂರಪ್ರಾಚ್ಯದ ಬಗ್ಗೆ ಅರಬ್ ಭೂಗೋಳಜ್ಞರು ಸಂಗ್ರಹಿಸಿದ ವಿವರಗಳು ಮುಂದೆ ಭಾರತದ ಕಡೆಗೆ ಅವರ ಒಲವನ್ನು ಸೆಳೆಯಿತು. ಈ ಸ್ವರ್ಣಯುಗದಲ್ಲೇ (ಕ್ರಿ.ಶ. 903) ಇಬ್ನ್ ರುಸ್ತಾಹನ ಭೌಗೋಳಿಕ ಕೋಶ ತಯಾರಾದದ್ದು ಗಣನೀಯ ಅಂಶ.

ಅಲ್ ಮಸೂದಿಯ ಪ್ರಪಂಚ ಪರ್ಯಟನೆ (ಪುಟ 13) ಕೇವಲ ಮಧ್ಯಪ್ರಾಚ್ಯ, ದೂರಪ್ರಾಚ್ಯಗಳಿಗೆ ಮಾತ್ರ ಸೀಮಿತಗೊಂಡಿದ್ದರೂ ಅಂದಿಗೆ ಈ ಪ್ರದೇಶಗಳ ಬಗ್ಗೆ ತಥ್ಯಾಂಶಗಳನ್ನು ಒದಗಿಸಿತು. ತನ್ನ ಪರ್ಯಟನೆಯಿಂದ ಅಲ್ ಮಸೂದಿ ವಿಪುಲ ಜ್ಞಾನ ಪಡೆದ; ಅವನು ಬರೆದಿಟ್ಟಿರುವ ವಿವರಗಳು ಗಮನಾರ್ಹವಾಗಿದೆ. ಬಹುಶಃ ಅಂದಿಗೆ ಅವನು ಸೂಚಿಸಿದ ಆಕರಗ್ರಂಥಗಳೇನಾದರೂ ಇಂದು ದೊರೆತಿದ್ದರೆ ಭೂ ಇತಿಹಾಸ ಇನ್ನಷ್ಟು ಸಂಪನ್ನಗೊಳ್ಳುತ್ತಿತ್ತೇನೊ. ಹೀಗೆ ಅಲ್ ಹೈಕ್, ಅಲ್ ಬಲ್ಖಿ, ಅಲ್ ಇಷ್ಟಖ್ರಿ, ಇಬ್ನ್ ಹೌಕಲ್ ಇವರುಗಳ ಕೊಡುಗೆಗಳ ವಿವರಣೆಯಿದೆ.

ನಕ್ಷಾ ನಿರ್ಮಾಣದಲ್ಲಿ ಚಿಹ್ನೆಗಳನ್ನು, ವರ್ಣಗಳನ್ನು ಬಳಕೆಗೆ ತಂದು, ಭೂ ಆಕೃತಿಯ ಬಗ್ಗೆ ಸ್ಪಷ್ಟ ವಿವರಣೆಗಳನ್ನು ಕೊಟ್ಟ ಅಲ್ ಮುಖ್‌ದಸೀ ಶ್ರೇಷ್ಠ ಶಾಸ್ತ್ರಜ್ಞ. ಭೂಮಿಯ ದಕ್ಷಿಣಾರ್ಧ ಗೋಳದಲ್ಲಿ ಸಾಗರಾಧಿಕ್ಯವೂ ಉತ್ತರಾರ್ಧ ಗೋಳದಲ್ಲಿ ಖಂಡಾಧಿಕ್ಯವೂ ಇರುವುದನ್ನು ಮೊದಲಿಗೆ ಪ್ರತಿಪಾದಿಸಿದವನು ಅಲ್ ಮುಖ್‌ದಸೀ.

ಈ ಸಂದರ್ಭದಲ್ಲಿ ಒಂದು ವಿಶೇಷವನ್ನು ಹೇಳಬಯಸುತ್ತೇನೆ: ಭೂಗೋಳಶಾಸ್ತ್ರಕ್ಕೆ, ಖಗೋಳ ಶಾಸ್ತ್ರಕ್ಕೆ ಅರಬ್ಬರು ಮಾಡಿದ ಸೇವೆ ಆಚಂದ್ರಾರ್ಕವಾಗಿ ನೆಲೆನಿಂತಿದೆ: ಇದರ ನೆನಪಾಗಿಯೋ ಏನೋ ಅನೇಕ ನಕ್ಷತ್ರಗಳ ಹೆಸರುಗಳು 'ಅಲ್' ಪ್ರತ್ಯಯದಿಂದ ಪ್ರಾರಂಭವಾಗುವುದನ್ನು ಗಮನಿಸಬಹುದು. ಉದಾಹರಣೆಗೆ: ಅಲ್-ನಾತ್ (ಭರಣಿ), ಅಲ್-ದೆಬರಾನ್ (ರೋಹಿಣಿ), ಅಲ್ಹೆನ (ಆರಿದ್ರ), ಅಲ್-ಫಾರ್ಗ್ (ಪೂಭಾ1), ಅಲ್-ಗೊರಬ್ (ಹಸ್ತ1), ಅಲ್ಟೈರ್ (ಶ್ರವಣ) ಇತ್ಯಾದಿ. ಇಬ್ನ್ ಮಜೀದ ರಚಿಸಿದ ನೌಕಾ ಖಗೋಳ ಶಾಸ್ತ್ರಕ್ಕೆ (ಪುಟ 36) ನಕ್ಷತ್ರದರ್ಶನ ಅತ್ಯವಶ್ಯವಾಗಿತ್ತು. ಸ್ಥಿತನಕ್ಷತ್ರಗಳ ವೀಕ್ಷಣೆಯಿಂದ ಸ್ಥಾನ ನಿರ್ದೇಶನ ಮಾಡಿಕೊಂಡು ಭೌಮಿಕ ಕ್ಷೇತ್ರಗಳನ್ನು ನಿರ್ಣಯಿಸುತ್ತಿದ್ದ ವೈಶಿಷ್ಟ್ಯ ಅರಬ್ಬರಿಗೆ ಸಲ್ಲತಕ್ಕದ್ದೇ.

"ಭೂಮಿ ಬ್ರಹ್ಮಾಂಡದ ಮಧ್ಯದಲ್ಲಿದೆ" (ಪುಟ 36) ಎಂದು ಅರಬ್ ಭೂಗೋಳಜ್ಞರು ನಂಬಲು ಅಂದಿಗೆ ಪ್ರಚಲಿತವಾಗಿದ್ದ ಟಾಲೆಮಿಯ ಪ್ರತಿಪಾದನೆಯೇ ಕಾರಣವಾಗಿತ್ತು. ಅಂತರಿಕ್ಷ, ರಾಶಿಚಕ್ರ, ನಕ್ಷತ್ರ ಪುಂಜಗಳು, ಭೌಮಿಕ ಅಕ್ಷ ಪರಿಭ್ರಮಣೆ ಇವುಗಳ ತಿಳಿವಳಿಕೆ ಭಾರತೀಯರಿಂದಲೂ ಗ್ರೀಕರಿಂದಲೂ ಪ್ರಾಪ್ತವಾಗಿರಬೇಕು.

ಈ ಕಿರುಹೊತ್ತಗೆಯಲ್ಲಿ, ಅದರ ಉಪಯೋಗವನ್ನು ಹೆಚ್ಚಿಸುವ ಶಬ್ದಸೂಚಿ, ಭೂಗೋಳಜ್ಞರ ಸೂಚಿ, ವ್ಯಕ್ತಿ ಸೂಚಿಗಳನ್ನು ಲೇಖಕರು ಜೋಡಿಸಿದ್ದಾರೆ. ಈ ಕಿರುಹೊತ್ತಗೆ ಸ್ವಾಗತಾರ್ಹ.

—ಐ. ಶ್ರೀ. ಪ್ರಸಾದ

ಪತ್ರವ್ಯವಹಾರ

ಮಾನವಿಕ ಕರ್ಣಾಟಕ 3–2ರಲ್ಲಿ ಪ್ರಕಟವಾದ 'ಪಾಂಡಿ ಮತ್ತು ಪಾಂಡ್ಯರು' ಎಂಬ ಲೇಖನದ ಬಗ್ಗೆ ನನ್ನ ಮೂರು ಅನಿಸಿಕೆಗಳನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ:

1 ನಮ್ಮಲ್ಲಿ ಇಂದಿಗೂ ಮಕ್ಕಳು ಆಡುವ 'ಬಚ್ಚ' ಎಂಬ ಆಟದಲ್ಲಿ ಪಾಂಡಿ, ಪಾಂಡಿಮನೆ ಎಂಬ ಮಾತುಗಳು ಬಳಕೆಯಾಗುತ್ತವೆ. ಬಚ್ಚ ಎಂಬುದು ಕುಂಟುಬಿಲ್ಲೆ–ಕುಂಟಾಬಿಲ್ಲೆ ಎಂಬ ಹೆಸರಿನ ಆಟ. ನೆಲದಲ್ಲಿ ಗೆರೆ ಎಳೆದು, ಚೌಕಾಬಾರದಲ್ಲಿರುವಂತೆ, ಎಡಕ್ಕೆ ನಾಲ್ಕು, ಬಲಕ್ಕೆ ನಾಲ್ಕು–ಹೀಗೆ ಒಟ್ಟು ಎಂಟು ಮನೆ ಹೊಂದಿಕೊಂಡಿರುವಂತೆ ಗುರುತು ಮಾಡಿಕೊಳ್ಳುವುದು. ಅದರಲ್ಲಿ ಪಾಂಡಿ ಅಥವಾ ಪಾಂಡಿಮನೆ ಎಂಬುದನ್ನು 'ಇಂಟು' (×) ಗುರುತಿನ ಮೂಲಕ ತೋರಿಸಿದೆ. ಪಾಂಡಿ ಎಂದರೆ ಕುಂಟದೆ ಎರಡೂ ಕಾಲು ಬಿಟ್ಟು ನಿಲ್ಲಬಹುದಾದ, ತಂಗಬಹುದಾದ ಮನೆ ಎಂದರ್ಥ.

2 ಪಾಂಡಿ ಶಬ್ದವನ್ನು ಸಂಸ್ಕೃತ ಭಾಂಡ ಶಬ್ದದಿಂದ ನಿಷ್ಪನ್ನಿಸುವ ಅಗತ್ಯ ಕಾಣದು. ಪಾಂಡಿ. ಪಾಂಡಿಯ, ಪಾಂಡ್ಯ–ಎಂಬ ವಿಕಸಿತ ರೂಪಗಳೆಲ್ಲ ಒಂದು ಮೂಲಕ್ಕೆ ಸೇರುತ್ತವೆ. ಪಂಡಿ (ತಮಿಳು) ಮೂಲದೊಡನೆ ಇದು ಹೊಂದಿಕೊಳ್ಳಬಹುದು. ಮುಖ್ಯವಾಗಿ ದೊಡ್ಡ ದೋಣಿಗೆ ಸಂಬಂಧಿಸಿದ್ದು ಪಾಂಡಿ.

3 ಬಂಡಿ (=ಗಾಡಿ) ಶಬ್ದವನ್ನು ಸಂಸ್ಕೃತ ಭಾಂಡದೊಡನೆ ಸಮೀಕರಿಸಿದ ಪ್ರಯತ್ನ ಅಸಾಧು. ಬಂಡಿ ದೇಶ್ಯ ಶಬ್ದವೆಂದು ನನ್ನ ಎಣಿಕೆ. ಇದಕ್ಕೆ ಜ್ಞಾತಿರೂಪಗಳಿವೆ. ಉದಾ: ತೆಲುಗು, ವಂಡಿ. ಸಂಸ್ಕೃತದಲ್ಲಿ ಒಂದೇ ಅರ್ಥಕ್ಕೆ ಒಂದಕ್ಕಿಂತ ಹೆಚ್ಚು ಶಬ್ದಗಳಿದ್ದರೆ ಆಗ ಅವುಗಳಲ್ಲಿ ಕೆಲವು ಅನ್ಯಭಾಷೆಯ ಶಬ್ದಗಳಾಗಿರುವ ಸಾಧ್ಯತೆಯಿದೆ. ಉದಾಹರಣೆಗೆ ಕೋಣ ಎಂಬ ಅರ್ಥದಲ್ಲಿ ಸಂಸ್ಕೃತದಲ್ಲಿರುವ ಮಹಿಷ. ಕಾಸರ, ಲುಲಾಯ, ಸೈರಿಭ, ಹೇರಂಬ–ಎಂಬ ಶಬ್ದಗಳನ್ನು ಗಮನಿಸಬಹುದು. ಇದರಂತೆ ಭಂಡ ಎಂಬುದು ಗಾಡಿ ಎಂಬರ್ಥದಲ್ಲಿ ಇರಲಾರದು. ಏಕೆಂದರೆ ಶಕಟ ಎಂಬ ಇನ್ನೊಂದು ಶಬ್ದ ಅಲ್ಲಿದೆ.

ಬೆಂಗಳೂರು **ಹಂಪ. ನಾಗರಾಜಯ್ಯ**

ಲೇಖಕರ ಉತ್ತರ

ನನ್ನ ಮಿತ್ರರಾದ ಶ್ರೀ ಹಂಪ. ನಾಗರಾಜಯ್ಯನವರ 'ಅನಿಸಿಕೆ'ಗಳನ್ನು ಸಾವಧಾನವಾಗಿ ಓದಿ ನೋಡಿದೆ. ಆದರೆ ಪಾಂಡಿ ಹಾಗೂ ಬಂಡಿ ಎಂಬ ಶಬ್ದಗಳ ನಿಷ್ಪತ್ತಿಯ ಕುರಿತು ಈ ಮೊದಲು ಪ್ರಕಟವಾದ ನನ್ನ ಅಭಿಮತವನ್ನು ಎಳ್ಳಿನಷ್ಟಾದರೂ ತಿದ್ದಿಕೊಳ್ಳಬೇಕಾದ ಯಾವ ಕಾರಣವೂ ಅವುಗಳಲ್ಲಿ ನನಗೆ ಕಂಡುಬರಲಿಲ್ಲ. ಅವರ 'ಅನಿಸಿಕೆ'ಗಳನ್ನೀಗ ಅನುಕ್ರಮವಾಗಿ ಪರಾಮರ್ಶಿಸೋಣ.

1 ನನ್ನ ಮಿತ್ರರ ಮೊದಲನೆಯ 'ಅನಿಸಿಕೆ'. 'ಪಾಂಡಿ ಎಂದರೆ ಸರಕು ಸಾಗಿಸುವ ಹಡಗು ಎಂಬ ನನ್ನ ನಿರ್ಧಾರದ ಖಂಡನೆಯೋ ಸಮರ್ಥನೆಯೋ ಎಂಬುದು ಅಸ್ಪಷ್ಟವಾಗಿದೆಯಾದರೂ, ಬಹುಶಃ ಅದು ಸಮರ್ಥನೆಯೇ ಆಗಿರಬೇಕೆಂದು ತೋರುತ್ತದೆ. ಏಕೆಂದರೆ ಪಾಂಡಿ ಎಂಬ ಶಬ್ದಕ್ಕೆ ಅದೇ ಮೊತ್ತಮೊದಲಾಗಿ ನಾನು ಪ್ರತಿಪಾದಿಸಿದ (ಸರಕಿನ ಹಡಗು ಎಂಬ) ಅರ್ಥವನ್ನು ಅವರ ಎರಡನೆಯ 'ಅನಿಸಿಕೆ'ಯಲ್ಲಿ "ಮುಖ್ಯವಾಗಿ ದೊಡ್ಡ ದೋಣಿಗೆ ಸಂಬಂಧಿಸಿದ್ದು ಪಾಂಡಿ" ಎಂಬ ಮಾತುಗಳಲ್ಲಿ ಪರ್ಯಾಯವಾಗಿ

ಒಪ್ಪಿಕೊಂಡಂತಿದೆ. ಇನ್ನು,—ನನ್ನ ಪರಿಚಯಕ್ಕೆ ದೂರವಾದ ಕುಂಟುಬಿಲ್ಲೆಯಾಟದ ಒಂದು ಮನೆಗೆ 'ಪಾಂಡಿಮನೆ'ಎಂಬ ಹೆಸರು ಇರಬಹುದು; ಇರಲಿ. ಇದರಿಂದಾಗಿ ಪಾಂಡಿ ಎಂಬುದರ ಮೂಲಾರ್ಥವು 'ಸರಕಿನ ಹಡುಗು' ಎಂಬ ನನ್ನ ಪ್ರತಿಪಾದನೆಗೆ ಭಂಗವೂ ಆಗಲಾರದು.

2 "ಪಾಂಡಿ ಶಬ್ದವನ್ನು ಸಂಸ್ಕೃತದ ಭಾಂಡ ಶಬ್ದದಿಂದ ನಿಷ್ಪನ್ನಿಸುವ ಅಗತ್ಯ ಕಾಣದು" ಎಂಬುದು ನನ್ನ ಮಿತ್ರರ ಎರಡನೆಯ 'ಅನಿಸಿಕೆ'. ಇದಕ್ಕೆ ನನ್ನ ಸವಿನಯ ನಿವೇದನೆ ಏನೆಂದರೆ:—'ಅಗತ್ಯ'ಕ್ಕೆ ತಕ್ಕಂತೆ ನಿಷ್ಪತ್ತಿಯನ್ನು ಹೇಳುವುದು ಸಂಶೋಧಕನು ಮಾಡಬೇಕಾದ ಕೆಲಸ ಅಲ್ಲವೇ ಅಲ್ಲ. ಪೂರ್ವಾಭಿನಿವೇಶವಾವುದೂ ಇಲ್ಲದ, ಅಭಿಮಾನ ಮಮತಾದಿಗಳಿಂದ ಮುಕ್ತವಾದ ಶುದ್ಧತರ್ಕಕ್ಕೆ ಏನು ಹೊಳೆಯುತ್ತದೋ ಅದನ್ನು ಸಾಧಾರಣವಾಗಿ, ಪ್ರಾಮಾಣಿಕವಾಗಿ, ನಿರೂಪಿಸುವುದೇ ಅವನ ಕರ್ತವ್ಯ. ಈ ಕರ್ತವ್ಯವನ್ನೇ ಆ ಲೇಖನದಲ್ಲಿ ನಾನು ಯಥಾಮತಿಯಾಗಿ ಮಾಡಿದುದಾಗಿದೆ. ಇನ್ನು,- ಅವರು ಹೇಳುವ ನಿಷ್ಪತ್ತಿಯಾವರೂ ಏನು? ತಮಿಳಿನ 'ಪಂಡಿ'ಯಿಂದ 'ಪಾಂಡಿ' ಬಂದಿರಬಹುದೆಂಬ ಊಹೆ ಮಾತ್ರ! ಅವರು ಆ 'ಪಂಡಿ'ಯ ಮೂಲಾರ್ಥದ ವಿವೇಚನೆ ಮಾಡುವ ಗೊಡವೆಗೇ ಹೋಗಲಿಲ್ಲ. ಅದನ್ನೇನಾದರೂ ಅವರು ಮಾಡಿದ್ದರೆ, ಅದರ ಸಾಧುತ್ವವನ್ನು ವಿಮರ್ಶಿಸಬಹುದಾಗಿತ್ತು. ಆದರೆ, ಅರ್ಥವಿಚಾರನಿರಪೇಕ್ಷವಾಗಿಯೂ, ಪಂಡಿ ಎಂಬ ನಾಮಶಬ್ದದಿಂದ ಪಾಂಡಿ ಉತ್ಪನ್ನವಾಗುವ ಸಂಭಾವ್ಯತೆ ಪ್ರಾಯಃ ಇಲ್ಲ. ಏಕೆಂದರೆ, ದ್ರಾವಿಡ ಭಾಷೆಗಳಲ್ಲಿ ತದ್ಧಿತಶಬ್ದ (ಒಂದು ನಾಮಶಬ್ದದಿಂದ ಹುಟ್ಟುವ ಇನ್ನೊಂದು ನಾಮಶಬ್ದ)ಗಳು ಹುಟ್ಟುವಾಗ, ಜನಕಶಬ್ದದ ಆದ್ಯಕ್ಷರವು ಜನ್ಯಶಬ್ದದಲ್ಲಿ (ಸಂಸ್ಕೃತದಲ್ಲಾಗುವಂತೆ, ಉದಾ: ವಸುದೇವ–ವಾಸುದೇವ, ನಗರ–ನಾಗರಿಕ) ದೀರ್ಘವಾದ ನಿದರ್ಶನ ದುರ್ಲಭ. ಹಾಗಿಲ್ಲಿಯಾದರೂ ನಿದರ್ಶನಗಳಿದ್ದರೆ ಅವುಗಳನ್ನು ಉದಾಹರಿಸಿ, ಪಂಡಿ ಎಂಬುದರ ನಿಷ್ಪತ್ತಿಯನ್ನು ದೇಶೀಯ ಮೂಲದಿಂದ ಸಾರ್ಥಕವಾಗಿ ನಿರೂಪಿಸಿ, ಹಾಗೆ ನಿಷ್ಪನ್ನವಾದ 'ಪಂಡಿ'ಯ ಅರ್ಥಕ್ಕೂ 'ಪಾಂಡಿ'ಯ ಅರ್ಥಕ್ಕೂ ಸಮಂಜಸವಾದ ಸಂಬಂಧವನ್ನು ಸ್ಥಾಪಿಸಿಕೊಡುವ ವರೆಗೆ, ಅವರ ಈ 'ಅನಿಸಿಕೆ'ಗೆ ಸಾರ್ಥಕತೆ ಇಲ್ಲ.

3 "ಬಂಡಿ ಶಬ್ದವನ್ನು ಸಂಸ್ಕೃತ ಭಾಂಡದೊಡನೆ ಸಮೀಕರಿಸಿದ(?) ಪ್ರಯತ್ನ ಅಸಾಧು" ಎಂಬುದು ನನ್ನ ಮಿತ್ರರ ಅಧಿಕಾರವಾಣಿ. ಇದಕ್ಕೆ ಅವರು ಕೊಡುವ ಕಾರಣ, ಬಂಡಿ ದೇಶ್ಯಶಬ್ದವೆಂಬ ಅವರ 'ಎಣಿಕೆ'!" ತಮ್ಮ ಈ 'ಎಣಿಕೆ'ಯ ಸಮರ್ಥನೆಯಾಗಿ ಅವರು ಕೊಡುವ ಏಕಮಾತ್ರ ಆಧಾರವೆಂದರೆ, ಸೋದರ ಭಾಷೆಗಳಲ್ಲಿ ಅದರ ಇರುವಿಕೆ.

ಯಾವುದೊಂದು ಭಾಷೆಯ ಯಾವುದೊಂದು ಶಬ್ದವು ಸೋದರ ಭಾಷೆಯಲ್ಲಿಯೂ ಇರುವ ಮಾತ್ರದಿಂದ ಆ ಶಬ್ದವು ಏತದ್ದೇಶೀಯವೆಂದು ತೀರ್ಮಾನಿಸುವುದು ಯುಕ್ತವೆನಿಸಲಾರದು. ನಮ್ಮ ಎಲ್ಲ ದ್ರಾವಿಡ ಭಾಷೆಗಳಲ್ಲಿ ಹಲವು ಸಂಸ್ಕೃತ ಅಥವಾ ತದ್ಭವ ಶಬ್ದಗಳೂ, ಕೆಲವು ಪರದೇಶೀಯ ಅಥವಾ ಅವುಗಳ ವಿಕೃತಿಗಳೂ ಏಕಾರ್ಥದಲ್ಲಿ ರೂಢವಾಗಿವೆ. ಉದಾ: ಸೇನೆ ಎಂಬರ್ಥದ 'ದಂಡು'. ಈ ಶಬ್ದವು ಕನ್ನಡ ತೆಲುಗು ತುಳುಗಳಲ್ಲಿ ಏಕರೂಪವಾಗಿ 'ದಂಡು' ಎಂದೂ, ತಮಿಳು ಮಲಯಾಳಗಳಲ್ಲಿ 'ತಂಡು' ಎಂದೂ ಒಂದೇ ಅರ್ಥವನ್ನು ಕೊಡುತ್ತದೆ. ಇದು ಸಂಸ್ಕೃತದ 'ದಂಡ' ಎಂಬುದರ ತದ್ಭವವೆಂಬುದರಲ್ಲಿ ವಿದ್ವಾಂಸರೊಳಗೆ ಮತಭೇದವಿಲ್ಲ. ಸಂದಿಗ್ಧ ಸಂದರ್ಭಗಳಲ್ಲೆಲ್ಲ ಕನ್ನಡದ ಕಡೆಗೇ ಒಲೆಯುವ ಕಿಟ್ಟೆಲ್ ಸಾಹೇಬರೂ, ಇದು 'ದಂಡ' ಎಂಬುದರ ತದ್ಭವವೆಂದೇ ತಮ್ಮ ಕೋಶದಲ್ಲಿ ಕಾಣಿಸಿದ್ದಾರೆ. ಹೀಗೆಯೇ, ಕನ್ನಡ ತುಳುಗಳಲ್ಲಿ 'ಬಂಡಿ' ಎಂದೂ, ತೆಲುಗಿನಲ್ಲಿ 'ಬಂಡಿ–ವಂಡಿ' ಎಂದೂ ಮಲಯಾಳದಲ್ಲಿ 'ವಂಡಿ' ಎಂದೂ, ತಮಿಳಿನಲ್ಲಿ

'ವಂಡಿ' ಹಾಗೂ 'ಪಂಡಿ' (ಕಿಟ್ಟೆಲ್) ಎಂದೂ ಗಾಡಿ ಎಂಬ ಅರ್ಥದಲ್ಲಿ ರೂಢವಾಗಿರುವ ಮಾತ್ರದಿಂದ ಬಂಡಿ ಎಂಬುದು ದೇಶ್ಯವೆಂದಾಗಲಾರದು; ಅದು ದೇಶ್ಯವೆನ್ನಬೇಕಾದರೆ ಬೇರೆ ಆಧಾರ ಬೇಕು. ಅಂತಹದೇನನ್ನೂ ನಮ್ಮ ಮಿತ್ರರು ಕಂಡಂತಿಲ್ಲ. ಅವರ ಈ ಮೂರನೆಯ 'ಅನಿಸಿಕೆ'ಯ ಕೊನೆಯಲ್ಲಿ ಕಾಣುವ ಮಾತುಗಳಿಗೂ ಪ್ರಸ್ತುತ ಸಂದರ್ಭಕ್ಕೂ ಅನ್ವಯವೇ ಇಲ್ಲ! (ಸಂಸ್ಕೃತದಲ್ಲಿ) "ಭಂಡ ಎಂಬುದು ಗಾಡಿ ಎಂಬರ್ಥದಲ್ಲಿ ಇರಲಾರದು; ಏಕೆಂದರೆ ಶಕಟ ಎಂಬ ಇನ್ನೊಂದು ಶಬ್ದ ಅಲ್ಲಿದೆ". ಅವರ ಈ ಮಾತಿನಿಂದ ನಾನು ವಿಸ್ಮಿತನಾದೆ. ಏಕೆಂದರೆ, 'ಭಂಡ' ಎಂಬ ಶಬ್ದಕ್ಕೆ (ಸಂಸ್ಕೃತದಲ್ಲಾಗಲಿ ಕನ್ನಡದಲ್ಲಾಗಲಿ) ಗಾಡಿ ಎಂಬರ್ಥವಿದೆಯೆಂದು ಯಾರು ಹೇಳಿದ್ದಾರೆ? ಅಥವಾ 'ಭಂಡಿ' ಎಂಬ ರೂಪಕ್ಕಾದರೂ ಸಂಸ್ಕೃತದಲ್ಲಿ ಗಾಡಿ ಎಂಬರ್ಥವಿದೆಯೆಂದು ಹೇಳಿದವರು ಯಾರು? ನನ್ನ ಲೇಖನದಲ್ಲಿ ಹಾಗೇನೂ ಇಲ್ಲ. 'ಭಂಡ'ವಾಗಲಿ, 'ಭಂಡಿ'ಯಾಗಲಿ, ಸಂಸ್ಕೃತದಲ್ಲಿದೆಯೆಂದೂ ನಾನು ಹೇಳಿಲ್ಲ. ಕನ್ನಡದಲ್ಲಿ ಕಾಣುವ ಭಂಡ ಮತ್ತು ಭಂಡಿ=ಬಂಡಿ ಎಂಬ ಶಬ್ದಗಳ ಮೂಲವು ಸಂಸ್ಕೃತದ 'ಭಾಂಡ'ದಲ್ಲಿದೆ ಎಂದು ಮಾತ್ರ ನಾನು ಹೇಳಿದುದು. ನನ್ನ ಮಿತ್ರರು ಆ ನನ್ನ ಲೇಖನವನ್ನು ಇನ್ನೊಮ್ಮೆ ದಯೆಮಾಡಿ ಓದಬೇಕಾಗಿ ವಿಜ್ಞಾಪನೆ.

ಮಣಿಪಾಲ **ಸೇಡಿಯಾಪು ಕೃಷ್ಣಭಟ್ಟ**

WO 12770—MUPM—1025 copies—28-6-74

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

** ಮಾನವಿಕ ಕರ್ಣಾಟಕ

** ಪ್ರಬುದ್ಧ ಕರ್ಣಾಟಕ

** ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು-೫೭೦೦೧೨